KARNATAKA

Kavya Kalanidhi Series,

No 5.

CHANDRA PRABHA PURANAM

BY

AGGALA DEVA

VOLUME, I

ಮ ಹಾ ಕ ವಿ

ಅಗ್ಗಳದೇವ ವಿರಚಿತಂ

ಚಂದ್ರಪ್ರಭ ಪುರಾಣಂ.

ಪ್ರಥಮ ಸಂಪುಟ (ಅಧ್ಯಾಯ ೧–೪)

ಎಸ್. ಜಿ. ನರಸಿಂಹಾಚಾರ್

ಲೈಬ್ರೇರಿಯನ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ ಮೈಸೂರ್,

ಮತ್ತು

ಪಂ. ಆ. ರಾಮಾನುಜಯ್ಯಂಗಾರ್

ಅಸಿಸ್ಟೆಂಟ್ ಮಾಸ್ಟರ್ ಸೆಂಟ್ರಲ್ ಮಿಷನ್ ಹೈಸ್ಕೂಲ್ ಮೈಸೂರ್,

ಇವರುಗಳಿಂದ ಶೋಧಿಸಲ್ಪಟ್ಟು

ಮೈಸೂರ್:

ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು.

1901.

ಪೀಠಿಕೆ.

—:o:—

ಈಕವಿಗೆ ಅಗ್ಗಳದೇವನೆಂದು ಹೆಸರು. ಈತನು ಇಂಗಳೇಶ್ವರಪುರವೆಂಬ ಸ್ಥಳದಲ್ಲಿ ಇದ್ದಂತೆ ತೋರುತ್ತದೆ. ಈತನ ತಂದೆಗೆ ಶಾಂತೀಶನೆಂದೂ, ತಾಯಿಗೆ ವಾಚಾಂಬಿಕೆಯೆಂದೂ ಹೆಸರು. ಈತನು

"ಗುಣಿ ಮೂಲಸಂಘದೇಶೀ | ಗಣಪುಸ್ತಕಗಚ್ಛ ಕೊಂಡಕುಂದಾನ್ವಯದೊಳ್ ॥ ಗಣನೆವಡೆದೆನೆವ ವಿನಯೂ | ಗ್ರಣಿ ವಿಮಲತರಸ್ವಭಾವನಗ್ಗಳದೇವಂ ॥ (ಆ, ೧, ೫೩) ಎಂದೂ,

ಪಸಿ

ಉಭಯಕವಿತಾವಿಶಾರದಂ" (ಆ. ೧. ೫೫) ಎಂದೂ ತನ್ನ ವಿಷಯವಾಗಿ ಹೇಳಿಕೊಂಡಿದ್ದಾನೆ. ಈತನ ಗುರು ಶ್ರುತಿಕೀರ್ತಿದೇವ.

ಕವಿಯು "ಏಕಾದಶಶತಮುಂ ಮು | ತ್ತೇಕಾದಶಮಾಗೆ ಶಕನೃಪಾಬ್ದಂ ಸೌಮ್ಯ ॥ ಪ್ರಾಕಟಿತವರ್ಷದ ಚೈತ್ರಸಿ | ತೈಕಾದಶಿಯಂದು ನೆಗಬ್ದದೀಕೃತಿರತ್ನಂ॥" ಎಂಬ ಪದ್ಯದಲ್ಲಿ ಶಕೆ ೧೦೦೦ ಎಂದರೆ ಕ್ರಿ. ಶಕೆ. ೧೦೮೯ ರಲ್ಲಿ ಈ ಗ್ರಂಥವನ್ನು ಬರೆದುದಾಗಿ ಹೇಳುತ್ತಾನೆ.

ಈ ಗ್ರಂಥದಲ್ಲಿ ೧೩ ಆಶ್ವಾಸಗಳಿವೆ. ಇದರ ಪೂರ್ವಾರ್ಧವು ಈ ಸಂಪುಟದಲ್ಲಿ ಮುಗಿದಿದೆ. ಉತ್ತರಾರ್ಧವನ್ನು ಎರಡನೆಯ ಸಂಪುಟವಾಗಿ ಮುದ್ರಿಸುತ್ತೇವೆ. ಗ್ರಂಥವು ಸಮಗ್ರವಾಗಿ ಮುದ್ರಿತವಾದ ಕೂಡಲೆ ಕವಿಚರಿತ್ರೆಯನ್ನೂ ಗ್ರಂಥ ವಿಚಾರವನ್ನೂ ವಿಸ್ತಾರವಾಗಿ ಬರೆಯುತ್ತೇವೆ.

ಪ್ರಥಮ ಸಂಪುಟದ

ಅಧ್ಯಾಯಾನುಕ್ರಮಣಿಕೆ.

			ಪುಟಾದಿಸಂಖ್ಯೆ
ಪ್ರಥಮಾಶ್ವಾಸಂ	...	...	೧
ದ್ವಿತೀಯಾಶ್ವಾಸಂ	...	...	೨೪
ತೃತೀಯಾಶ್ವಾಸಂ	...	...	೪೯
ಚತುರ್ಥಾಶ್ವಾಸಂ	...	...	೩೨
ಪಂಚಮಾಶ್ವಾಸಂ	...	...	೯೨
ಷಷ್ಠಾಶ್ವಾಸಂ	...	...	೧೨೩
ಸಪ್ತಮಾಶ್ವಾಸಂ	...	...	೧೪೯
ಅಷ್ಟಮಾಶ್ವಾಸಂ	...	...	೧೪೨

ಮಹಾಕವಿ

ಅಗ್ಗಳದೇವ ವಿರಚಿತಂ

ಚಂದ್ರಪ್ರಭ ಪುರಾಣಂ.

॥ ಪ್ರಥಮಾಶ್ವಾಸಂ ॥

—+:0:+—

ಶ್ರೀಪಾದದ್ವಿತಯಪ್ರದಕ್ಷಿಣಕೃತಿವ್ಯಾಸಕ್ತಗೀರ್ವಾಣಕಾಂ ।
ತಾಪಾಂಗಪ್ರತಿಬಿಂಬಕೋಟಿಘಟಿತಸ್ಮೇರಸ್ಥಳೀಂದೀವರ ॥
ಶ್ರೀಪೂರ್ಣಂ ಹಿಮವನ್ನಗೇಂದ್ರಮೆನೆ ಕಣ್ಗಿಂಬಾದ ಚಾಂದ್ರಪ್ರಭಂ ।
ರೂಪಂ ದಿವ್ಯವಚೋಮರುನ್ನದಿಯಿನೆಮ್ಮೊಳೆ ಮೂರ್ತ್ತಿ ನೈರ್ಮಲ್ಯಮಂ ॥

ಆವೃತಘಾತ್ಯಘಾತಿದುರಿತಾತ್ಯಯದೊಳ್ ಚರಮಾಂಗಮಾತ್ರಕರ್ ।
ಜೀವಘನಸ್ವರೂಪಮೊಗೆತರ್ಪುದುಮುಷ್ಟ್ಯಮಭೂಮಿವಿಷ್ಕರ ॥
ಸ್ತಾವಧಿಸೌಖ್ಯಮುಖ್ಯರುಪಶಿಷ್ಟಗುಣಾಷ್ಟಕರಾದನಶ್ವರ ।
ಶ್ರೀವನಿತೇಶರೀಗೆಮಗೆ ಸಿದ್ಧರತೀಂದ್ರಿಯಸೌಖ್ಯಸಿದ್ಧಿಯಂ ॥ ॥೨॥

ಧೈರ್ಯಂ ಘೋರತಪಃಪರೀಷಹಸಮೂಹಪ್ರಾಪ್ತಿಯೊಳ್ ಸಂದ ತಾ ।
ತ್ಪರ್ಯಂ ಪಂಚವಿಧಾಮಳಾಚರಣಪಟ್ಟ್ರಂಶದ್ಗುಣಶ್ರೇಣಿಯೊಳ್ ॥
ಕಾರ್ಯಂ ಶಿಷ್ಯವಿನೇಯಶಿಕ್ಷೆಯೊಳೊಡಂಬಟ್ಟೊಪ್ಪೆ ಸಂಶೋಭಿಪಾ ।
ಚಾರ್ಯರ್ ತಾಮೆಮಗೀಗೆ ಸಪ್ತಪರಮಸ್ಥಾನೋದಯೋಪಾಯಮಂ ॥ ॥೩॥

ನಯನಿಕ್ಷೇಪಪ್ರಮಾಣಂಗಳೊಳೆ ಪಡೆದನೈಕಾಂತಸಿದ್ಧಿಪ್ರತಿಜ್ಞಾ ।
ಜಯಮಂ ತದ್ವಿಜ್ಞರೊಳ್ ಮುಂ ಬಲಿಕೆ ತಿಳಿಪಿ ಭವ್ಯರ್ಗೆ ಸದ್ದರ್ಮಕರ್ಮಾ ॥ ಶ್ರಯತತ್ತ್ವಾತತ್ತ್ವಭೇದಂಗಳನೊಡರಿಸಿ ವಾಕ್ಶ್ರೀಯಶಶ್ರೀ ಸಮಾಕ್ಯ । ಪ್ರಿಯನಾದಂ ಸಂದರಂತಮೂರ್ಖತೆಗಭಿಮುಖಿಂಮಾಬ್ಬಿಪಾ ಧ್ಯಾಯರೆನ್ನುಂ ॥ ॥೪॥

ಶೀಲಂ ಪಾಲಿತಷಟ್ಪ್ರಕಾರಮೆನಿಸಿರ್ದಾವಶ್ಯಕಕ್ಕಾಯ್ತು ನಿ।
ತ್ಯಾಲಂಬಂ ನಿರವದ್ಯಮಾಯ್ತು ಚರಿತಂ ಸಾವದ್ಯಮಂ ಪೊರ್ದದೆಂ ॥
ದೀಲೋಕಂ ಪೊಗಟ್ವಪ್ರಮತ್ತಗುಣಸಂಸ್ಥಾನಕ್ಕೆ ಪಕ್ಕಾದ ಬೋ ।
ಧಾಲೋಕರ್ ದಯೆಗೆಯ್ಗೆ ಸಾಧುಗಳಘಪ್ರಧ್ವಂಸನಪ್ರೌಢಿಯಂ ॥೫॥

ಪರಿಹೃತದೋಷಂ ಸಗುಣಂ ।
ಪರಾರ್ಥ್ಯಮುತ್ಪ್ರಭಮತರ್ಕ್ಯಸಾಮರ್ಥ್ಯಮಳಂ ॥
ಕರಿಸಿರ್ಕೆ ಪಂಚಗುರುಪಂ ।
ಚರತ್ನಮಾಳಕೆ ಮದೀಯಮತಿಮಾನಿನಿಯಂ ॥ ॥೬॥

॥ ಮಾಳಿನೀ ವೃತ್ತಂ ॥

ಪ್ರಣತನಿಚಯಜೇತಕ್ಷಾತಕಕ್ಕೀಗೆ ಬೇಗಂ ।
ತಣಿವನಮಲವಾಣೀವೃಷ್ಟಿಯಿಂದಪ್ರಮತ್ತಂ ॥
ಗುಣಗಣಸಮುದಾತ್ತಂ ಸತ್ತಪೋವೃತ್ತಿವಿತ್ತಂ ।
ಗಣಧರವಿಭುವತ್ತಂ ಶುದ್ಧಬೋಧಪ್ರವೃತ್ತಂ ॥ ॥೭॥

ಚಿತಕರ್ಮಂ ಸಮುಪಾತ್ತತತ್ತ್ವಚಯಮುಮರ್ಮಂ ಶುದ್ಧರತ್ನತ್ರಯಿಾ।
ಧೃತಧರ್ಮಂ ಕುಮತಾವಳೀಶಿಶಿರಘರ್ಮಂ ಸಾಧುಸಂದೋಹಸಂ ॥
ವೃತವರ್ಮಂ ವಿನಮದ್ವಿನೇಯಜನಶರ್ಮಂ ಮೋಕ್ಷಲಕ್ಷ್ಮೀಪ್ರಿಯೋ ।
ಚಿತನರ್ಮಂ ನಮಗಾರ್ಮಮಕ್ಕೆ ಜಿನಧರ್ಮಂ ಜನ್ಮಪಾರಂಬರಂ ॥೮॥

ಪ್ರಾಳೇಯಾಮಳನಾಂಗಿ ತುಂಗಮಹಿಷೇಂದ್ರಾರೂಢೆಯಾತ್ಮಾಷ್ಟದೋ।
ರ್ಮಾಳಾಳಂಕೃತೆ ಚಕ್ರಶೂಲಶರಚಾಪೋತ್ಕೇತುಚಂಚತ್ಕಶಾ ।
ಭೀಳಾಸಿಸ್ಫುಟಖೇಟಕಾನ್ವಿತೆ ಚಳದ್ಬಾಳಾಕ್ಷಿ ಸಂಪ್ರೀತಿಯಿಂ ।
ಜ್ವಾಳಾಮಾಳಿನಿ ಮಾಟ್ಕೆ ಮತ್ಕೃತಿಗೆ ನಿರ್ವಿಘ್ನೋಕ್ತಿನಿರ್ವಾಹಮಂ ॥೯॥

ಮರಕತಕಾಂತಿಯಂ ತಳೆದ ಮೆಯ್ವೊಳಗಿಂ ನೊಸಲೊಳ್ ಪೊದಟ್ಟಿ ತಾ।
ವರೆಯೆಸಳ್ಳೊಟ್ಟನೆಂತೆಸೆವ ಕಣ್ಮಲರಿಂ ವರದಪ್ರಫುಲ್ಲಪಂ ॥
ಕರುಹಕಳಾಂಕುಶಾಂಕಿತಚತುರ್ಭುಜದಿಂದೆಸೆವಂ ಕಪೋತವಿ ।
ಷ್ಕರರಥನಪ್ಪಿಯಿಂ ವಿಜಯಯಕ್ಷನೊಡರ್ಚುಗವೋಘರಕ್ಷೆಯಂ ॥೧೦॥

ಅಪಹಿಂಸಂ ಸಪ್ತಭಂಗ್ಯನ್ವಿತಮಪವನರೋಧೋದ್ಧತಂ ತ್ಯಕ್ತತಾಲ್ವೋ।
ಷ್ಠಪುಟವ್ಯಾಪಾರಮಪ್ರಸ್ಖಲನಮಖಿಲಭಾಷಾತ್ಮಕಂ ನಿಶ್ಚಿತಾಶೇ ॥
ಷಪದಾರ್ಥಂ ವ್ಯಾಪ್ತಕಾಲತ್ರಯಮತಿಸದೃಶಾಸನ್ನದೂರಂ ಸುತತ್ತ್ವ ।
ಭ್ಯುಪಯುಕ್ತಂ ಮೂಲ್ಕೆ ಜೈನಂ ವಚನಮಮಳವಾಕ್ಪ್ರಾಥಿಯಂ ನಮ್ಮೊ
ಳೆಂದುಂ ॥ ॥೧೧॥

ದುರಿತವ್ರಾತಲತಾಕೃಪಾಣಿ ವಿಸರದ್ದುರ್ಬೋಧರೋಧಸ್ವನೀ ।
ತರಣಿದ್ರೋಣಿ ಸಮುನ್ನತಾಕ್ಷಯಪದಪ್ರಾಸಾದನಿಶ್ರೇಣಿ ಬಂ ॥
ಧುಗಸಾಹಿತ್ಯಸುರತ್ನರೋಹಣಮಹೇಂದ್ರಕ್ಷೋಣಿ ತಾಳ್ದಿರ್ಕೆ ವಿ ।
ಸ್ತರದಿಂ ವಾಣಿ ಮದೀಯಮಾನಿತಮುಖಶ್ರೀಯೊಳ್ ಸಖೀಲೀಲೆಯಂ ॥೧೭॥

ಮಳವಿಳಯನರೆನಿಸಿದ ಕೇ ।
ವಳಿಗಳ ಕುದ್ಧಾನುಬದ್ಧಕೇವಳಿಗಳ ನಿ ॥
ಶ್ಚಳಿತಪ್ರತಕೇವಳಿಗಳ ।
ಚಳನಂ ನಮಗಚಳಸುಖಮನೀಗನವರತಂ ॥ ॥೧೩॥

ನೆಲೆ ನಾಲ್ವೆರಲಧಿಕಂ ನಿ ।
ಶ್ಚಲತಪದಿಂದಾರ್ಗಮೆಂಬುದರ್ಕಾಚತುರಂ ॥
ಗುಲಚಾರಣಋದ್ಧಿಯೆ ಮೂ ।
ದಲೆಯೆನಿಪಂ ವರ್ಯಕುಂಡಕುಂದಾಚಾರ್ಯಂ ॥ ॥೧೪॥

ತ್ರಿಭುವನಮಂಗಲತೋರಣ ।
ನಿಭಮಂ ಪ್ರವಚನಮನೆಯ್ದಿ ರೈಸ್ತಂಭಸಮ ॥
ಪ್ರಭರಂತರ್ನಿಭೃತೋನ್ನತ ।
ವಿಭವರ್ ಭೂತಬಲಿಪುಷ್ಪದಂತಾಚಾರ್ಯರ್ ॥ ॥೧೫॥

ಅನಿಶಂ ಪ್ರಸನ್ನತಾಯುತ ।
ರನೂನಸದಸತ್ಪದಾರ್ಥದರ್ಶನನಿಪುಣರ್ ॥
ಜಿನಶಾಸನಲಕ್ಷ್ಮಿಗೆ ಲೋ ।
ಚನಯುಗಳರ್ ವೀರಸೇನಜಿನಸೇನಾಖ್ಯರ್ ॥ ॥೧೬॥

ಪ್ರಥಿತಾಕಳಂಕಹಿಮುವ ।
ತ್ಪೃಥಿವೀಧರಜಾತ ಭಾರತೀನುತಭಾಗೀ ॥
ರಥಿಯನೊಳ ಪೊಕ್ಕು ಕಳೆದುದು ।
ವೃಥುಮಿಥ್ಯಾತ್ವೋಪತಾಪಮಂ ಸಕಳಜನಂ ॥ ॥೧೩॥

ಆಚರಿಕೆ ಗೃಧ್ರಪಿಂಛನು ।
ಹಾಚಾರ್ಯಾಂಘ್ರಿನಖಭಾನುರುಚಿಯರ್ಹದ್ಭ ॥
ಲ್ಯಾಚಾರ್ಯಪದನಖರಶಶಿ ।
ರೋಚಿ ಮದೀನಸ್ತಮಸ್ತಮೋನಿರಸನಮಂ ॥ ॥೧೪॥

ಭೃತವಂಶನಾಗಿಯುಂ ವ್ಯಪ ।
ಗತರಾಗಾಸಕ್ತ ಸಿಂಹನಂದ್ಯಾಚಾರ್ಯ ॥
ಪ್ರತಿಪತಿ ಸತ್ತತ್ವಸನು ।
ನ್ವಿತನಾಗಿಯುಮಾತ್ತತತ್ತ್ವಚಯಚಾತುರ್ಯಂ ॥ ॥೧೯

ಸಮನಿಕೆ ಮನ್ಮಾನಸದೊಳ ।
ಸಮಂತಭದ್ರಾಂಘ್ರಿನಖರಕಾಂತಿಜಳಂ ಮ ॥
ತ್ತಮಳಿನಕವಿಪರಮೇಷ್ಠಿ !
ಕ್ರಮಕಮಳಂ ಪೂಜ್ಯಪಾದಪದನಖಕುಮುದಂ ॥ ॥೨೦॥

ಆಯಮಾರ್ಗಾಶ್ರಯನಂ ಪ್ರಭೂತದಯನಂ ದೂರೀಕೃತಸ್ವಾಂತಭೂ ।
ಭಯನಂ ಲಬ್ಧಕಷಾಯವೈರಿಜಯನಂ ವಿಜ್ಞಾತನಿಶ್ಶೇಷವಾ ॥
ಙ್ಮಯನಂ ಸ್ವೀಕೃತಸತ್ತಪಃಪ್ರಚಯನಂ ಶ್ರೀಕುಂಡಕುಂದೋಜ್ಜ್ವಳಾ ।
ನ್ವಯನಂ ವಂದಿಪೆನಚ್ಚಿಯಿಂದೆ ಕುಳಚಂದ್ರಖ್ಯಾತಯೋಗೀಂದ್ರನಂ ॥ ॥೨೧॥

ಶಾಂತರಸೈಕಮೂರ್ತಿ ಪರಮಾಗಮವಾರಿಧಿಪಾರವರ್ತಿ ಚೈ ।
ರಂತನಯೋಗಿನಾಯಕಯಶಸ್ಸಮಕೀರ್ತಿ ಮನೋಜರಾಜವಿ ॥
ಕ್ರಾಂತವನಾಸಿತಾರ್ತಿಯೆನೆ ವಿಶ್ವವಸುಂಧರೆ ಮಾಣಿಂದಿಸೈ ।
ದ್ದಾಂತಿಕಚಕ್ರವರ್ತಿ ನೆಗಳ್ದಿಂ ಧರಣೀಶ್ವರವೃಂದವಂದಿತಂ ॥ ॥೨೨॥

ಶ್ರೀಕಸಕನಂದಿಮುನಿವಿ ।
ದ್ಯಾಕೀರ್ತನಮಂ ಫಣೀಶ್ವರಂ ಬಹುತರಜಿ ॥
ಕ್ಷ್ವಾಕರನಾಗಿಯುಮುಳಿಯದೆ ।
ಪೂಕತೆಯಂ ತಳೆದು ನಾಣ್ಬಿ ರೆಸೆಗಿಲ್ದಿರ್ಪಂ ॥ ॥೨೩॥

ಭಾವಂ ಭಾಸುರತತ್ತ್ವಗರ್ಭಮಯನಂ ಚಾರಿತ್ರಗರ್ಭಂ ವಚಿ ।
ಶ್ರೀ ವಿಶ್ವೋಚಿತಶಾಸ್ತ್ರಗರ್ಭಮಮಳಾಳೋಕಂ ದಯಾಗರ್ಭಮಂ॥
ಬೀವಿಖ್ಯಾತಿ ಸಮಸ್ತದಿಕ್ಪ್ರಸರಗರ್ಭಂ ನೋಟ್ಪೊಡೆಂಬನ್ನೆಗಂ ।
ತ್ರೈವಿದ್ಯಶ್ರುತಕೀರ್ತಿದೇವನೆಸೆದಂ ಸ್ಯಾದ್ವಾದಸೂರೋದಯಂ॥ ॥೨೪॥

ಷಡಭಿಜ್ಞಂ ಕ್ಷಣಿಕಂ ಜಡಾತ್ಮನೆನಿಪಂ ನೈಯಾಯಿಕಂ ವೃತ್ರವಿ ।
ದ್ವಿಡಮಾತ್ಯಂ ಸಲೆ ಶೂನ್ಯವಾದಿ ಶಬರೋಕ್ತ್ಯಾಸಕ್ತಮೀಮಾಂಸಕಂ ॥
ನಡೆವಂ ಕಾಟಿಳಪತ್ರಿಯಂ ಬಿಡದೆ ಸಾಂಖ್ಯಂ ನೋಟ್ಪೊಡೆಂದೊಲ್ಲದೊ ।
ಳ್ಪಡರ್ನನ್ನಂ ಶ್ರುತಕೀರ್ತಿದೇವನೊಳೆ ನಿಂದರ್ ವಾಣಿಯೇಂ ಜಾಣೆಯೋ॥

ಅತಿಮೃದುಪುಷ್ಪಚಾಪವಳನೀಗುಣಟಿಂಕೃತಿರಾವಮಾಗಮಾ ।
ಮೃತಪರಿಪೂರ್ಣಕರ್ಣಯುಗನಂ ಸಲೆ ಕೇಳಿಸದಾತ್ತಸಪ್ತಸ ॥
ಪ್ತತಿಪವಿವರ್ಮನಂ ನಡವು ಪುಷ್ಪಶರೋತ್ಕರಮೆಂದು ಮನ್ಮಥಂ ।
ಪುತಿಗಿಡುವಂ ಗೆಲಲ್ ಪಡೆಯದಾ ನಯಸೇನಮುಮುಕ್ಷುಮುಖ್ಯನಂ ॥ ॥೨೬॥

ಶಾಂತರಸಾತ್ಮನಾರ್ದ್ರಹೃದಯಂ ಸುದಿಗಂಬರವರ್ತನಂ ಗತ ।
ಭ್ರಾಂತಿಯೆಬಂಧಕಂ ಸತತಮೋಕ್ಷಪದೇಚ್ಛು ಮಹಾತಪಸ್ವಿ ಮ ॥
ತ್ತಂತೆ ವಿಶೈಷ್ಣನೆಂಬಸಮಶೀಲತೆಯಂ ತಳೆದಿರ್ದಮೇನೊ ಸೈ ।
ದ್ಧಾಂತಿಕಚಕ್ರವರ್ತಿ ಮುನಿಚಂದ್ರಮುನೀಂದ್ರನೆ ಪಂಚ್ಯಗುರ್ವಿಯೊಳ್ ॥

ದುರಿತಾಸಹಿಷ್ಣು ಸುತಪ ।
ಶ್ಚರಿಷ್ಣು ಭವ್ಯಪ್ರಮೋದವರ್ಧಿಷ್ಣು ಕತೀ ॥
ಶ್ವರಜಿಷ್ಣು ಗುಣಗಣಾಲಂ ।
ಕಾಶಿಷ್ಣುವೆನೆ ನೆಗೆಲ್ದಿನುದಯಚಂದ್ರಮುನೀಂದ್ರಂ ॥ ॥೨೭॥

ದೇಶಂ ಧರ್ಮೋಪದೇಶಂ ಶ್ರುತಬಲಮೆ ಬಲಂ ಕೋಶಮುದ್ಯೋಧ ಕೋಶಂ । ಸೌಶೀಲ್ಯಂ ಸತ್ಸಹಾಯಂ ಸಚಿವನುಪಶಮಂ ಜೈನಮಾರ್ಗಂ ಸುದುರ್ಗಂ ॥ ಭೂ ಶಸ್ತ್ರಾಗಾರಮಾದತ್ತೆನೆ ತನಗೆ ಜಗತ್ಸಿದ್ಧರಾದ್ಧಾಂತಚಕ್ರಾ । ಧೀಶಂ ಸಪ್ತಾಂಗಸಾಮ್ರಾಜ್ಯದಿನಿಳೆಗೆಸೆದಂ ವೀರನಂದಿವ್ರತೀಂದ್ರಂ॥

ಮಾದ್ಯದ್ವಾದ್ಯುತ್ಕರತ್ರಾಸಕಮಖಿಲಕಲಾಪ್ರೌಢಿ ದೂರೀಭವತ್ಸ್ವಾ ।
ವದ್ಯಂ ಚಾರಿತ್ರಮುರ್ವೀಪತಿತತಿವಿನುತಂ ಸತ್ತಪೋವೃತ್ತಿ ಚೇತ ॥
ಸ್ಸದ್ಯಪ್ರೀತಿಪ್ರದಂ ಪಾವನತರನಿಜಸನ್ಮೂರ್ತಿಯೆಂಬನ್ನೆಗಂ ತ್ರೈ ।
ವಿದ್ಯೇಶಂ ಮಾಘಣಂದಿವ್ರತಿ ಪೆಸರ್ವಡೆದಂ ವರ್ಣ್ಯನೀಕಪ್ರವೇಕಂ॥೩೦॥

ಕ್ಷಿತಿನಾಥವ್ರಜಪೂಜ್ಯಪಾದತೆ ನಿಜಾಚಾರಪ್ರತೀತಾಕಳಂ ।
ಕತೆ ವಿದ್ವನ್ನುತವೀರಸೇನತೆ ನಿಜಂ ತಾನೆಂದೊಡಿಂ ಶಾಬ್ದನೇ ॥
ತೃತೆ ಪಟ್ಟರ್ಕವಿತರ್ಕಭೇತ್ತೃತೆಯಹಾರಾಧ್ಯಾಂತತತ್ತ್ವಪ್ರಮಾ ।
ತೃತೆಯೇಂ ಚೋದ್ಯಮೆ ವರ್ಧಮಾನಮುನಿಯೊಳ್ ವಿದ್ಯಾತ್ರಯಾಧೀ
ನೊಳ್ ॥ ॥೩೧॥

ಅತಿಸೂಕ್ಷ್ಮತತ್ತ್ವಮಂ ಕಾ ।
ಣ್ಬತನುವನೊಟ್ಟಯಿಸಿ ಕಟ್ಟುವೀದರ್ಶನಶು ॥
ದ್ಧತೆಗಂ ದೃಢಗುಣಸುಸಮ ।
ರ್ಥತೆಗಂ ಸಲೆ ದೇವಚಂದ್ರಯತಿಪತಿ ನೋಂತಂ ॥ ॥೩೨॥

ಆತ್ರೇಯದ್ಯುತಿಯಂ ಪಳಂಚಲೆದು ಕುಂದಚ್ಛಾಯೆಯಂ ಮಿಕ್ಕುನ ।
ಕ್ಷತ್ರಜ್ಯೋತಿಯನೈಚೆ ತೂಳ್ದಿ ಹಿನುವಚ್ಛಿಲ್ಪಾಳಾಂಶುವಂ ಮೀಱಿ ವಿ ॥
ಗ್ಧಾತ್ರೀವ್ಯೋಮವಿಭಾಗಗಾಮಿಯೆನಿಸಿತ್ತು ಚ್ಛಿಲ್ಪಂಖಿಳಂ ದಾಮನಂ ।
ದಿತ್ರೈವಿದ್ಯಮುನೀಂದ್ರನಿರ್ಮಳಯಶ ಶ್ರೀ ಶುಭ್ರತಾವಿಭ್ರಮಂ ॥೩೩॥

ವಿತತಗುಣಮಾರ್ಗಣಾಸ ।
ಕ್ತತೆಯಿಂದನವರತಮೋಕ್ಷಸಂಧಾನಮನ ॥
ಸ್ಕತೆಯಿಂ ಧಾರ್ಮಿಕವೃತ್ತಿಯಿ ।
ನತಿಶಯಿಪಂ ನೇಮಿಚಂದ್ರಸೈದ್ಧಾಂತೀಶಂ ॥ ॥೩೪॥

ರತಿವನಿತೆಗೆ ವಿಧವತೆಯಂ ।
ಶ್ರುತದೇವಿಗೆ ಚತುರವೃತ್ತಿಯಂ ಮಾಟ್ಪಿ ತಪ ॥
ಶ್ರುತಮೆರಡುಂ ನಿರುಪಮಮೀ ।
ಕ್ಷಿತಿಯೊಳ್ ಶ್ರುತಕೀರ್ತಿದೇವಭಟ್ಟಾರಕರಾ ॥ ॥೩೫॥

ಗುರುಕುಲಮಂ ಬೆಳಗುವ ಭಾ ।
ಸುರದೀಪಂ ಚರಿತಮೆಂಬುದಂ ಪೇಳಿವೆ ಬಂ ॥
ಧುರಪಾತ್ರಸ್ನೇಹಗುಣೋ ।
ತ್ಕರಮೆಂಬಿವು ಮಾಘನಂದಿಭಟ್ಟಾಕರಾ ॥ ॥೩೬॥

ಅಮಲತರಪ್ರದೀಪಕಲಿಕಾಕೃತಿಯಿಂ ಸ್ವಪರಪ್ರಕಾಶನ ।
ಕ್ಷಮಮೆನಿಸಿರ್ದ ತನ್ಮ ಮತಿಯಿಂ ಜಿನರಾಜಚರಿತ್ರಮಂ ಪವಿ ॥
ತ್ರಮನೊಲವಿಂದೆ ಪೇಳ್ದಿಭಯಲೋಕಶುಭಾಸ್ಪದರಾದ ಪಂಡಿತೋ ।
ತ್ತಮರ ಗುಣಂ ಗುಣಾಕೃತಿಯಿನಿರ್ಕೆ ಪುದೀಯಮನೋಮೃಣಾಳದೊಳ್ ॥

ಅತಿಮಧುರೋಕ್ತಿಯುಕ್ತನಮಲಂ ವಿದಿತಾಖಿಲಮಾರ್ಗನಪ್ಪ ವಿ ।
ಶ್ರುತಕವಿರಾಜಪಂಸನಜಿವಂತೆವ್ರೊಲೇನಜಿಯಲ್ಕೆ ಯೋಗ್ಯನೇ ॥
ಚತುರಕವಿಪ್ರತಾನರಚಿತಾಧ್ವಕೃತಿಪ್ರಕರೈಕಪಾತ್ರಸಂ ।
ಸ್ಥಿತಗುಣದೋಷದುಗ್ಧಜಳಭೇದನಮಂ ಕವಿನಾಮಧಾರಕಂ ॥ ॥೩೮॥

ಸುಳಿತಕವಿಕೃತಿಗಮಳಿನ ।
ನೆಳಸುವವ್ರೊಲ್ ಮಲಿನನೆಳಸನತಿವಿಶದಮಿವೋ ॥
ಪಳಮೊಸರ್ವ್ರೊಲಿಂದುಕರಾ ।
ವಳಗೆ ತೃಣಗ್ರಾಹಿ ನೀಳಮಣಿಯೊಸರ್ದಪುದೇ ॥ ॥೩೯॥

ಇದು ಜತುಮುದ್ರಾಮುದ್ರಿತ ।
ಮಿದು ನಿಬಿಡಸ್ಯೂತಮಿದು ಮಹಾಗ್ರಹಧೃತಮಿಂ ॥
ತಿದು ಲೋಹಪಿನದ್ಧಮೆನಿ ।
ಪ್ಪುದು ಪರಕೃತಿನುತಿಯೊಳಿಳಿಳುಳಜನವಕ್ತ್ರಂ ॥ ॥೪೦॥

ಪೊಗಟ್ಪಿ ಬಗೆಯುಳ್ಳೊಡಂ ನಾ ।
ಲಗೆ ಪೊಡರದು ಖಳಗೆ ಪುಡವಿಶೇಷದಿನುಸಿರಲ್ ॥
ಬಗೆವ್ರೊಡಮುಕಾಲದೆಸಕದಿ ।
ನಗಲದವ್ರೊಲ್ ಪರಭೃತಕ್ಕೆ ಪೂಕೀಭಾವಂ ॥ ॥೪೦॥

ಪರಿಕಿಪ್ರೊಡವಿಚಾರಿ ಸಿತೇ ।
ತರಗತಿಯಾದಂ ಪ್ರಭಂಜನಪ್ರಿಯನತಿನಿ ॥
ಪ್ಪುರಜಿಪ್ವನುಷರ್ಬುಧನಂ ।
ತಿಳಿ ದುರ್ಬುಧನಾರೊಳೊಂದಿ ಪಡೆಯಂ ನೋವಂ ॥ ॥೪೧॥

ಕುಕವಿಯನಲೆದಂಜಿಪ ಜಾಣ ।
ಸುಕವಿಯೊಳೀನುಂಟೆ ದುರ್ಜನಾಳಿಗೆ ಶಕುಳ ॥
ಪ್ರಕರಮನೆರ್ದೆಗಿಡಿಪುಗ್ರತೆ ।
ಬಕನಿಕರಕ್ಕುಂಟೆ ತಿಮಿತಿಮಿಂಗಿಲಗಿಲದೊಳ್ ॥ ॥೪೨॥

ಖರಶಾಣಕಷಣದಿಂ ಮಣಿ ।
ಗುರುತೇಜೋವೃತ್ತಿ ನೆಗಟ್ಪಿವ್ರೋಲಕ್ಕುಂ ನಿ ॥
ಪ್ಪುರವಾಕ್ಪಾಷಾಣಪರಿ ।
ಸ್ಫುರಿತಂ ಕೃತಿರತ್ನಬೊಳ್ ಸಮುಜ್ಜ್ವಲಭಾಸಂ ॥ ॥೪೪॥

ಪರಪೀಡಾಮುಖದುಷ್ಟದುರ್ಜನನಿಕಾಯಾತಂಕದಿಂ ಸದ್ಗುಣಾ ।
ಕರಮಂ ಸದ್ರಸಭಾವಮಂ ಸಮೆವುದಂ ಪಾಣಲ್ಕದೇಕಾಯ್ದೊ ಬಂ ।
ಧುರಮಂ ಕಾವ್ಯನಿಬಂಧಮಂ ಬಗೆಯೆ ಯೂಕಾಭೀತಿಯಿಂದಂಬರಂ ।
ಪರಿಹರ್ತವ್ಯಮೆ ಮೇಣಜೀರ್ಣಭಯದಿಂ ಪ್ರಾಜ್ಯಾಜ್ಯಮೇಂ ತ್ಯಾಜ್ಯಮೇ॥

ಪರುಸದೊರೆಗಲ್ ಸುವರ್ಣ ।
ಕ್ಕೊರೆಪಕ್ಕೆಡೆಯಾಗಿ ತೋರ್ಪವ್ರೊಲ್ ಕವಿಗಂ ಬಂ ॥
ಧುರಕಾವ್ಯರಚನೆ ತದ್ಗುಣ ।
ಪರೀಕ್ಷೆ ನಿರಪೇಕ್ಷವೆನಿಸೆ ನೆಜಿದಿರವೇಡಾ ॥ ॥೪೬॥

ಅತಿಶಯಪದಾರ್ಥನಿಕರ ।
ಪ್ರತೀತಿಯಂ ಪಡೆವ ಪಾದವಿನ್ಯಾಸಂ ಭೂ ॥
ನುತಮಾಗದಲ್ತೆ ನಿರ್ದೋಷ ।
ಪತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥ ॥೪೭॥

ಜೀಯೆನೆ ಬಲ್ಲವರ್ ನೆಱೆಯೆ ಸತ್ಕೃತಿವೇಟಿದೆ ಪೇಚ್ ಘಣಾಕ್ಷರ ।
ಪ್ರಾಯದೆ ಶಬ್ದವೊಂದೆರಡು ಮತ್ತೆ ವಿಚಾರಿಸಿ ನೋಡೆ ಕಾಕತಾ ।
ಳೀಯದೆ ವಾಚ್ಯವೊಂದೆರಡು ಕೂಡೆ ನಿಘರ್ಷಿಪೊಡಂಧಲಾವುಕ ।
ನ್ಯಾಯದೆ ಭಾವವೊಂದೆರಡು ಲೇಸೆನೆ ಪೇಟ್ಟಿ ಅದಿರ್ಪುದೊಪ್ಪವೇ ॥೪೮॥

ಇದು ಪಿರಿದುಂ ಬುಧಾವಳಿಗೆ ಕರ್ಣರಸಾಯನಮಾತ್ತ ಚಿತ್ತಸ ।
ಮ್ಮದಜನಕಂ ಮುದಶ್ರುಜಲಕರ್ತೃ ಲಸತ್ಪುಳಕಪ್ರಭೇದನ ॥
ಪ್ರದಗುರು ಮಸ್ತಕಪ್ರಚುರಕಂಪನಶಿಕ್ಷಕನೆಂಬಿನಂ ಪ್ರಯ ।
ತ್ನದೆ ಕೃತಿವೇಟ್ಟುದಲ್ಲದೊಡೆ ತತ್ಕೃತಿ ಧಿಕ್ಕೃತಿಯಿಂ ನಿಮಿರ್ಚದೇ ॥೪೯॥

ಕವಿಕುಳಸೇವ್ಯಮಾನಕವಿತಾಕಳಹಂಸೆಗೆ ಕೇಳಿಲೀಲೆ ಸಂ ।
ಭವಿಪೊಡನಾಮಲಂ ಜಿನಕಥಾರಸಮಾನಸದಲ್ಲಿ ಕೂಡೆ ಸಂ ॥
ಭವಿಕುಮುದಲ್ಲದಂತೆ ದೊರೆಕೊಳ್ಗುಮೆ ದುಷ್ಕೃತಸೈರಿಭಪ್ರಜಾ ।
ವಿವರಮೆನಿಪ್ಪ ರಾಜವಿಟಚಕೋರಕಥೋಲ್ಬಣಪಲ್ವಲಂಗಳೊಳ್ ॥೫೦॥

ಕೆವಿಯಂ ಜಕ್ಕುಲಿಪಂತೆ ನುಣ್ಪಡರ್ದ ಶಬ್ದಂ ಶಬ್ದಸಂದರ್ಭದೊಳ್ ।
ಸವಿಯಂ ಮುಂದಿಡುವರ್ಥಮರ್ಥದೊಳೊಡಂಬಟ್ಟೊಪ್ಪನೋರಂತೆ ಬೀ॥
ಱುವ ಭಾವಂ ಸಲೆ ಭಾವದಿಂದೊದವಿ ಚಿತ್ತಂ ಕೂಡೆ ತೇಂಕಾಡೆ ಪೊ ।
ಣ್ಮುವ ನಾನಾರಸಮಿರ್ಪ ವಸ್ತುಕೃತಿಯಂ ಪೇಟ್ಟಿದ್ದಗ್ಗಳಂ ಮೆಚ್ಚಿಪಂ ॥೫೧॥

ಸುರರಾಜಾರ್ಚಿತನಿಂಗಳೀಶ್ವರಪುರಶ್ರೀತೀರ್ಥಚಂದ್ರಪ್ರಭಂ ।
ಪರಮೇಶಂ ಶ್ರುತಕೀರ್ತಿದೇವಮುನಿಪಂ ತ್ರೈವಿದ್ಯಚಕ್ರಾಧಿಪಂ ॥
ಗುರು ಭವ್ಯರ್ ಪ್ರಿಯಬಾಂಧವರ್ ತನಗೆನಿಪ್ಪನ್ಯೋನಮಂ ಪುಣ್ಯದೇ ।
ಟ್ಟಿರಮಂ ತಾಳ್ದಿದನಗ್ಗಳಂ ಜಿನಮತಶ್ರೀಕೋಶವೇಶ್ಯಾಗ್ರಗಳಂ ॥೫೨॥

ಗುಣಿ ಮೂಲಸಂಘದೇಶೀ ।
ಗಣಪುಸ್ತಕಗಚ್ಛ ಕೊಂಡಕುಂದಾನ್ವಯದೊಳ್ ॥
ಗಣನೆಮತೆದೆಸೆವ ವಿನಯಾ ।
ಗ್ರಣಿ ವಿಮಲತರಸ್ವಭಾವನಗ್ಗಳದೇವಂ ॥ ॥೫೩॥

ಶಾಂತೀಶನಂದನಂಗುಪ ।
ಶಾಂತತೆ ಪಾಚಾಂಬಿಕಾತನೂಜಂಗೆ ಜಗ ॥
ತ್ಕಾಂತವಚಕ್ಷ್ಯತುರತೆಯೆಂ ।
ದಿಂತಿವು ಭಾವಿಸುವ್ಪೊಡಗ್ಗಳಂಗೆ ನಿಸರ್ಗಂ ॥ ॥೫೪॥

ಉಭಯಕವಿತಾವಿಚಾರದ ।
ನುಭಯಭವಾತ್ಯಕ್ತಹೇತುಚರಿತಂ (?) ನೋಲ್ಪಂ ॥
ದುಭಯಕುಲಶುದ್ಧತಾಯುತ ।
ನುಭಯನಯಾಯತ್ತಚಿತ್ತನಗ್ಗಳದೇವಂ ॥ ॥೫೫॥

ನಾರೀನಯನೋತ್ಪಲಹೃ ।
ನ್ನೀರೇಜನುನೊಡನಲರ್ಚಿ ಶಶಿಸೂರ್ಯಸಮಾ ॥
ಹಾರದಿನಾದವ್ಯೊಲತುಳಾ ।
ಕಾರಂ ಸೌಭಾಗ್ಯಸಾರಮಾಯ್ತಗ್ಗಳನಾ ॥ ॥೫೬॥

ಗೆಳವರ್ ಪವಣಿಯಿಯದೆ ಬೆಸ ।
ಗೊಳೆ ಸೆಣಸಿಂ ಲೋಕದೊಳಗೆ ವರ್ತಿಪ ವಿಲಸ ॥
ತ್ಕಳಗಳನಿತನಿತಜೊಳನು ।
ಗ್ಗಳಗಣ್ಣಂ ತೋರ್ಪನಗ್ಗಳಂ ನೃಪಸಭೆಯೊಳ್ ॥ ॥೫೭॥

ಪ್ರಕಟಿತರಂ ಶಬ್ದಂ ಶಾ ।
ಬ್ದಿಕಸಮ್ಮತಮರ್ಥಮರ್ಥದೃಷ್ಟಿ ಮನೇಕಾ ॥
ತುಕಜನಕಂ ಭಾವಂ ಭಾ ।
ವುಕಭಾವ್ಯಂ ಕಾವ್ಯತತಿಯೊಳಗ್ಗಳ ನಿನ್ನಾ ॥ ॥೫೮॥

ತಿಂಗಳ ತಣ್ಣನಪ್ಪ ಕದಿರ್ಪೊಂಗಲೊಳಭ್ಯಸಿಸಿತ್ತೊ ಕಾಮುಬಾ ।
ಣಂಗಳೊಳಾದಮೋದಿದುದೊ ಬಂದ ಬಸಂತದ ಕಮ್ಮನಪ್ಪಲರ್ ॥
ತಾಂ ಗುರುವಾಗೆ ಕಲ್ತುದೊ ವಿಳಾಸವತೀನಯನತ್ರಿಭಾಗದೊಳ್ ।
ಸಂಗಳಿಸಿತ್ತೊ ಮೋಹನಮನಗ್ಗಳ ನಿನ್ನಯ ವಾಕ್ಪ್ರಗುಂಭನಂ ॥೫೯॥

ಎಂದು ವಿನೇಯವಿಪಶ್ಚಿ ।
ದ್ವೃಂದಂ ಕೇವಣಿಸು ವಾಕ್ಸುವರ್ಣದೊಳೊಲವಿಂ ॥
ಸಂದ ಜಿನಚರಿತರತ್ನಮ ।
ನೆಂದೊಡೆ ತದನುಜ್ಞೆಯಿಂದಮಾಂ ಬಗೆದಂದೆಂ ॥ ॥೬೦॥

ಬಗೆದಲ್ಪಮತಿಯ ಬಲದಿಂ ।
ದಗಣಿತಜಿನನಾಥಸತ್ಕಥಾಕಥನಕ್ಕು ॥
ಜ್ಜಗಿಸಿದೆನಾಂ ತವೆ ಪೀರಲ್ ।
ಬಗೆದಂತೆ ಮೃಣಾಳನಾಳದಿಂ ವಾರಿಧಿಯಂ ॥ ॥೬೧॥

ಕಿಱುದೇಂ ಪಿರಿದೇಂ ಮತಿ ಮತಿ ।
ಯಱಿಯಮೆ ಪಶುಗಂ ಫಣೀಶ್ವರಂಗಂ ಜಿನನಂ ॥
ಕುಱುತುಸಿರೆ ಸೈಸ್ರು ಸರಿಯ ।
ಲ್ತೆಱಗಿದೊಡದಱಿಂದೆ ಪೇಳಿದಂ ಮರುಳಲ್ತೇ ॥ ॥೬೨॥

ಕವಿತೊಳಿವಾನದಿಂ ಮೇ ।
ಣವಿರಳವೇಳಾವಸರಣಲೀಲೆಯಿನಲ್ತೇ ॥
ಭವಹರಚರಿತಂ ಪುಣ್ಯಾ ।
ಶ್ರವಕಾರಣಮೆಂದೆ ಪೇಳಿಲುದ್ಯತನಾದೆಂ ॥ ॥೬೩॥

ಗಣಭೃದ್ವಿಸ್ಮಾಪಕಂ ತೀರ್ಥಕರಪರಮದೇವಪ್ರಭಾವಂ ದಲೆಂದೀ । ಗಣಿಪಂ ಮಚ್ಚಿತ್ತದೊಳ್ ತಳ್ತರೆಯಿರೆಯುಮುಮಂ ಮೀಱಿ ಭಕ್ತಿಪ್ರಿಯಾ ಪ್ರೇ । ರಣದಿಂ ತದ್ವರ್ಣನೋಪಕ್ರಮದೊಳೆಳಸಿದೆಂ ಭ್ರಾಂತನೆಂ ನೋಟ್ಟೊಡೆಂತುಂ । ಪ್ರಣಯಿನ್ಯಾಸಕ್ತಿಯುಕ್ತಂ ಗಗನಗಹನಸದ್ಯುಕ್ತಿಯವ್ಯಕ್ತಮಲ್ತೇ ॥ ॥೬೪॥

ಆರಯೆ ಸೂರ್ಯನಂತೆ ನಭವುಂ ಬೆಳಪೊಂದಳವಿಲ್ಲದಿರ್ದೊಡಂ ।
ತಾರಗೆ ಯಲ್ಲಿ ಸಂಭವಿಸಿ ತನ್ನನೆ ತಾಂ ಬೆಳಪಂದದಿಂದೆ ಮ ॥
ದ್ಭಾರತಿಗಾದ್ಯಸೂರಿವಚದಂತೆ ಜಿನಸ್ತುತಿದಕ್ಷವೃತ್ತಿ ಕೈ ।
ಸಾರದೊಡಂ ಪವಿತ್ರಮಿಟೆನಿಪ್ಪುದು ತನ್ನನೆ ತತ್ಪ್ರಸಂಗದಿಂ ॥ ೬೫॥

ನಯದಿಂ ಪಂಪನೊಲ್ಬು ನಿರ್ಮಿಸಿದ ಪೊನ್ನಂ ಪ್ರೀತಿಯಿಂ ಪೇಳ್ದಿಭ।
ಕ್ತಿಯಿನಾರತ್ನಕವೀಶ್ವರಂ ಸಮೆದ ತತ್ಕಾವ್ಯತ್ರಯಕ್ಕಂ ಜಗ ॥
ತ್ತ್ರಯಮುಂ ಮುಂ ಬೆಲೆಯಾಗಿ ಪೋಯ್ತೆನೆ ಬಿಳಿಕ್ಕಾಂ ಪೇಳ್ದಿಚಂದ್ರಪ್ರ
ಭೋದಯವಿಘ್ನಾರಿಯೆನಿಪ್ಪ ಕಾವ್ಯಮಿದಮೂಲ್ಯತ್ವಕ್ಕೆ ಪಕ್ಕಾಗದೇ ॥೬೬॥

ವ॥ ಆದೊಡಂ,

ಆ ಚಂದ್ರಪ್ರಭಜಿನನ ಮ ।
ಹಾಚರಿತಪಯೋಧಿಪಾರಯಾನಕ್ಕಾನಾ ॥
ಲೋಚಿಸಿದೆಂ ಪ್ರಾಕ್ತನಪರ ।
ಮಾಚಾರ್ಯಾಪ್ತಾತಸೇತುಬಲದಿಂದೀಗಳ್ ॥ ॥೬೭॥

ಸ್ಕಂಧದಪ್ರೋಲ್ ಜಿನೇಶ್ವರಮುಖೋದ್ಗತವಾಗ್ವಧುಗೊಪ್ಪುವಾಶ್ರುತ ।
ಸ್ಕಂಧಮನೊಂದಿ ತೋಱುವನುಯೋಗಚತುಷ್ಕಯಮೆಂಬ ಕೈಗಳೊಳ್ ॥
ಬಂಧುರಮಪ್ಪ ಪೂರ್ವದನುಯೋಗಕರಕ್ಕುರುಶಕ್ತಿಯಂತೆ ಸಂ ।
ಬಂಧಿಸಿ ತೋರ್ಪುದೀಕಥೆ ವಿನೇಯಜನೋದ್ಧರಣೈಕಕಾರಣಂ ॥ ೬೮॥

ವ ॥ ಅದೆಂತೆಂದೊಡೆ

ಮಿಗೆವಂದ ಪೆರ್ಮಗಂ ಸ್ಥಿರ ।
ತೆಗವಾಶ್ರಯಮಾದ ಗಗನಲಕ್ಷ್ಮಿಯ ಮಧ್ಯಾ ॥
ಧಿಗತವಳಿತ್ರಯಮೆನೆ ಸಲೆ ।
ಸೊಗಯಿಪುದು ಜಗತ್ತ್ರಯಂ ಮರುತ್ತ್ರಯವಿಧೃತಂ ॥೬೯॥

ಅದಱೊಳ್ ಮಧ್ಯಮಮೆನಿಸಿಯು ।
ಮುವಾತ್ತನಿಜಶೋಭೆಯಿಂದಮುತ್ತಮಮಾಯ್ತಂ ॥
ಬುದನೆನಿಸಿ ನಾಡೆ ಸೊಗಯಿಸು ।
ವುದು ತಿರ್ಯಗ್ಲೋಕಮೇಕರಜ್ಜುವಿಶಾಲಂ ॥ ॥೭೦॥

ಅಂತಸಂಖ್ಯಾತದ್ವೀಪಸಮುದ್ರಭದ್ರತಾಮುದ್ರಿತಮುಪ್ಪ ಮಧ್ಯಮಲೋಕದೊಳ್ ॥೭೧॥

ಅಣಕಂ ತುಚ್ಛತರಂಗೆ ಮತ್ತೆ ತನಗೀಮುಖ್ಯಾಖ್ಯೆ ತನ್ನಿಂ ಚತು ।
ರ್ಗುಣವಿಸ್ತಾರವಿಲಾಸವಿಶ್ರುತನೆನಾನಿರ್ದಂತಿರೆಂದುದ್ಗತೋ ।
ಲ್ಬಣರೋಷಂ ಪರಿಯಿಟ್ಟು ಮುತ್ತಿದವೊಲಿರ್ಕುಂ ಧಾತಕೀಷಂಡಮೀ ।
ಕ್ಷಣಭದ್ರಂ ಸಸಮುದ್ರಮಂ ಬಳಸಿ ಜಂಬೂದ್ವೀಪವಿನ್ಯಾಸಮಂ ॥೭೨॥

ಧೃತಪೂರ್ವಾಪರಮೇರುಯುಗ್ಮಕುಚಯುಗ್ಮಂ ರುಗ್ಮಿಭೂಭೃದ್ದ್ವಯಾ
ಯತನೇತ್ರದ್ವಯಮುದ್ಗಹೈಮ್ಯಕುಹರದ್ವಂದ್ವದ್ವಿಪದ್ವಂದ್ವಸಂ ॥
ಚಿತಗಂಗಾದ್ವಯವಾಳ್ಪವ (?) ದ್ವಯಮುದೇಂ ಮಾಡಿತ್ತೊ ತದ್ದ್ವೀಪಪಾ ।
ಧೃತವಾಳೋದಕವಾರಿರಾಶಿವಸನಂ ಸ್ತ್ರೀವಿಭ್ರಮಭ್ರಾಂತಿಯಂ ॥ ॥೭೩॥

ಅದಲ್ಲದೆಯುಂ,

ಬಳಸುವ ಚಂದ್ರಭಾನುಭಗಣಪ್ರತಿಬಿಂಬಕದಂಬಮೆತ್ತಲುಂ ।
ವಿಳಿಖಿತಸೋಮಸೂರ್ಯನಿಬಿಡಾಕ್ಷರಮಾಳಿಕೆಯಂದದಿಂ ಮನಂ ॥
ಗೊಳಿಸಿ ಜಿನಪ್ರಶಸ್ತಿಯುತಭರ್ಮಚತುರ್ಮುಖಶಾಸನಂಬೊಲು ।
ಜ್ಜಳಿಪುದು ನಂದನೋಪಚಿತಕಂದರಮಲ್ಲಿಯ ಪೂರ್ವಮಂದರಂ ॥ ॥೭೪॥

ಆನಗೇಂದ್ರದ್ವೈಂದ್ರದಿಶಾಭಾಗದೊಳ್ ನಿಷಧನೀಳನಗಯುಗಾಂತರಪ್ರದೇ
ಶವಿಳಾಸಮಂ ಭದ್ರಶಾಳೋದಕ ಶಾಳಶಾಳೋದಕ ವನಧಿಪ್ರಾಂತಪರ್ಯಂ
ತಾಯತಮುಮಾಗಿ ॥ ೭೫॥

ಅತಿದೂರಂ ಕಾಲಕಲ್ಪೋಚಿತವಿಕೃತಿ ಖಿಪುಷ್ಪೋಪಮಂ ಜೈನಧರ್ಮ ।
ಜ್ಯುತಿ ನಿತ್ಯಂ ಕ್ಷತ್ರಸಾರಸ್ಥಿತಿಯವಿಚಳಿತಂ ಪೂರ್ವಕೋಟ್ಯಾಯತಾಯು ॥
ರ್ಮಿತಿ ವೃತ್ತಂ ಷಡ್ವಿಧೇತಿಪ್ರತಿನಿಯತನ್ಮೈನೂಱು ಬಿಲ್ ಮತ್ಯರ್ಮಮೂ
ತ್ಯರ್ । ನ್ನತಿಯೆಂದುಂ ತನ್ನೊಳೆಂಬೀಸ್ತುತಿವಡೆದುದು ಸೌಖ್ಯಾವಗಾಢಂ
ವಿದೇಹಂ ॥ ॥೭೬॥

ಜಿನನಾಥರುಮೆಂದುಂ ಚ ।
ಕ್ರನಾಥರುಂ ಕುಂದರೆನೆ ತದುರ್ವರೆಯವ್ವೊಲಾ ॥

ವ ನೆಲಂ ನೋಂತುದೊ ನಿರುಪಮಂ ।
ಮೆನಿಪ ಪವಿತ್ರತೆಗಮನಿತು ನಕ್ಷತ್ರತೆಗಂ ॥ ॥೭೨॥

ಒಂದಂದದಿನಡಕಿಲ್ಗಂ ।
ಡೊಂದೊಂದಂ ಪೊತ್ತಿರಲ್ಕೆ ಬೇಸತ್ತಿದಱೊಳ್ ॥
ಬಂದು ನೆಲಸಿದುವೊ ಪದಿನಾ ।
ಉಂದಿವಮೆನೆ ನಾಲ್ಕಿಳಲ್ಲಿ ಪದಿನಾಱಿಸೆಗುಂ ॥ ॥೭೪॥

ಇಂತಿಧೆ ನೆಲೆಯೆನಗೆಂದು ಪ ।
ದಾಂತರದಿಂದತನು ತನ್ನ ಪೆಸರನದರ್ಕಂ ॥
ಸಂತಸದಿನಿಟ್ಟನೆನೆ ಚಿ ।
ಲ್ವಂ ತಳೆದ ವಿದೇಹನಾಮಮೂಮಹಿಗೆಸೆಗುಂ ॥ ॥೭೯॥

ಕುರುಧರೆಗಳ್ ಪಿರಿದುಂ ಮಂ ।
ದರಾಗಮಂ ಪೊರ್ದಿ ಮತ್ತೆ ಗಜದಂತಯುಗಾಂ ॥
ತರಿತಂಗಳಾದುವೆನೆ ಪೇಟ್ ।
ದೊರೆಯೆ ವಿದೇಹಕ್ಕೆ ಸೌಖ್ಯಸೌಸ್ಥ್ಯೋನ್ನತಿಯಿಂ ॥ ॥೮೦॥

ಎಂಬಿನಮಪೂರ್ವಸಂಪತ್ಸಾರಸರ್ವಸ್ವಗೇಹಮಾದ ಪೂರ್ವವಿದೇಹಮ
ಹೀಮಧ್ಯದೊಳ್ ॥೮೦॥

ರೋಧಮನ್ನೈದೆ ನೀಳ್ದಿರಡುಮಂ ಪ್ರದಿದೊಸ್ಪವ ನಂದನಾಳಿಯೆ ।
ಗ್ರಾಧರಪಕ್ಷ್ಮಪಾಳಿ ಪೊಳೆವಾಲಿ ವಿನಿರ್ಮಲಪೂರವಾರಿಯಾ ॥
ಗಾಧರಣೀವಿಳಾಸಿನಿಯ ಬಳ್ವಳ ನೀಳ್ದಲರ್ಗಣ್ಬೊಲ್ಬೆದೆ ನೀ ।
ತಾಧುನಿ ರಂಜಿಕುಂ ನಿಭೃತನೀರಜಕೈರವಮೀನಜಾರವಂ (?)॥ ॥೮೬॥

ಇದಪೂರ್ವಂ ವಾರ್ಧಿಯಡ್ಡಂಪರಿದುದಿಳೆಯೊಳಂಬಂತೆ ತಾಂ ಗುಣ್ಪುಪೆಂಪಂ
ಪ್ರದಿದತ್ಯಾಶ್ಚರ್ಯಮೆಂಬಂತುಭಯತಟಿಹಟದ್ವಜ್ರವೇದೀವಿಳಾಸಾ ॥
ಸ್ಪಂದಮಚ್ಛಸ್ಫಾಟಿಕಾದ್ರಿಪ್ರತಿಮಲಹರಿಕಾಜಾಲಸಂಕೀರ್ಣಮಂತಾ ।
ನದಿ ಚೆಲ್ವಾದತ್ತು ನೀಳಾಚಳತಟಿಶಶಿಕಾಂತೋಪಳಾರ್ಣಃಪ್ರಪೂರ್ಣಂ ॥

ಬೇರಿಂ ಪೀರ್ದುಂ ತಣಿಯದೆ ।
ನೀರಜಗೆಂಧಾನುಬಂಧಿಜಳವಂ ಕೊಂಬಿಂ ॥
ಪಿರಲ್ಕೊಡರಿಸಿದಪ್ಪುದೆನೆ ।
ತೀರದ್ರುಮವಿತತಿಯೆಱಗಿ ತುಱುಗಿದುದಱೊಳ್ ॥ ॥೪೪॥

ಮತ್ತಮಾವಾಹಿನೀಪ್ರವಾಹಮೊಂದೊಂದೆಡೆಯೊಳಂದಂದಿಂಗೆ ಬಂದುಬಂದು ನೀರೊಡುವ ದೇವರಮಣೀವನಚರಕರೀಂದ್ರಕಟಿನಿಕಟನಿರ್ಯತ್ತಮಾಲಪಲ್ಲವರಸಾನುಕಾರಿದಾನಧಾರಾಪೂರದಿಂ ಕಾಳಿಂದಿಯ ಕೂಡಲಾದಂತೆಯುಂ, ಬಂದೊಂದೆಡೆಯೊಳೆಡೆವಿಡದೆ ಜಳಕ್ರೀಡೆಯಾಡುವ ವಿದೇಹವಿಜಯಾರ್ಥವಿದ್ಯಾಧರವಿಳಾಸಿನೀಸ್ತನಭರಕಾಶ್ಮೀರಪರಾಗರಾಗದಿಂ ರಕ್ತೋದಾನದೀಸಂಭೇದಮಾದಂತೆಯುಂ, ಬಂದೊಂದೆಡೆಯೊಳುನ್ನಿದ್ರಭದ್ರಶಾಳನಂದನಪ್ರಚುರಕುಸುಮಾಪಚಯವಿಹರಣಪರಿಶ್ರಾಂತಿವಿಪ್ಲವನ್ಮಲಪನಕೇಳೀದೋಹಳಸುರಕುಮಾರಪ್ರಕರಾನುಲಿಪ್ಯಮಾನಸರ್ವಾಂಗೀಣಚಂದನದ್ರವನಿವೇಶದಿಂ ಗಂಗಾಸಂಗಮಮಾದಂತೆಯುಂ ಎಸೆವುದು. ಅಂತುಮಲ್ಲದೆಯುಂ, ॥೪೫॥

ಸತತಂ ಮಾರ್ಗೋರ್ಲ್ಲಂಘನ ।
ಗತಿ ಹಯದೊಳವಗ್ರಹಂ ಮದೇಭಸಮೂಹಾ ॥
ಕೃತಿಯೊಳ್ ಸಮರಾಗಮನ ।
ಸ್ಥಿತಿ ನಲ್ಲರೊಳಲ್ಲದಿಲ್ಲ ಪೆಱತೊಂದೆಡೆಯೊಳ್ ॥ ॥೪೬॥

ನವಪುತ್ರಪ್ರೀತಿಯಿಂದಂ ರತಿಯೆ ಸಲಪಿದಿವ್ಯಾವು ಮೀನಾಂಕಿತಂ ಕೇ ।
ತುವಡರ್ಪಾಗಂಗಜಂ ಪರ್ವಿಸಿದ ಲತೆ ಸುಧಾಸೂತಿ ಪೀಯೂಷಧಾರಾಂ ॥
ಬುವೆ ಪೊಯ್ನೀರಾಗೆಮುದ್ದಿಂ ಬಳೆಯಿಸಿದೆಳದೆಂಗೆಯ್ದಿ ಮಂದಾನಿಲಂ ತೋಂ
ಟವೆಸಂಗೆಯ್ದುಲ್ಕಿಱುಂ ಪೆರ್ಚಿಸಿದ ವಿಚಕಿಳಂ ರಯ್ಯಮಲ್ಲಲ್ಲಿಗೆಲ್ಲಂ' ॥ ॥೪೭॥

ನಾಡುಗಳರಸನಿದೆಂಬೊಂ ।
ದಾಡಂಬರದಿಂದೆ ಸತ್ತಿಗೆತ್ತಿದುವೆನೆ ಕ ॥
ಪ್ಪಾಡುಂಬೊಲನಾದುವು ಬೆ ।
ಳ್ಳಾಡಿನೊಳಲರ್ದೆಸೆವ ಬಯಲ ಬೆಳ್ದಾವರೆಗಳ್ ॥ ॥೪೮॥

ಪರಿಣಮಿಸಿದುದಿಲ್ಲಿ ಜಳ ।
ಸ್ವರೂಪದಿಂ ತಿಂಗಳದಱ ನುಣ್ಗಱ ನೀಳಾಂ ॥
ಬುರುಹತೆಯನಾಂತುವೆನಿಪುವು ।
ಪಿರಿದುಂ ನೆಯ್ದಿಲ್ಗೊಳಂಗಳಾಜನಪದದೊಳ್ ॥ ॥ ೪೯॥

ಭೂತಲವರ್ತಿಯಪ್ಪ ವಿಷಯಾಳಿ ವಿಚಾರಿಪೊಡಾವಗಂ ನದೀ ।
ಮಾತೃಕದೇವಮಾತೃಕಮೆ ತದ್ವಿಷಯಂ ನನನಾಳಕೇರವಾ॥
ಮಾತೃಕಮಿಂದುಕಾಂತಜಳಮಾತೃಕಮಿಕ್ಷುಲಸದ್ರಸಾವಳೀ।
ಮಾತೃಕಮಾಮ್ರಕಮ್ರಪರಿಪಕ್ವಫಲೋತ್ಕರಸಾರಮಾತೃಕಂ ॥ ॥೯೦॥

ಲೀಲೆಯಿನದಱ ನೆಲಂ ಪರಿ ।
ಪೊಲಿಸಿದುವು ಕಣ್ಗೆ ನಾಡೆ ಮೌದ್ಗಂ ಮಾಷ್ಯಂ ॥
ಶಾಲೇಯಂ ವ್ರೀಹೇಯಂ ।
ತೈಲೀನಂ ಕಾದ್ರವೀಣಮೌಮ್ಯಂ ಯವ್ಯಂ ॥ ॥೯೦॥

ತಿಳಿದ ತೆಡಿದಡಿಯ ಮಡಿಗಳ ।
ಜಳದೊಳ್ ರಂಜಿಸುವ ಧಾನ್ಯಮಂಜರಿಯ ನೆಬಿಲ್ ॥
ಪೊಳೆಯೆ ತೆನೆವ್ರೋದುವಿವು ಬೇ ।
ಗರ್ಳನೆನಿಪ್ರುವು ಬೆಳೆದ ಕಟಿವೆ ಭೂಸಾರತೆಯಿಂ ॥ ॥೯೨॥

ಆಕಳಮಧಾತ್ರಿ ಕಣಿಶಕು ।
ಚಾಕಲಿತಪಯಃಪ್ರತಾನದಿಂ ಬಳೆಯಿಸೆ ನಿ ॥
ವ್ಯಾಕುಳಮೆನೆ ರಾಜಶುಕಾ ।
ನೀಕಶಿಶುಪ್ರತತಿ ಬಳೆವುದುಚಿತಸ್ಥಿತಿಯಿಂ ॥ ॥ ೯೩॥

ತೊಲಗದೆ ಗಂಧಶಾಲಿವನನಂ ತಟಿಜೋತ್ಪಳಗಂಧದೊಳ್ ತಡಂ ।
ಗೆಲಸಿದ ಕಂಪಿನಾಸೆಗೆ ಮುಸುಂಕಿದ ಭೃಂಗಕದಂಬಕಂ ಕೃಷೀ ॥
ವಲತತಿ ಕೀರಪೋತಪರಿಸಂಖ್ಯೆಯಿನಾವನ ನೀಲಚೇಲಸಂ ।
ಕುಲದೊಳೆ ಕೂಡೆ ಬಾಸಣಿಸಿತೆಂಬಭಿಶಂಕೆಯನುಂಟುಮಾಡುಗುಂ ॥೯೪॥

ಗಗನದೊಳಲ್ಲಿ ಮಂಡಳಿಸಿ ಬಪರ್ ಶುಕಾಳಿಯನಂದು ಬೆಬ್ಬಿಪ್ಪು ।
ಜ್ಜಗದೊಳೆ ನೋಲ್ಪ ಪಾಮರಿಯ ಚಾರುಕಟೂಕ್ಷಮರೀಚಿ ನೀಳ್ದುಕೋ॥
ಭೆಗೆ ನೆಲೆಯಾಯ್ತು ತತ್ಕಳಮಭೂರಮೆಗೆತ್ತಿದ ಪಚ್ಚನಪ್ಪ ಸ ।
ತ್ತಿಗೆಗಳವಟ್ಟು ತೋಪರ್ ಶಶಿಕಾಂತದ ಕಾಂತದ ಕಾವಿದೆಂಬಿನಂ ॥೯೫॥

ಅದಲ್ಲದೆಯುಂ,

ಕೂರಿದುವೆನಿಪೆಲೆಗಳ ಬಾ ।
ಯ್ದಾರೆಗಳೆಲರಲೆಯೆ ತಾಗಿ ಪಱಿದುಗುವ ರಸಾ ॥
ಸಾರಮೆ ಕೊಳಗೊಂಡೆಂದುಂ ।
ನೀರೂಟಕ್ಕೆಳಸವಲ್ಲಿ ಕರ್ವಿನ ಕೆಯ್ಗಳ್ ॥ ॥೯೬॥

ಎನಿಸಿ ಸೊಗಯಿಸುವನೇಕಸಸ್ಯಸಂಪತ್ಸಾರಕೇದಾರಲಕ್ಷ್ಮೀಸೀಮಂತಿನಿಯ ಸೀಮಂತರೇಖಾವಿಲಾಸಮನುಂಟುಮಾಡುವ ಘಂಟಾಪಥಂಗಳ ಕೆಲದೊಳಧ್ವನ್ಯಜನಮನೋಲತೆಗಡಪರ್ದ ಪಾನೀಯಮಂಡಪಂಗಳೊಳ್ ॥೯೭॥

ಕಲಶಮನೆತ್ತಿ ನೀರೆಱೆವ ಕಾಂತೆಯ ತೋಳ ತೆರಳ್ಕೆ ಮೇಲುದಂ ।
ತೊಲಗಿಸೆ ನೋಡಿ ನುಣ್ಪೊಗರನೀಂಬ ಕುಚದ್ವಯಮೂಲಮಂ ಸಮು ॥
ಜ್ಜ್ವಲಭುಜಮೂಲಮಂ ನೆಱೆಯೆ ಕಂಡೆರ್ದೆಯಾಱಿದೊಡಂ ನಿರೀಕ್ಷಣಾ ।
ಕುಲತೆಯಿನೀಂಟುವರ್ ಪಥಿಕರಾಕಲಶಾಂಬುವೆ ಸೀಮೆಯೆಂಬಿನಂ ॥೯೮॥

ಮತ್ತಮಲ್ಲಿ

ಜಳಪಾನಚ್ಛಳದಿಂ ಪ್ರಪಾಪ್ರಣಯಿನೀಶೃಂಗಾರಲೀಲಾಸುಧಾ ।
ಜಳಮಂ ಕಣ್ಗಳಿನೀಂಟಿ ಮಂದಪರಿಹಾಸಾಳಾಪಮಾಳಾವೃತಾ ॥
ವಳಿಯಂ ಕರ್ಣದಿನೀಂಟಿ ಭಾವರತಕೇಳೀಸೌಖ್ಯಪೀಯೂಷಸಂ ।
ಕುಳಮಂ ಚಿತ್ತದಿನೀಂಟಿ ತದ್ವಿಷಯದಧ್ವನ್ಯರ್ ಮನಂಬೆಚರ್ಪರ್ ॥೯೯॥

ಬಂದೊಂದಱ ಸಿರಿಯಂ ಪಡೆ ।
ದಂದೀಕ್ಷಿಸಲೆಂದು ಬಂದುದೆನೆ ಚಂದ್ರಿಕೆ ಪಾ ॥
ತಂದಲೆನೀಪಂದರದೊಳ್ (?) ।
ನಿಂದೂರ್ಗಳಚೇಂ ಬೆಡಂಗನವಟಯಿಸಿದುವ್ರೋ ॥ ॥೧೦೦॥

ಅಂತನೂನಶೋಭಾವಿಭವಾನುಷಂಗಿಯಾದ ಮಂಗಳಾವತೀಮಧ್ಯದೇಶ ದೊಳ್ ॥೧೦೦॥

ಸುರಭಿರಮಿಪ್ಪ ತದ್ವಿಷಯನೂತ್ನಕುಶೇಶಯಪತ್ರಮಾಳೆಯಂ।
ತಿರೆ ಬಳಸಿರ್ದನೇಕಪುರಮಾಲೆಯ ಮಧ್ಯದೊಳೈದೆ ಲೀಲೆಯಿಂ ॥
ಸಿರಿಗೆಡೆಯಾಗಿ ತಾಂ ತಳೆದ ಕರ್ಣಿಕೆಯಂದದೆ ರತ್ನಸಂಚಯಂ ।
ಪುರಮೆಸೆದಿರ್ದುದಾತ್ತಮಣಿನಜ್ರಸುಪ್ರಂಜಿತರತ್ನಸಂಚಯಂ ॥೧೦೨॥

ನೆಲೆವೀಡು ರತಿಗೆ ತಿಱುವಾ ।
ಯ್ದಲೆವೀಡಂಗಜಶರಕ್ಕೆ ಕಾಮನ ಕಿಸುಗ ॥
ಣ್ಮಲವೀರ್ಡು ವಿಯೋಗಿಗೆ ಸಂ ।
ಕಲೆವೀಡು ವಸಂತವಂತಿಗುಪನಗರವನಂ ॥ ॥೧೦೩॥

ಮದನಂ ಕೊಂಬುಗೊಳಲ್ಕೆ ನಚ್ಚುವ ನವಾಮ್ರಂ ಕಂತು ಚಾಪಕ್ಕೆಚಿ ।
ತ್ತದೊಳಾಳ್ದಿರ್ಪ ಸಿತೇಕ್ಷುಮಾಲೆ ವಿಷಮಾಸ್ತ್ರಂ ಪಂಚಬಾಣಕ್ಕೆ ಮಾ ॥
ಣದೆ ಕಣ್ಗಾದಿರಿಸಿಟ್ಟ ಮಲ್ಲಿಗೆ ಮನೋಜಂ ಸ್ವಚ್ಛವಾಃಕೇಳಿಸ ।
ಮ್ಮದಕೆಂದೋವಿದ ಪದ್ಮಷಂಡಮೆಸೆಗುಂ ತನ್ನಂದನೋಪಾಂತದೊಳ್ ॥

ಅಗಜಾನವರತಶೋಭಾ ।
ಧಿಗತಂ ಭೃತಕಾಲಕಂಠಮುರುಶಿಖಿನಯನಂ ॥
ನಗರೋಪವನಂ ಭವನಂ ।
ನಗುವುದು ರಕ್ಷೀಕೃತಸ್ಮರಂ ಸವಿಶಾಖಂ ॥ ॥೧೦೫॥

ಎಂಬಿನಂ ನಮನಶೋಭಾವಳಂಬನಂಗಳಾದ ಬನಂಗಳೊಳ್ ವಿರಹಿಜನ ಮನೋದಾರುವಿದಾರಣದಕ್ಷಕಾಮತಕ್ಷಕಕ್ರ ಕಚನಿಚಯದಂತಗುರ್ವುವೆತ್ತಿ ಲೆಯ ಪರ್ವಿನಿಂ ಸುರ್ವುಗೊಂಡು ಬಾಲ್ವೇಲಿಯಾಗಿ ಬಳಸಿದ ಕೇತಕೀಪಟ್ಟಿ ಗಳುಂ, ಪಥಿಕವ್ಯೂಗವ್ಯೂಗಯಾಪರಿಶ್ರಾಂತ್ತ ಕಂತುರಾಜತ್ಯಾಪಕರ್ಷಣಾ ರ್ಥಂ ವನದೇವತೆಯರವ್ಯತಸಾಧವಾರಿಯುಂ ಪಚ್ಚೆವರಲ ಕರಗಂಗಳೊಳ್ ತೀವಿ ತೆಂಬೆಲರ ಪೊಯ್ಲಿನಿಂ ತಣ್ಪುವಡೆಯಲೆಂದು ನೆಱೆಪಿದಂತಿರ್ದ ನೀ ರ್ಗಾಳು ತುಱುಗಲಿಂದೆಳಗಿದ ನಾಳಿಕೇರಭೂರುಹಂಗಳುಂ, ವಿವಿಧವಿಚಿ

ಕುಜನ್ಮಜದ ಬೆಳಸಿಂಗೆಡೆಯಾದ ಗಗನಲಕ್ಷ್ಮಿಗೆತ್ತಿದುದ್ದಂಡಚಂದ್ರಕಚ್ಛತ್ರ ಷಂಡದಂತೆ ಸಂದಣಿಸಿ ಬಳ್ವಳ ಬೆಳೆದೆಳಗೌಂಗಿನ ಸಸಿಯು ಸಾಲ್ಗಳುಂ, ತಳರ ಕಳಿಕೆಯ ಮಿಡಿಯು ಪೂಗುಡಿಯು ಪಣ್ಣ ದೋರೆವಣ್ಣ ಬೆರಕೆವಣ್ಣದೊಳ್ದಳಿರ ಪುದುಳಿನಿಂ ಬೆಡಂಗುವಡೆದು ಕಾಮುಕಮಿಥುನತತಿಗಪೂರ್ವಶ್ರೀಷ್ಮಿಯಾಗಿ ಮದನಂ ಸಮೆದ ನಂದನಭೋಗಭೂಮಿಯು ರತ್ನಮಯಭೂಷಣಾಂಗತರುಗಳಂತಿರ್ದ ಮಾಕಂದಾನೋಕಹಂಗಳುಂ, ಮಂಜೀರಿಕಾಪುಂಜಮಂಜುಶಿಂಜಾನವೊದವುವಿನವೊದೆವ ಪದದೊಳೊಳಕೆಯ್ದು ಸುದತಿಯರ ಮೃದುಪದಾಲಕ್ತಕರಸವಿಸರಮುಂ ತಳರ ಬೆಳಗೆಂಬ ನೆಪದಿಂ ಮಗುಳುಗುಲ್ವಿಂತೆ ಕೆಂಕಮಾದ ಕಂಕೆಲ್ಲೀವಲ್ಲರಿಗಳುಂ, ಮದನಮಂಗಳಶಾತಕುಂಭಕುಂಭಂಗಳಂತಳವಿಗಗ್ಗಳಮಾಗಿ ಬೆಳೆದೊಳಗೆ ತ್ರೀವಿದ ಸರಸಕೇಸರಪ್ರಸರಭಾರದಿಂ ತೂಗಿ ನೆಲನಂ ತಾಗುವ ತೋರಗಾಯ್ಗಳಿಂ ಜನನಿಯಪ್ಪವನಿಯಂ ಮುದ್ದಿಂ ಮುಂಡಾಡುವಂತಿರ್ದ ಮಾತುಲುಂಗಸಂಘಾತಂಗಳುಂ, ಪರಿಮಳಾತಿಲಂಪಟಿಷಟ್ಚರಣಪಟಲಪಾಟಿತಕುಟ್ಮಲಾವಳೀಸ್ಯಂದಮಾನಮಕರಂದಬಿಂದುಸಂದೋಹಜನಿತದುರ್ದಿನಂಗಳಿಂ ವಿರಹವಿಧುರಪೌರಸೌಂದರೀಬೃಂದವದನಾರವಿಂದಂಗಳಂ ಕಂದಿಸುವ ವಿಕಟಪಾಟಲೀವಿಟಪಿಗಳುಂ, ಚಾತಕಪೋತಕಪ್ರತಾನಕೇತೋವೃತ್ತಿಯೊಳಪೂರ್ವಜಲಧರಕರ್ಬುರಾಭ್ರವಿಭ್ರಮಮನೊಳಪೊಯ್ದು ಕಟ್ಟಿಲೆಯ ಕಾರಾಗಾರದಂತೆ ಬಿತ್ತರಂಬೆತ್ತು ಬಿಚ್ಚತಂ ಪರ್ವಿದ ತಮಾಳಮಾಳಾಪರಂಪರೆಗಳುಂ, ನಿಷ್ಪ್ರತ್ಯೂಹಮೋಹರಸಪರವಶತೆಯಿಂ ನೆರೆವ ನಗರದಂಪತೀಶತೋಕ್ತಾರರಣಿತಕುಹರಣಸೂತ್ರಮಂ ಕಲ್ತು ಪರಿವಿಡಿಗೆಯ್ವ ಪಾರಾವತಪ್ರಕರಕ್ಕೆ ಮಕರಕೇತುಶಾಸ್ತ್ರಾಭ್ಯಾಸಪ್ರಾಸಾದಂಗಳಾದ ಮಣಿಮಯಕೃತಕಗಿರಿಗಳುಂ, ಸಂಪನ್ನವನಮಹತ್ತರಕನ್ಯಕೆಯರಚ್ಛಾಯಿಂ ಸಮೆದೊಡೇಱುಯಾದಕಿಂಜಲ್ಕಪುಂಜದಿರ್ತಡಿಯೊಳಂ ಮಡಲ್ತ ಮರುಗದ ಮಿಡಿಯು ಗಾಡಿಯನೊಳಕೆಯ್ದು ಮುತ್ತಿನ ಮಣಿಲಪುಳಿನದೊಳ್ ನಿರವಿಸಿದ ದೀವದಂಬಕೆವಱಿಯಿಂದಂಬಿರಮಲ್ಲದೆಸೆದು ವಾಸಿಸಲ್ಕೆ ಪೆಸರಿಸಿದ ಪಲಪ್ರಮಲರ ನೆರವಿಯ ನೀರ್ವೊಗಳೊಳಗೆ ಪರಿವ ಚಂದನರಸಪ್ರವಾಹಕ್ಕತಕವಾಹಿನಿಗಳುಂ, ರತಿಯ ಮದನನ ಮದುವೆಯೊಳ್ ಪೊಸಯಿಸಿದ ಪಸುರ್ವಂದರಂತೆ ಮಿಸುಪ ಮೃದ್ವೀಕಾಲತೆಯ ನಾಗಲತೆಯ

ನವಮಾಲಿಕಾಲತೆಯ ಜಾತೀಲತೆಯ ಯೂಥಿಕಾಲತೆಯ ವಿಚಕಿಳಲತೆಯ ಮಂಡಪಂಗಳುಂ, ಮನೋಹರಂಗಳೆನಿಸಿದುವು. ಅಲ್ಲದೆಯುಂ ॥೧೦೬॥

ಪಣ್ಣಾಯ್ ತೀವಿದ ಬಾಳೆಯ ।
ಬಿಣ್ಗೊನೆ ನಿಜಭರದಿನಿರದೆ ಬಾಳ್ವೇಲಿಯ ಪಿಂ ॥
ಪಣ್ಗಾಗಿ ಜೋಲ್ದು ಪಥಿಕರ ।
ಕಣ್ಗೊಳ್ಪಂ ಮನಕೆ ಬಯಕೆಯಂ ಪುಟ್ಟಿಸುಗುಂ ॥ ॥೧೦೭॥

ವಿಧಿ ಬೀಜಪೂರಸಾರ್ಥಾ ।
ಭಿಧಾನನುಂ ಮಾತುಲುಂಗದೊಳ್ ನಿರವಿಸಿದಂ ॥
ಮುಧೆಯೊಗಾವಿರ್ದಂತೆಂ ।
ದಧರಿಸಿ ನಗುವಂತೆ ಬಿರಿದ ದಾಡಿಮಮೆಸೆಗುಂ ॥ ॥೧೦೮॥

ಇಲ್ಲಿಯದೆ ಚೈತ್ರರಥದೊ ।
ಳ್ಪೆಲ್ಲಮುಮೆಂದಜನೆ ಹಂಸಪದನಂ ತಪ್ಪೆಂ ॥
ದಲ್ಲಿಟ್ಟನೆನಿಪುವಾಬನ ।
ದಲ್ಲೊಕ್ಕ ಪರಾಗದಲ್ಲಿ ಹಂಸಪದಂಗಳ್ ॥ ॥೧೦೯॥

ಅಭಿಸರದುನ್ಮದಭ್ರಮರಸಂಕುಳರುಂಕೃತಿವಾವದೂಕನಾ ।
ತ್ತಭಯವಿಯೋಗಿನೀಜನಸಖೀಜನವೀಜನಪದ್ಮಪತ್ರಿಕಾ ॥
ಪ್ರಭವಸಮೀರಮಾಂಸಳನನಂತಲತಾಳಿಲತಾಂತವಾಂತಸಾ ।
ರಭಭರಮಂಥರಂ ಸೊಗಯಿಕುಂ ಪುರನಂದನಮಂದಮಾರುತಂ ॥ ೧೧೦॥

ಅಲಗರ್ಣದಿಂಬಿದಂಬುಜದ ಮೊಗ್ಗೆಯ ಮೂಡಿಗೆ ನೀಳ್ದ ಕೇತಕೀ ।
ದಳದಲ ಗಾಮ್ರದೊಳ್ದಳಿರ ಕೈಪೊಡೆ ಕರ್ಬಿನ ಬಿಲ್ ತದಗ್ರದೊಳ್ ॥
ಮಿಳಿವರ್ ತಮಾಳಪಲ್ಲವದ ಚಾಮರದುಪ್ಪರವಟ್ಟಮೊಪ್ಪೆ ಬಂ ।
ದಲೆದಿಸುವ್ರೊಂ ಬನಂಬಿಡಿದು ಪಾಂಥರನಾಪರಿಪಂಥಿ ಮನ್ಮಥಂ ॥ ೧೧೧॥

ಧೃತನಾನಾವರ್ಣಪರ್ಣಚ್ಛವಿಸಮುದಯಸಂದರ್ಶನೀಯಂ ದಳತ್ಪು ।
ಷ್ಪತತಿಶ್ರೋಣೀಯಮುದ್ಯತ್ಫಲರಸವಿಸರಸ್ವಾದನೀಯಂ ದ್ವಿರೇಫೋ ॥
ದಿತನಾದಾಕರ್ಣನೀಯಂ ಸಿಕತಿಲತಲಶಯ್ಯಾಚಯಸ್ಪರ್ಶನೀಯಂ ।
ಸತತಂ ಪೌರಗೆ ಪಂಚೇಂದ್ರಿಯಸುಖದೊದವಂ ನಂದನಂ ಮಾಟ್ಟಿದೆಂಗುಂ

ಅಂತವಿಶ್ರಾಂತವಿಳಸನವಿಶ್ರಮಣಭೂಮಿಯಾದುದ್ಯಾನಮಾಳಾವಳಯದಿಂ
ದೊಳಗೆ ॥೧೧೩॥

ಸುರನಗವುಂ ನಿಮಿರ್ಚಿ ತೆರೆಸುತ್ತಿದನಲ್ತ್ತೆ ಸರೋಜಸಂಭವಂ ।
ಪುರಕೆನೆ ಚೆಲ್ವನಪ್ಪ ನವಹಾಟಕನಿರ್ಮಿತಮಪ್ಪ ಕೋಂಟೆ ಮು ॥
ಟ್ಟಿರೆ ಮುಗಿಲಂ ರಥಕ್ಕೆ ಪಥಮಿಲ್ಲದೆ ಬಿಟ್ಟಿರಡುಂ ಕೆಲಂಗಳಿಂ ।
ಚರಿಯಿಪನಲ್ಲದಂದು ರವಿಗೆತ್ತಣಿದುತ್ತರದಕ್ಷಿಣಾಯನಂ ॥ ॥೧೧೪॥

ಎನ್ನಂತೆ ರತ್ನವಿತತಿಗೆ ।
ತಾನ್ನೆ ಆಯಾಯ್ತೆಂಬ ಸಮಗುಣಪ್ರಣಯದಿನಾ ॥
ಮುನ್ನೀರ್ ಬಂದಪ್ಪಿದುದೆನೆ ।
ತನ್ನಗರಮನಮಲಪರಿಖೆ ಬಳಸಿದುದೆತ್ತಂ ॥ ॥೧೧೫॥

ಕಳಹಂಸೆಗಳುಂ ಫೇನಂ ।
ಗಳುಮುಜ್ಜ್ವಲರಾಗಮುಂ ನಿಮಜ್ಜನ್ನಗರೀ ॥
ಲಳನಾಂಗರಾಗಮುಂ ಬೆರ ।
ಸಿ ಳೀಳೆಯಂ ತಳೆದುವದಱ ನಿರ್ಮಳಜಳದೊಳ್ ॥ ॥೧೧೬॥

ಬಳಸಿದುದು ಮೇರುಶಂಕಾ ।
ಕುಳಿತಂ ಜ್ಯೋತಿರ್ವಿಮಾನತತಿಯೆನೆ ಬಳಸಿ ॥
ತ್ತೆಳವಳಿಕಿನ ಮುಗಿಲಟ್ಟಳೆ ।
ವಳಗಂ ಮನಮೆಳಸಿ ಬಳಸಿ ನಿಲೆ ಘರ್ಮಜಳಂ ॥ ॥೧೧೭॥

ಪರಿವ ರವಿರಥರಥಾಂಗದ ।
ಖರನೇಮಿಯೊಳೊಂದಿ ತಳೆದ ಪೊಂದೆನೆಗೊನೆಯಿಂ ॥
ದೆ ರಜಂ ನಿಮಿರ್ದಪುವೆನಿಪುವು ।
ನಿರವಿಸಿದಟ್ಟಳೆಯ ನಿಮಿರ್ದ ಕೆಂಬಲಿಯಿಗೆಗಳ್ ॥ ॥೧೧೮॥

ತಾರಗೆಗಳ್ ತೆನೆಗೊನೆಗಳೊ ।
ಳೋರಂದದೆ ಬೆಳಪ ಸೊಡರ್ಗಳಂತಿರೆ ತತ್ಪ್ರಾ ॥
ಕಾರಂ ಭ್ರಮಮಂ ಪಡೆವುದು ।
ಪೌರರ್ಗಿರುಳಿರುಳಪೂರ್ವದೀಪೋತ್ಸವದಾ ॥ ॥೧೧೯॥

ಜನವಿರಹಿತಮಿಲ್ಲೊಂದೆಡೆ ।
ಜನಮುಂ ಧನಹೀನಮಿಲ್ಲ ಧನಮುಪಭೋಗಾ ॥
ರ್ಜನಶೂನ್ಯಮಿಲ್ಲ ಭೋಗಮು ।
ಮನಿರಂತರಮೆನಿಸ್ರದೆಂದುಮಿಲ್ಲಾ ಪುರದೊಳ್ ॥ ॥೧೨೦॥

ಇವು ಭವ್ಯಜನಸಮೂಹಾ ।
ರ್ಣವಗಾಮಿಗಳೆನಿಪ ಪುಣ್ಯವಾಹಿನಿಗಳ್ ಸಂ ॥
ಭವಿಸಿದ ಕುಲಗಿರಿಗಳೆನಿಸು ।
ವುವು ರತ್ನೋತ್ತುಂಗಶೃಂಗಚೈತ್ಯಗೃಹಂಗಳ್ ॥ ॥೧೨೧॥

ಪಸರಿಪ ಚಂದ್ರಿಕೆಯಿಂದಿರು ।
ಳೊಸರ್ತು ಸಲಿಲಾಭಿಷೇಕಮಂ ತಮ್ಮೊಳ್ ರಂ ॥
ಜಿಸುವ ಜಿನಪ್ರತಿಮಾಳಿಗೆ ।
ಪೊಸಯಿಸ್ರವವಖಿಂದುಕಾಂತಮಣಿಕೂಟಂಗಳ್ ॥ ॥೧೨೨॥

ಅಮಲಜ್ಞಾನಮಯರ್ ದೇ ।
ಹಮಾತ್ರಪರಿಕರರತಕ್ಯಾಸಾಮರ್ಥ್ಯರ್ ನಿ ॥
ರ್ಮಮರೆನಿಪ ಮುಕ್ತಿಗಳು ।
ತ್ತಮರೊಪ್ಪುವರವಲಿ ಪಟ್ಟಣಾಳಾವಳಿಯೊಳ್ ॥ ॥೧೨೩॥

ಅದಲ್ಲದೆಯುಂ

ಪುರವನಿತಾಜನಂ ರುಚಿರಹರ್ಮ್ಯಗೃಹಾಗ್ರತಳಂಗಳಲ್ಲಿ ಗಾ ।
ವರಿಸುವ ಪಂಚಮಂಬೊರೆದ ನುಣ್ಣಿರಮಂ ನಸುಗೇಳ್ದು ಸೋಲ್ತು ಕ ॥
ಣ್ಮರಲರೆಮುಚ್ಚೆ ಕಂಡು ಕೊಣಕಿಟ್ಟಪುದಲ್ಲಿಗೆ ಗೋರಿಗೊಂಡಡೊಂ ।
ದೆರಳೆಯನಲ್ಲಿರುಳ್ ಶಶಿ ತೊಡಚರ್ಕುವನಾತ್ಮವಟಪ್ರರೋಹದೊಳ್ ॥೧೨೪॥

ಹರಿನೀಲಚ್ಛದರುಚ್ಛಿಂ ।
ಜರಿಶಬಳಿತಹರ್ಮ್ಯದುಪರಿತಳದೊಳ್ ಕೇಕಾ ॥
ವಿರುತಿಯಿನಲ್ಲದೆ ನಿಟ್ಟಿಸ ।
ಲರಿದಾಪುರವರದ ಗೃಹಕಳಾಪಿಕಳಾಪಂ ॥ ॥೧೨೫॥

ತೊಳಗುವ ಪಳಕಿನ ಮಾಡಂ ।
ಗಳೊಳನಿಯರೊಳೊಂದೆ ಪೊಱಗೆ ಮೆಱೆವುದು ಕೇಳೀ ॥
ವಿಳಸನವೆಂದೊಲ್ಲದೆ ಬಿ ।
ಟ್ಟೆಳಸುವುದಬಳಾಳಿ ಧನಳಗೃಹದೋವರಿಯೊಳ್ ॥ ॥೧೨೬॥

ಅಭ್ರಂಕಷಹಮ್ಯಾಗ್ರತ ।
ಳಭ್ರಾಜಿತಮತ್ತವಾರಣಾಸ್ಥಿತಕಾಂತಾ ॥
ವಿಭ್ರಮನಿರೀಕ್ಷಣೋಪಗ ।
ತಭ್ರಮದಿಂದಮರಸಮಿತಿಗಾಯ್ತು ನಿಮೇಷಂ ॥ ॥೧೨೭॥

ಬಗೆಯದೊಳಕೆಯ್ದುದೆನ್ನಯ ।
ಪಗೆಯಂ ಸಂಪತ್ತಿಯಂ ನಿರಂತರಮೆಂಬು ॥
ಬ್ಬಿಗದಿಂ ವಿಪತ್ತಿ ನೋಡದು ।
ನಗರಪಣಿಗ್ವಾಟಕೋಟಿಯಂ ಮಱೆದೆಂದುಂ ॥ ॥೧೨೮॥

ಮತ್ತಮುತ್ಪಾದಿತಘ್ರಾಣೇಂದ್ರಿಯಪ್ರಾಪಣಂಗಳಪ್ಪಗೆಂಧಾಪಣಂಗಳೊಳ್

ಚಳನಯನಾಂಶುಚಂದ್ರಿಕೆಯಿನೊಯ್ಯನೊಸರ್ತೆಱೆಪಕ್ಕೆ ತಾನೆ ನೀ ।
ರ್ಗಳಿಯೆ ಪಳಚ್ಚನಪ್ಪ ಶಶಿಕಾಂತದ ಸಣ್ಣಿಗೆ ನೋಡಲೀಯದ ॥
ವ್ವಳಿಸೆ ಕುಚದ್ವಯಂ ಪದನಿಸುಣ್ಮುವ ಸುಯ್ಯಿಲರ್ಗಂಪುಗಳ್ ದಳಂ ।
ಗಳನಧಿವಾಸಿಸುತ್ತುಮಿರೆ ಘಟ್ಟಿಪುಗುಟ್ಟಿವುದಂಗನಾಜನಂ ॥ ೧೩೦॥

ಜನವಕ್ತ್ರೋನ್ಮುಕ್ತನಿರ್ಯದ್ದಿಮಪರಿಮಳತಾಂಬೂಲಸಂಸಂಗಿಭೃಂಗೀ
ಸ್ವನದಿಂ ಪ್ರತ್ಯಂತರಾಜಾತ್ಮಜವಿಭವಸಮಾಕರ್ಣಿತೋತ್ತಾನಗಾನ ॥
ಧ್ವನಿಯಿಂ ವಾಃಪಾನಮುಕ್ತದ್ವಿರದನಿಗಡನಿಷ್ಠೋರ್ಷದಿಂ ಸಂಚರತ್ಪ್ರ ।
ರನಿತಂಬಿನ್ಯಂದುಕಾರಾವದಿನತಿಮುಖರಂ ತತ್ಪುರೀಪಟ್ಟಮಾರ್ಗಂ ॥೧೩೧॥

ತಳಿರ್ದೊಂಗಲ್ ಪ್ರದಿದಂಪದಿಂದಿರೆ ತಳಪ್ರದ್ಯೋತಿಯಿಂದುದ್ಗಮೋ ।
ಜ್ಜ್ವಳದಾಮಂ ತದುದಾರಸೌರಭಚಯಂ ಸುಯ್ಗಂಪಿನಿಂದಾವಗಂ ॥
ದಳವೇಱುತ್ತಿರೆ ಪೂತ ಜಂಗಮಲತಾಸಂದೋಹಮೆಂಬಂತೆ ಕ ।
ಣ್ಗೊಳಿಸುತ್ತಿರ್ಪುದು ಮಾಲೆವೊದಳೆದ ಮಾಳಾಕಾರನಾರೀಜನಂ ॥ ೧೩೨॥

ಅಂತು ರಾಜಿಸುವ ರಾಜಮಾರ್ಗದಾದಲೆಯೊಳ್ ॥ ೧೩೩॥

ಮಕರಾಂಕಧ್ವಜಮೌಳಿಕಾಪ್ರಕಟಿತಪ್ರದ್ಯುಮ್ನಪಕ್ಷಕ್ರಮಂ ।
ಶುಕಶಾರಿಪ್ರಕರಪ್ರಕಾಶಿತರತವ್ಯಾಪಾರಚಾತುರ್ಯಮು ॥
ತ್ಸುಕಭೂಪಾಲಭುಜಂಗಚಾಡಿತಹಟಿದ್ಘಂಟಾರವಾವಿಷ್ಕೃತಾ ।
ಧಿಕಸೌಭಾಗ್ಯಮದೇಂ ಬೆಡಂಗಮದ್ದುದೋ ಗಾಣಿಕ್ಯಸೌಧೋತ್ಕರಂ ॥

ಒಳಗೆ ವಿಟರಂ ಸ್ಮರಂ ದೋ ।
ವಳದೊಳ್ವನೆ ಬಂದಿವಿಡಿದು ಬಿಡದಿಸೆ ಸರಲು ॥
ಚ್ಚಳಿಪವೊಲುಣ್ಮುವುವಲ್ಲಿ ।
ಪೆಳವೆಂಡಿರ ನಯನರುಚಿ ಗವಾಕ್ಷಾವಳಿಯಿಂ ॥ ॥೧೩೫॥

ಮತ್ತಮಾಪುರಂ ಪದ್ಮರಾಗಾರುಣೀಕೃತನಿಶಾಂತಮಾಗಿಯುಂ ಅಸ್ತಮಿತರಾಜಲೀಲಾವಿಲಾಸಮಮಲ್ತು; ಅಗಣ್ಯಪ್ರಣ್ಯಜನನಿವೇಶಮಾಗಿಯುಂ ಸದೋಷಾಚರಪ್ರಚಾರಮಮಲ್ತು; ಸದಾನಭೋಗಾನ್ವಿತಮಾಗಿಯುಂ ಅಕುಲೀನವೃತ್ತಿಪ್ರವರ್ತನಮಮಲ್ತು; ಅನೇಕಭೂಮಿಕಾಶ್ರಯಮಾಗಿಯುಂ ಕ್ಷಣಭಂಗಿಶೋಭಾಸಂಗತಮಮಲ್ತು; ವಿವಿಧವರ್ಣಶ್ರೇಣೀಸಂಚೀಯಮಾನನವೀನಾರ್ಥನಿಚಯಮಾಗಿಯುಂ ವಾಗ್ವಿಷಯವಿಳಸನಮಮಲ್ತು; ವಿಶಿಷ್ಟಪಕ್ಷಭೂಭೃನ್ನಿಕರಮಾಗಿಯುಂ ಜಡಾಕರತ್ವೋಪೇತಮಮಲ್ತು; ಆಖ್ಯಾತಸೂತ್ರವಿಧಿಸನಾಥಮಾಗಿಯುಂ ಮಧ್ಯಮಪುರುಷಕ್ರಿಯಾನಿಯುಕ್ತಮಮಲ್ತು; ಅಲ್ಲದೆಯುಂ

ತ್ರಿದಶಜನಾನ್ವಿತಂ ಗಡ ಮಹೀರುಹಪಂಚಕಸಂಚಿತಂ ಗಡಂ ।
ತದು ದಿಟದಿಂದಮಾನಪರಿಮೇಯವಿದಗ್ಧಬುಧಾಶ್ರಯಂ ರಸಾ ॥
ಸ್ಪದಬಹುವೃಕ್ಷಕೇಳಿವನಸಂಗತಮೆಂದು ನಗುತ್ತುಮಿರ್ಪುದಾ ।
ತ್ರಿದಿವದ ಲಕ್ಷ್ಮಿಯಂ ನಿಯತಲಕ್ಷ್ಮಿಪುರಂ ನನಸೌಧರೋಚಿಯಿಂ॥೧೩೬॥

ತನ್ಮಧ್ಯದೊಳ್

ಪರಿವೃತಪುರವರನರಸಾ ।
ಗರದೊಳಗಣ ತಡಿಯ ವಜ್ರವೇದಿಕೆಯೆಂಬಂ ॥
ತಿರೆ ಸೊಗಯಿಸುವುದು ಧರಣೀ ।
ಶ್ವರಗೇಹವಿಶಾಲವಜ್ರನಿರ್ಮಿತಶಾಳಂ ॥ ॥೧೩೭॥

ಅದರ್ಕೆ ಗಂಗಾದ್ವಾರಮಿರ್ಪಂತಿರ್ದ ಮಣಿಮಯದಿಂದ್ರಗೋಪಪೀಠಲ
ಹ್ವಾಳದಿಂದೊಳಗೆ ॥೧೩೯॥

ವಿಗಳನ್ನಿರ್ಘರಹರಿನೀ ।
ಳಗಿರೀಂದ್ರಮನೊಳಗುಮಾಡಿದುಜ್ಜ್ವಳತಾರಾ ॥
ನಗೆಮೆನಿಪುದು ನಿರ್ಯದ್ದಾ ।
ನಗಜಂಗಳ ಸೌಧಶಾಲೆ ನೃಪಮಂದಿರದೊಳ್ ॥ ॥೧೪೦॥

ಕಾಂತಕನಕಾದ್ರಿವಿಪುಳಗು ।
ಹಾಂತರದೊಳ್ ನಿಂದ ತರುಣಕೇಸರಿವಿಸರ ॥
ಭ್ರಾಂತಿಯನೊದವಿಸುವುದು ಹಯ ।
ಸಂತತಿ ನೆಲಸಿರ್ದು ಹೊನ್ನ ಹೊಸ ಮಂದುರೆಯೊಳ್ ॥ ॥೧೪೧॥

ಮತ್ತಮಲ್ಲಿಂದತ್ತ ಸಪ್ತಕಕ್ಷಪರಿಕ್ಷಿಪ್ತವಾಗಿ
ಅಡಕಿಲ್ಗೊಂಡಿರ್ದುವೇಟುಂಕುಳನಗಮೆನೆ ತದ್ಭೂಮಿಕಾಸಪ್ತಕಂ ಮುಂ ।
ದಿಡೆ ಚೆಲ್ವಂ ನಾಡೆ ಚೂಡಾಮಣಿಕಳಶಶಿರೋಭಾಗದೊಳ್ ಭಾಸ್ಕರಂ ಕ ॥
ನ್ನಡಿಯಂ ಪೋಲ್ತೊಪ್ಪೆ ಮಧ್ಯಂದಿನದೊಳತುಳಗೋಪಾನಸೀಕಂಗಳೊಳ್
ಮೈ । ಬೊಡವಪ್ಪನ್ನಂ ಮುಗಿಲ್ ಕನ್ನಡಿಪುದು ಕರುಮಾಡಂ ನೃಪಶ್ರೀಯ
ಪೆರ್ಚಂ ॥ ॥೧೪೨॥

ಅದಱ ಹರಿನೀಲಕೂಟಾ ।
ಗ್ರದೀಧಿತಿಪ್ರತತಿ ಬೆರಸೆ ನಿಜಕರದೊಳ್ ತ ॥
ನ್ನುದರಕಳಂಕಮನೆತ್ತಂ ।
ಕೆದಱುವಪೋಲಿರುಳೊಳಲ್ಲಿ ಶಶಿಯೆಸೆದಿರ್ಪಂ ॥ ॥೧೪೩॥

ಅದಲ್ಲದೆಯುಂ ವಿವಿಧಪ್ರದೇಶಂಗಳೊಳ್ ವಿರಚಿಸಿದ

ಕಡೆಪದ ಕಾಂತಿ ಕಂಡರಣೆಯುನ್ನತಿ ಚಿತ್ರದ ಚಿತ್ರವೃತ್ತಿ ಬೇ ।
ಗಡೆವೆಸದೇಱ್ಗೆಯಲ್ಲಿ ಪೊಸತಾದುದೆನುತ್ತದುಗೆಂಡು ವಿಸ್ಮಯಂ ॥
ಬಡನೆ ಮಯಂ ಬೆರಲ್ಕಿಡಿಯನೇ ಸುರವರ್ಧಕಿ ರೋಮಹರ್ಷದೊಳ್ ।
ತೊಡರನೆ ಚೀರಘಟ್ಟ ನಲವಿಂ ತಲೆದೂಗನೆ ಪದ್ಮಸಂಭವಂ ॥ ॥೧೪೪॥

ತತ್ಪ್ರಕೋಭಾಗದೊಳ್

ನವಮಲ್ಲೀಜಾಲಮೋಹಾಕುಳಮಧುಕರಲೇಲಿಹ್ಯಮಾನೋಜ್ಜ್ವಮುಕ್ತಾ ।
ನಿವಹಂ ಕೃಷ್ಣಾಹಿಶಂಕಾತುರಗೃಹಶಿಖಿಚಕೋಚಕುಂಬ್ಯಮಾನೇಂದ್ರಲೀಲಾಂ ॥
ಶುವಿಶೇಷಂ ಚಂದ್ರಿಕಾಸಂಚಯಚಟುಳಚಕೋರೌಘಪೇಪೀಯಮಾನಾ ।
ಗ್ರವಿಭಾಗಸ್ಥೇಂದುಕಾಂತದ್ಯುತಿ ಸೊಗಯಿಸುಗುಂ ಕಾಯಮಾನಂ ಸಮಾನಂ

ಗಿರಿಸತಿಸೇವಾರ್ಥಂ ಕುಳ ।
ಗಿರಿಗಳ್ ಬಂದೆಳಸಿ ಬಳಸಿ ನಿಂದವೊಲಂತಾ ॥
ಕರುಮಾಡವನ್ನೆತ್ತಲುವಾ ।
ವರಿಸಿದ ವರಶಿಖರರತ್ನಸಮ್ಯಾರ್ವಳಿಗಳ್ ॥ ॥೧೪೬॥

ಅಲ್ಲಿ

ಘನದೂರ್ವಾನಕ್ತಿಯಂಗಾರುಡೆಮಣಿರುಚಿಯೊಳ್ದಾವವಿಭ್ರಾಂತಿಯಂ ಕಾಂ
ಚನಭಿತ್ತಿವ್ರಾತದೊಳ್ ನಿಮರ್ಗಳಜಳರುಚಿಯಂ ಸ್ಫಾಟಿಕಗ್ರಾವಬದ್ಧಾ ॥
ಹನಿಯೊಳ್ ವಾನೇಚರಸ್ತ್ರೀಭ್ರಮಮನತುಳನೀಳಾಶ್ಮಪಾಂಚಾಳಿಕಾದ ।
ರ್ಶನದೊಳ್ತಾಳುತ್ತುಮೆತ್ತಂ ಸುಳಿವುದುಮಹಿಭೃದ್ಗೇಹದೇಣೀಸಮೂಹಂ

ಪುತ್ತಂ ತದ್ರಾಜಭವನದೇಕದೇಶದೊಳ್

ಬಳಗೆ ತಳತಳಿಪ ರತ್ನಂ ।
ಗಳಿತೊಪ್ಪುವ ನಿಸ್ತರಂಗಮೀಂಗಡಲೆಂಬ ॥
ಗ್ಗಳಿಕೆಗೆಡೆಯಾಗಿ ತೊಳಗುವ ।
ಪಳಕಿನ ಮಾಣಿಕ್ಯಕೋಶಮಂಬಿರಮಿಸೆಗುಂ ॥ ॥೧೪೪॥

ಆಶೀವಿಷವಿಷಮೋರಗ ।
ರಾಶಿಯನೊಳಕೆಯ್ದು ವಿಪುಳಪಾತಾಳನಿವಾ ॥
ಸಾಶಂಕೆಯನೀವುದು ನಿಚಿ ।
ತಾಶೇಷಾಸ್ತ್ರಾಳಿ ಜಯನಕಾಲಿಕೆಯದಜೊಳ್ ॥ ॥೧೪೯॥

॥ ಮಾಲಿನೀವೃತ್ತಂ ॥

ಸತತಸಮನಮುಗ್ಧಸ್ನಿಗ್ಧಕೇಳೀಮರಾಳಾ ।
ಸ್ವಿತಮಮಿರಳಧೂಪಾಮೋದಸಂಸಂಗಿಭೃಂಗಾ ॥

ನ್ವಿತಮುದಿತಮೃದಂಗಧ್ವಾನನೃತ್ಯನ್ಮಯೂರಾಂ ।
ಚಿತಮಿಸೆವುದು ಕಾಂತಂ ದೇವಪೂಜಾನಿಶಾಂತಂ ॥ ॥೧೫೦॥

ಅದಲ್ಲದೆಯುಂ

ವಿಕಿರತ್ಪುಷ್ಪಕದಂಬಿತಾರಕಿತಮಾಯಾತಪ್ರಯಾತಾಂಗನಾ ।
ನಿಕರೋದ್ಯಚ್ಚರಣಾಂಶುಪಲ್ಲವಿತಮನ್ಯೋನ್ಯೋರ್ವೀಶ್ವರವ್ರಾತದೂ ॥
ತಕಿಳಸ್ಫೂಪಿತರತ್ನರುಕ್ಕಬಳಿತಂ ಯಾಮದ್ವಿಷೇಂದ್ರಪ್ರತಾ ।
ನಕಟೋನ್ಮುಕ್ತಮದೌಘಕರ್ದಮಿತಕಾಂತಂ ರಾಜಗೇಹಾಜಿರಂ ॥೧೫೧॥

ಮತ್ತಂ

ಅದಜೊಳಿಸಾಮ್ರಾಜ್ಯಸೌಖ್ಯೋಲ್ಲಸಿತಹೃದಯನಿರ್ಪಂಧರಾಧೀಶ್ವರಂ ದು
ರ್ಮದಭೂಭೃತ್ಪ್ರತಿಖಡ್ಗಾಶನಿವಿಳಸನಮೇಘಾಗಮಂ ವಂದಿವಾಂಛಾ ॥
ಪ್ರದವಾಯರ್ಯಾದಾರ್ಯಕಲ್ಪದ್ರುಮಕನಕನಗಂ ಕೀರ್ತಿಗಂಗಾಪ್ರವಾಹಾ ।
ಭ್ಯುದಯಪ್ರಾಲೇಯಶೈಲಂ ಕವಿಕುಳಕಳಭವ್ರಾತಯೂಥಾಧಿನಾಥಂ ॥

॥ ಗದ್ಯಂ ॥

ಇದು ಪರಮಪುರುನ್ನಾಥಕುಲಕುಬೃತ್ಸಮುದ್ಭೂತಪ್ರಪಚಿಮಸಂತ್ಸರಿನ್ನಾಥ
ಶ್ರುತಕೀರ್ತಿತ್ರೈವಿದ್ಯಾಚಕ್ರವರ್ತಿ ಪದಪದ್ಮನಿಧಾನಮೀಚಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಕಥಾವತರಣವರ್ಣನಂ

ಪ್ರಥಮಾಶ್ವಾಸಂ.

—:o:—

ಶ್ರೀಗೆರ್ದಿವತ್ತುಗೆ ವರವಾ ।
ಕ್ಷ್ಮಿ ಗ್ರೇಗೆ ನಿಜಂ ಸುಮುಖವೃತ್ತಿ ತೋಳ್ವೆರಗು ಜಯ ॥
ಶ್ರೀಗೊಲವನೀಯೆ ನೆಗಳ್ದಿಂ ।
ಭೂಗಧಿಪತಿ ಜೈನಜನಮನೋಹರಚರಿತಂ ॥ ॥೧॥

ಒಳಕೆಯ್ದು ತೋರ್ಪುದನಿಮಿಷ ।
ಕುಳವುಂ ಕುವಳಯಮನುಚಿತಮೆನೆ ಪುಷ್ಕರಮುಂ ॥
ಡಳವುಂ ತದ್ಧರಣೀಮಂ ।
ಡಳನಾಥನಪಾರಕೀರ್ತಿಗಂಗಾಪೂರಂ ॥ ॥೨॥

ಧೃತಶೈತ್ಯಂ ಧಾರಾಜಲ ।
ಯುತಮನುಕಂಪಾನ್ವಿತಂ ದಲೆನಿಸಿಯುಮಂತಾ ॥
ಕ್ಷಿತಿಪತಿಯ ವಿಜಯಭುಜದಸಿ ।
ಲತೆ ರಿಪುನೃಪರ್ಗ್ಗೆವುದಧಿಕತಾಪೋದಯಮಂ ॥ ॥೧೩॥

ಅತುಳಪ್ರಭನಾಗಿಯುಮಾ ।
ಕ್ಷಿತಿಪತಿ ಕನಕಪ್ರಭಾಭಿಧಾನಮನಾಂತಂ ॥
ವಿತತಾನೂನಕರಂ ದಶ ।
ಶತಕರನಾಮಮನಶೀತರುಚಿ ತಾಳ್ದುವವ್ರೋಲ್ ॥ ॥೪॥

ಆರಾಜಶಿರೋರತ್ನನ ।
ವೀರದ ವಿತರಣದ ಪೆರ್ಮೆಯಂ ರಿಪುಭೂಭೃ ॥
ದ್ದಾರಿದ್ರ್ಯಮುಮುಪಚಿತಪರಿ ।
ವಾರಜನಾನೂನಲಕ್ಷ್ಮಿಯುಂ ಪ್ರಕಟಿಸುಗುಂ ॥ ॥೫॥

ಉಪಕೃತಿಯೆಂಬಿನಂ ನೆನೆವುದೂರ್ಜಿತಮಂಗಳದಂದದಿಂದೆ ಮು।
ನ್ನಿಪುದುಪದೇಶದಂತಿರೊಳಕೆಯ್ವುದು ಮನ್ತ್ರಪದಂಬೊಲೊರ್ಮೆಯುಂ ॥

ಜಪಿಯಿಪುದೆಯ್ದೆ ಪುಣ್ಯಕಥೆಯಂದದೆ ಭಾವಿಸಿ ಕೇಳ್ವುದಾಧರಾ ।
ಧಿಪನ ಶರನ್ನಿಶಾಕರಕಳೋಜ್ಜ್ವಳವುಂ ಜಸವುಂ ಜಗಜ್ಜನಂ ॥ ೬॥

ಮನದೊಲವಿಂದೆ ಕಿನ್ನರಚಯಂ ನರನಾಥನ ಗೀತವುಂ ಮುದಂ ।
ಜನಿಯಿಸೆ ಪಾಡುವಲ್ಲಿ ನಿಜರತ್ನವಿಮಾನದೊಳ್ಕೈದೆ ಪೊಣ್ಮಿ ಮಾ ॥
ರ್ದನಿ ಕಿವಿಯಂ ಪಳಂಚಲೆಯೆ ಕಾಯ್ದುದನೊಲ್ಲದೆ ಬಂದು ತತ್ಪುರಾ ।
ವನಿತಳದೊಳ್ ಸಭಾವಿಭವವುಂ ಸತತಂ ಶತಮನ್ನೋ ಮಾಡುವಂ ॥ ೭॥

ಮತ್ತಮಾ ಮೂರ್ಧಾಭಿಷಿಕ್ತಮುಖ್ಯಂ ವಿಖ್ಯಾತದಾನನಾಗಿಯುಮಮಾದ ವೃತ್ತಿವರ್ತನನುಂ, ಅಹೀನತಾನ್ವಿತನಾಗಿಯುಂ ಅನುಕ್ರಮಸಮೇತನುಂ, ಅತಿಮೃದುಕರವಿರಾಜಿತನಾಗಿಯುಂ ಉಗ್ರತೇಜೋವಿರಾಜನುಂ, ಅನೂನ ವಾಹಿನೀಪತಿಯಾಗಿಯುಂ ಅಭಂಗಾನುಷಂಗನುಂ, ವಿನೀತವಿನತಾನಂದನನಾ ಗಿಯುಂ ಅಪಕ್ಷಪಾತಪ್ರಚಾರನುಂ, ವಿದೇಹಜಾನುಬಂಧಲೀಲಾಶ್ರಯನಾಗಿ ಯುಂ ಅಖರದೂಷಣಾನ್ವೇಷಣನುಮೆನಿಪಂ. ಅಂತುಮಲ್ಲದೆಯುಂ ॥ ೮॥

ಸೆಮಮುಂ ಮಾಡೆ ಸಮಂತ್ರಿವರ್ಗಮರಿಷಡ್ವರ್ಗಕ್ಕ ಪಂಚಾಂಗಮುಂ ।
ತ್ರಮೆ ಸಪ್ತಾಂಗಸಮೃದ್ಧಿಯುಂ ಕುಡೆ ನಿಜೈಕಂ ದೋರ್ಬಳಂ ಶತ್ರುದು ॥
ರ್ಪಮಚಾತುರ್ಬಳನಾಶಮಂ ಪಡೆಯೆ ಚಾರಿತ್ರಂ ನಯಂ ಶೌರ್ಯಮಾ ।
ದಮೆ ತನ್ನೊಳ್ ದಳವೇಱಿದತ್ತೆ ನಿಸಿದಂ ಶಕ್ತಿತ್ರಯಾಧೀಶ್ವರಂ ॥ ೯॥

ಅಯ್ಸರಲನ ಚೆಲ್ವಿಂದಂ ।
ಮೆಯ್ಸಿರಿ ಪಿರಿದಾದುದೆಂದು ನೋಟ್ಪರ ಕಣ್ಣಂ ॥
ಕೆಯ್ಸೆಱೆವಿಡಿದುಂ ಮತ್ತವ ।
ಟಯ್ದುವುದು ಮನಕ್ಕಮೊಲವನಾನ್ಯಪರೂಪಂ ॥ ॥ ೧೦॥

ಅಂತುಮಲ್ಲದೆಯುಂ

ಕುಪಿತಪ್ರತಾಪಾಜನವಾ ।
ನುಪದಾಲಕ್ತಕದೆ ಪಲ್ಲವಿಸ್ಪಷ್ಟಶೋಕಂ ॥
ನೃಪತಿಲಕಂ ಪುಗ್ಧಾಪಾ ।
ಗಪಾತದಿಂದಲರ್ನಂಗಜಕ್ರೀಡೆಗಳೊಳ್ ॥ ॥ ೧೧॥

ಅದಲ್ಲದೆಯುಂ ಸಿದ್ಧಪದವೀಪ್ರಾಪ್ತನಂತಸಗತವಿಗ್ರಹನುಂ ಅವ್ಯಾಬಾಧಪ್ರಕೃತಿಯುಮಶೇಷಗುಣಾವಗಾಹನಸಮರ್ಥನು ಮಖಂಡಿತಸುಖೋನ್ಮುಖನುಮೆನಿಸಿದಾವಮಹೀಕಾಂತನಂತಃಪುರಪ್ರಧಾನಭೂತೆ ॥೧೨॥

ಸುಲಲಿತಶೃಂಗಾರಾಮೃತ ।
ಸಲಿಲಾಕರವೇಲೆ ಮದನವಿಜಯಮಹಾಮಂ ॥
ಗಲಲೀಲೆಯಷ್ಟಮೀಂದೂ ।
ಜ್ವಲಭಾಲೆ ಸುವರ್ಣಮಾಲೆಯೆಂಬಳ್ ಪೆಸರಿಂ ॥ ॥೧೩॥

ಆರಮಣಿಯ ದೇಹದ್ಯುತಿ ।
ವಾರಿಯಿನವಿರಳವಿಸಾರಿಯಿಂ ತೊಳೆದಂತಾ ॥
ಚಾರಮೆನಿತ್ತನಿತುಂ ವಿ ।
ಸ್ತಾರಿಸಿದುದು ವಿಮಲವೃತ್ತಿಯಿಂದನವರತಂ ॥ ॥೧೪॥

ಪ್ರಿಯೆಯಧರಸ್ವಳೀಮಧುರಿಮಂ ತನಗೊತ್ತಿನೆ ವರ್ತಿಸಿತ್ತು ಧಾ ।
ತ್ರಿಯೊಳಮೃತಂ ವಿಳೋಚನಮರೀಚಿಗಳಂ ಮಱೆವೆತ್ತು ಚಂದ್ರಿಕಾ ॥
ಚಯಮೆಳಸಿತ್ತು ವಾಸರಮುಮಂ ದರಹಾಸವಿಭಾಸಿತವಕ್ತ್ರಶೋ ।
ಭೆಯ ನೆವದಿಂದೆ ಚಂದ್ರವಳೆಯಂ ತಳೆದತ್ತನಿಶಂ ದ್ವಿರೂಪಮಂ ॥೧೫॥

ಸುಳಿ ಸುಳಿದಿರ್ದ ನಾಭಿ ವಳಿಗಳ್ ತೆರೆಗಳ್ ಜಘನಂ ಪೊದಳ್ದಿ ನು ।
ಣ್ಬುಲಿಲೆಸೆದಿರ್ದ ಬಾಸೆ ಜಳನೀಳಿಕೆ ಕಣ್ಗಳೆ ಮೀಂಗಳಾಗೆ ಪೊಂ ॥
ಪುಲಿಯೆನೆ ರಾಜಹಂಸನ ಮನಕ್ಕನುಕೂಲತೆಯಿಂ ಲತಾಂಗಿ ಮೆ ।
ಯ್ವಲಿಯೊಲವಂ ನಿಮಿರ್ಚಿದಳನಂಗವಿನೋದನದೀವಿಳಾಸದಿಂ ॥ ೧೬॥

ಅದಲ್ಲದೆಯುಮಾಮಹೀವಲ್ಲಭಂ ಸುವರ್ಣಮಾಲಾಮಹಾದೇವೀರೂಪಸ್ತವಸ್ತುತಾನೇಕಹೃದ್ಯಗದ್ಯಪದ್ಯಕಥನದಿಂದಾತ್ಮೀಯವಸ್ತುಕವಿತಾಪ್ರೌಢಿಯಂ ರೂಢಂಮಾಡಿಯುಂ, ಆಸೌಭಾಗ್ಯನಿಧಿಯ ಸೌಭಾಗ್ಯವರ್ಣನೋಪಬಂಧಿತ ಬಹುವಿಧಪ್ರಬಂಧಗೀತಂಗಳಿಂದಾತ್ಮೀಯಕವಿತಾಪ್ರಾಗಲ್ಭ್ಯಮಂ ಪ್ರಕಟಿಸಿಯುಂ, ಆಶೃಂಗಾರರಸತರಂಗಿಣಿಯ ತುಂಗಸ್ತನಕಪೋಲಕ ವಿಲಿಖಿತ ಮೃಗಮದಪತ್ರಭಂಗಂಗಳಂ ಚಿತ್ರಕಳಾಕೌಶಲಮಂ ಪ್ರಕಾಶಿಸಿಯುಂ,

ಭರತವಿದ್ಯಾಭಾರತಿಯ ಲೀಲಾಲಾಸ್ಯಸಮಯಸಂಪಾದಿತಸ್ವಹಸ್ತವಾದ್ಯ ಘನಮಧುರತರಮೃದಂಗಪಾಟಪ್ರಹರಣಂಗಳಿಂ ವಾದ್ಯವಿದ್ಯಾವಿಶಾರದತ್ವ ಮುಂಮಿಕದೀಕರಿಸಿಯುಂ, ಆಕಂದರ್ಪಕಲ್ಪಲತೆಯ ಸಮಸಮಾಯೋಗಸಮು ಪಕ್ರಮಿತಕಾಲಧಾತುವಯೋನುರೂಪ. ಕರಣಪರಿರಂಭಚುಂಬನಕಳಾಸಾಮ ಗ್ರಿಯಿಂ ಕಾಮತಂತ್ರವಿಜ್ಞಾನಮಂ ಸುಜ್ಞಾನಂಮಾಡಿಯುಂ, ಇಂತು ತಾದಾ ತ್ಮ್ಯಮನೋಹರಂಗಳುಮಾಯತ್ಯವಿರುದ್ಧಂಗಳುಮಪ್ಪ ವಿನೋದಪರಂಪರೆ ಗಳಿಂ ಕಾಲಮಂ ಸಲಿಸುತ್ತುಮಿರೆಯಿರೆ ॥೧೭॥

ಬಗೆತರ್ಪಂತಮೃತಂ ಹಿಮಾಂಶುಕಲೆಯಿಂದಂತಾವುಹೀಕಾಂತಕಾಂ ।
ತೆಗೆ ಸೂದಾರ್ಪೊಡವುಟ್ಟೆ ಪುಟ್ಟಿದನತರ್ಕ್ಯಂ ನಂದನಂ ತಾನೆ ಲ ॥
ಕ್ಷ್ಮಗಧೀಶಂ ಸಸುದರ್ಶನಂ ಬಳಯುತಂ ಕಂಜಾಕ್ಷನೆಂಬಿಂತಿದಂ ।
ಜಗದೊಳ್ ಗೋಸಣೆಮಾಡೆ ತನ್ನ ವಿಹಿತಾರ್ಥಂ ಪದ್ಮನಾಭಾಖ್ಯಯಂ॥೧೮॥

ಶಶಿಯೊಳ್ ಪ್ರಕಾಶಗುಣಮತಿ ।
ವಿಶದಂ ಸೊಗಯಿಸುವವ್ರೊಲ್ ನವೋದಯದೊಳವಾ ॥
ಪ್ರಶಮಿತತಮಸೊಳ್ ನೆಱೆದುದು ।
ಶಿಶುತೆಯೊಳಂ ನಾಡೆ ಕೂಡಿವೆತ್ತ ವಿವೇಕಂ ॥ ॥೧೯॥

ತರುಣತ್ವದುರ್ಲಭಂಗಳ್ ।
ಪರಿಣತಿಸುಖದಂಗಳೆನಿಪ ಸತ್ಕ್ರಿಯೆಗಳನಾ ॥
ಧರಣೀಶಸುತಂ ಪಲಿತಾಂ ।
ಕುರಮಿಲ್ಲದ ವೃದ್ಧನಂದದಿಂದಾಚರಿಪಂ ॥ ॥೨೦॥

ಓಜಸ್ಸಂಯುತನುನ್ನತ ।
ಭಾಜನನಾಕಳಿತವಿನಯನಾಯತಕರನಾ ॥
ರಾಜಸುತಕುಂಜರಂ ರಾ ।
ರಾಜಿಸಿದಂ ಗುರುವಚೋಂಕುಶೈಕಾನುವಶಂ ॥ ॥೨೧॥

ಎನಿಸಿ ನಿಜಸುಹೃಜ್ಜನವೈರಿಜನಮನೋನುರಾಗಹೃದ್ರೋಗಂಗಳೊಡನೆ ಬಳೆಯೆವಳೆಯೆ ॥೨೨॥

ಪಡೆವನ್ನಂ ಪಕ್ವಬಿಂಬಕ್ಕಧರಮಧರತಾವಾಪ್ತಿಯಂ ನೇತ್ರಯುಗ್ಮಂ ।
ಪಡೆವನ್ನಂ ವೈರಮಂ ಕೈರವದೊಳುರುಭುಜಂಗಳ್ ಭುಜಂಗಾಧಿಪಂಗೆಂ ॥
ಪಡೆವನ್ನಂ ಸೋಲಮಂ ಭಾಸುರದಶನಚಯಂ ಕುಂದದೊಳ್ ಕುಂದನೆಂದುಂ
ಪಡೆವನ್ನಂ ಯೌವನಶ್ರೀ ಪಡೆದುದು ನೃಪಪುತ್ರಾಂಗದೊಳ್ ನಾಡೆ ಚೆಲ್ವಂ

ಮತ್ತಮಾಕುಮಾರನಂ

ನೋಡಿ ಮರುಳ್ದು ಕೂಡಿ ಬಿಡದಿರ್ದರನಾನಱಿಯೆಂ ವಿಯೋಗಮಂ ।
ಮಾಡಿದ ವಾಮಲೋಚನೆಯರಂಗದೊಳಾಲಿಯ ಸೂಸುನೀರ್ಗಳ ॥
ಲ್ಕಾಡದೆ ತಂದು ಪೆರ್ಮೊಲೆಯೊಳೊತ್ತಿದ ಪಂಕಜಪತ್ರಜಾಳಮಿ ।
ಪೋರ್ಡದೆ ಪೊಸಿದೊಳ್ದಳಿರ್ಗಳುಂ ನೆಱೆ ಬಾಡದೆ ಸ್ಪೆತು ಪೋಕುಮೇ ॥

ತನಯರ್ ಪಲರುಳ್ಕೊಡಮಾ ।
ಜನಪತಿ ರಂಜಿಸುವನಾಕುಮಾರಕನಿಂ ಮ ॥
ತ್ತೆನಿತು ಜಳವಿಹಗಮಿರೆಯುಂ ।
ವನಜವನಂ ರಾಜಹಂಸನಿಂ ರಾಜಿಪವೋಲ್ ॥ ॥-೨೯-॥

ಅಂತು ಸಂತತೋಪಚೀಯಮಾನಪದ್ಮನಾಭಪ್ರಭಾವಭಾವನಾನಂದಿತ ಮಾನಸಂ ಕನಕಪ್ರಭಮಹಾರಾಜಂ ಸುಖದಿನಿರ್ದೊಂದು ದಿವಸಂ ಯಾಮಿತ್ರ ಯವಿರಾಮಸಮಯದೊಳ್ ತಾಂಬೂಲಕರಂಕವಾಹಿಕಾದ್ವಿತೀಯನುತ್ತುಂಗ ಸೌಧಶಿಖರನಿರ್ಯೂಹಪರ್ಯಂಕದೊಳ್ ಕುಳ್ಳಿರ್ದು ಬಹಿಃಪುರಶ್ರೀಯಂ ಪೇಳಾವಳೋಕನದಿನಳಂಕರಿಸುತ್ತುಮಿರ್ಪನ್ನೆಗಂ ಉಪವನೋಪಾಂತದ ವಿಪುಳತರತಟಾಕತಟದೊಳ್ ॥-೩೦-॥

ಏರಿಯನೀಡಿಱುವ್ವೋಳಿಯೆ ।
ನೀರುಣ್ಬ ಕನಲ್ವ ಪೋರ್ವ ಮೆಲ್ಕೊತ್ತುವ ತ ॥
ತ್ತೀರದ ಕಱುಂಕೆಗಳಸುವ ।
ಗೋರಾಜಿಯ ಲೀಲೆ ಕಣ್ಗೆ ಪಡೆದುದು ಚೆಲ್ವಂ ॥ ॥-೩೧-॥

ಅದಂ ವಿನೋದವಿಕಸಿತವಿಳೋಚನಂ ನೋಡುತ್ತುಮಿರೆ

ಚಳಗೆಳಕಂಬಳಂ ಚಳನಕಂಪಿತತುಂಗಕಕುದ್ಭರಂ ಧರಾ ।
ತಳಪರಿಳಂಬಿವಾಳಧಿ ನವಕ್ಷತಲಕ್ಷಿತಕಂಧರಂ ಖುರೋ ॥
ಚ್ಛಳದುರುರೇಣುಧೂಸರಿತನಗ್ರವಿಶೀರ್ಣವಿಷಾಣಾಗ್ರಾತ್ತಮಾಂ ।
ಸಳತನು ಬಂದುದಂದು ಮುಹುರುತ್ಥಬೃಹದ್ರವನೊಂದು ಪುಂಗವಂ ॥೨೯॥

ಅಂತು ಬಂದು

ನಸೆವಣಕದೆ ಬೆನ್ನಂ ಸಂ ।
ಧಿಸುವುದುಮಸವಸದಿನೆಡೆಗೆ ಪ್ರಗೆಲೊಡನಂತಾ ॥
ಬಸವಂ ಪಾಯ್ದೊಡೆ ಕೆಸಱೊಳ್ ।
ಬಸವಱಿದಿರ್ದೊಂದು ಗೊಂದೆ ಪೊಂದಿತ್ತಾಗಳ್ ॥ ॥೨೯॥

ಅದಂ ಕಂಡು ವೃಷಭನ ಅನಿಮಿತ್ತರೋಷಾವೇಶವಿಷಮತೆಗಮಾಜರಾ ದುರ್ಬಲಬಲೀವರ್ದದುರ್ದರ್ಶಮರಣಾಯಾಸಪರಿಣತಿಗಂ ವಿಸ್ಮಯಂಬಟ್ಟು ಸಂಸೃತಿಕೃತಾನುಶಯನುಂ ಜಾತನಿರ್ವೇದಾಶಯನುಮಾಗಿ ತನ್ನೊಳಿಂತೆಂದಂ

ಕ್ಷಣಭಂಗವ್ಯತ್ತಿ ತನುಭೃ ।
ದ್ಗಣಜೀವನಮುಲ್ಲಿ ಸಂಶಯಂ ನೋಟ್ಪೊಡಿನಿ ॥
ತ್ತಣಮಿಲ್ಲದನಱಿದುಮಿದೇ ।
ನಣಕಮೊ ಮತಿವಂತರುಂ ವಿಮೋಹಿಸುತಿರ್ಪರ್ ॥ ॥೩೦॥

ಉಸಿರೆ ಗಡ ಸೀಮೆ ಬಾಳ್ಕೆಯು ।
ದೆಸೆಯೊಳ್ ಗಾಳಿಯೆ ಗಡದುವುದುಱಸಕಂ ಭಾ ॥
ವಿಸುವೊಡೆ ಚಲತೆ ಗಡಿನ್ನೇ ।
ವೆಸಗೊಂಡಸುದಣ್ಣಿ ನರರ ಚಿರಜೀವಿತೆಯಂ ॥ ॥೩೨॥

ಅನಿಮಿತ್ತಂ ಕೊಲುತಿರ್ಪ ಮಿಱುಂ ನರರಂ ಶೀತಾತಪಾನ್ನಾಂಬುವಾ ।
ಯ್ವನಿಲಕ್ಷ್ವೇಡನಿಯುದ್ಧಯುದ್ಧವನಭೂತಕ್ರೂರಸತ್ವಾವಯಾ ॥
ಕನಿದಾರಿದ್ರ್ಯವಿಯೋಗಶೋಕರತಚಿಂತಾಯಾಸಚಾರ್ಯಪ್ರವ ।
ರ್ತನದೋಷಾದಿಗಳಂ ನೆರಂಬಡೆದವಂ ಮತ್ತೇಕೆ ಕೈವಾರ್ಪಂ ॥ ॥೩೩॥

ಬೆಸನಂಗಳ್ ಮನಮಂ ಮೋ ।
ಹಿಸಿ ಕಣ್ಗಂಧತೆಯನಿತ್ತು ಸತ್ಕ್ರಿಯೆಯೊಳ್ ಚೇ ॥
ಷ್ಟಿಸಲೀಯವು ನಿದ್ರೆಯವ್ವೋಲ್ ।
ನಿಸದಂ ನರರಂ ಪ್ರಬೋಧಮಪ್ಪನ್ನಿವರಂ ॥ ॥೩೪॥

ಹಿತಮನಱಿಯದೆ ಕೆಲರ್ ಕೆಲ ।
ರತಿಸಂಶಯದಿಂದಮಲ್ಲಿ ಕೆಲಬರ್ ವಿಪರೀ ॥
ತತೆಯಿಂದಿಂತಜ್ಞಾನ ।
ತ್ರಿತಯಗತಮೋವಿಕೃತಿಯಿಂದೆ ವಿಹ್ವಲರಪ್ಪರ್ ॥ ॥೩೫॥

ಭಾವಿಯೆನಿಸಿರ್ದ ಭೋಗದೊ ।
ಳಾವುದು ನಿಶ್ಚಯಮತೀತಮುದತೀತಮೆ ದಲ್ ॥
ಜೀವಂ ತದಾತ್ಮಸುಖಿಲವ ।
ಸೇವೆಗೆ ಕಳವಳಿಪುದದಱೊಳೇಂ ಪ್ರರುಳುಂಟೇ ॥ ॥೩೬॥

ಸಿರಿಗೆ ದರಿದ್ರತೆ ಬಾಳ್ಕೆಗೆ ।
ಮರಣಂ ಜರೆ ಯೌವನಕ್ಕಮಭಿಘಾತಮೆನು ॥
ತ್ತಿರೆ ಕಂಡುಂ ಕೇಳ್ದುಂ ಗಡ ।
ಪರಿವರ್ತಿಸರಾತ್ಮಹಿತದೊಳತಿದುರ್ಮತಿಗಳ್ ॥ ॥೩೭॥

ಎನಿತಿಷ್ಟಯೋಗದೊಳ್ ಸುಖ ।
ಮನಿತೆ ಮನೋದುಃಖಮುದಱಗಲ್ಕೆಯೊಳೆಂದ ॥
ಲ್ತ್ ನಿವೃತ್ತಿಯೊಳೆಸೆವರ್ ಸ ।
ಜ್ಜನರಾತ್ಮಜ್ಞಾತೆಗೆ ನೋಟ್ಪೊಡದು ಫಲಮೆ ವಲಂ ॥ ॥೩೮॥

ಪರಿಣತಿಸುಖಮಂ ಭಾವಿಸೆ ।
ಶರೀರಿಗರ್ಹತ್ಪ್ರವಚನಮಲ್ಲದೆ ಪೆಱತಿ ॥
ಲ್ಲರುಚಿಯದಱಲ್ಲಿ ಸಮನಿಸೆ ।
ಸರುಜಂಗೌಷಧವಿರಕ್ತಿಯೊಡಂತಕ್ಕುಂ ॥ ॥೩೯॥

ಎಂದು ಬಗೆದು ಮತ್ತಮಿಂತೆಂದಂ:—

॥ ಹರಿಣೀವೃತ್ತಂ ॥

ಶ್ರುತದೊಳತಿತಾತ್ಪರ್ಯಂ ಸದ್ಬೋಧಸಾಧುಜನಂಗಳೊಳ್ ।
ಕೃತಸಮುಚಿತಾಭ್ಯಾಸಂ ಜನ್ಮಸ್ವರೂಪದೊಳಂ ವಿವೇ ॥
ಕಿತೆಯಿವಿನಿತುಂ ಮೆಯ್ವೆತ್ತಿರ್ದುಂ ವಿಚಾರಿಪೊಡೆನ್ನವ್ವೋ ।
ಲಿತರನ್ಯಪನಿಂತಾವ್ವೊಂ ಪ್ರೋನ್ಮತ್ತವೃತ್ತಿಯಿನಿರ್ದವಂ ॥ ॥೪೦॥

ಕಣ್ಬಿರಿ ಪುತ್ರಮಿತ್ರವನಿತಾಜನದೊಳ್ ಸಮಸಂದು ರಾಜ್ಯಮಂ ।
ಜಾಣ್ಬಿಡೆ ದುಃಖಹೇತುವನಿದಂ ನೆಱೆ ತಾಳ್ದಿ ಪರತ್ರಸೌಖ್ಯಮಂ ॥
ಪೂಣ್ಬ ತಪೋನಿಯೋಗಮನದಂ ಮಱೆದಿಂತಳಪಿಂದೆ ಬಿಟ್ಟನ ।
ಟ್ಟಣ್ಬ ನರಂಗೆ ಸಂಗಡಿಗನಪ್ಪೆನೆ ತಪ್ಪೆನೆ ಹಾಸ್ಯಭಾರಮಂ ॥ ॥೪೧॥

ನೆಯ್ದಿಲೆಸಳೆಂಬ ಬಗೆ ತ ।
ಳ್ಪೊಯ್ದಿರೆ ಕೂರ್ವಾಳ ಮೊನೆಗೆ ಪಾಯ್ವಳಿಯಳಿಪಂ ॥
ಮಾಯ್ದೆನ್ನ ಮನಂ ತಳೆದೇ ।
ನೆಯ್ದಿದುದೋ ಸುಖದಮೆಂದು ದುಃಖಪ್ರದಮಂ ॥ ॥೪೨॥

ಸ್ಫುರದಾಶಾಜ್ವಾಳನಂ ದು ।
ರ್ಧರಸುತಪಸ್ತೀರ್ಥವಾರಿಪರಿಷೇಕದಿನೆಂ ॥
ತಿರೆ ಕಿಡುಗುಂ ಭೋಗಾಜ್ಯೋ ।
ತ್ಕರಪಾತದಿನೆಂತುಮಂತದೇಂ ಮುಚ್ಚುಗುಮೇ ॥ ॥೪೩॥

ಎಂದು ಸಂಸಾರಶರೀರಭೋಗವೈರಾಗ್ಯರಸವಿಸರಪ್ಲಾವಿತಾಶಯಕುಶೇಶಯನಾಗಿರ್ದನ್ನೆಗಂ ॥೪೪॥

ಸತತಂ ರಾಗಾವಿಳಂ ಪೀಡಿತಕುವಲಯನುನ್ಮಾರ್ಗಸಂಸಕ್ತನುನ್ಮೊ ।
ಲಿತಸಾದ್ರ್ಯತ್ವಂ ಸದುರ್ದರ್ಶನರುಚಿ ಖರದಂಡಪ್ರಿಯಂ ತಾನೆನಿಪ್ಪಾ ॥
ಕ್ಷಿತಿಪಂಗೆನ್ನಂದದಿಂದಂ ಸಮನಿಸುಗುಮುಧಃಪಾತಮಸ್ತಾಬ್ಧಿಯೊಳ್ ನಿ ।
ಶ್ಚಿತಮೆಂಬಂತಾ ಪ್ರತೀಚೀಜಲಧಿಗಿಳಿದನಂಭೋಜಿನೀಜೀವಿತೇಶಂ ॥ ೪೫॥

ಆಗಳ್

ಭೂವರನ ಹೃದಯಮುಂ ಮು ।
ನ್ನಾವರಿಸಿರ್ಪ ಖಿಳಭೋಗರಾಗಂ ಪೊಱಮ ॥
ಟ್ಟಾವಗಮಾಶಾಂತರಮುಂ ।
ತೀವಿದುದೆನಿಸಿತ್ತು ಸಾಂದ್ರಸಂಧ್ಯಾರಾಗಂ ॥ ॥೪೬॥

ಅನಂತರಮಾಮಹಾತ್ಮನ ಆತ್ಮೀಯಸಾಂಸಾರಿಕಮನೋರಥಂಗಳೊಡನೆ ರಥಾಂಗಂಗಳ್ ವಿಘಟಿಸೆಯುಂ, ವೈರಾಗ್ಯಮತಿಯೊಡನೆ ಕುಮುದ್ವತಿಗಳ್ ವಿಕಾಸಮನೆಯ್ದಿಯುಂ, ಮನಃಪ್ರಿಯೆಯಾದ ರಾಜ್ಯಶ್ರೀಯ ಮುಖಕಮಲ ದೊಡನೆ ಕಮಲಂಗಳ್ ಸಂಕೋಚಿಸೆಯುಂ, ಇಂತನುರೂಪಮಾದ ರಜನೀ ಮುಖದೊಳಲ್ಲಿಂ ತಳರ್ದು ನಿವರ್ತಿತಸಂಧ್ಯೋಚಿತಜಿನೇಂದ್ರವಂದನಂ ಶಯ್ಯಾಗೃಹಕ್ಕೆ ವಂದನಲ್ಪತಲ್ಪತಲಗತನಾಗಿರೆ ॥೪೭॥

ನೆರೆಯಲ್ಕೆಂದು ತಪಶ್ಶ್ರೀ ।
ವಿರಾಗಮತಿದೂತಿಯುಂ ಸಮಂತಪ್ಪುದಳಾ ॥
ವರಿಸಿದಪನಾಳನೆಂದೀ ।
ಪುರುಡಿಂ ನಿದ್ರಾವಧೂಟಿ ಪೊರ್ದಳ್ ನೃಪನಂ ॥ ॥೪೮॥

ಅಂತು ಅಂದಿನಿರುಳಂ ಕಳೆದು ಮಱುದಿವಸಮಾಸ್ಥಾನಮಂಟಪಮಧ್ಯಸ್ಥಿತನುಮಶೇಷಮಂತ್ರಿಪ್ರಧಾನಪರಿವಾರಪರಿವೃತನುಮಾಗಿ ಕುಮಾರನಂ ಬರಿಸಿ ನಿಜಮಣಿಮಯಪೀಠಿಕಾಪಾರ್ಶ್ವಸ್ಥಿತಚಂಚತ್ಕಾಂಚನಾಸಂಧಿಯೊಳ್ ಕುಳ್ಳಿರಿಸಿ ॥೪೯॥

ಮೊದಲೊಳ್ ತಾಂ ಯೌವರಾಜ್ಯಂಬಲ್ಲಿಕೆನಡುವೆಸಂದಾಧಿರಾಜ್ಯಂ ಬಲ್ಲಿಕ್ಕಂ।
ತುದಿಯೊಳ್ಕೈವಲ್ಯಸೌಖ್ಯಪ್ರದಮೆನಿಸ ತಪೋರಾಜ್ಯಮೆಂಬೆಂತುಮೀಯಂ॥
ದಬೆ ಸೇವ್ಯಂಗಳ್ ಮದೀಯಾನ್ವಯನೃಪಗ್ರ್ದನಾಂತಪ್ಪಿರಾಜ್ಯೈಕಸೇವಾ
ಮದದಿಂದಿರ್ದಂದುಕೀರ್ತಿರ್ಂದುಗೆ ಸಮನಿಸದೇ ದುರ್ಯಶೋರಾಹುರೋಧಂ

ಮತ್ತಂ

ಬಳಮಱಿದಿರ್ದ ತೋಳನಿಱಿಕೆಯ್ವಳಿಪಿಂದೆ ಪುರುಳ್ ಧುರಕ್ಕೆ ಕಂ (?)।
ಟಿಳಿಸಿ ಕನಲ್ದು ಪೋಗೆ ಸಿರಿ ಬಂಧುವಧೂತತಿ ಪೈದ್ಧರಾಜ್ಯಮಂ ॥
ದೆಳಸದೆ ಕೂಡೆ ಬೇರ್ಪಡೆ ಬಱಿಕ್ಕಿವನಾನುಱಿಪ್ರೊಂದು ಮಾತು ಭೂ ।
ತಳಭರಧಾರಣಕ್ಷಮಭುಜಾಬಳ ಪೇಟ್ ಪುನರುಕ್ತಮಲ್ಲವೇ ॥

ಅದುಕಾರಣದಿಂ

ಸುರಪತಿಸೇವ್ಯಮಾನಮೆನಿಸಿರ್ದುದನೆನ್ನಯ ಸತ್ತ್ವಮಾತಪೋ ।
ಭರಮನಡುತ್ತುಂ ತಾಳ್ದಲೆಳಸಿರ್ದುದಣಂ ಬಳಿಗಯ್ಯೋಳಾನಿದಂ ॥
ಧರಿಯಿಸುದಾಯ್ತು ಶಕ್ಯಮದಱಿಂ ಧರಣೀಭರನುಂ ತ್ವದೀಯದೋಃ ।
ಪರಿಘದಿನಾಂತು ಪಿಂಗಿಸುದು ನಂದನ ದುರ್ವಹಭಾರಖೇದನುಂ ॥೫೦॥

ಎನಲೊಡಮದಂ ಪ್ರತಿಷೇಧಿಸುವ ಬಗೆಯಿಂ ಕುಮಾರನಿಂತೆಂದಂ:—

ಜೀವದಯಾಪರಂ ಪರಮದೀಕ್ಷೆಯದಂ ತಳೆಯಲ್ಕೆ ನೀವಿದಂ ।
ದೇವಿಳೆಯಂ ಸಮಂತಿಱಿಯವಿಟ್ಟೊಡೆ ಶೇಷಫಣಾಳಿವಾತ್ಮಕಂ ॥
ಠಾವಧಿಯಾಗೆ ತಱ್ಗಿದಪುದಾಕಮಠಾಧಿಪಪರ್ವರಂ ಸ್ವವ ।
ಕ್ಷೋವಧಿಯಾಗೆ ಮಱ್ಗಿದಪುದೇನಿದು ಸಚ್ಚರಿತಾನುರೂಪಮೇ ॥೫೩॥

ಎಂಬುದುಮರಸನದನೆ ಪಿಡಿದದುಕಾರಣದಿಂ ನೀಂ ಕುವಳಯಮಂ ನಿಜಕರಕ್ಕೆ ಲೀಲಾಕುವಳಯಮಂಮಾಡಿ, ಶೇಷಾದಿಗಳ್ಗಸಹ್ಯಭಾರಸಂಹಾರಮುಮನೆನಗೆ ಪಾವನತಪೋವನಪ್ರಯಾಣಮಾಂಗಲ್ಯಾನುಕೂಲಮುಮಂ ನೀನೆ ಮಾಟ್ಪುದೆಂದು ಮತ್ತುತ್ತರಕ್ಕೆಡೆಯಿಲ್ಲದಂತು ನುಡಿಯೆ

ಈಡಿತಮೆನಗೆ ಸಮಂತಾ ।
ಮ್ರೇಡಿತಮುಂ ಮಹಿಪ ಬಗೆವೊಡೆಂದು ಮುಹುರ್ವಾ ॥
ಕ್ಕ್ರೇಡೆಯನುಱಿದು ಕುಮಾರಕ ।
ಚೂಡಾಮಣಿ ತಂದೆಯೆಂದುದರ್ಕೆರ್ದೆಗೊಂಡಂ ॥ ॥೫೪॥

ವಿಭು ತನ್ನಾತ್ಮೋತ್ತಮಾಂಗಸ್ಥಿತಮನತುಳರೋಮಾಂಚಪೋಯುರ್ಗ್ಮದಿಂದಾ । ತ್ಮಭವಪ್ರೋತ್ತುಂಗಮೂರ್ಧಾಗ್ರದೊಳಿಱಿಪಲೊಡಂ ಸ್ಫಾರ್ಶೈಲೇಂದ್ರಚೂಡಾ ॥ ನಿಭೃತೋದಗ್ರಾರ್ಕಬಿಂಬಪ್ರತಿನಿಧಿಯೆನಿಸಲ್ ಸಾಳ್ದುದೇದಿವ್ಯಮಾನ ।ಪ್ರಭಮೀಂಕಣ್ಗಿಂಬುವೆತ್ತಿರ್ದುದೊ ವಿಕಟಹಟಿಪ್ರತ್ನಕೂಟಂ ಕಿರೀಟಂ ॥ ॥೫೬॥

ಅಂತು ನಿಜಸಾಮ್ರಾಜ್ಯಭಾರಮನಿಱಿಪ್ರವಂತಿಱಿಪಿ

ಅರಮನೆಯಂ ವಧೂವಿತತಿಯಂ ಸುತರಂ ಪರಿವಾರವುಂ ಮಹಾ ।
ಕರಿಕುಳವುಂ ತುರಂಗಬಳವುಂ ಪಟಿದೊಳ್ ದಿಟವಾಗಿ ಚಿತ್ರಿಕಂ ॥
ಬರೆದನೆಗೆತ್ತು ಬಾಳ್ತೆಗೆಯದಾವುಹಿಪಂ ಪೊಱಮಟ್ಟನಂತೆ ಸ ।
ತ್ಪುರುಷರದೇಕೆ ಬಂಜೆವಡಿಪರ್ ಗಡ ದುರ್ಲಭಕಾಲಲಬ್ಧಿಯಂ ॥೫೭॥

ಅಂತು ಪೊಱಮಟ್ಟು ಪಲಂಬರರಸುಗಳ್ವೆರಸು ಶ್ರೀಧರತಪೋನಿಧಿಯ ಸನ್ನಿಧಿಯೊಳ್ ॥೫೮॥

ಪರಿಹರಿಸಿ ಜಾತರೂಪೋ ।
ತ್ಕರವುಂ ಮತ್ತೊಂದು ಜಾತರೂಪವುನರಸಂ ॥
ಧರಿಯಿಸಿದಂ ನಾಡೆ ಗುಣಾಂ ।
ತರವುಱಿವರದೆಂತು ನೆಗಱ್ಕೊಡಂ ಲೇಸಲ್ತೇ ॥ ॥೫೯॥

ಅಂತು ದುರ್ಧರತಪೋಧರನಾದಂ. ಇತ್ತ ಪದ್ಮನಾಭಮಹೀಭುಜಂ

ಗುರುವಿರಹಜನಿತಚಿಂತಾ ।
ತರಂಗಿಣೀರಯಮನಾತ್ಮಕುಲವೃದ್ಧವಚ ॥
ಸ್ತರಣಿಯಿನೆಂತಾನುಮಧಃ ।
ಕರಿಯಿಸಿದಂ ಪಿತೃವಿಯೋಗಮೇಂ ದುಸ್ತರವೋ ॥ ॥೬೦॥

ಅಂತು ವಿಷಾದವಿಮುಖನುಂ ರಾಜ್ಯಾನುಷ್ಠಾನಾಭಿಮುಖನುಮಾಗಿ ಕ್ಷಯಲೋಭವಿರಾಗಕಾರಣಂಗಳನೊಡರ್ಚಿ ದುಭಯಪ್ರಕೃತಿಯುಮನನುರಕ್ತಂ ಮಾಡಿಯುಂ, ವಾಕ್ಕಂದಪಾಷ್ಣಿಗ್ರಾಹತಾತ್ಯಂತರ್ಧಿಗಳಂ ಷಾಡ್ಗುಣ್ಯದೊಳುಚಿತಗುಣಪ್ರಯೋಗದಿಂ ವಿಧೇಯತೆಯನೈದಿಸಿಯುಂ, ಸಹಜಕೃತ್ರಿಮವಿದ್ವಿಷ್ಟಾಷ್ಟಾದಶತೀರ್ಥಂಗಳೊಳ್ ವಿವಿಧವೇಷವಿದ್ಯಾವಿಶಾರದಪ್ರಚ್ಛನ್ನಪ್ರಣಿಧಿಗಳಂ ಪ್ರಯೋಗಿಸಿಯುಂ, ಅಭಿಶಾಪಮಾನಪ್ರಭೃತಿಭೃತ್ಯರನಭಯಸನ್ಮಾನಾದಿಗಳಿಂ ಸ್ವೀಕರಿಸಿಯುಂ, ಪ್ರತ್ಯಕ್ಷಾನುಮಾನಂಗಳಿಂ ಕಾರ್ಯಾಕಾರ್ಯಂಗಳನುಪಧಾವಿಶುದ್ಧಮಂತ್ರಿಮಂಡಳದೊಳವಿರತಂ ನಿಘರ್ಷಿಸಿಯುಂ, ದಿವಸದಾಯವ್ಯಯಸಂಭಾಷಣಂಗಳಿಂ ಕುಲ್ಯರಂ ಸಾಶೀಲ್ಯ

ವೃತ್ತಿಗೆ ಸಲಿಸಿಯುಂ, ಅತಿವ್ಯಸನಕ್ಷೀಣಧನಜನಂಗಳಂ ಮೂಲಧನದಾನದಿಂ ಸಂಭಾವಿಸಿಯುಂ, ಸನ್ಮಾನದಾನದರ್ಶನಾಪಾದನಂಗಳಿಂದಂತಃಪುರಮಂ ಸಂತೋಷಂಬಡಿಸಿಯುಂ, ನಿತ್ಯಪರೀಕ್ಷಣಸ್ಥಳವಿಪರ್ಯಯಪ್ರತಿಪತ್ತಿದಾನಂಗಳಿಂ ನಿಯೋಗಿಗಳಂ ಕಾವುದುಘರ್ ಮಾಡಿಯುಂ, ಸ್ತ್ರೀಪುತ್ರದಾಯಾದ್ಯರತ್ತಣಿಂದಾತ್ಮರಕ್ಷಣೆಯಂ ವಿವಕ್ಷಿಸಿಯುಂ, ವರ್ಣಾಶ್ರಮವ್ಯವಸ್ಥೆಗಳಂ ಸ್ವಸ್ಥಂಮಾಡಿಯುಂ, ತುಳಾಮಾನವಿಶುದ್ಧಿಯಂ ವಿಚಾರಿಸಿಯುಂ, ಅರಿಷಡ್ವರ್ಗಮನದಿರ್ಪಿಯುಂ, ತ್ರಿವರ್ಗಮಂ ಸಮೀಕರಿಸಿಯುಂ, ಮೂಳರಂ ಪಾಳಿಸಿಯುಂ, ಕೋಶಮಂ ಪೋಷಿಸಿಯುಂ ಇಂತು ಸಾಮ್ರಾಜ್ಯಮಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತಮುಮೆನಿಸಿದನಲ್ಲದೆಯುಂ

ಕೋಪಪ್ರಸಾದಮಂ ತ ।
ದ್ಭೂಪತಿ ದುಷ್ಟರೊಳದುಷ್ಟರೊಳ್ ತಳೆದಂ ಸಂ ॥
ತಾಪಪ್ರಿಯಕೃತಿಯಂ ತಾ ।
ರಾಪತಿ ವಿರಹಿಯೊಳವಿರಹಿಯೊಳ್ ತಾಳ್ದುವವ್ವೋಲ್ ॥ ॥೬೦॥

ಜ್ಯಾಪ್ರತಿಪಾಳನಮಂ ಧ ।
ರ್ಮಪ್ರೀತಿಯಿನೈದೆ ಮಾಡಿದಂ ಸುಕರತೆಯಿಂ ।
ದಾಪ್ರಭು ಮಾರ್ಗಣಕುಶಲಾ ।
ಭಿಪ್ರಾಯನೆನಿಪ್ಪವಂಗೆ ತಾನುಚಿತಮಿ ದಲ್ ॥ ॥೬೩॥

ಪಗಲರ್ಕಂ ತಳೆದಬ್ಜಮಸ್ತಮಯಸಂಧ್ಯಾರಾಗವಿಭ್ರಾಂತಿಯಿಂ ।
ಮುಗಿವನ್ನಂ ದಿಗಿಭೋತ್ಕರಂ ದವಭವಜ್ವಾಳಾವಳೀಶಂಕೆಯಿಂ ॥
ದಗಿವನ್ನಂ ರಿಪುಗಳ್ ದಿನಪ್ರಪತದುಳ್ಳೊತ್ಪಾತ್ಪ್ರಭಾಭೀತಿಯಿಂ ।
ಸುಗಿವನ್ನಂ ನಿಮಿರ್ದತ್ತು ತನ್ನೃಪಮಹಾತೇಜಃಪ್ರಭಾಮಂಡಳಂ ॥ ॥೬೪॥

ಅಂತಲಂಘ್ಯತೇಜನುಮವನತರಿಪುಸಮೂಹನುಂಸಫಲೀಕೃತಾರ್ಥಿನಿಚಯಾಶನುಂ ವಿಶದಯಶಃಕಬಳಿತಾಶನುಮೆನಿಸಿ ॥ ॥೬೫॥

ಅನಿಶಂ ಸೋಮಪ್ರಭಾದೇವಿಯ ವದನಸುಧಾಸೂತಿಯಿಂದುಳ್ಳಲರ್ತಂ ।
ದ ನಿಜಸ್ವಾಂತೋತ್ಪಲಕ್ಕತ್ಯಧಿಕವಿಕಸನಶ್ರೀಯನಾದೇಯಕಾಯಂ ॥

ತನುಜಾತಂ ಸ್ವರ್ಣನಾಭಂ ತುಹಿನಪವನಸಂಸ್ಪರ್ಶದಂತೀಯ ಪುಣ್ಯಾ ।
ಚರ್ನವಿಶ್ರಾಂತಾತಿಲೋಭಂ ಸುಖದರಸುಗೆಯುತ್ತಿರ್ದನಾಪದ್ಮನಾಭಂ ॥

ಅಂತು ಕತಿಪಯಸಂವತ್ಸರಂಗಳ್ ಸಲ್ವಿನಂ ಪ್ರರೂಢಯೌವನಮನೋಹರನುಂ ಕವಚಹರನುಂ ಆದ ನಿಹತನೂಜನಂ ನೋಡಿ

ಧರಣೀಚಕ್ರೋರುಭಾರೋದ್ಧರಣವಿಧಿಯೊಳಸ್ಮದ್ಭುಜಕ್ಕೀಕುಮಾರಂ ।
ನೆರವಾಗಲ್ ಸಾಲ್ವನೀತಂ ಬಱಿದಿರೆ ಪುರುಳೇನೆಂದು ಮಂತ್ರಿಪ್ರಧಾನೋ ॥
ತ್ಕರಯುಕ್ತಂ ವ್ಯಕ್ತಹರ್ಷಂ ಶುಭದಿನದೊಳಿಳಾಧೀಶ್ವರಂ ಮಾಡೆ ತೂರ್ಯ
ಸ್ವರದೊಳ್ ತಳ್ಳೊಯ್ದುದೇಂ ಶೋಭಿಸಿದುದೊ ಪಿರಿದುಂ ಯೌವರಾಜ್ಯಾ
ಭಿಷೇಕಂ ॥೬೯॥

ಅನಂತರಂ ಮನೋಹರಮಂಗಳಾಳಂಕಾರಾಳಂಕೃತನಂ ಮಾಡಿ

ಸಕಲಧರಾಧಿರಾಜ್ಯಪದಚಿಹ್ನ ಕಿರೀಟಸಮರ್ಪಣಕ್ಕೆ ಸಂ ।
ಚಕರಮಿದೆಂಬಿನಂ ಪ್ರಿಯಕುಮಾರನ ಕಂಠದೊಳುದ್ಧರತ್ನಕಂ ॥
ಠಿಕೆಯನನೂನಹರ್ಷರಸಗದ್ಗದಕಂಠನಿಳೀಶನುತ್ಸವ್ರೋ ।
ತ್ಸುಕಕಳಕಂಠಿಕಾಮಧುರಮಂಗಳಗೀತಿಗಳುಣ್ಮೆ ಕಟ್ಟಿದಂ ॥ ॥೬೯॥

ಅಗಳ್

ಬಿಡದೆ ನಮೇರುವನಡರ್ದೊಡೆ ।
ಮೊಡನೆಯೆ ಸಂತಾನಕಕ್ಕೆ ಕಲ್ಪಲತಿಕೆ ದಾಂ ॥
ಗುಡಿಯಿಟ್ಟೆ ಲೀಲೆಯಂ ಸಿರಿ ।
ಪಡೆದುದಧೀಶ್ವರಿಯುಪೇಶ್ವರಾಳಂಬನದಿಂ ॥ ॥೭೦॥

ಅಂತು ಸುವರ್ಣನಾಭಕುಮಾರಂ ಭೂರಿಭುಜಮಂಡಳನಿವೇಶಿತಾರ್ಧರಾಜ್ಯಭರನಾಗಿ

ಎಣಿಪಾಗಳ್ ಕೃತ್ಯಶೇಷಂ ಪರಮಮುನಿಮನಸ್ತರ್ಪಣಂ ಶೀಲಸಂರ ।
ಕ್ಷಣಮಾಸಂಪನ್ನಭವ್ಯೋದ್ಧರಣಮತುಳಚೈತ್ಯಾಲಯಾನೀಕನಿರ್ಮಾ ॥
ಪಣಮರ್ಹತ್ಸೂಕ್ತಯುಕ್ತಿಶ್ರವಣಮಿವೆ ದಲೆಂದಿಂತವಂ ತನ್ನ ಚಿತ್ತಂ ।
ತಣಿವನ್ನಂ ಮಾಡಿ ನಿಚ್ಚಂ ಪೊಗಳಿದನಿಳಾಚಕ್ರದಿಂ ಶಕ್ರಲೀಲಂ ॥ ॥೭೧॥

ಅಂತು ನಿಜನಿರ್ಮಲಸ್ವಭಾವಾನುರೂಪವ್ಯಾಪಾರಂಗಳಿಂ ಪ್ರೊಟ್ಟುಗಳಿಯುತಿರ್ದೊಂದು ಪುಣ್ಯವಾಸರೆಪ್ರಥಮಪ್ರಹರದೊಳ್ ॥೭೨॥

ಲಲನಾಲಾವಣ್ಯವಾರಿಪ್ರಸರದೊಳಬಲಾಪಾಂಗರೋಚಿರ್ಮೃಣಾಲೀ । ಕುಲದೊಳ್ ಕಾಂತಾನನಾಂಭೋರುಹಪರಿಕರದೊಳ್ ಕಾಮಿನೀಹಾಸಫೇನಾವಲಿಯೊಳ್ ಸೀಮಂತಿನೀಕುಂತಲಮಧುಕರದೊಳಪ್ರೇಯಸೀದೋಸ್ತರಂಗಾಕುಲದೊಳ್ ತಾನಿರ್ದನಾಸ್ಥಾನಿಯೊಳಮಳಸರಃಕಲ್ಪದೊಳ್ ರಾಜಹಂಸಂ ॥

ಆಪ್ರಸ್ತಾವದೊಳ್

ಧೃತವೇತ್ರಂ ಚಾರುಚೀನಾಂಬರರಚಿತಶಿರೋವೇಷ್ಟನಂ ಘಂಟಿಕಾಲಂ । ಬಿತಕೂರ್ಪಾಸಂ ಜರಾನಿರ್ಮಳಸರಳತರಶ್ಮಶ್ರುಕೂರ್ಚಂ ನಿಯುಕ್ತ ॥ ದ್ರುತಯಾನೋತ್ಕಂಪಿಪೀನೋದರನವನಿಪನೊಡ್ಡೋಲಗಕ್ಕೈದೆ ವಂದಂ । ಪ್ರತಿಹಾರಂ ಕೌತುಕಪ್ರಸ್ತುತಯುತಪುರುಷಾವಾಪ್ತಿವಿಜ್ಞಾಪನೋತ್ಕಂ ॥

ಅನಂತರಂ ನಿಟಿಲನಿಹಿತಕರಕುಟ್ಮಳಂ–ದೇವ, ವನಮಹತ್ತರಂ ವಿಚಿತ್ರಪುಷ್ಪಫಲಹಸ್ತಂ ಬಂದು ಬಾಗಿಲೊಳಿರ್ದಪನೆಂಬುದುಂ ಬರವೇಳೆನೆ, ಮಹಾಪ್ರಸಾದಮೆಂದೊಡಗೊಂಡು ಬಂದೊಡವನವನತಿಪುರಸ್ಸರಂ ವಿವಿಧಪತ್ರಪುಟಿಕಾನಿಹಿತಂಗಳಂ ತಂದು ಮುಂದಿಟ್ಟಿ ॥೭೫॥

ಇವು ಜಂಬೂಫಲಮಂಜರಿ ।
ಯಿವು ಫಲಿನೀಫಲದ ಗುಚ್ಛಮಿವು ಚೂತಫಲ ॥
ಸ್ತವಕಂ ದಲೆಂದು ತೋಱಿದ ।
ನವನೀಪಾಲಂಗೆ ಲೀಲೆಯಿಂ ವನಪಾಲಂ ॥ ॥೭೬॥

ಇವು ಕಂಕೆಲ್ಲಿದಳತ್ಪ್ರಸೂನಮಿವು ಮಲ್ಲೀಸ್ಮೇರಪುಷ್ಪಂ ಪೊದ । ಲ್ದಿವು ನೀಪಪ್ರಸವಂ ಬಿಟ್ಟಿಕ್ಕಿವಸನಪ್ರೋತ್ಫುಲ್ಲಪುಷ್ಪಂ ಸಮಂ ॥ ತಿವು ಮಂದಸ್ಮಿತಸಿಂಧುವಾರಕುಸುಮಂ ನೋಳ್ಪಿಂದಿವಿಂತೈದೆ ಲೋ । ಧ್ರುವಿನಿದ್ರೋದ್ಗಮಮೆಂದು ತೋಱಿದನನೂನಾಶ್ಚರ್ಯಮಪ್ಪನ್ನೆಗಂ ॥೭೭॥

ಆಗಳವಂ ಕಂಡು ಕಾಲತ್ರಯಕುತುಷಟ್ಕೋಚಿತಂಗಳಪ್ಪ ಫಲಪ್ರಸವಂಗಳೀಕಸುಮಯಪ್ರಸವಮೆಂತಾದುದೆಂದು ವಿಸ್ಮಯಂಬಟ್ಟು ತನ್ನೊಳೆ ವಿಚಾರಿಸಿ ಬಿಟ್ಟಿಕ್ಕರಸನವನನಿಂತೆಂದಂ:— ॥೭೮॥

ಇದು ಸನುವಸರಣಸಂಸಂ ।
ಗದಿನಲ್ಲದೊಡವುಲಬೋಧಮುನಿಜನಸಾಮ ॥
ಧ್ಯಾಧಿನಕ್ಕುಮಲ್ಲದಂದಾ ।
ಗದು ಸಕಲರ್ತುಪ್ರಭಿನ್ನಗುಣಸಮುದಾಯಂ ॥ ॥೭೯॥

ಎಂಬುದುಂ ವನಮಹತ್ತರನಿಂತೆಂದು ಬಿನ್ನವಿಸಿದಂ:— ದೇವರ್ ಬೆಸಸಿದಂದದಿಂದಿಂದು ಮನೋಹರೋದ್ಯಾನಮನನವದ್ಯಚರಿತ್ರನೊರ್ವ ಮುನಿಮುಖ್ಯಂ ಬಂದು ಪೊಕ್ಕಂ. ಆನುಮಾಸಮಯದೊಳ್ ॥೮೦॥

ತ್ರೈಕಾಲ್ಯಯೋಗಿ ಬಂದುದ ।
ನೀಕುಸುಮಫಳಂಗಳಿಂದಮಸಮಯಕೃತಭೃಂ ॥
ಗೀಕೀರಕೇಕಿಕೋಕಿಳ ।
ಕಾಕಳಿಯಿಂದಱಿದು ಬನದೊಳಱಸಿದೆನಾಗಳ್ ॥ ॥೮೧॥

ಅನಂತರವೊಂದು ಪಾವನಪ್ರದೇಶದೊಳ್

ಯತಿಪಂ ಪಂಚಾತಿಚಾರಪ್ರಕೃತನಿಯಮದಿಂ ತುಂಗಶಾಖಾಚ್ಛದಚ್ಛ ।
ನ್ನತರುಚ್ಛಾಯಾವನೀಭಾಗದೊಳಳವಡೆ ಕೈಯಿಕ್ಕಿಕೊಂಡಿರ್ದು ಚೈತ್ಯ ॥
ಕ್ಷಿತಿಜಾತಪ್ರಾಂತದೇಶಸ್ಥಿತಕನಕಮಯಪ್ರಾತಿಹಾರ್ಯಾಷ್ಟಕಾರ್ಯ ।
ತ್ಪ್ರತಿಬಿಂಬಭ್ರಾಂತಿಯಂ ಮಾಡಿದನವಯವದಿಂದೀಕ್ಷಣಕ್ಕಾಗಳೆನ್ನಾ ॥

ಅತಿಸೌಮ್ಯಾಕೃತಿಯುಮನು ।
ಗ್ರತಪಸ್ತೇಜಮುಮನಾದಮೊಳಕೆಯ್ದಂತಾ ॥
ನ್ರತಿಪತಿ ಶಶಿಸೂರ್ಯಸಮಾ ।
ಹೃತಿಯಿಂ ನಿಷ್ಪನ್ನನಾದ ತೆಱದಿಂದಿರ್ದಂ ॥ ॥೮೩॥

ಸಕಲವ್ಯಾಪಿನಿಯಂ ಭ ।
ವ್ಯಕಮಲನಿಕರಪ್ರಮೋದದಾಯಿನಿಯಂ ತಿ ॥
ಗ್ಮಕರಂ ಪ್ರಭೆಯಂ ತಳೆಯಂ ।
ತಕಳಂಕಂ ಶ್ರೀಧರಾಖ್ಯೆಯಂ ಮುನಿ ತಳೆದಂ ॥ ॥೮೪॥

ಮುಕುರದೊಳಾಪ್ರತಿಬಿಂಬಂ ।
ನಿಕಾಮಮೆಸೆವಂತೆ ತದ್ವಚೋವಿಸ್ತರದೊಳ್ ॥
ಸಕಲಜಗಂ ಸೊಗಯಿಸುಗುಂ ।
ತ್ರಿಕಾಲಗೋಚರವನಂತಪರ್ಯಾಯಯುತಂ ॥ ॥೪೫॥

ದಂತರುಚಿನಿಚಯಮುಕ್ತಾ ।
ಕ್ರಾಂತಂ ಭಾಸುರಸುವರ್ಣರಚಿತಂ ತದ್ವಾ ॥
ಕ್ಸಂತತಿ ವಿಬುಧಜನಕ್ಕೆ ನಿ ।
ರಂತರಕಮನೀಯನಾಯ್ತು ಕರ್ಣಾಭರಣಂ ॥ ॥೪೬॥

ಬಳಸಿ ಭುವನಂಗಳಂ ನಿ ।
ಶ್ಚಳಂಗಳೆನಿಸಿದುವು ಮತ್ತೆ ಗಣನೀಯತೆಯಂ ॥
ತಳೆದಿರ್ದುಮಸಂಖ್ಯೇಯಂ ।
ಗಳೆನಿಸಿದುವು ತನ್ಮನೀಶನವುಲಗುಣಂಗಳ್ ॥ ॥೪೭॥

ಏವೇಟ್ಟುದೊ ತತ್ಪದರಾ ।
ಜೀವರಜೋವ್ರಾತದಿಂದಲಂಕರಿಸಿ ಶಿರೋ ॥
ಜಾವಳಿಯಂ ನರಸುರಖಚ ।
ರಾವಳಿ ಮಾಣ್ದತ್ತು ತಳವ ಪುಡಿಗೆತ್ತುರಿಯಂ ॥ ॥೪೮॥

ಆ ಮುನಿಪನ ಪರಮತಪ ।
ಸ್ಸಾಮರ್ಥ್ಯದಿನಾದ ವನದ ಮರಗಳ ಸಿರಿಯು ॥
ದ್ದಾಮತೆಯಂ ಪೊಗಟ್ಟಿಂದೆನ ।
ಗೇವಮಾತೊ ಫಣೀಶವೃತ್ತಿ ಸಮನಿಸವೇಟ್ಟುಂ ॥ ॥೪೯॥

ಆದೊಡಮೆನ್ನ ಋಷನಿತನಋಷಿದಪೆನದೆಂತೆಂದೊಡೆ

ಪಾರದೆ ವಸಂತಮಂ ಕೈ ।
ಮಾರದೆ ತೆಂಬೆಲರನಾಮುನೀಶನ ಬರವಿಂ ॥
ಪಾರೈಸಿದಂದದಿಂ ಸಹ ।
ಕಾರಂ ತಾಳ್ದತ್ತು ಪುಳಕಮೆನೆ ಕಳಕೆಗಳಂ ॥ ॥೫೦॥

ಯತಿಪತಿಸನ್ನಿಧಿಯಿಂ ಶಾಂ ।
ತತೆಯಂ ತಳೆದಂತೆ ಕಾಮಿನೀವಾಮಪದಾ ॥
ಹತಿಯಂ ಬಯಸದೆಯುಂ ಪು ।
ಷ್ಪಿತಮಾದುದು ಲಲಿತಪಲ್ಲವಂ ಕಂಕೆಲ್ಲಂ ॥ ॥೯೦॥

ನಿರುತಮಣುವ್ರತಮಂ ಮುನಿ ।
ವರನೊಳ್ ಕೈಕೊಂಡ ತೆಱದೆ ಮಧುಸೇಕಮನಾ ॥
ದರಿಸದೆ ವಕುಳಂ ಮುಕುಳಮ ।
ನರಲಂ ಧರಿಸಿದುದು ಕೊಂಬುಕೊಂಬಿನೊಳಿಲ್ಲಂ ॥ ॥೯೧॥

ತಿಲಕಂ ಕಾಣಲೊಡಂ ಭೂ ।
ತಿಲಕನನೊಲವಿಂದಮಲರ್ದುದಂತುಟೆ ವಸುಧಾ ॥
ತಲದೊಳ್ ಸ್ವಪಕ್ಷದರ್ಶನ ।
ವಿಲಾಸವೊದವಿಸದೆ ಮುದಮನಾರ್ಗಂ ಮನದೊಳ್ ॥ ॥೯೨॥

ಅವಿವೇಕಂ ತದ್ಧರ್ಮ ।
ಶ್ರವಣದಿನೋಸರಿಸಿದಂತಿರಾಶ್ರಯಮಣಮಾ ॥
ಗವೆ ಚಂಪಕಧಾತ್ರೀರುಹ ।
ನಿವಹಂಗಳ್ ಮುಖರಮಲಿನಮಧುಪವ್ರಜದಾ ॥ ॥೯೩॥

ಜಯಜಯರುತಿಯಂ ಖಗಸಂ ।
ಚಯರುತಿಯಿಂದೈದೆ ಮಾಪ್ಪಿ ವನಲಕ್ಷ್ಮೀಕಾಂ ॥
ತೆಯ ಕಾಂತಧವಳದಂತಾ ।
ಳಿಯವೊಲ್ ಸೊಗೆಯಿಸಿತು ಕುಂದಕುಟ್ಮಲನಿಕರಂ ॥ ॥೯೪॥

ಶುಚಿಸಂಗದಿಂದರಲ್ವುದಿ ।
ದುಚಿತಮೆನಗೆ ನೋಕ್ಕೊಡೀಮುನೀಂದ್ರನುಮಾದಂ ॥
ಶುಚಿಯೆಂದರಲ್ದುದೊಲವಿಂ ।
ವಿಚಕಿಲನಿಚಯಂ ನವೀನಗಂಧೋಪಚಯಂ ॥ ॥೯೫॥

ಆಡುವ ಸೋಗೆನವಿಲ್ಗಳ ।
ಗಾಡಿಯನೊಲವಿಂದೆ ಪಲವು ಕಣ್ಮಲರ್ಗಳಿನೇಂ ॥

ನೋಡಿದನ್ರದೆಂಬ ಸಂಬೆಗ ।
ದಾಡುಂಬೊಲನಾಯ್ತು ಪಲವ್ರಮುಲರಿಂ ಕುಟಿಜಂ ॥ ॥೯೭॥
ಮುನಿ ಪೊಕ್ಕನೆಂಬ ಭಯದಿಂ ।
ಬನದೊಳಗೆ ಬಿಸುಟ್ಟು ಪೋದ ವಿಷಮಾಸ್ತ್ರನ ನ ॥
ಚ್ಛಿನ ಬಾಣಾವಳಿಯೆನಿಸಿದು ।
ವನೂನಕುಸುಮಾವಕೀರ್ಣಬಾಣಾವಳಿಗಳ್ ॥ ॥೯೮॥
ಧರಣೀವಲ್ಲಭ ತನ್ಮನಿ ।
ನಿರೀಕ್ಷಣಕ್ಷಣದೊಳಲರ್ದು ಕಡವಿನ ಮರಗಳ್ ॥
ಪರಿಗತರೋಮಾಂಚತೆಯಿಂ ।
ದೊರೆಮಾಡಿದುದೆನ್ನ ತನುವ್ರಮಂ ನೆಱೆ ತನ್ನೊಳ್ ॥ ॥೯೯॥
ಎಂದುಂ ತಪಃಪ್ರಭಾವದೊ ।
ಳೊಂದಿಯೆ ಕುಸುಮಿಸುವ್ರವಂತದಂ ಮಾಣ್ದಲರಂ ॥
ಸೆಂದುರಮಂ ಲೋಧ್ರಮುಮಿರ ।
ದಿಂದು ತಪಸ್ವಿಪ್ರಭಾವದಾಂತುದು ಚಿತ್ರಂ ॥ ॥೧೦೦॥
ಅಲರ್ಗಳ ಕೀಲೆಸಳ್ ಕಲಿಲದಂತು ಲತಾಳಿಯ ತಳ್ಳು ಬಿರ್ಕದಂ ।
ತೆಲೆಯ ತೊಡಂಬೆಗಳ್ ಪಱಿಯದಂತು ಸರೋರುಹಿಣೀವನಂಗಳೊಳ್ ॥
ವಲಿ ತಲೆದೋಱದಂತು ನಲಿದಾಡುವ ಸೋಗೆಯ ಸೋಗೆ ಸೂಸದಂ ।
ತೆಲರೊಲವ್ರಣ್ಮೆ ತೀಡಿದುದು ತಣ್ಣನೆ ಪಣ್ಣನೆ ತದ್ವನಾಂತದೊಳ್ ॥೧೦೧॥
ಬನದೊಳಗುಬ್ಬರಂ ಪರಿವ ಶಾಂತರಸಾಮ್ಯತದಿಂದಮೆಯ್ದಿ ತ ।
ಣ್ಣನೆ ತಣಿದಂತೆ ಚುಂಬಿಸವೆ ಪೂಗುಡಿಯುಂ ಮುಱಿದುಂ ಮದಾಳಿಗಳ್ ॥
ಕನಗೊನರಂ ಕರ್ದುಂಕವೆ ವಿನೋದದೊಳಂ ಕಳಕೋಕಿಳಂಗಳೊಂ ।
ದಿನಿತುಮನ್ರೊಡಂ ಗಿಳಿಗಳುಣ್ಣವೆ ಪಣ್ಣನದೆಲ್ಲಿ ನೋಳ್ಪೊಡಂ ॥೧೦೨॥
ಮತ್ತಂ
ಅತ್ತವಿರಾಗವರ್ತನೆ ಧೃಥೀಕೃತಮೂಲಗುಣಂ ನಿರೀಹತಾ ।
ವ್ರತ್ತಿಯಸಂಗಭಾವಭಜನಂ ಸುಮನಃಪ್ರತಿಪತ್ತಿ ಮಾನಸಂ ॥
ಪತ್ತಿಕರಂ ವಿದಾಚಿಸೆ ವನಸ್ಥಿತಶಾಖಿನಿಕಾಯಮಾವಗಂ ॥
ಪೆತ್ತುದು ಚೆಲ್ವನಾಮುನಿಪನೊಳ್ ತಳೆದಂತೆ ತಪೋನಿಯೋಗಮಂ ॥

ಅದಲ್ಲದೆಯುಂ ನಿರ್ಭರಭಕ್ತಿರಸರಸಿಕವನದೇವತಾಪ್ರೇರಣದಿಂ
ಬಳಸಿ ಮುನಿಗರ್ಘ್ಯಮಂ ಮರ ।
ಗಳಿ ಕುಡುವಂತೆಸೆವ ತಳಿರ ಮಂಜರಿಯಂ ಪೊಸವೂ ॥
ಗಳ ತಂದಲನೊಪ್ಪುವ ಪ ।
ಣ್ಗಳಿ ಸರಿಯಂ ಸುರಿಯುತಿರ್ದುವಿರ್ದಿರ್ದೆಡೆಯೊಳ್ ॥ ॥೧೦೪॥

ಅನವಱೊಳಾಯ್ದು ತಂದ ನ ।
ವೀನಫಲಪ್ರಸವಮಿವು ದಲೆಂದಱಿಪಿದನು ॥
ದ್ಯಾನಮಹತ್ತರನರಸಂ ।
ಗಾನತಭುವನನ ಸಮಾಗಮಪ್ರಸ್ತುತಮಂ ॥ ॥೧೦೫॥

ಅದಂ ಕೇಳ್ದು ಹರ್ಷರಸವಿಸರಮಕರಂದಸಂದೋಹಭರಿತಹೃದಯಾರ
ವಿಂದನುಂ,ಪುಳಕನಿಕರಕಳಿಕಾವಳೀಕಳಿತನಿಜಶರೀರೋದಾರಪಾರಿಜಾತನುಂ,
ಪ್ರಮೋದಬಾಷ್ಪಜಲಲುಳಿತನಯನಪಾತೀನನುಮಾಗಿ ॥೧೦೬॥

ನಾಮಱಿಸಿ ಪೋಗಿ ಪೂಜಿಸು ।
ವಾಮುನಿಪತಿ ತಾನೆ ದಯೆಯಿನೇಳ್ತಿಂದಂ ಮ ॥
ತ್ತೇಮಾತೊ ನಮ್ಮ ಪುಣ್ಯದ ।
ಸಾಮರ್ಥ್ಯಮನೂನಮನುಪಮಾನಮದಲ್ತೇ ॥ ॥ ೧೦೭॥

ಎಂದು ಮಣಿಮಯನಿಜೋಪವಿಷ್ಟವಿಷ್ಟರಾಗ್ರದಿಂದೆ
ಇಳಿದಾದೆಸೆಗೇಳಿಡಿಯಂ ।
ಗಳಿಗಳಿನವನಿಪತಿ ಮುಗಿದ ಕೈಯಂ ನೊಸಲಿಂ ॥
ದಿಳಿಪಿದನಡಿಗೆಱಿಗಿದನೋ ।
ಕುಳಿಯಾಡೆ ಪೊದಳ್ದಿ ರಾಗರಸದಿಂ ಚಿತ್ತಂ ॥ ॥೧೦೮॥

ಆಗಳ್

ಧಾತ್ರೀಶಾಜ್ಞೆಯಿನುಣ್ಮಿದತ್ತು ಪೊಳಿಲೊಳ್ ಪಾಪಪ್ರತೀಪದ್ವಿಷೈ ।
ಕತ್ರಾಸಪ್ರದಪುಣ್ಯಕೇಸರಿರವಂ ಭವ್ಯಾವಳೀಸೌಖ್ಯಸ ॥
ಸ್ಯತ್ರಾಣಾಮೃತವರ್ಷಧರ್ಮಫಣಿಶೋಷಂ ಬಂಧುರಂ ವಂದನಾ ।
ಯಾತ್ರೋತ್ಸಾಹನಿವೇದಕಂ ಕನಕಕೋಣಾಘಾತಭೇರೀರವಂ ॥ ೧೦೯॥

ಅನಂತರಂ

ಬಳೆದ ಮುನಿನಾಥವಾರ್ತೆ ।
ವಿಳಸತ್ಕಲ್ಪಲತೆ ಫಲಿತವಾದತ್ತೆನೆ ಭೂ ॥
ತಳಪಾಲಂ ವನಪಾಲಂ ।
ಗಳತೆಗೆ ಮಿಗಿಲೆನಿಸಿ ಪಾರಿತೋಷಕಮಿತ್ತಂ ॥ ॥೧೧೦॥

ಅಂತನೇಕಾಳಂಕಾರವಸನವಸುವಿಸ್ತರದಿಂ ಸಂತಸಂಬಡಿಸಿ ಭೇರೀರವಾಕರ್ಣನನಿಮೀಳಿತನಾನಾರ್ಚನಾವ್ಯಗ್ರಹಸ್ತಪರಿವಾರಪರಿವೃತಾನೇಕರಾಜಲೋಕಸಂಕೀರ್ಣಮಪ್ಪ ರಾಜಮಂದಿರದ್ವಾರದೊಳ್ ಪಣ್ಣಿ ಬಂದಿರ್ದ ಪಟ್ಟವರ್ಧನಗಂಧಸಿಂಧುರಸ್ಕಂಧಾರೂಢನಾಗಿ ಪುರಮಂ ಪೊಱಮಟ್ಟು ॥೧೧೧॥

ಸಸುತಂ ಸಸ್ತ್ರೀನಿಕರಂ ।
ಸಸುಹೃತ್ಪ್ರಕರಂ ಸಪೌರಲೋಕಂ ಸಬಲ ॥
ಪ್ರಸರಂ ಸಮಂತ್ರಿವಿಸರಂ ।
ವಸುಧಾಪತಿ ನಡೆದನಧಿಕವಿಭವಸಮೇತಂ ॥ ॥೧೧೨॥

ಆಪ್ರಯಾಣದೊಳ್

ಕಾರ ಮುಗಿಲ್ಗಳಂ ಪೊಳೆವ ಮಿಂಚುಗಳಂ ಸುರಕಾರ್ಮುಕಂಗಳಂ ।
ಪೂರಿಸಿದಂದದಿಂದವನಿಮಂಡಲಮಷ್ಟದಿಶೋರುಮಂಡಳಂ ॥
ನೀರದಮಾರ್ಗಮಂಡಲಮದೇನೆಸೆದತ್ತೊ ಮದದ್ವಿಪಾವೃತಂ ।
ವೀರಭಟಾಸ್ತ್ರರುಕ್ಪರಿವೃತಂ ಮಣಿಭೂಷಣಕಾಂತಿಸಂವೃತಂ ॥೧೧೩॥

ಅಂತು ನಡೆದು

ನುತಕಮಳಾಕರಮಂ ಪರಿ ।
ವೃತಪುನ್ನಾಗಮನುದಾತ್ತಚಂದನತಿಲಕಾ ॥
ನ್ವಿತಮಂ ವಿರಾಜಿತಮನಾ ।
ಕ್ಷಿತಿಪತಿ ಸಾರ್ತಂದನಾತ್ಮಸಮಮಂ ವನಮಂ ॥ ॥೧೧೪॥

ಆಗಳಾಮುನೀಂದ್ರಪ್ರಭಾವಮೂತಾಹೂತವಸಂತವಲ್ಲಭನವೀನಸಂಯೋಗದಿಂ ಪರಿಕ್ರಾಂತಿಯಾದುದ್ಯಾನಲಕ್ಷ್ಮಿಯ ನಟುಸುಯ್ಯದೆನಿಸಿ ಪಸರಿಸುವ ತಣ್ಗಾಳಿಯುಂ, ತಣ್ಗಾಳಿಯಲೆಪದಿಂದೊಲೆದು ಪುಣ್ಯಪಣ್ಯಾರ್ಥಿಭವ್ಯ

ಸಾರ್ಥಮನಿತ್ತಲೆ ಟ್ಟಿಪ್ಪುದೆಂದು ಕೈಸನ್ನೆಯಿಂ ಕರೆವಂತೆ ಕರಮೆ ಸೊಗಯಿಸುವ ತಳಿಗೊಂಬುಗಳುಂ, ತಳಿಗೊಂಬುಗಳೊಳಿರ್ದು ಮುನ್ನಿನಂದದಿಂದಿಂದು ಪೊಕ್ಕೊಡೆ ಪೊಲ್ಲದಕ್ಕುಮೆಂದು ಕಂದರ್ಪನಂ ಪುಗಲ್ ಪುಗಲೆಂಬಂದದಿಂ ಸರಂಗೆಯ್ವ ಗಂಡುಗೋಗಿಲೆಯ ದನಿಗಳುಂ, ಗಂಡುಗೋಗಿಲೆಯ ದನಿಯ ವಾದ್ಯನಿನದಮುಪ್ಪಿನಮಾಗಳೆ ಬಂದ ಮುನಿವೃಂದಾರಕನ ಬರವಿನೊಸಗೆಯೊಳ್ ಮುಂಗಳಂಬಾಡುವಂತಿನಿಯದನಿಯಂ ನೆರೆದು ಮೊರೆವ ಪೆಣ್ಡುಂಬಿಗಳುಂ, ಅಸದಳಂ ಸೊಗಯಿಸುವ ಬನದ ಬಾಗಿಲೊಳ್ ಸೇನಾಪತಿಪ್ರಮುಖಚತುರಂಗಬೃತನಾಪ್ರತಾನಮನಿಲ್ಲಿಯೆ ನಿಲ್ಕೆಂದು ಬೆಸಸಿ ವಿಗತಧವಲಚ್ಛತ್ರಚಾಮರಾದಿರಾಜಚಿಹ್ನಸಮಾಜನುಂ, ಕತಿಪಯಭವ್ಯಪಾರ್ಥಿವಪ್ರಧಾನಪರಿವಾರನುಂ, ಸಜ್ಜನಸಜ್ಜೀಕೃತಾನೇಕಪೂಜಾಪರಿಕರನುಂ ವನಮಹತ್ತರಪುರಸ್ಸರನುಮಾಗಿ ॥೧೦೫॥

ಪುರಹೂತಂಪ್ರೀತಿಯಿಂನಂದನವನಕೆಮಹೋತ್ಸಾಹದಿಂಚೈತ್ರದೊಳ್ಚೈ।
ತ್ರರಥೋದ್ಯಾನಕ್ಕೆ ವಿತ್ತಾಧಿಪನತುಳವಿಳಾಸಾನ್ವಿತಂ ಬರ್ಪ್ಪೋಲ್ ತ।
ದ್ಧರಣೀಚಕ್ರೇಶನಂತಾಬನಕೆ ಸವಿಭವಂ ಬಂದು ಯೋಗೀಂದ್ರಪೂಜಾ।
ತುರಚಿತ್ತಂ ಪೊಕ್ಕನುದ್ಯತ್ಪುಳಕತನುಲತಂ ಕಾವ್ಯನೌಕರ್ಣಧಾರಂ ॥

॥ ಗದ್ಯಂ ॥

ಇದು ಪರಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿ ತ್ರೈವಿದ್ಯಾಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಪದ್ಮನಾಭಮುನಿವಂದನಾಯಾತ್ರೋತ್ಸವಂ

ದ್ವಿತೀಯಾಶ್ವಾಸಂ.

ತೃತೀಯಾಶ್ವಾಸಂ.

ಶ್ರೀಪತಿನಿರ್ಮಲಭಕ್ತಿ ।
ವ್ಯಾಪಿತಮನನೆಯ್ದೆವಂದನಾ ಮುನಿಮುಖ್ಯ ॥
ಶ್ರೀಪಾದೋಪಾಂತಮನವ ।
ನೀಪಾಲಂ ಜೈನಜನಮನೋಪರಚರಿತಂ ॥ ॥೧॥

ವಿಸ್ತೀರ್ಣಮೆನಿಪ ನೀಲ ।
ಪ್ರಸ್ತರದೊಳ್ ಮುನಿಪನಿರ್ದನಪಗತಜೀವಮೂ ॥
ತಸ್ತೋಮಮಾಗಿ ವಿಮಳನ ।
ಭಸ್ತಳದೊಳ್ ತೊಳಪ ಚಂದ್ರನಂದದಿನಾಗಳ್ ॥ ॥೨॥

ಅಂತಿರ್ದನಂ ತ್ರಿಪ್ರದಕ್ಷಿಣಂಗೆಯ್ದು ವಿವಿಧಪೂಜಾಪುರಸ್ಸರಂ ಗುರುಭಕ್ತಿಯಿಂ ವಂದಿಸಿ ತದಾಶೀರ್ವಚನಾಮೃತಭರಿತಕರ್ಣಕುಹರನುಂ ಪಾವಪ್ರದೇಶನಿಷಣ್ಣನುಮಾಗೆ,

ಪಿರಿದುಂ ಜಿನೇಂದ್ರದಿವಿಜೇಂ ।
ದ್ರರಿರ್ವರಿಂದೆಸೆವ ಸಮವಸರಣಸ್ಥಳಿಯೊಳ್ ॥
ಸರಿಯಾದುದಾಪ್ರದೇಶಂ ।
ಪರಮಮುನೀಶಕ್ಷಿತೀಶರಿಂ ತತ್ಕ್ಷಣದೊಳ್ ॥ ॥೩॥

ಕ್ಷಿತಿಪತಿಯ ಕರಸರೋಜ ।
ದ್ವಿತಯಮನಡಿಗಡಿಗೆ ಮುಕುಲತೆಯನೈದಿಸಿ ತ ॥
ದ್ಯುತಿಪತಿ ನಿಜಕುವಲಯಬಂ ।
ಧುತೆಯಂ ಪ್ರಕಟಿಸಿದನಾಸಭಾಭ್ಯಂತರದೊಳ್ ॥ ॥೪॥

ಆಗಳ್ ಮುನಿನಾಯಕನಂ ।
ಭೂಗಧಿಪತಿ ಭವ್ಯತುಮುಲಜಯಜಯನಿನದಾ ॥
ವೇಗಂ ಮೂಣ್ಟಿನಿಸುಂ ತೆಱ ।
ಪಾಗಿರೆ ಬೆಸಗೊಂಡು ಜೀವತತ್ತ್ವಸ್ಥಿತಿಯಂ ॥ ॥೫॥

ಅಪಗತಸಂಶಯನಾಗಿ ಮತ್ತಮಿಂತೆಂದಂ:—

ವಿಗತಾಲೋಕಂ ಶಿವಪದ ।
ವಿಗಳಿತಮೆನಿಸಿದ ಜನಕ್ಕೆ ಕೃತಸನ್ಮಾರ್ಗಾ ॥
ನುಗತೋಪದೇಶದಿಂದೀ ।
ಜಗದೊಳ್ ನೀನಾದೆ ನಾಥ ಕಣ್ಣುಂ ಗತಿಯುಂ ॥ ॥೬॥

ದೇವ ನಿರವಧಿಗುಣಾತಿಶ ।
ಯಾವಧಿಲೋಚನನ ನಿನ್ನ ಕಾಣ್ಕೆಗೆ ಪೊಱಗಾ ।
ದಾವಸ್ತು ಭುವನದೊಳ್ ಪರಿ ।
ಭಾವಿಸೆ ವಂಧ್ಯಾಸ್ತನಂಧಯೋಪಮಮಲ್ತೇ ॥ ॥೭॥

ಅದು ಕಾರಣದಿಂ,

ಮನೆದೊಳೆನಗೀಶ ಮತ್ಪ್ರ ।
ಕ್ತನಜನ್ಮಾವಳಿಯನೆಯ್ದಿ ಕೇಳ್ವಟ್ಟಿ ಕರಂ ॥
ಜನಿಯಿಸಿದ ಪ್ರದದನುಸಿರ್ವುದು ।
ವಿನೇಯಕುಮುದಪ್ರಮೋದಕರತುಹಿನಕರಾ ॥ ॥೮॥

ಎನೆ ಜನ್ಮಪರಂಪರೆಯಂ ।
ಮುನಿಪತಿ ಪೇಳಿಲ್ಕೆ ತೊಡಗೆ ಮಧುರಧ್ವನಿಯಿಂ ।
ಮನದವಧಾನಪರಂಪರೆ ।
ಯನಶೇಷಂ ತಾಳ್ದಿದತ್ತು ಭವ್ಯವ್ಯೂಹಂ ॥ ॥೯॥

ಅದೆಂತೆಂದೊಡೆ ಪುಷ್ಕರಾರ್ಧದ ಮೊಡಣ ಮಂದರಪರವಿದೇಹದ ಸೀತಾನದಿಯ ಬಡಗಣ ತಡಿಯೊಳ್ ಸುಗಂಧಿಯೆಂಬ ವಿಷಯಮುಂಟದಱೊಳ್ ಕರಪೀಡನಂ ಧೇನುಕುಚದೊಳ್, ಬಂಧನಂ ಕಚದೊಳ್, ವಿರೋಧಂ ಪಂಜರದೊಳ್, ಗಳಿತದಾನತೆ ಕುಂಜರದೊಳ್, ಅವಗ್ರಹಂ ನಿತ್ಯವ್ರತದೊಳ್, ಆಸವಾಸಕ್ತಿ ಮಧುವ್ರತದೊಳ್, ಕಲ್ಯಾಣಹೀನತೆಯನಗಾರಕೇಳಿಯೊಳ್, ಗಳಗ್ರಾಹಿತ್ವಮೇಕಾವಳಿಯೊಳ್, ಕಂಟಕವಕ್ರಿಮಂ ಬದರದೊಳ್, ಅಧಃಕೃತಸನಾಭಿತೆಯುದರದೊಳ್, ಅಧರತೆಯೋಷ್ಠದೊಳ್, ದಂಡ

ಭ್ರಮಂ ಕುಲಾಲಚಕ್ರದೊಳ್, ಜಡಸ್ಥಿತಿ ನಕ್ರದೊಳ್, ಪ್ರಹರಣಶ್ರಮಂ ಖುರಳಿಯೊಳ್, ಮುಖರತೆ ಪುರಳಿಯೊಳ್, ಚಾಪಲತಾಯೋಗಂ ಜೀವೆಯೊಳ್, ಪ್ರತಾರಣಂ ನಾವೆಯೊಳ್, ರುಕ್ಸಮಾಕುಲತೆ ಮಣಿಯೊಳ್, ಮಹಾಮಾತ್ರವತರ್ಸಂ ಸ್ಮೃತಿಯೊಳಲ್ಲದಿಲ್ಲಮೆಲ್ಲಿಯುಂ,

ಸರ್ವರ್ತುಕಮೆ ಬನಂ ನೆಲ ।
ನುರ್ವರೆಯೆ ಕೊಳಂ ಸಮಂತು ಪೂಗೊಳನೆ ಬಲಿ ॥
ಕ್ಕುರ್ವೀರ್ಧ್ರಂ ರೋಹಣಮೆ ಗ ।
ಡಾರ್ವಣಿಸಲಖಿವರಣ್ಣ ತಜ್ಜನಪದಮಂ ॥ ॥೧೦॥

ಪರಿಣತಗಂಧಶಾಲಿವನಗಂಧದಿನುಲ್ಲಸಿತಾಂಬುಜಾಕರೋ ।
ತ್ಕರನಪಗಂಧದಿಂ ಪ್ರಚುರಚಂದನನಂದನಗಂಧದಿಂ ದಿಶಾ ॥
ಪರಿಧಿಯನೆಯ್ದಿ ಬಾಸಣಿಸುತಿರ್ಪುದು ಸಾರ್ಥತೆಯಂ ನಿಜಾಖ್ಯೆಯೊಳ್ ॥
ನೆರಪಿ ಸುಗಂಧಿಪುಂಡಲವಿಳಾರಪುಣೀರಪುಣೀಯಕುಂಡಲಂ ॥ ॥೧೧॥

ಕಳ್ಪದ್ರುಮಾನ್ವಿತಂಗಳ್ ।
ನೋಟ್ಪೊಡೆ ಕುರುಥರೆಗಳೆಂಬ ಪುರುಡೊದವಿದವ್ವೋಲ್ ॥
ಮಾಟ್ಪಿದು ಜನಕ್ಕೆ ಮುದಮಂ ।
ಬೇಟ್ಪಿದನೋರಂತೆ ಬೆಳೆದುದನೀವಳಯಂ ॥ ॥೧೨॥

ಆ ಮಹಿಮಹಿಳೆಗೆ ಲೀಲಾ ।
ತಾಮರಸವಿಡೆನಿಸಿ ರುಚಿರಮಣಿತೋರಣಮಾ ॥
ಲಾಮಯಗೋಪುರಲಕ್ಷ್ಮೀ ।
ಧಾಮಂ ಸುರಪುರಸಮಾಹ್ವಯಂ ಪುರಮೆಸೆಗುಂ ॥ ॥೧೩॥

ತತ್ಪುರೀಪರಿಸರದೊಳ್—

ಆವಾಸಂ ಮದನಂಗೆ ಜನ್ಮಭವನಂ ಬೈತ್ರಕ್ಕೆ ಲಾಸ್ಯೈಕಲೀ ।
ಲಾವೇಶ್ಮಂ ರತಿಗಾಸವಾವಸಥಮುನ್ಮಾಣಾಳಿಗೆಂಬಂದದಿಂ ॥
ಮಾವಿಂ ಮಾಧವಿಯಿಂ ತಮಾಲಲತೆಯಿಂ ಪುನ್ನಾಗದಿಂ ನಂದನ ।
ಶ್ರೀ ವಿಸ್ತಾರೆಯನಾಂತುದುಚ್ಛ್ರಿತದಳಚ್ಛಾಯಾತ್ತಪೀತಾತಪಂ ॥ ॥೧೪॥

ಅಲ್ಲಿ,

ತನಿತು ತೊಡಂಬೆಪಿಟ್ಟುದಿರ್ದ ಪಣ್ಗಳನಟ್ಟಿಯೆ ಮೆಲ್ದುಸೋರ್ವ ತೆಂ ।
ದಿನ ತಿಳನೀರನೀಂಟಿ ಲತೆಯೆಂದುಗುತಂದಲರೊಳ್ ಮಲಂಗಿ ಮೆ ॥
ಲ್ಲನೆ ತೊನೆಯುತ್ತು ಮಿರ್ಪೆಲೆಯ ತಣ್ಣೆಲರಿಂ ಬೆಮರಾಱು ಪೊರನಂ ।
ದನಡೊಳಗಿಂತಯುತ್ನ ಸುಖಮಂ ಪಥಿಕರ್ ಪಡೆವರ್ ನಿರಂತರಂ ॥ ॥೧೫॥

ಅದಲ್ಲದೆಯುಂ,

ಬೇಱೊಂದಮರಾವತಿವ್ರೋಲ ।
ಕೋಱುವುದತ್ತುಳಾಪ್ಸರಃಪ್ರತಾನದಿನೊಲವಂ ॥
ಬೀಱುವ ನಂದನದಿಂ ಬಗೆ ।
ಗೇಱುವ ವಿಬುಧಾಲಯಂಗಳಿಂದಾನಗರಂ ॥ ॥೧೬॥

ಹರಿನೀಲಾಟ್ಟಾಳಜಾಲಾಳಕೆ ವಿಶದಗವಾಕ್ಷಾಕ್ಷೆ ಚಂಚತ್ಪತಾಕಾ ।
ಕರಿ ಪೃತ್ತೋತ್ತುಂಗಚೈತ್ಯಾಯತನಕುಚೆ ಕೃತಾಗಾರಪಾರಾವತೇಂದೀ ॥
ವರಕರ್ಣೋತ್ತಂಸಿಯುತ್ತೋರಣಪರಿಲಚಿತಾದರ್ಶಬಿಂಬಾಸ್ಯೆ ವೇಲ್ಲ ।
ತ್ಪರಿಖಾಂಬುಕ್ಷೌಮೆ ಪಾಂಥಪ್ರತತಿಗೊದವಿಕುಂ ತತ್ಪುರೀಲಕ್ಷ್ಮಿ ಚೆಲ್ವಂ ॥

ಬಗೆಯೆ ಬಹುಭೂಮಿಕಂ ಮಾ ।
ನಗುಣೋನ್ನತಿಸಂಯುತಂ ಮಹಾಭೋಗಂ ತ ॥
ನ್ನಗರಜನಾವಳಿಯುಂ ಹ ।
ರ್ಮ್ಯಗೃಹಾಳಿಯುಮೆಂದೊಡೊಳ್ಪನೇವಣ್ಣಿಪುದೋ ॥ ॥೧೮॥

ಅಪ್ಸರಪತಿ ಸಿರಿಯಿಂದಳ ।
ಕಾಪ್ಸರಪತಿಗಸಮವಿಭವವಿಳಸನಲೀಲಾ ॥
ವ್ಯಾಪಾರದಿಂದೆ ಭೋಗದ ।
ತೀಪ್ಸರಪತಿಗಧಿಕನೆನಿಸುವಂ ಶ್ರೀಷೇಣಂ ॥ ॥೧೯॥

ನೇರ್ಪಟ್ಟಾನರನಾಥನ ।
ಕೂರ್ವಾಳೊಳಳಂಕೆಗೊಂಡ ಧಾರಾಜಲದೊಳ ॥
ಬೇರ್ವರಿದಿರೆ ಪುನಡೆಜಿಕಂ ।
ಶೀರ್ವಾನಸೆಯುಂತೆ ವಿಜಯಾವಧು ನೆಲಸಿರ್ಪಳ್ ॥ ॥೨೦॥

ತಳೆವುನಹೀಂದ್ರರುಂದ್ರಫಣಮೊಂದು ಧನುರ್ಗುಣವೇಗತಾಡನಾ ।
ಕಳಿತವಿಕೀರ್ಣಕೋಷ್ಠಮನೆ ಕೂರ್ಮವಿನಿಷ್ಠುರಪೃಷ್ಠಭಾಗಮೆಂ ॥
ದಳಘುತರಾಂಸನುಂ ದಿಗಿಭಕುಂಭಮಿದೆಂದು ಧರಿತ್ರಿ ಬಂದು ನಿ ।
ಶ್ಚಳತೆಯಿನಿರ್ಪಳಲ್ಲಿ ಭುಜವುಂಡಳದೊಳ್ ವಸುಧಾಧಿನಾಥನಾ ॥ ೦೧॥

ಚತುರಂಗಸೈನಿಕಂ ಭೂ ।
ಪತಿಪರಿಕರವೆನಿಪ್ರದನಿತು ಸಪ್ತಾಂಗಮನಾ ॥
ಕ್ಷಿತಿಪಾಲಕನೇಕಾಂಗದಿ ।
ನತುಳಯಶಂ ಗೆಲ್ದು ತನಗೆ ಮೊಟ್ಟಿದಜುಂದಂ ॥ ॥೦೦॥

ಪರಿಕಿಪ್ಪೊಡತಿವೃದ್ಧಂ ನಿ ।
ಷ್ಠುರವೃತ್ತಿ ಸದಾನುವರ್ತಿ ನೀತಿಯುತಂ ಭಾ ।
ಸುರತೇಜಂ ಕಂಚುಕಿಯಂ ।
ತಿರೆ ನಿಶ್ಚಲೆಮಾಡಿತಾನ್ಯಪಶ್ರೀವಧುವಂ ॥ ॥೦೩॥

ಪ್ರಿಯದಿಂದೊಂದೆಡೆಯಿರವಂ ।
ಬಯಸಿದ ಶೌರ್ಯಾದಿಸಕಲಪಾರ್ಥಿವಗುಣಸಂ ॥
ಚಯದಭ್ಯರ್ಥನದಿಂದಾ ।
ಶ್ರಯರೂಪನನಾಮಹೀಶನಂ ಬಿದಿ ಪಡೆದಂ ॥ ॥೦೪॥

ಎನಿಪಂ. ಅಂತುಮುಲ್ಲದೆಯುಂ,

ಸತತಂ ನಿಜದೇಹದಿನ ।
ವ್ಯತಿರಿಕ್ತೆಯೆನಿಪ್ಪ ಹೃದಯವಲ್ಲಭೆಯೊಳ್ ತತ್ ॥
ಕ್ಷಿತಿಪಂ ಶ್ರೀಕಾಂತೆಯೊಳೊಂ ।
ದಿ ತೋಱುವಂ ಕಳೆಯೊಳೊಂದಿದಿಂದುವ ತೆಱದಿಂ ॥ ॥೦೫॥

ಆವಧು ಯೌವನೋದಯರಸಾಯನಸಿದ್ಧಿ ಮನೋವಿಮೋಹಸಂ ।
ಭಾವನವಿದ್ಯೆ ಕಂಜಭವಕೌತುಕಸೃಷ್ಟಿ ಮನೋಜಸಿದ್ಧಸಂ ॥
ಜೀವನ ನೇತ್ರಪಾತ್ರನಟನಸ್ಥಳಿ ವಿಶ್ವಜಗದ್ವಿಲಾಸಜ ।
ಸ್ಕ್ರಾವನಿ ಯೋಷಿದಾತ್ಮಗುಣನಾಮಮೆನಿಪ್ಪಳದೇಂ ಸುರೂಪೆಯೋ ॥ ॥೦೬॥

ಶರದಿಂದುಪ್ರಭೆಯೊಳ್ಪ್ರಕಾಶನಮುಮಾಸೇವ್ಯತ್ವಮುಂ ಚೂತಮುಂ ।
ಜರಿಯೊಳ್ಸೌರಭಮುಂ ವಿಕಾಸಮುಮುದನ್ವದ್ವೀಚಿಯೊಳ್ಸ್ವಾಚ್ಛಮುಂ ॥
ಪಿರಿದುಂ ಗೌರವಮುಂ ಬೆಡಂಗಿಡಿಮ ತೋರ್ಪೊಂದಂದದಿಂ ನಾಡೆ ಬಂ ।
ಧುವನಾಯ್ತಾ ನೃಪಕಾಂತೆಯೊಳ್ ಬಹುಕಲಾನೈಪುಣ್ಯಮುಂ ಪುಣ್ಯಮುಂ ॥

ಧಾತ್ರೀಶನ ಸಾಂದ್ರಮನ ।
ಸ್ಫೂತ್ರದೊಳಾಸತಿಯ ಗುಣಗಣೋದ್ಗಮತತಿಯುಂ ॥
ಚಿತ್ರವಿಧದಿಂ ತೊಡಚಿರ್ದ ।
ಧಾತ್ರಂ ಮುಂ ಮಾಲೆಗಾಱೊಡನಾಡಿದನೋ ॥ ॥೨೯॥

ಎಂಬಿನಂ ನಿಜಮನಃಪ್ರಸಾದಭೂಮಿಯಾದ ಮಹಾದೇವಿಯುಂ ತಾನುಮೋರೊರ್ಮೆ ವಿಕಚಕೋಕನದಮಕರಂದಶೀಕರನಿಕರಾಕುಲಕೇಳೀಕಾಸಾರಂಗಳೊಳ್ ಕಳಹಂಸಮಿಥುನದಂತೆ ಜಲಕ್ರೀಡೆಯನೊಡಚಿರ್ಯುಂ, ಓರೊರ್ಮೆ ಸುರಭಿಪರಿಮಳೋದ್ಗಾರಿಸ್ಮೇರಕುಸುಮಮಂಜರೀನಿಕರಭರವಿನತಲತಿಕಾಗೃಹಂಗಳೊಳ್ ಭ್ರಮರಮಿಥುನದಂತೆ ಪುಷ್ಪಾಪಚಯದಿಂ ಭ್ರಮಿಸಿಯುಂ, ಓರೊರ್ಮೆ ಮೃದುಳಕದಳೀವನವಳಯಿತೋತ್ತುಂಗಮಣಿಶೃಂಗಸಂಗತಕೃತಕಕುತ್ಕೀಲಂಗಳೊಳ್ ಕಿನ್ನರಮಿಥುನದಂತೆ ದಿಗನಲೋಕನವಿನೋದದಿಂ ರಮಿಯಿಸಿಯುಂ, ಓರೊರ್ಮೆ ರಾಜದ್ರಜತಕೈಲಶಂಕಾಕಾಶಪ್ರಾಂಶುಸೌಧಮೂರ್ಧಂಗಳೊಳ್ ಚಕೋರಮಿಥುನದಂತೆ ಚಾರುಚಂದ್ರಿಕಾಸೇವನೆಯಂ ಸಂಭಾವಿಸಿಯುಂ, ಓರೊರ್ಮೆ ಸಮುನ್ನತಶಾತಕುಂಭಸ್ತಂಭಸಂಭೃತಾಂದೋಳಲೇಖನವಿಳಾಸಮಿಷದಿಂ ವಿದ್ಯಾಧರಮಿಥುನದಂತಾಕಾಶಸಂಚಾರಮಂ ವಿಸ್ತಾರಿಸಿಯುಮಿಂತು ವಿವಿಧವಿನೋದಯಾನಪಾತ್ರೋತ್ತಾರಿತಾನೇಕವತ್ಸರಸರಿತ್ಸಂದೋಹರಾಗಿರ್ಪ ನವೊಂದುದಿವಸಮಾಶ್ರೀಕಾಂತಾಮಹಾದೇವಿಗೆ ದೇವಪೂಜಾವಸಾನದೊಳ್ ಧರ್ಮಕಥಾಪ್ರಸಂಗದಿನಾಹಾರದಾನಮಾಹಾತ್ಮ್ಯಪ್ರಸ್ತುತಮಾಗೆ ಸುಶ್ರುತನೆಂಬ ಪುರೋಹಿತನಿಂತೆಂದಂ:—

ಉಪಚಿತವಿಧಿದಾತೃದ್ರ ।
ವ್ಯಪಾತ್ರಫಲಭೇದದಿಂದಮಯ್ದುತೆಱಂ ಭಾ ॥
ವಿಪ್ರೋಡನ್ನದಾನಮುಮಱೊಳ್ ।
ಪ್ರಸಂಚಿಸಿಪೆಡೆ ವಿಧಿಯುಮೊಂದೆ ನವವಿಧಮುಕ್ತಂ ॥ ॥೯೯॥

ಅದೆಂತೆಂದೊಡೆ:—

ಇದಿಗೊಂಡುಚ್ಚದೊಳಿರಿಸುವ ।
ಪದಮುಗಮಂ ತೊಳೆವ ಪೂಜೆವೆ ಸಂಗವಚೋ ।
ಹೃದಯಾನ್ನಶುದ್ಧಿಯಂ ನೆಱೆ ।
ಪದವಡಿಸುವ ಭೇದದಿಂದೆ ಪರಮಾಗಮದೊಳ್ ॥ ॥೩೦॥

ಭಕ್ತಿಜ್ಞಾನಶ್ರದ್ಧಾ ।
ಶಕ್ತಿತಿತಿಕ್ಷಾದಯಾಮಹಾದಾರ್ಯಸಮಾ ॥
ಯುಕ್ತಂ ಸಪ್ತಗುಣಂ ಜೈ ।
ನೋಕ್ತಿಯಿನಾ ದಾತೃವೆನಿಪ ಭವ್ಯಂಗಕ್ಕುಂ ॥ ॥೩೧॥

ಮತ್ತಂ ದ್ರವ್ಯಮೆಂಬುದು ಯೋಗ್ಯಾಯೋಗ್ಯಭೇದದಿಂದಿರ್ತೆಱಂ. ಅಲ್ಲಿ ಯೋಗ್ಯಮಾಹಾರಾದಿಕಮಯೋಗ್ಯಂ ಕನಕಾದಿಕಂ. ಅಲ್ಲದೆಯುಂ;

ಉತ್ತಮಪಾತ್ರಂ ಸಕಲನಿ ।
ವೃತ್ತಂ ವಿರತಾವಿರತನೆ ಮಧ್ಯಮಪಾತ್ರಂ ॥
ಮತ್ತಮಸಂಯತಸಮ್ಯ ।
ಗ್ವೃತ್ತಮನಂ ತಾಂ ಜಘನ್ಯಪಾತ್ರ ಮೆನಿಕ್ಕುಂ ॥ ॥೩೨॥

ಫಲಂ ಸ್ವರ್ಗಭೋಗಭೂಮಿಸಂಭವಂ. ಅಲ್ಲಿ ಸ್ವರ್ಗಮೆಂಬಿನಂ ಸೌಧಮೇರ್ಶಾನಾದಿಗಳ ವರವಿಮಾನಂಗಳಿಂದ್ರಕಶ್ರೇಣಿಬದ್ಧಪ್ರಕೀರ್ಣಕಂಗಳೆಂದು ಮೂವೆಕುಂ. ಅಲ್ಲಿಯುಪಪಾದಭವನದಮಳಾಸನಿಸೆಯೊಳ್ ಸಹಜಯೌವನರುಂ ವಿಭೂಷಿತಮಕುಟಕಟಕಮಾಲ್ಯಾಂಬರಾದಿಭೂಷಣರಾಗಿ ಪುಟ್ಟುವರುರ್ಗೆ ದೇವಪ್ರಾಣಾಯುಷ್ಯಪ್ರವಿಚಾರೋಚ್ಛ್ವಾಸನಿಶ್ವಾಸಲೇಶ್ಯಭೇದಂಗಳುಮಕ್ಕುಂ. ಭೋಗಭೂಮಿಗಳ್ ಜಘನ್ಯಮಧ್ಯಮೋತ್ತಮನಾಮಯುತಂಗಳೆದ್ವಿಧ್ವಿದ್ವೀಪದ ಹೈಮವತಹೈರಣ್ಯವತಂಗಳೆಲ್ಲಂ ಜಘನ್ಯಭೋಗಭೂಮಿಗಳಕ್ಕುಂ; ಹರಿವರ್ಷರಮ್ಯಕಂಗಳೆಲ್ಲಂ ಮಧ್ಯಮಭೋಗಭೂಮಿಯಕ್ಕುಂ; ದೇವೋತ್ತರಕುರುಗಳೆಲ್ಲಂ ಉತ್ತಮಭೋಗಭೂಮಿಗಳಕ್ಕುಂ. ಅಲ್ಲಿ—

ಇಳೆ ಚಂಚತ್ಪಂಚರತ್ನಾಂಚಿತಮುಮಳಸರಿತ್ಸಂಕುಳಂ ಕೈರವಾ ।
ಕುಳಮುದ್ಯಾನಂ ಕನತ್ಕೋಕಿಳರವಮುಖರಂ ಶೈತ್ಯಸಾರಭ್ಯಮಾಂದ್ಯಾ ॥
ಕಳಿತಂ ವಾತಂ ನಿಶಾಹಶ್ಶಿಶಿರಜಳಧರಗ್ರೀಷ್ಮಕಾಲಂ ವಿಹೀನಂ ।
ಸಳಿಳಂ ಚಂದ್ರದ್ರವಾಭಂ ತರುಣತೃಣಗಣಂ ಮುಪ್ಪಿವಮಾತ್ರಂ ಸುಪತ್ರಂ॥

ಮತ್ತಮಲ್ಲಿ,

ವಸನಾಂಗಾತೋದ್ಯಾಂಗ ।
ಪ್ರಸವಾಂಗಜ್ಯೋತಿರಂಗದೀಪಾಂಗಾನ್ನಾಂ ॥
ಗಸುರಾಂಗಭಾಜನಾಂಗಾ ।
ವಸಥಾಂಗವಿಭೂಷಣಾಂಗದಶಕಲ್ಪಕುಜಂ ॥ ॥೩೪॥

ಸೊಗಯಿಸುವುವಲ್ಲದೆಯುಂ—

ಹುಸಿ ಹಸಿವಾಮೆಯುಮಾಯಿಲ ।
ಮುಸುರಾಹಿಕ್ರೂರಸತ್ವಬಾಧೆಗಳಿವು ವ ॥
ರ್ತಿಸವೆನೆ ಭೋಗಕ್ಷಿತಿಗಳೆ ।
ನಿಸದಂ ಸಗ್ಗಕ್ಕಮಗ್ಗಳಂ ತಾಮುಲ್ತೇ ॥ ॥೩೫॥

ಪಿರಿಯಂ ವಿವೇಕದಿಂ ಮೆಯ್ ।
ಸಿರಿಯಿಂದಾಯುಷ್ಯದಿಂ ವಿಳಾಸೋದಯದಿಂ ॥
ಪರಿಣತಿಯಿಂ ತನ್ನೊಳ್ ಸರಿ ।
ದೊರೆ ಸುರರೇಂ ಭೋಗಭೂತಲಂ ಸುಖಮಯಮೋ ॥

ಆ ಭೋಗಭೂಮಿಯೊಳ್ ಪಾತ್ರತ್ರಿತಯದಾನಫಲಂಗಳಿಂದೇಕದ್ವಿತ್ರಿ ಪಲ್ಯೋಪಮಾಯುಷ್ಯರುಮೇಕದ್ವಿತ್ರಿದಿನಸಾಂತರಿತಾಮಳಕಾಕ್ಷಬದರಮಾತ್ರಾಹಾರರುಂ ವ್ಯಪಗತನೀಹಾರರುಂ ದ್ವಿಚತುಷ್ಪಟ್ಟಿಪಸ್ರಚಾಪೋತ್ಸೇಧರುಂನಿಷ್ಕಷಾಯರುಮಾಯೂರ್ಭಿಧಾನರುಮಾಗಿ ದಂಪತಿಸ್ವರೂಪದಿಂ ಪುಟ್ಟಿ,

ನಿಸದಮೆನಿಪ್ಪ ಪುಟ್ಟಿಸೆವ ಜನ್ವನದಿಂದೆ ಮನಕ್ಕೆ ನಿಚ್ಚಲುಂ ।
ಪೊಸತೆನಿಸಿರ್ಪ ರೂಪೊಲನನೋಸರಿಸಲ್ಕಣಮೀಯದಿರ್ಪಿನಂ ॥
ಪಸರಿಪ ಕಾಮರಾಗರಸವಾರಿಧಿಯೊಳ್ ನಲವಿಂದೆ ದಂಪತಿ ।
ಪ್ರಸರಮೆ ನಾಡೆ ಮೂಡಿ ಮುಖಿಗಾಡುವುದೀಡಿತಭೋಗಭೂಮಿಯೊಳ್ ॥

ಮತ್ತಂ

ಭವನಾಂಗಂ ಕಲ್ಪಭೂಜಂ ಸವಿದ ಬಹುವಿಧೋತ್ತುಂಗಹರ್ಮ್ಯಾವಳಿಗ । ಭವ್ಯವಿಲಾಸಾವಾಸದೊಳ್ ಬಾಳ್ಕೊದಲಿದು ಬಸನಕ್ಕೆಂಬಿನಂ ಚೆಲ್ವುವೆತ್ತೊ ॥ ಪ್ರವ ಶಯ್ಯೋದ್ದೇಶದೊಳ್ ಪೆರ್ಚಿದ ಸಮರತಲೀಲಾವಿನೋದಂಗಳಿಂದು । ತ್ಸವಮಂ ತಾಳ್ದುತ್ತುಮಿಪ್ರ್ಜ್ಜಗಮೆ ಬವಸೆ ತದ್ಭೂಮಿಜಗರ್ಗ್ಗಳ್ಳಮೆಂದುಂ ॥ ॥೩೭॥

ಅಂತನಲ್ಪಕಂದರ್ಪಸುಖಸಮಾಸ್ವಾದನತತ್ಪರತೆಯಿಂದಿರ್ದು ನವಮಾಸಾವಶೇಷಾಯುಷ್ಯರಾಗಿ ನೆಲಸಿರ್ದ ಗರ್ಭಂ ತದವಸಾನದೊಳ್ ಪುಟ್ಟಲೊಡಂ ಪಿತೃದ್ವಂದ್ವಂ ಕ್ಷುತಜೃಂಭಣವ್ಯಾಜದಿಂ ಪರಾಸುಗಳಕ್ಕುಮೆಂದು ಪೇಳೆ ಕೇಳ್ದು ಸುಶ್ರುತನಂ ತಾಂಬೂಲದಾನಪುರಸ್ಸರಂ ವಿಸರ್ಜಿಸಿ,

ಗಟಿಗಟಿಸಮೃತವಿಷಂಗಳ ।
ಮಟೆಯೊಮ್ಮೆಯೆ ಕರೆದ ತೆಱದೆ ತನುಜೋದಯಮುಂ ॥
ಬಟಿಯೊಳೆ ಜನನೀಜನಕ ।
ಗರ್ಟಿವ್ರಂ ಸಮಸಿಸಿಸುದಿಂತಿದೇಂ ವಿಸ್ಮಯಮೋ ॥ ॥೩೯॥

ಎಂದಾತ್ಮಗತದೊಳೆ ಬಗೆಯುತಿರ್ದನಂತರಂ ಕೆಲಡೊಳಿರ್ದ ಕೆಳಭಾಷಿಣಿಯೆಂಬ ಕೆಳದಿಯ ಮೊಗಮಂ ನೋಡಿ,

ಫಳಪಾಕಾಂತತೆಯೋಷಧಿ ।
ಗಳ ತೆಱದಿಂದೆಯ್ದಿ ಸಮಸಿಸಿತ್ತಕ್ಕಟಿ ಸಂ ॥
ಗಳಿಸದೆ ತನಯನ ಲೀಲಾ ।
ವಿಳೋಕನಪ್ರಭವಸೌಖ್ಯಮಾದಂಪತಿಯೊಳ್ ॥ ॥೪೦॥

ಅವರೊಳ್ ಸಂಸಾರಸೌಖ್ಯಕ್ಕಿದುವೆ ಮೊದಲೆನಿಪ್ಪಾತ್ಮಜಾಲಿಂಗನಂ ಪೊರ್ದುವುದಲ್ತೆಂದಂದದೆಂದುಂ ತನದ ತರುಣಿಮಂ ಬೇಱಿಪ್ಪದಂ ಮಾಳ್ಪಿ ಕಲ್ಪದ್ರುವಿತಾನಂ ವೀತವಿಘ್ನಾವಯತೆಯುಚಿತಪಲ್ಯೋಪಮಂ ಜೀವನಂ ಪ್ರೋಮವಿಭಾಗವ್ಯಾಪ್ತಿಯಪ್ಪನ್ನತತನುವಿನಿತುಂ ನಿಶ್ಚಯಂ ವ್ಯರ್ಥಮಲ್ತೇ ॥

ಬೇಱಕ್ಕೆ ತನದ ಕೂಟಂ ।
ಬೇಱಕ್ಕೆ ತನೂಜರಾತನೂಜರೊಳಂ ನು ॥

ದ್ದಾಟಂ ಫಲಮದೆ ತಮ್ಮೊಳ್ ।
ನಾಟದು ಗಡ ಪೆಱವು ಸುಖಲವಂಗಳೊಳೇನೋ ॥ ॥೪೦॥

ಸುತರಿಲ್ಲದ ಸಿರಿ ತುಹಿನೋ ।
ಗ್ಗತಿಯಿಲ್ಲದ ವಾರಿ ಬೇಟಮಿಲ್ಲದ ಕೂಟಂ ॥
ವ್ರತಮಿಲ್ಲದಱಿವು ಮೃದುಪದ ।
ಗತಿಯಿಲ್ಲದ ಲಾಸ್ಯಮಿಂತದೇಂ ಮೆಱೆದಪುದೇ ॥ ॥೪೩॥

ಅದುಕಾರಣದಿಂ,

ಚುಂಬಿಸಿ ಲೋಳೆವಾಯ್ದೆಱೆಯನೀಕ್ಷಿಸಿ ಮುಕ್ಕಳಮುದ್ದುಗೆಯ್ತುದೊ।
ಳ್ಪಂ ಬಿಡದಪ್ಪಿ ಕೋಮಲತರಾಂಗಮನಾಲಿಸಿ ನುಣ್ದೊಡೆಳ್ ಪೂದ ॥
ಬ್ದಂಬಿನಿವಾತನಟ್ಟಿಱೊಳೆ ವಾಸಿಸಿ ನೆತ್ತಿಯನಿಂತು ಸೌಖ್ಯಮಂ ।
ತುಂಬಿ ನಿಜಾಖಿಲೇಂದ್ರಿಯದೊಳಂ ತಣಿವೆಯ್ದುವರೇಂ ಕೃತಾರ್ಥರೋ ॥

ಎಂದು ಪುತ್ರದೋಹಳಾಕುಲೀಕೃತಮನೋವೃತ್ತಿಯಾಗಿ ಮತ್ತಮಿಂ ತೆಂದಳ್—

ಮಱೆಯದೆ ಬೆಚ್ಚನೀರೆಱೆದು ತೊಟ್ಟಿಲೊಳಿಟ್ಟು ಬಸಿರ್ಗೆ ಚೇನದೊ।
ರ್ಕೆಱಗನೆ ತಂದು ಸೂನುಗೊಲವಿಂ ಸೊಡವರ್ಕ್ಕಿನ ಬೊಟ್ಟನಿಟ್ಟು ತೂ ॥
ಪಿಱಿದು ಪಲರ್ಮೆಯುಂ ಪರಸಿ ಸೋಗಿಲೊಳಿಟ್ಟುರೆ ನಿಚ್ಚನಿಚ್ಚಮು ।
ಟ್ಟಿಱಿನೊಳೆ ಮೆಚ್ಚನಿತ್ತು ತನಿವೆಚ್ಚುವ ಸೈಪೆನಗೆಂದು ಸಾರ್ಗುವೋ ॥

ಅರಸಂ ಕರತಳತಾಡನ ।
ಪುರಸ್ಸರಂ ದೇವ ಬನ್ನಿಮೆಂದೊಲವಿಂದೊ ॥
ಡ್ಡಿರೆ ಕೈಯನೊಲ್ಲದೆನ್ನಯ ।
ಕೊರಲಂ ತಕ್ಕೈಪ ತನಯನೆಂದಾಡಪನೋ ॥ ॥೪೬॥

ಎತ್ತಿದೊಡೆನ್ನಂಗದೊಳೊಗೆ ।
ದೆತ್ತುವ ಪುಳಕಕ್ಕೆ ಸೌಕುಮಾರ್ಯದಿನೇವೈ ॥
ಸುತ್ತುಂ ಕೈಯಿಂದಿಱಿಯ ।
ಲ್ಕತ್ತವಳಿಪ ಸುತನ ಪರಿಯನೆಂದೀಕ್ಷಿಪೆನೋ ॥ ॥೪೭॥

ಮಾಂಗಾಯ್ ಕದಪಂ ಚುಂಬಿಸೆ ।
ಪೊಂಗವಡಿಕೆ ನೊಸಲೊಳೆಲೆಯೆ ಗೆಜ್ಜೆಗಳುಲಿಪಂ ॥
ಸಂಗಳಿಸೆ ಚಲನದೊಳ್ ಭವ ।
ನಾಂಗಣದೊಳ್ ಕಂದನೆಂದು ದಟ್ಟಿಡಿಯಿಡುವಂ ॥ ॥೪೮॥

ಅಂಜನಕರ್ಬುರಕಾಯಂ ।
ರಂಜಿತಕರಪ್ರಷ್ಕರಂ ರದದ್ವಿತಯಯುತಂ ॥
ಗುಂಜತ್ಪದಾಂದುಕಂ ನವ ।
ಕುಂಜರಮೆನೆ ತನಯನೆಂದು ಕಣ್ಬೊಲನಪ್ಪಂ ॥ ॥೪೯॥

ನಂದನನುತ್ಸಂಗದೊಳಿ ।
ರ್ದೊಂದ್ಯೆಬೆರಡೊಂಬತೆಂದು ತೊದಲೆಸೆವಿನವೋ ॥
ರೊಂದಸೆ ಕುಡುವೆರಲಿಂದಮ ।
ದೆಂದೆಣಿಸುಗುಮೆನ್ನ ಕೊರಲ ಹಾರದ ಮುತ್ತಂ ॥ ॥೫೦॥

ಎಂದು ಭಾವೆ ಭಾವಿತನೂಭವಾನುಕ್ರಮಪ್ರಭವಭಾವಂಗಳಂ ಭಾವಿಸಿ ಪಲುಂಬಿ ಪಂಬಲಿಸಿಯುಂ, ಅಪರಿಪೂರ್ಣಮನೋರಥೆಯುಮಸ್ಪಷ್ಟಮಿಂ ಸಮಸ್ತಸನಾಭಿಸಂಯುಕ್ತೆಯಾಗಿಯುಮೇಕಾಕಿನಿಯಂತೆಯುಂ, ರಾಜಸದನಸಂಸ್ಥೆಯಾಗಿಯುಂ ಶೂನ್ಯಾರಣ್ಯಸಂಸ್ಥೆಯಂತೆಯುಂ, ಸಾಮ್ರಾಜ್ಯಲೀಲಾಸಮೇತೆಯಾಗಿಯುಂ ವಿಪನ್ನಿಪೀಡಿತೆಯಂತೆಯುಂ, ಪತಿಪ್ರಸಾದಭೂಮಿಯಾಗಿಯುಂ ಅನಾಥೆಯಂತೆಯುಂ, ಸನ್ನಿಹಿತದೈವೆಯಾಗಿಯುಮದೈವೆಯಂತೆಯುಂ, ಕುಮುದದಳದೀರ್ಘಲೋಚನೆಯಾಗಿಯುಮಂಧೆಯಂತೆಯುಂ, ಪವಿತ್ರಪಾರ್ಥಿವಕುಲಪ್ರಸೂತೆಯಾಗಿಯುಂ ಅಜನ್ಮೆಯಂತೆಯುಂ, ತನ್ನಂ ಬಗೆದುಬ್ಬಿಗದಿನಲ್ಲಿಂ ತಳದುರ್ ನಿಜನಿವಾಸಕ್ಕೆ ವಂದು ಮುಂದಣ ಮೌಕ್ತಿಕಮಂಡಪದ ನಡುವಣ ಮರಕತಪರ್ಯಂಕದೊಳವಿರಳಾಶ್ರುಬಿಂದುಸಂದೋಹವಂತುರಿತಪಕ್ಷ್ಮವಾಲಾಲುಳಿತನೇತ್ರೆಯುಂ, ಕಪೋಲಮೂಲಕೀಲಿತವಾಮಕರಶತಪತ್ರೆಯುಂ, ಆಕ್ರಾಂತಚಿಂತಾಭರಸ್ತಿಮಿತಗಾತ್ರೆಯುಂ, ಆಕ್ರಾಸಸಪರಾಂತಃಪುರವೃದ್ಧಾಂಗನಾನಿಷೇವ್ಯಮಾಣೆಯುಂ, ಮ್ಲಾನವದನಸಖೀಪ್ರಕರಪರಿಚಾರಿಕಾಪರಿಷ್ಕೃತೆಯುಂ, ದೂರದೂರೋಪವಿಷ್ಟ

ಮೂಕಮುಖಿಕುಬ್ಜವಾಮನಕಿರಾತವರ್ಷಧರಕಂಚುಕಿಪ್ರಪಂಚೆಯುನುಮಾಗಿ ಪಿನೆಗಂ,

ಪಲವು ವಿಧಂಗಳಿಂ ತುಱುಗಿ ಮೆಟ್ಟುವ ವಾರುಗದೊಂದು ಪಲ್ಗನ ।
ಕ್ಕಲುಗೆ ಕದಂಪಿನೊಳ್ ಕನಕಕುಂಡಲಮಡ್ಡತರಕ್ಕೆ ಪಂದು ನಿ ॥
ಶ್ಚಲಮೆನಿಪಂಪ್ರಿಯೊಂದೆಸೆಯೆ ಸನ್ನೆಯೆ ಸನ್ನೆಯನೊಂದುಮಾಡೆ ಭೂ ।
ತಲಪತಿ ಬಂದನುಚ್ಛ್ರಿತಸಿತಾತಪವಾರಣಪ್ರಸ್ಫುರಾಂಬರಂ ॥ ॥೫೧॥

ಅಂತು ವೈಹಾಳಯಿಂದರಸಿಯ ಮನೆಗೆ ಬಂದುಚ್ಛ್ರೈಶ್ರವದಿನವನಿಗವ ತರಿಸುವ ಮಹೇಂದ್ರನಂತೆ ತುಂಗತುರಂಗದಿಂದಮಿಳಿತಂದು ಅಂತಃಪುರಪ್ರ ವೇಶೋಚಿತಪರಿಜನಂ ಜನಪನೊಳಪೊಕ್ಕು,

ಭೋಂಕನೆ ಕಂಡಿನಿವಿರಿದಾ ।
ತಂಕಮನರಸಿಯ ಮನಕ್ಕೆ ಪೊಡಿದರಾರಂ ॥
ಪುಂ ಕಾಣೆನಿನಿತನೆಂದಿರ್ದೆ* ।
ಶಂಕಿಸೆ ನವಸೇವಕಂಬೊಲೊಯ್ಯನೆ ಸಾರ್ದಂ ॥ ॥೫೨॥

ಅಂತೆಯ್ದಿಪಂದು ಪರ್ಯಂಕತಲದೊಳ್ ಕುಳ್ಳಿರ್ದು,

ಜಗತಿಪತಿ ಸನುಮುಖಂ ।
ಪ್ರಗನಯುನೆಯ ಮನದ ಬೇಪಮಂ ಪಚ್ಚುಗೊಳಲ್ ॥
ಬಗೆದಂತಾಕುಳಚಿತ್ತಂ ।
ಧೃಗೆಂಬುಕಂ ತೊಪೆದು ಮೆಲ್ಲನಂದಿಂತೆಂದಂ ॥ ॥೫೩॥

ಕರತಲಕಾಂತಿಯಿಂ ವದನಚಂದ್ರಮನೊಳ್ ನವಸಾಂಧ್ಯರಾಗಮಂ ।
ಸುರಿವ ನಿರಂಜನಾಶ್ರುಕಣದಿಂ ಕುಚದೊಳ್ ಪೊಸಮುತ್ತಿನಾರಮಂ ॥
ಸರಳತರೋಷ್ಣನಿಶ್ವಸಿತಮಾರುತನಿಂದೆ ನಿಜೋತ್ತರೀಯದೊಳ್ ।
ತರಳತೆಯಂ ನಿಯೋಜಿಪ ನೆಗಳ್ತೆಗೆ ಕಾರಣಮೇನೊ ಕಾಮಿನೀ ॥ ॥೫೪॥

ಅದಲ್ಲದೆಯುಂ,

ಚರಣಾಂಗುಳಿಗಳ್ ಮುಂಗಿನೊ ।
ಪ್ರರುಂಗಳಿಂದೆಸೆದು ಕೋಲುತಿರ್ದಪುವಿಲ್ಲೇ ॥

ಕರಸಿ ಪರಾಗಾರುಣಿಷ ।
ಟ್ಟಿರಣಂಗೆಳ ನೆಲಸದಬ್ಜದೆಸೆವೆಸಳ್ಗಳವ್ರೋಲ್ ॥ ॥೫೫॥

ಮನಸಿಜಫಣಿವಲ್ಮೀಕಮಿ ।
ದೆನಿಪ ನಿತಂಬದೊಳುದಗ್ರಮಣಿರಶನಾರ ॥
ಶ್ಮಿನಿಕರಸುರಚಾಪಂ ಪೊ ।
ಣ್ಮಿ ನಿಮಿರ್ಕದಿದೇಕೆ ಮನ್ಮನಶ್ಶಿಖಿಗೊಲವಂ ॥ ॥೫೬॥

ಕಾಮನ ಕೃತಕಾದ್ರಿಗಳೆನಿ ।
ಪೀವೊಲೆಗಳ ಮೇಲೆ ವಿಮಲನಿರ್ಝರಪೂರೋ ॥
ದ್ದಾಮತೆಯಂ ನವಮೌಕ್ತಿಕ ।
ದಾಮದಿನೊಡರಿಸದ ತೆಱನಿದೇನಿಂದುಮುಖೀ ॥ ॥೫೭॥

ಸರಸೀರುಹನಾಳಮನಾ ।
ವರಿಸಿದ ಶೈವಾಲಮೆನೆ ಪರಿದ್ರತ್ನಮಯ ॥
ಸ್ಫುರಿತಕಟಕಂ ಪ್ರಕೋಷ್ಠದೊ ।
ಳರುಣಾಧರೆ ತೊಳಗಿ ಬೆಳಗದಿರ್ಪುದಿದೇನೋ ॥ ॥೫೮॥

ಎರಡುಂ ಕರ್ಣದೊಳಂ ಪೊಳೆ ।
ವ ರತ್ನಮಯಪತ್ರದಿಂದಮಿನಬಿಂಬಯುಗಾಂ ॥
ತರಿತಮೆನಿಪಿಂದುಬಿಂಬದ ।
ಪರಿಜಂ ಪರಿಭವಿಸದೇಕೆ ನಿನ್ನಯ ವದನಂ ॥ ॥೫೯॥

ತರದೆ ಪೆಱೆ ತನ್ನ ಕಱೆಯಂ ।
ಶಿರದೊಳ್ ತಾಳ್ದರ್ದಿನಿಸೆ ನಿಜನಿಟಲಂ ತ ॥
ಳ್ತರುಳಿಗುರುಳ್ಗಳನಾತ್ಮೋ ।
ಪರಿದೇಶದೊಳಾಂತುದಿಲ್ಲದೇಕಾರಣದಿಂ ॥ ॥೬೦॥

ಮದನಪರಿವಾದಿನೀನಾ ।
ದದಿನಗ್ಗಳಮೆನಿಪ ನಿನ್ನ ನುಣ್ಣುಡಿ ಪೊಱಪೊ ॥
ಣ್ಮದೊಡೇಕಾಯತ್ತಮದಾ ।
ಗದೆ ಈಳರವಲಕ್ಷ್ಮಿ ಸಮುದಕೋಕಿಲಕುಲದೊಳ್ ॥ ॥೬೧॥

ಆಮ್ಮಱಿದೊಮ್ಮೆಯುಂ ನಿನಗೆಯುಖಿ ಯಮಂ ನೆಗೆಱೆಂ ಮನಕ್ಕಿನಿ ।
ತ್ತುಮ್ಮಱಿವಾದುದಾರಿನಿದು ದೇವಿ ನಿವೇದಿಸ್ಪುದೆಂದು ಜೀವಿತೇ ॥
ಶಮ್ಮಿಗೆ ತನ್ನನಾಗ್ರಹಿಸಿ ಸೊಲ್ಲಿಸಲೊಲ್ಲದೆ ನಾಣ್ಚಿ ನೋಡಿವಳ್ ।
ತಾಮ್ಮನದನ್ನಳಪ್ಪ ಕಳಭಾಷಿಣಿಯಂ ನಯನತ್ರಿಭಾಗದಿಂ ॥೬೦॥

ಅಂತಶ್ರುಮಿಶ್ರಕಟಾಕ್ಷದಿಂದೀಕ್ಷಿಸುವುದುಮೆಲ್ಲಮಾಕೆಯ ಮನಸುನಱಿದು ಪುತ್ರದೋಹಳಕಾರಣಮಂ ಧಾರಿಣೀಪತಿಗೆ ಸವಿಸ್ತರಂ ಬಿನ್ನವಿಸಿ ಕೇಳ್ದರಸನುಂ ತತ್ಕ್ಷಣೋಪಗತತನೂಭವಾಲಾಭಚಿಂತಾಪಾರತಂತ್ರತೆಯಿಂ ಮ್ಲಾನಮನಸನುಂ ದೀನಾನನನುಮಾಗಿ,

॥ ಪೃಥ್ವೀವೃತ್ತಂ ॥

ಸರೋಜಸಖನಿಲ್ಲದಂಬರಮನಾದಮುದ್ಯೋತಿಸಲ್ ।
ಸರೋಜರಿಪುವಂಬೆಯಿಲ್ಲದ ಸರೋವರೋದ್ವೇಶಮಂ ॥
ಸರೋರುಹಮಿ ಭೂಷಿಸಲ್ಪೆರೆಗುಮನ್ಯನಾವಂ ದಿಟಂ ।
ತರಳ್ಳಗುಮುಪತ್ಯಮಿಲ್ಲದ ಕುಲಕ್ಕೆ ಸಂಪತ್ತಿಯಂ ॥ ॥೬೩॥

ಎಂದುತನ್ನೊಳ್ಬಗೆದು ಬಱಿಯುಮರಸನರಸಿಯಂಸಂತೈಸಲೆಂದಿಂತೆಂದಂ:—

ಇದು ದೈವಸಾಧ್ಯಮೆನಿಸಿ ।
ದುರ್ದಱೊಳ್ ನಿನಗಿನಿತು ದೇವಿ ಬಗೆವೊಡೆಯುಕ್ತಂ ॥
ಹೃದಯಶರೀರೇಂದ್ರಿಯಶೋ ।
ಷದಾಯಕಂ ತಾನೆನಿಪ್ಪ ಕೋಕೋದ್ರೇಕಂ ॥ ॥೬೪॥

ಈತೆಱದಿಂದೆ ನೀನಿರೆ ಸಮಂತೆನಗಂ ದೊರೆಕೊಳ್ಗುಮಲ್ತೆ ಮಱಿ ।
ಖಾತಿಶಯಂ ಬಱಿಕ್ಕದುವೆ ಮಾಱಿಕ್ಕುಮೆಶೇಷಜನಕ್ಕಮೆಯ್ದೆ ಚಿಂ ॥
ತಾತರಳತ್ವಮಂ ತೊಱೆವುದಂತದಱಿಂ ತರಳಾಯತಾಕ್ಷಿ ನಿ ।
ರ್ಹೇತುಕಮಪ್ಪ ಖೇದಮನಿದಲ್ತು ಕೃಪಾವತಿಯಗೆಂ ಬೇಪ್ಪಿತಂ ॥೬೫॥

ಪರಿಣಾಮವಶದೆ ಜನ್ಮಾಂ ।
ತರದೊಳ್ ಶುಭಮಶುಭಮೆಂಬ ಕರ್ಮಂಗಳೊಳಾರ್ ॥
ದೊರೆಕೊಳಿಸಿದಪಾವುದನಾ ।
ದೊರೆಯುದೆ ಫಲಮಕ್ಕುಮವಗೆಂ ಪೆಱತಾವಪುದೇ ॥ ॥೬೬॥

ಅವಱಿನಿಷ್ಟಾನಿಷ್ಟಂಗಳಾತ್ಮಶುಭಾಶುಭಕರ್ಮಾಯತ್ತಂಗಳದಱೊಳ್ ಮನೋರಾಗಕ್ಕಂ ಹೃದ್ರೋಗಕ್ಕವುವಕಾಶಮಿಲ್ಲ. ಅದಲ್ಲದೆಯುಂ

ಅರಯೆ ದುರ್ಘಟವೆನ್ನ ಮಃ
ಕೋರಥವೆಂದಲಸಗಮನೆ ಮನದೊಳ್ ಪಿರಿದುಂ ॥
ಪೂರಿಸಲಱಿಕೆ ಪಿಡಿ ಕೈ ।
ವಾರಿಸಿದೊಡೆ ತೀರದಿರ್ಪುದಾವುದುಮುಂಟೇ ॥ ॥೬೩॥

ಅಂತು ಮಲ್ಲದೆಯುಂ,

ವಿಷ್ಟಪಮೊರ್ವೆಯುಂ ತನುಗೆ ಹಸ್ತತಲಾಮಲಕಂಬೊಲೆಯ್ದುವಿ ।
ಸ್ಪಷ್ಟಮೆನಿಪ್ಪ ಬೋಧಯುತರಿಂ ತಿಳಿದಿಲ್ಲಿಗೆ ತಕ್ಕುದೇನುಮುಂ ॥
ಚೇಷ್ಟಿಪನುನ್ನೆಗಂ ಮನದೊಳುಮ್ಮಱಿಸಲ್ಕಣಮಾಗದೆಂದು ವಾ ॥ ॥೬೪॥
ಗ್ವೃಷ್ಟಿಯಿನಾಲತಾಂಗಿಯ ಮನೋಲತೆಗಿತ್ತನಪೂರ್ವತುಷ್ಟಿಯಂ ॥

ಅಂತುಮೆಂತಾನುಮಾಕಾಂತೆಯಂ ಸಂತೈಸಿ ಕೆಲವು ದಿವಸಂ ಸಲುತ್ತುಮಿರೆಯಿರೆ,

ಪಾರಸನಾಂತರಾಳದೊಳಗೊರ್ವೆ ವಸಂತವಿಲಾಸಕೌತುಕ ।
ಪ್ರೇರಿತಮಾನಸಂ ತೊಳಗುತಿರ್ಪ ಮಿಯತ್ತಳದಿಂ ತಮಾಲಧಾ ॥
ತ್ರೀರುಹಮೂಲಭೂತಲಕೆ ವರ್ಪನನಾಗಳನಂತಸಂಜ್ಞನಂ ।
ಚಾರಣಯೋಗಿಯಂ ನೃಪತಿ ಕಂಡನಖಂಡಸುಖೈಕಭಾಗಿಯಂ ॥ ॥೬೯॥

ಕಂಡೆಯ್ದೆವ್ರೋಗಿ,

ಅತುಳತಪಶ್ಶ್ರೀಕರನನನು ।
ನ್ನತರಾಜ್ಯಶ್ರೀಕನವಧಿದರ್ಶನನಂ ಸ ॥
ನ್ನುತಶುದ್ಧದರ್ಶನಂ ತ ।
ದ್ಪ್ರತಿಪತಿಯಂ ನೃಪತಿ ಭಕ್ತಿಯಿಂ ವಂದಿಸಿದಂ ॥ ॥೭೦॥

ಆಗಳ್

ಮಿಸಿಸಿದಪಂ ಕರುಣಾಮೃತ ।
ವಿಸರದಿನಮನಿಪನನೆಂಬವ್ರೋಲ್ ಕಾಯೋತ್ಪ ॥
ಗ್ರಸಮಾಪ್ತಿಯೊಳೀಕ್ಷಣರುಚಿ ।
ಪಸರಿಸಿ ಮುನಿ ನೋಡಿ ಪರಸಿದಂ ಮೃದುರವದಿಂ ॥ ॥೭೧॥

ಅಂತು ಪರಸಿ ಕುಳ್ಳಿರೆ, ತನ್ನ ನೀಂದ್ರಪಾದಪಾರ್ಶ್ವದೊಳ್ ಮುಕುಳಿತ ಕರಸರೋಜನುಂ ಪ್ರಶ್ರಯಾವನತಶಿರಸ್ಸರೋಜನುಮಾಗಿ ಕುಳ್ಳಿರ್ದ

ಅರಸಂ ಮುನಿಪತಿಪಾದಾಂ ।
ಬುರುಹಕ್ಕತಿವಿಶದದಶನರುಚಿನಿಚಯಮಪರಂ ॥
ಪರೆಯಿಂ ಚಂದನಚರ್ಚಾ ।
ವಿಲಿಪನೆಯಂ ಮಾಳ್ಪಿ ತೆಱದಿನಂದಿಂತೆಂದಂ ॥ ॥೭೦॥

ಅಜನಂ ಪೆರ್ಚಿಸುವಱಿವಂ ।
ನೆಱಿಪ್ರವ ದುಃಖಮಾನದಿಪ್ರಾರ್ಪುತ್ಸವಮಂ ಕ ॥
ಸ್ಪೈಱಿಯಿಪ ನಿಮ್ಮಯ ದರ್ಶನ ।
ಕಱಿಟೆಂ ಕಾರಣಮನೆನ್ನ ಪುಣ್ಯಮೆ ಪೆಱಿತೇಂ ॥ ॥೭೨॥

ಭಾವಿಭವದ್ಭೂತಮೆನಿ ।
ಪ್ಪವಸ್ತುಗೆ ನೀಂ ಪ್ರಮಾಣಮಱಿಯಿಪುದದಱಿಂ ॥
ದೇವ ಭವಸ್ಥಿತಿಯಂ ಪರಿ ।
ಭಾವಿಸಿಯುಂ ವಿರತಿಭಾವಮೆನಗಾಗದುದೇಂ ॥ ॥೭೩॥

ಎನೆ ಮುನಿಪತಿ ತನ್ನಹಿಪತಿ ।
ಮನೋಗತಮನಱಿದು ಬಲಿಕಮಿಂತೆಂದಂ ನಂ ॥
ಧನಲಾಭವಾಂಛೆ ನಿನಗು ।
ಳ್ಳಿನೆಗಂ ಸಮನಿಸದಣಂ ವಿರತಿಪರಿಣಾಮಂ ॥ ॥೭೪॥

ಸುತಜನ್ಮಕ್ಕಂ ಪಿರಿದುಂ ।
ಪ್ರತಿಬೋಧಕಮೊಂದು ಪೂರ್ವಜನ್ಮಾಂತರಸಂ ॥
ಗತಮುಂಟದನುಸಿರ್ಪ್ಪೆಂ ।
ಕ್ಷಿತಿಪತಿ ಕೇಳ್ ಮುನ್ನೆ ನಿನ್ನ ವಧುವೀಪ್ರರದೊಳ್ ॥ ॥೭೬॥

ದೇವಾಂಗದನೆಂಬ ವಣಿಗ್ವರಂಗಂ ಆತನ ಕುಟುಂಬಿನಿ ಶ್ರೀನಿತಂಬಿನಿಗಂ ಸುನಂದೆಯೆಂಬ ಮಗಳಾಗಿ ಪುಟ್ಟಿ ನಿರ್ಧರಪ್ರಥಮಗರ್ಭಭಾರಪರಿಕ್ಲೇಶಾಯಾಸಿತಸ್ವಾಂತೆಯುಮಂಗವೈರಸ್ಯಾಕ್ರಾಂತೆಯುಮಾಗಿದ ವೈಶ್ಯಕಾಂತೆಯುಸೊರ್ವಳಂ ಕಂಡು,

ಮನದೊಳತಿಭೀತಿಯಂ ಭೋಂ ।
ಕನೆ ತಳೆದಾಭೀರುವಾವ ಜನ್ಮದೊಳಂ ಮ ॥
ತ್ತೆನಗೆ ನವವಯಸದೊಳ್ ತಾಂ ।
ಜನಿಯಿಸದಿರ್ಕೆಮ ವಿಷಾದಗರ್ಭಂ ಗರ್ಭಂ ॥ ॥೨೭॥

ಎಂದು ನಿಧಾನಂಗೆಯ್ದು ನಿಜಾಯುರ್ವ್ಯಾಪಾಯದೊಳಾಚರಿತಾಣುವ್ರತ ಫಲದಿಂದಂ

ಸೌಧರ್ಮದೊಳಮರತ್ವ ।
ಶ್ರೀಧಾರಿಣಿಯಾಗಿ ಮತ್ತೆ ಬಂದೀಗೆಳ್ ದು ॥
ರ್ಯೋಧನಸುತೆಯುಂ ಭವದವ ।
ರೋಧಜನಾಗ್ರಣಿಯುಮಾದಳೆದುಕಾರಣದಿಂ ॥ ॥೨೮॥

ಇನ್ನೆವರಂ ಸುತಜನ್ಮವಿ ।
ಪನ್ನತೆ ಭವದೀಯಸತಿಯೊಳಾಯ್ತುದಯಿಸಿದ ॥
ಪ್ಪಂ ನಿಜಕುಲದೀಪಕನಿ ।
ನ್ನುನ್ನತಮತಿ ರಿಪುಲತಾಲವಿತ್ರಂ ಪುತ್ರಂ ॥ ॥೨೯॥

ಆತನ ಭುಜಶಿಖರದೊಳೀ ।
ಭೂತಳವಂ ನಿಱಿಸಿ ಬಳಿಕ ನೀಂ ಜಿನದೀಕ್ಷಾ ॥
ಪೂತತನುವಾಗಿ ಮೋಕ್ಷಪು ।
ರಾತಿಥಿಯಾದಪ್ಪೆ ಘಾತ್ಯಘಾತಿಚ್ಯುತಿಯಿಂ ॥ ॥೩೦॥

ಎಂದಾಮಹರ್ಷಿ ಪೇಳೆ ಕೇಳ್ದು ನಿಜಚಿಂತಾಪಹಾರಿಚಂದನನಂದನನ ಭ್ಯುದಯಮವಶ್ಯಮೆಂದು ಆನಂದಮನೆಯ್ದಿ ಬೀಜ್ಕೊಂಡರಮನೆಗೆ ವಂದು ಅರಸಿಗಮಱಿಪಿ ಬಳಿಯಮಿರ್ವರುಂ ಮನದೆ ಸಮೀಹಿತಾವಾಪ್ತಿನಿಮಿತ್ತಂ ಸಕಲಜಗದೇಕಕಲ್ಪವೃಕ್ಷಮಪ್ಪ ಧರ್ಮಮನೊಡರ್ಚಲುದ್ಯುಕ್ತರಾಗಿ

ಪಗಲುಂ ಬೆಳ್ದಿಂಗಳಂ ಬೀಱುವ ಸೊದೆವೆಳಗಂ ತಾಳ್ದು ನೀಳ್ಪಿಂದಮೆತ್ತಂ।
ಮುಗಿಲಂ ಪೊತ್ತಿರ್ಪ ಕೂಟಪ್ರಕರದಿನಿವು ದಲ್ ಜೈನಜನ್ಮಾಭಿಷೇಕ ॥
ಸ್ಥಗಿತಕ್ಷೀರಾಂಬುಫೇನಪ್ರಕರದೆ ಕಡುವೆಳ್ಪೀಱುದಿಂದ್ರಾದ್ರಿಯೆಂಬ ।
ನ್ನೆಗವೊಪ್ಪಂಬೆತ್ತುವಂ ಮಾಡಿಸಿದರತುಲಚೈತ್ಯಂಗಳಂ ಭಕ್ತಿಯಿಂದಂ ॥

ಅದಲ್ಲದೆಯುಂ

ದಾನಕ್ಕುತ್ತಮಪಾತ್ರಸಂತತಿ ಮಹಾಪೂಜಾವಿಧಾನಕ್ಕೆ ಚೈ ।
ತ್ಯಾನೀಕಂ ನಿಜಶೀಲವರ್ತನೆಗೆ ಸಾಗಾರವ್ರತವ್ರಾತಮು ॥
ನ್ಯೂನೋಪಕ್ರಮಿತೋಪವಾಸವಿಸರಕ್ಕಾಪುಣ್ಯತಿಥ್ಯುತ್ಕರಂ ।
ತಾನೆಯ್ದಿತ್ತಣಮಿಲ್ಲದೇಂ ನಿರತರೋ ಭೂಕಾಂತನುಂ ಕಾಂತೆಯುಂ ॥

ಅಂತನೇಕಸತ್ಕ್ರಿಯಾನಿಯತರಾಗಿರ್ಪಿನವೊಂದುದಿವಸಂ

ಋತುಸಮಯೋಪಯುಕ್ತೆ ಸತಿ ನೂತ್ನವಸಂತಋತುಪ್ರಮೋದಸಂ ।
ಗತನವಲಕ್ಷ್ಮಿಯಂತೆ ನಯನೋತ್ಸವಮಂ ದಯೆಗೆಯ್ದು ಮಾಧವೀ ॥
ವಿತತಿಯ ಬಳ್ವಳಪ್ಪ ಸೆಳೆಯಂ ಪಿಣಿದಂಗಜಲಾಸ್ಯಲೀಲೆಯಂ ।
ಕ್ಷಿತಿಪನ ಚಿತ್ತವೃತ್ತಿಗುಪದೇಶಿಪ ಲಾಸಕಿಯಂತೆ ತೋಱುದಳ್ ॥೪೩॥

ಅನಂತರಂ ಚತುರ್ಥಸ್ನಾನದೊಳ್ ಧವಳಮಂಗಳಾಲಂಕೃತೆಯಾಗಿ ನಿಜ ಮನಃಪ್ರಿಯನ ಸೂಚ್ಕೆ ವಂದು ಸುಖದಿನಿರೆ

ಅಮಳೋತ್ಪಳಿನಿಗೆ ಮಧ್ಯದೊ ।
ಳಮೃತದ್ಯುತಿಬಿಂಬಭಾಸುರಪ್ರತಿಬಿಂಬಂ ॥
ಸಮನಿಪಪ್ರೋಳುದರದೊಳಾ ।
ರಮಣಿಗೆ ನೆಲಸಿತ್ತು ಹರ್ಷಗರ್ಭಂ ಗರ್ಭಂ ॥ ॥೪೪॥

ಅಂತು ನೆಲಸಿ,

॥ ಮಾಲಿನೀವೃತ್ತಂ ॥

ಮಸುಳೆ ತಿವಳಿ ಕರ್ಪಂ ಬಾಸೆ ಪೆತ್ತೊಪ್ಪೆ ಲೀಲಾ ।
ಲಸಿಕೆ ಮನದೊಳಾದಂ ಪುಟ್ಟೆ ನೇರ್ವಟ್ಟ ಕೊರ್ವಿಂ ॥
ಬಸಿಱಸೆಯೆ ಮೊಗಂ ಬೆಳ್ಪೇಱೆ ಪೀನಸ್ತನಾಗ್ರ ।
ಕ್ಕಸಿತಲಸಿತಭಾವಂ ಪೆಚ್ಚೆ ಪೆಚ್ಚಿತ್ತು ಗರ್ಭಂ ॥ ॥೪೫॥

ಮತ್ತಂ

ಸ್ತನಮುಖದಿಂ ಪೋದಪ್ಪುದು ।
ತನೂಭಪಾಲಾಭಚಿಂತೆಯಿಂ ಕಂದಿದ ತ ॥

ದ್ವನಿತೆಯ ಹೃದಯದ ಕಾಳಿಕೆ ।
ಯೆನೆ ಸೊಗಯಿಸಿದತ್ತು ಮೋಚಕತೆ ಚೂಚುಕದೊಳ್ ॥ ॥೪೬॥

ಉದರದೊಳಿರ್ದ ತನೂಜನ ।
ಸದಮಲಗುಣಗಣದ ಭರದೆ ಸಮನಿಸಿದತ್ತೆಂ ॥
ಬುದನೆನಿಸಿ ಚಂದ್ರಸುಂದರ ।
ವದನೆಯ ಮೃಗಗತಿಯೊಳೊಂದಿದತ್ತಿವಾಂಧ್ಯಂ ॥ ॥೪೭॥

ಅಸಿತಪಯೋಧರಾನನಮುಪಾತ್ತವಿಜೃಂಭಮುಖಾಂಬುಜಂ ಸಮು ।
ಲ್ಲಸಿತಜಡತ್ವಮುಚ್ಛ್ವಸಿತಬಂಧುರಗಂಧಸಮೀರಣಂ ಮನ ॥
ಕ್ಕೆಸೆದುದು ಕಾರುಮಂ ಪೊಸಬಸಂತನುಮಂ ನೆಱೆ ಪೋಲ್ತು ನಾಡೆ ಭಾ ।
ವಿಸೆ ಮದವನ್ಮರಾಳಮೃದುಯಾನೆಯ ನಿರ್ಭರಗರ್ಭವಿಭ್ರಮಂ ॥ ॥೪೮॥

ತರಳಮನಾಂತ ಚಂದನದಳಂಕೃತಿ ಭಾವಮನಾಂತ ವಸ್ತುವಿ ।
ಸ್ತರಕೃತಿ ತತ್ವನಿಶ್ಚಯಮನಾಂತ ಲಸನ್ಮತಿ ಗಂಧಮಂ ಮನೋ ॥
ಹರತೆಯಿನಾಂತ ಚಂದನಘನಧೃತಿಯೆಂಬ ವಿಲಾಸಮಂ ಸಮು ।
ದ್ಭರಿಪಮ್ರೋಲಾಂತಳಾಸತಿ ಮಹೋತ್ಸವಗರ್ಭಮನಂದು ಗರ್ಭಮಂ ॥ ॥೪೯॥

ಆಸಮಯದೊಳ್

ಅಲಸಿಕೆ ಪೆಚರ್ದಂತಿರೆ ವಿಪಂಚಿಯ ನುಣ್ಣರಮೊಂದೆ ಪಾಡಿ ಕೋ ।
ಮಲಮೆನೆ ಚಿತ್ರಮಂ ಬರೆದು ತೋಱಿ ಪದಂಬಡೆದೆಯ್ದಿ ಮೇಳದೊಳ್ ॥
ನೆಲಸಿದ ಮಾತನಾಡಿ ಪೊಸನಾಟಕಮಂ ರಸವೃತ್ತಿಯಾದ ನಾಳ್ ।
ಕಱಿಪಿನವಾಡಿ ತತ್ಸತಿಯನೋಲಗಿಸಿತ್ತೊಲವಿಂ ಸಖೀಜನಂ ॥ ॥೫೦॥

ಸ್ಪಷ್ಟಂ ಗರ್ಭಾರ್ಭಕನಿಂ ।
ದಷ್ಟಾಹ್ನಿಕತೀರ್ಥದಿನಾಥನಾಪಪನೆಂಬೊಂ ॥
ಪಷ್ಟಾಹ್ನಿಕಜಿನಪೂಜಾ ।
ಸೃಷ್ಟಿಯೊಳಾವಧುಮ ಬಯಕೆ ಬಳೆದತ್ತಾಗಳ್ ॥ ॥೫೧॥

ಸಮನಿಸಿತು ಪಂಚಕಲ್ಯಾ ।
ಣಮಹೋತ್ಸವವರ್ಣನಂಗಳಂ ಕೇಳ್ವಪ್ಪಂ ॥

ರಮಣಿಗೆ ತದ್ಭಾವಿಜಿನೋ ।
ತ್ತಮನಿಂ ಬಸಿಲ್ಲಿ ಬಯಕೆ ಪೆಱತಾದಪುದೇ ॥ ॥೯೦॥

ಅಂತು ತನೂಭವಪ್ರಭವಸೂಚಕಂಗಳಪ್ಪ ದೋಹಳಂಗಳಂಗನೆಗೆ ನೆಗಱೆ ನಿಜನಾಥಕಲ್ಪಿತಪ್ರಂಸವನದ ಸೀಮಂತೋನ್ನಯನಾದಿಮಂಗಳಂಗಳನೊಳಕೆಯ್ದಂತವರ್ತ್ತಿಸೀತ್ವದಿಂ ನವಮಾಸಂ ನೆರೆಯೆ ಸುಖಪ್ರಸೂತಿಸಮಯದೊಳ್

ಪುಟ್ಟಿದನಾಕೆಗೆ ಮಗನೊಡ ।
ವುಟ್ಟೆ ಮಹಾಭಾಗಧೇಯಲಕ್ಷಣನಿಕರಂ ॥
ಪುಟ್ಟೆ ಧರಾಭಾರಕೆ ನೆರ ।
ಪುಟ್ಟಿದುದೆಮಗೆಂಬ ನಲವು ದಿಗ್ದಂತಿಗಳೊಳ್ ॥ ॥೯೩॥

ಅನಂತರಂ

॥ ಅನವದ್ಯವೃತ್ತಂ ॥

ತಿಳಿದುದೆಯ್ದಿ ಜಲಾಶಯಮಾಕಾಶಂ ವಿಶದತ್ವಮನಾವಗಂ ।
ತಳೆದುದೂರ್ಜಿತಧೂಮಸಮೂಹಂ ದಕ್ಷಿಣವರ್ತನದಿಂದೆ ಪ ॥
ಜ್ಜ್ವಳಿಸುತಿರ್ದುದು ವಹ್ನಿಸಮಸ್ತಂ ವ್ಯಸ್ತರಜಸ್ತತಿಯಾಯ್ತಿಳಾ ।
ವಳಯಮುತ್ತಮಸೌರಭಸೂದಿತ್ತ್ವಣ್ಣನೆ ಪಣ್ಣನೆ ತಣ್ಣಲರ್ ॥ ॥೯೪॥

ಆಗಳಾನ್ಯಪಸುತೇಂದೂದಯಕ್ಷೋಭಿತಸೌರರಾಗಸಾಗರನಿಘೋರ್ಷಾಯಮಾಣಯುಗಪದುತ್ಥಿತಮಂಗಳಮೃದಂಗಢಕ್ಕಾಭೇರೀಶಂಖಕಾಹಳಾರವದೊಡನೆ

ಕರಪರಿವೃತ್ತಿಯಿಂದೊಗೆಯೆ ಕಾಂಚನಕಂಕಣದಿಂಚರಂ ಪರಿ ।
ಸ್ಫುರಿತದಿನೊರ್ಮೊದಲ್ ನೆಗಱೆ ಕಾಂಚಿಯು ನುಣ್ಣರವಮೆಯ್ದಿ ಪಾದಸಂ ॥
ಚರಣದಿನುಸ್ಕ್ರಿ ನೂಪುರದ ಮೆಲ್ಲರವಮಂದು ನೃಪೇಂದ್ರಮಂದಿರಾ ।
ಜಿರದೊಳಗೆತ್ತಲುಂ ನಲಿದು ನರ್ತಿಸಿದತ್ತು ವಿಲಾಸಿನೀಜನಂ ॥ ॥೯೫॥

ಆಸಮಯದೊಳ್

ರಾಗದ ಬಳ್ಳವಳ್ಳಿಯೆನೆ ರನ್ನದ ವಂದನಮಾಲೆಗಳ್ ಬೆಡಂ ।
ಗಾಗೆ ವಿಯನ್ಮಹೀರುಹದ ಪೂಗುಡಿಯೊಳ್ಗುಡಿಗಳ್ ಪೊದಳ್ದು ಚೆ ॥
ಲ್ವಾಗೆ ಸಮಂತಿಳಾತಳದ ತಾರಗೆಯಂತುಪಹಾರಮಾದ ಚಿಂ ।
ಬೂಗಳಳಿಂಬಮಾಗೆ ನಯನೋತ್ಸವಮಾದುದು ತತ್ಪುರೋತ್ಸವಂ ॥೯೬॥

ಆಗಳರಸಂ ಸುಪ್ಯನ್ಮಹೀಪಾಲಸ್ಫೂರ್ಣಪಾತ್ರಾಹರಣಪರಿಣತಪ್ರಧಾನಪ್ರತೀಹಾರಪ್ರಕರಪೂದಪಾತಪ್ರಚಳಿತಪ್ರಘಣತಳಮುಂ, ಇತಸ್ತತಃಪ್ರಸಪನ್ಮಂಗಳೋಪಕರಣಸಂಪಾದನವ್ಯಗ್ರನಾನಾಪರಿಜನೋಪಜನಿತಸಮ್ಮರ್ದಸ್ಖಲಿತಗಮನಕುಬ್ಜವಾಮನಕಿರಾತಸಂಘಾತಮುಂ, ಉತ್ಪಪ್ರೋನ್ಮತ್ತಧಾತ್ರೀಯಿಕಾನಿಕಾಯವಿಕೀರ್ಣಪಿಷ್ಟಾತಕಚೂರ್ಣಸಂಜಾತ ಪಿಂಜರವರ್ಣಪಲಿತಶ್ಮಶ್ರುಕೂಚೋರ್ಕಪವಿದ್ಧವೃದ್ಧಕಂಚುಕಿಸಂಚಯಮುಂ, ಅನೂನರತ್ನಕಂಠಿಕಾಸಮುದಯೋದ್ಗೀಯಮಾನಸಮಂಗಳೈಕ್ಷಿಕನಾದಾಕರ್ಣನೋತ್ಪಾನೈಕಕರ್ಣಸ್ಪಂದಿತಾಂಗಗೃಹಕುರಂಗಶಾಬಸಂದೋಹಮುಂ, ಉನ್ಮುಚ್ಯಮಾನಕೇಳೀಕೀರಪಾರಾವತಶಾರಿಕಾಜಾಲಹೆಲೋದಯನದದಂಬರಾಲೋಕ ನೊದ್ಗ್ರೀವಪರಿಚಾರಿಕಾಪೇಟಪಟಿತಸಂಕಟಮುಂ, ಅಪತ್ಯೋದಯಮುಹೂರ್ತಫಲಪ್ರಭಾವಭಾವನಾಜಾತವಿಸ್ಮಯಾಂದೋಳಿತಶಿರಸ್ಸರೋರುಹನನೇಕಕಾತಾರ್ಂತಿಕಸಂತಾನಸಂಛನ್ನವುಮುಮಪ್ಪಂತಃಪುರಮಂ ನಿವಾರಿತಾಶೇಷಪರಿಜನಂ ಪೊಕ್ಕು ಬಾಲಕವದನದರ್ಶನೋತ್ಸುಕನಿಪಾರ್ಗಳ್

ಪರಿಚಿತಭೂತಿರೇಖಮುಖದರ್ಶಿತಸರ್ಷಪಸ್ರಂಜಮಂಜನೋ ।
ಪರಚಿತಖಡ್ಗಪೇಟಕಸಮುದ್ಭಟವಿದ್ಧಪಿನದ್ಧಭಿತ್ತಿ ಚಂ ॥
ಚುರಪಿಚುಮಂದಪಲ್ಲವಸಮುಲ್ಲಸಿತಂ ಮುಸಲೋರುಸೀರಡಂ ।
ಬರಯುತಮೋಂ ಮನಕ್ಕೊಲವನಿತ್ತುದೊ ಬಾಗಿಲರಿಷ್ಟಸದ್ಮದಾ ॥೯೭॥

ಅನಂತರಂತತ್ಕ್ಷಣಸಂಧುಕ್ಷ್ಯಮಾಣರಕ್ಷಾಧೂಪಧೂಮೋದ್ಗಾಮಮುಂ, ಪ್ರಸೂತಿಕ್ರಿಯಾಪರಿಣತಾಂತಃಪುರಪರಿಚರಾತಿಸಂತಾನನಿರಂತರಮುಂ, ಉತ್ಖಾತತೀಕ್ಷ್ಣಕೌಕ್ಷೇಯಕಸನಾಥಶಯನಪಾರ್ಶ್ವಭಿತ್ತಿಭಾಗಮುಂ, ಚಂಚತ್ಕಾಂಚನಸ್ಥಾನದೀಪಿಕಾಗ್ರನಿರ್ವ್ಯಗ್ರದೇದೀಪ್ಯಮಾನದೀಪಪ್ರಭಾಭಿಭೂ

ತತನುಸ್ತೋಮಮುಮುಪ್ಪ ಗರ್ಭಗೃಹಮನಭ್ಯುಕ್ಷಿತೋಜ್ಜ್ವಲನಾಗಿ ಪ್ರೌ
ಕ್ಕಾಗಳ್

ಐಂದ್ರೀನಿಕಟದ ನವದಿನ ।
ಸೇಂದ್ರನವೊಲ್ ಮಾತೃನಿಕಟದರ್ಭಕನಾದಂ ॥
ಸಾಂದ್ರಾನಂದಮನಾಳ್ಗೂ ।
ಪೇಂದ್ರನ ಹೃನ್ನಯನಜಲರುಹಕ್ಕೊಪವಿಸಿದಂ ॥ ॥೯೮॥

ಜನನಿಯ ಶರೀರದೊಳ್ ತೆ ।
ಕ್ಕನೆ ತೀವಿದ ರಾಗರಸದೊಳೋಲಾಡಿಯೆ ಗ ॥
ಭರ್ನಿವಾಸದಲ್ಲಿ ಬಳೆವಂ ।
ತೆ ನವಪ್ರಸವಾರುಣಾಂಗನೆಸೆದಂ ತನಯಂ ॥ ॥೯೯॥

ನಾಳಂ ಸೊಗಯಿಪ ನಾಭೀ ।
ನಾಳಂ ಮೃದುಚರಣಕರತಳಂ ಕೋಮಳಪ ॥
ತ್ರಾಳಯಿದೆನೆ ನೆನೆಯೆಸಿದಂ ।
ಬಾಳಕನಿಂದಿರೆಯ ಕೈಯ ಕೆಂದಾವರೆಯಂ ॥ ॥೧೦೦॥

ವೀಣಾರಂಜಿತಮಂಜು ।
ಕ್ವಾಣಮನಿಳಿಕೆಯ್ದುದಲ್ಲಿನಿತ್ತಿಂಬಿನೆಗಂ ॥
ಕ್ಷೋಣೀಶನ ಕಿವಿಯಂ ಸವಿ ।
ಗಾಣಿಸಿದುದು ಬಾಲರೋದನೋಚಿತನಾದಂ ॥ ॥೧೦೧॥

ಕೆಲದೊಳೆ ಕಿಟ್ಟಿ ಸಾರ್ಚಿದ ಕೃಪಾಣದ ಕಪ್ಪುರ್ ನಿಜಾಂಗನಾಂಗದ ।
ಗ್ಗಲಿಪ ಬೆಳಪ್ಪುರ್ ಬಾಲಕನ ಕೋಮಲಬೇಹದ ಕೆಂಪು ನಾಣೆಯುಂ ॥
ನಲವನಿಳಾಧಿಪಂಗೆ ನೆಲೆವೆರ್ಚಿಸಿದತ್ತು ಗೃಹಾಧಿದೇವತಾ ।
ವಿಲಸದಪಾಂಗದೊಳ್ ನೆರೆದು ಮೂದೆಳೆದೊಪ್ಪುವ ಬಣ್ಣದಂದದಿಂ ॥೧೦೨॥

ಅಂತು ಸಂತೋಷಬಾಷ್ಪವಿಸರದಿಂ ಮೀಯಿಸುವಂತೆಯುಂ, ದಿಟ್ಟಿವೆಳಗಿ
ನಿಂ ನಿಸಳಿಸುವಂತೆಯುಂ, ಕಣ್ಣೊಳಗಿಟ್ಟು ಮುಚ್ಚುವಂತೆಯುಂ, ಬಗೆ
ಯೊಳೆ ತೆಗೆದಪ್ಪುವಂತೆಯುಂ, ಅಕ್ಷೂಣಲಕ್ಷಣಲಕ್ಷಿತಂಗಳಪ್ಪ ಪುತ್ರನಂಗ

ಪ್ರತ್ಯಂಗೆಂಗಳಂ ನೀಡುಂ ಭಾವಿಸಿ ನೋಡಿ, ಸಂಸಾರಸುಖದ ಪರಮಕೋಟಿಯನೆಯ್ದಿದಂತಾಗಿ ಮುಖ್ಯಮಂಗಳಮನರ್ಹತ್ಪರಮೇಶ್ವರಂಗೆ ಮಹಾಮಹಮಂ ಮಾಡಲ್ವೇಟ್ಟು ಜಾತಕಮೋರ್ತ್ಸವಮನೊಡರ್ಚಿ ಬಳಿಯಂ ದಶಮದಿನದೊಳ್ ಅತ್ಯುದ್ದಾಮಮಂ ಶ್ರೀವರ್ಮನಾಮಮನಿಟ್ಟು

ಅಳಿಪಿ ನಿರಾಕುಳಂ ತನಗೆ ಕೀರ್ತಿಯನಾತ್ಮಭವಂಗೆ ನಲ್ಮೆಯಿಂ ।
ದುಳಿಪೆ ನಿಜಾತಪತ್ರಹರಿವಿಷ್ಟರಚಾಮರಮೆಂಬಿವಂ ಬಳಿ ॥
ಕ್ಕುಳಿದುದನಿತ್ತುಮೊಂದುಳಿದುದಿಲ್ಲೆನೆ ಕೊಟ್ಟನಿಳಾದಿನಾಥನಾ ।
ರ್ಗುಳಿಯದೆ ಬೇಟ್ಟಿ ಬೇಡದವರ್ಗಂ ಸಲೆ ಕೀಟ್ಟಿಡೆ ಕಲ್ಪಭೂರುಹಂ ॥

ತನ್ಮಹೋತ್ಸವಾನಂತರದೊಳ್

ಸುರರಾಜೋದ್ಯಾನದೊಳ್ ಕಲ್ಪಕುಜದ ಸಿರಿ ದುಗ್ಧಾಬ್ಧಿಯೊಳ್ ನೊತ್ನ ರತ್ನಾಂ । ಕುರೆಮಾಗೋತ್ರಾದ್ರಿಯೊಳ್ ಸಿಂಗದ ಸಿಸು ಬಳೆವ್ರೊಂದಂದವಿಂ ದಾರ್ಪುತೇಜ ॥ ಸ್ಸ್ಫುರಿತಂ ವಿಕ್ರಾಂತಮೆಂಬೀಗುಣಮೊಡವೆಳೆಯುತ್ತಿರ್ಪಿನಂ ನಂದನಂ ತ । ದ್ಧರಣೀಶಾವಾಸದೊಳ್ ಶೋಭಿಸುತಿರೆ ಬಳೆದಂ ಭಾರತೀಭಾಳನೇತ್ರಂ ॥ ॥೧೦೩॥

॥ ಗದ್ಯಂ ॥

ಇದು ಪರಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥೆ
ಶ್ರುತಕೀರ್ತಿತ್ರೈವಿದ್ಯಾಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಶ್ರೀವರ್ಮೋದಯಪ್ರಮೋದವರ್ಣನಂ

ತೃತೀಯಾಶ್ವಾಸಂ.

ಶ್ರೀಕೇಳೀನಿಲಯಂ ರ ।
ವ್ಯಾಕೃತಿ ದಿವಸಾನುಸಾರದಿಂ ಪುದಿದೊಡವಂ ॥
ಸ್ವೀಕರಿಸಿದನಮಳಿನಕವಂ ।
ಳಾಕರಮೆನೆ ಜೈನಜನಮನೋಹರಚರಿತಂ ॥ ॥೧॥

ಅಂತನುಕ್ರಮೋಪಚಿತಬಾಲಲೀಲಾಪೀಯೂಷವರ್ಷದಿಂ ಪಿತೃಜನಸು ಹೃಜ್ಜನೋದಾರಶರೀರಕೇದಾರಂಗಳೊಳ್ ಪುಲಕಸಸ್ಯಸಮೃದ್ಧಿಯಂ ಮಾಡುತುಂ ಬಳೆಯೆವಳೆಯೆ

ಕಿಡುತಂದುದು ಮನದಳಿಯುಮೆ ।
ನುಡಿಯ ತೊದಳ್ ಪಿಂಗಿ ಪೋಯ್ತು ತಳರ್ವಡಿಯೊಳ್ ಬ ॥
ಲ್ಪಡರ್ದುದು ಬಳ್ವಳಿಕೆಗೆ ತನು ।
ವೆಡೆಗೊಟ್ಟುದು ನಾಡೆ ಶೈಶವಾತಿಕ್ರಮದೊಳ್ ॥ ॥೨॥

ಆಸಮಯದೊಳ್

ಜನನೀಸ್ತನ್ಯಾಮೃತಸೇ ।
ವನೆ ಮಾಣ್ದ ಬಹಿಕ್ಕ್ರಮಖಿಳವಿದ್ಯಾಮೃತಸೇ ॥
ವನೆಯೊಳೆ ಯೋಜಿಪುದುಚಿತಂ ।
ತನಯನನೆಂದವನಿಪಾಲಕಂ ಬಗೆದಂದಂ ॥ ॥೩॥

ವಿದ್ಯೋಪವಿದ್ಯೆಗಳನತಿ ।
ಹೃದ್ಯಂಗಳನಾತ್ಮಜಂಗೆ ಶಿಕ್ಷಿಸುವಂತಾ ॥
ತೋದ್ಯರವಮುಣ್ಮೆ ತತ್ತ ।
ದ್ವಿದ್ಯರನಪ್ಪೈಸಿದಂ ನೃಪಂ ಶುಭದಿನದೊಳ್ ॥ ॥೪॥

ಅನಂತರಮಾಕ್ಷತ್ರಪುತ್ರಂ ಸಿತಪಕ್ಷದತ್ರಿಪುತ್ರನಂತೆ ಕಳಾಕಳಾಪೋಪಚಯಮನಪ್ಪುಕೆಯ್ದಿರೆ ಕತಿಪಯವಾಸರಾವಸರಣದೊಳ್,

ಅಮಲಸ್ವಭಾವನೊಳ್ ನಿ ।
ತ್ಯಮಹತ್ವನೊಳತುಳರಾಜವಿದ್ಯೆಗಳನಿತುಂ ॥
ಕ್ರಮದೆ ಸಮನಿಸಿದುವಾತನೊ ।
ಳಮಳಿನತಾರಾಳಿ ಗಗನದೊಳ್ ನೆಲಸುವವೊಲ್ ॥ ॥೫॥

ಅನ್ತು ಪಾರ್ಜಿತೋಪಾರ್ಜಿತವಿದ್ಯಾವಿಳಾಸನಾಗಿರ್ಪಿನಂ

ಲಲನಾಸಂಮೋಹಲಗ್ನೋದಯಮಸಮಶರಾನೇಕಪೋದ್ದೀಪನಂ ದೇ ।
ಹಲತಾವಲ್ಲೀವಸಂತಂ ವಿಭವಶರಧಿಚಂದ್ರೋದ್ಗಮಂ ಶೌರ್ಯಸೂರ್ಯೋ ॥
ಪಲಭಾಸ್ವತ್ಸಂಪದಂ ತನ್ನೃಪತನಯನೊಳಂದೊಂದಿ ಚಿತ್ತಕ್ಕೆ ಮಾಡಿ ।
ತ್ತೊಲವಂ ತಾರುಣ್ಯಮಾಸಾಧಿತಬಹಳಿಮಲಾವಣ್ಯಶೋಭಾವರೇಣ್ಯಂ ॥೬॥

ಕಳಧೌತಚ್ಛವಿ ಕುಂದಕುಟ್ಮಲರದಂ ಬಾಲಪ್ರವಾಳೋಷ್ಠನು ।
ತ್ಪಳಪತ್ರಾಂಬಕನಷ್ಟಮೀಂದುನಿಟಿಳಂ ಕೇಷೋಲ್ಲಸದ್ಬಾಹು ಕಾ ॥
ದಳಕಾಂಡೋರು ಗವೇಂದ್ರಕಂಧರನಿಭದ್ವಿಣ್ಮಧ್ಯನಿಂದಿಂದಿರೋ ।
ಜ್ಜ್ವಳಕೇಶಂ ಧರಣೀಶಸೂನು ತಳೆದಂ ಸಾಶ್ಚರ್ಯಸೌಂದರ್ಯಮಂ ॥ ೭॥

ಕಣ್ಗಳ್ಗೆ ಗೊತ್ತು ಮನಕೆ ಸ ।
ರಣ್ಗಾಡಿಗೆ ಗಡಿಯೆನಿಪ್ಪ ಕುವರನ ರೂಪೊ ॥
ಳ್ವಣ್ಗಳನೀಕ್ಷಣಮಾತ್ರದೆ ।
ನಾಣ್ಗಡಿಸಿದುದಾದವೆಸೆವ ಪೊಸಜವ್ವನದೊಳ್ ॥ ॥೮॥

ಜನಕನೊಳನುರೂಪತೆಯಂ ।
ತನೂಭವಂ ತಾಳ್ದಿದಂ ತಮಸ್ಸಂಹೃತಿಯಿಂ ॥
ಘನತೇಜದಿನುನ್ನತಿಯಿಂ ।
ಕನತ್ಪ್ರದೀಪೋಪಜಾತದೀಪಾಕೃತಿಯಿಂ ॥ ॥೯॥

ಶ್ರೀ ವಕ್ಷಸ್ಸ್ಥಳದೊಳ್ ವಾ ।
ಕ್ಷ್ರೀ ವಕ್ತ್ರದೊಳತುಳಭುಜದೊಳೂರ್ಜಿತವಿಜಯ ॥
ಶ್ರೀ ವಿಸ್ತಾರಿಸೆ ನೆಗಳ್ದಿಂ ।
ಶ್ರೀವರ್ಮಂ ಶ್ರೀಮಯಂ ಯಶಶ್ಶ್ರೀನಿಳಯಂ ॥ ॥೧೦॥

ಅನಿತೊಂದು ಸಿರಿಯು ಮೈಮೆಯೊ ।
ಳನಿತೊಂದ್ದತ್ಯಕ್ಕೆ ಸಲ್ಲದಾನೃಪತನಯಂ ॥
ವಿನಯೇನ ವಿನಾ ಕಾ ಶ್ರೀ ।
ಎನಿಪುಕ್ತಿಗೆ ಟೀಕುವರೆದ ತೆಱದಿಂ ನಡೆದಂ ॥ ॥೧೦॥

ಅದಲ್ಲದೆಯುಂ,

ಪಿತೃಸಂದೇಶದಿನಾವುಹೋನ್ನತಿಯುತಂ ಸಾರ್ದ್ರಾಂತರಂಗಂ ನಿರಾ ।
ಕೃತಭೂತಾಪಭರಂ ಕುಮಾರನಧಿಕೋತ್ಸಾಹಾವಗಾಹಂ ಪ್ರಭಾ ॥
ವತಿಯೆಂಬಗ್ಗದ ಕನ್ನೆಯಂ ಮದುವೆನಿಂದಂ ಸಾರ್ವಭೌಮಾನ್ವಯೋ ।
ದ್ಗತೆಯಂ ನೂತ್ನಘನಾಘನಂ ಪಡೆವವ್ರೊಲ್ ಸೌದಾಮಿನೀಸಂಗಮಂ ॥೧೬॥

ಅನಂತರಮೊಂದು ದಿವಸಂ ಪರಿಣತಭಾರ್ಯನುಮಾಶ್ಚರ್ಯಸೌಂದರ್ಯನುಮುಪಾರೂಢತಾರುಣ್ಯನುಮಾಸಾಧಿತಕಳಾನೈಪುಣ್ಯನುಮಾದ ಕುಮಾರನಂ ನಿಜಪದಸರೋಜಸೇವಾಸಮಾಗತಮುನನಾಸ್ಥಾನಸ್ಥಿತಂ ಶ್ರೀಷೇಣಮಹಾರಾಜಂ ದೂರದೊಳೆ ಕಂಡು,

ಚತುರಂತಕ್ಷಿತಿಭಾರಮಂ ತಳೆಯಲಾಂ ಸಾರ್ದಿರ್ದೊಡಂ ರಾಜ್ಯಮೋ ।
ಹಿತನಾಗಿರ್ಪನಿಂದುಮೊಂದು ನಖರಚ್ಛಾಯಾಕವಂಬಂಗಳಂ ॥
ಸುತಬಾಹಾಪರಿಘಂ ಸಮಂತು ನಗುವಂತಿರ್ಪ್ಪದಿನ್ನೆನ್ನ ಭೂ ।
ಪತಿವೃತ್ತಂ ದೊರೆಯಲ್ಲದೆಂಬ ಬಗೆಯಂ ತಂದಂ ನಿಜಸ್ವಾಂತದೊಳ್ ॥೧೩॥

ಎಂದು ಬಗೆಯುತ್ತಿರ್ಪಿನಮೆಯ್ದುವಂದು ಪೊಡೆಮಡಲೊಡಂ,

ಕಟ್ಟುವುದು ರಾಜ್ಯಪದವೀ ।
ಪಟ್ಟಮನೀಯೆಡೆಯೊಳೆಂದು ಕಂಕಣರವದಿಂ ॥
ನೆಟ್ಟನೆ ಪೇಳ್ದಾಯೆಡೆಯಂ ।
ಮುಟ್ಟಿಯೆ ತೋರ್ಪಂತೆ ನೊಸಲೊಳೆಸೆದುವು ಕೈಗಳ್ ॥ ॥೧೪॥

ಅಂತು ಪೊಡೆಮಟ್ಟು ಸಮುಚಿತಾಸನದೊಳ್ ಕುಳ್ಳಿರ್ದ ತನಯನಾನನಮನವನೀವಲ್ಲಭಂ ಮಂದೀಭೂತಮೋಹರಸಾನುಬಂಧಿಗಳಪ್ಪ ದೃಷ್ಟಿಗಳಿಂ ನೋಡಿ ಸಮಂತು ನಿಜಮನೋಗತಮನಿಂತೆಂದಂ—

ನೆಱೆದಧಿರಾಜಸೌಖ್ಯಹಿಮವಾಹಿನಿಯಂ ಸಮಸಂದಲಂಪಿನಿಂ ।
ಪೊಱಮಡದಿನ್ನೆಗಂ ನೆಲಸಿ ನೀರ್ ನೆಱೆಗೊಂಡವೊಲಿರ್ದುದರ್ಕೆ ಮೈ ॥
ಬಱತವೊಲಾಗಿ ಪಾವನತಪೋವನಸಂಚರಣಕ್ಕೆ ತಾನೆ ಮ ।
ತ್ತಿಱಕಮನಾಂತುದೀಗಳನಿವಾರಣಮೆನ್ನಯ ಚಿತ್ತವಾರಣಂ ॥ ॥೧೫॥

ಅದುಕಾರಣದಿಂ

ಜರೆ ಬಿಱುಗಾಳಯ ತೆಱದಿಂ ।
ದಿರದೆಯ್ದೆ ಮದೀಯಕಾಯತೃಣಕುಟಿಯಂ ಜ ॥
ರ್ಘರಿತಂ ಮಾಡದ ಮುನ್ನಮೆ ।
ಪರಮತಪೋಭರಮನಾಂಪ ಬಗೆಯಂ ಬಗೆದೆಂ ॥ ॥೧೬॥

ಪ್ರವಚನಪರಿಪಠನಕ್ಷಮ ।
ತೆ ವಾಣಿಯಂ ತೀರ್ಥಯಾನದಕ್ಷತೆ ಪದಮಂ ॥
ಕವಿಯಂ ಜಿನವರಚರಿತ ।
ಶ್ರವಣಪಟುತೆ ಪಿಂಗದನ್ನವಾರ್ಜಿಪೆನಱಿನಂ ॥೧೭॥ ॥೧೦॥

ಅದಲ್ಲದೆಯುಂ,

॥ ಪರಿಯುಕ್ತಕರಂ ॥

ತೊಱೆಯಲೆಂದಿರ್ಪ ರಾಜ್ಯಮನಾಳುತಿರ್ದುಂ ಮಱೆಯಲೆಂದಿರ್ದ ಬಂ ಧುಸಮೂಹಮಂ । ನೆಱಪಲೆಂದಿರ್ದ ಸತ್ತಪೋವೃತ್ತಿಯಂ ಮಱೆದಂತೆ ರಾಗವಿಪ್ಪಳತೆಯಿಂದಂ ॥ ತೊಱೆಯದೆ ಮಱೆಯದೆ ನೆಱಪದಾಯುಷ್ಯಂ ಪಱಿಪಡುವಾಗಳೆ ಬೆಚ್ಚಿರ್ದಂತೆ । ಮಱುಗುವ ಮರುಳಂಗಾರಯ್ವ ವಿಭವಂ ಮಱುಭವಂ ನಾಜೆಯುಂ ವ್ಯರ್ಥಮಲ್ತೇ ॥ ॥೧೮॥

ಅದಱಿನವಿರಳವಾತಾಳಿಕಾಭ್ರಮಣಪರಿಗತತಾಳಿಕಾತಳಮಪ್ಪ ಮನಕ್ಕೆಂತಾನುಂ ಕಾಲಲಬ್ಧಿವಶದಿಂ ನಿವೃತ್ತಿಪರಿಣತಿಯೊಳ್ ಪರಿಣಮಿಸಿದ ಸುಸ್ಥಿತಿಯಂ ವ್ಯರ್ಥಂಮಾಡದೆ ತಪೋವನಾಭಿಮುಖನಾದೆನ್ನ ಪರಿನಿಷ್ಕ್ರಮಣದೊಳ್ ಪರಿಪಂಥಿಭಾವನಂ ಪೊರ್ದದೊಡಂಬಡುವುದೆ ನಿನಗೆ ವಿನಯಮದಲ್ಲದೆಯುಂ,

ಪ್ರಣಯುವಚೋವಿಲಾಸಮಣಮುಲ್ತು ದಿಟಕ್ಕೆ ವಿಚಾರಿಪಂದು ದ ।
ಕ್ಷಿಣಭುಜಮುಲ್ತ್ತೆ ನೀನೆನಗೆ ನಿನ್ನಯ ಸತ್ತ್ವಸಮೃದ್ಧಿಯುಪ್ಪಿನಂ ॥
ಮಣಿಯದೆ ಪೊತ್ತು ದಿನ್ನೆವರಮೀ ಪುಸಿಗೈಯದಱೊಂದು ಖೇದಮಂ ।
ಕ್ಷಣದೊಳೆ ತೂಳ್ದಿ ತಾಳ್ದುವುದು ಪಿಂಗದೆ ಪುತ್ರ ಸಮಸ್ತಧಾತ್ರಿಯಂ ॥
ಕುವಳೆಯಮಂ ಮೃದುಕರಪಾ ।
ತವಿಳಾಸದಿನೆಯ್ದೆ ನೀನಲರ್ಚಿ ನಿಮಿರ್ಚೇ ॥
ಭುವನಾಂತರಾಳದೊಳ್ ತನು ।
ಭವ ನಿನ್ನಯ ರಾಜನಾಮಮಂ ಸಾರ್ಥಕಮಂ ॥ ॥೨೦॥
ಅಸಮವಿಭೂತಿಗಳನುಪಾ ।
ರ್ಜಿಸುವೊಡೆ ಜನಮಂ ಸ್ವಕೀಯಮಂ ಮಾಳ್ಪುದು ಕೋ ॥
ಪಿಸದಂತವರ್ಕೆ ಪರಿಭಾ ।
ವಿಸೆ ಜನದನುರಾಗಮದೆ ನಿಬಂಧನೆಯಲ್ತ್ತೇ ॥ ॥೨೧॥
ಪೊರ್ದುವುದವ್ಯಗ್ರತೆಯಿಂ ।
ದಿರ್ದರಸನನಖಿಲವಿಭವಮಂತಾಯಿರವುಂ ॥
ಪೊರ್ದುವುದು ತನಗೆ ವಶಮಾ ।
ಗಿರ್ದೊಡೆ ಪರಿವಾರಮಾರಯಲ್ ಸರ್ವಸ್ವಂ ॥ ॥೨೨॥
ಅನುರಕ್ತತೆಯಂ ನಿಜಪರಿ ।
ಜನದೊಳ್ ಮಾಳ್ಪೇಕೃತಜ್ಞತೆಯೆ ಮಾಳ್ಕುಂ ಮ ॥
ತ್ತೆನಿತು ಗುಣಮುಳ್ಳೊಡಂ ಸ ।
ಮ್ಮನಿಸದಣಂ ತಜ್ಜನಂ ಕೃತಘ್ನನೆನೆಂದುಂ ॥ ॥೨೩॥
ಕೃತಮುಖಿವೊಡೆ ಸದ್ಗುರುಶಿ ।
ಕ್ಷಿತನಪ್ಪವನಖಿಗುಮಂತಱಿಂ ಸತತಂ ಸಂ ॥
ಗತಿ ಗುರುವಿನೊಳಾದೊಡೆ ನರ ।
ಪತಿ ಸುರಪತಿಲೀಲೆಯಂ ಸಮಂತ್ಯೈದಿಪಪಂ ॥ ॥೨೪॥

ಎಂದು ಶಿಕ್ಷಾಪುರಸ್ಸರಂ ಸಕಲಸಾಮ್ರಾಜ್ಯಶ್ರೀಯಂ ಶ್ರೀಪೇಣಭೂಪತಿ ನಿಜತನೂಜನೊಳ್ ನಿಯೋಜಿಸಿ ಸಮಸ್ತಸಾಮಂತಮಂತ್ರಿಸಂದೋಹಮಂ

ಪಟ್ಟಬಂಧೋತ್ಸವಮಂ ಮಾಡಲ್ವೇಟ್ಟು ಸಹಪಾಂಸುಕ್ರೀಡಿತರಪ್ಪ ಪಲಂ ಬರರಸುಗಳ್ವೆರಸು ಪುರಮಂ ಪೊಱಮಟ್ಟು ಪೋಗಿ ಶ್ರೀಪ್ರಭವಮುನಿಪ್ರಭುವ ಪಾದಮೂಲದೊಳ್ ನಿಷ್ಕೃತದಿಗಂಬರಶ್ರೀಕನಾಗಿ ನಿಖಿಲಕರ್ಮನಿರ್ಮುಕ್ತಿಯಿಂ ಪ್ರಾಪ್ತಸಪ್ತಪರಮಸ್ಥಾನನಾದನಿತ್ತಲ್

ಗುರುಶಿಕ್ಷಾವಂಚನಂಗಳಂ ಹೃದಯದೊಳ್ ಮಾಂಗಲ್ಯಗೀತಾವೃತ ।
ಸ್ವರಮಂ ಕರ್ಣದೊಳಾಂತು ರತ್ನಮಯಪಟ್ಟೋದ್ಯತ್ಪ್ರಭಾಮಂಜರೀ॥
ಭರಮಂ ಭಾಳದೊಳಿಂದ್ರಶೈಳಮಣಿಶೃಂಗೋತ್ತುಂಗಮಂ ಮೌಳಿಯಂ ।
ಶಿರದೊಳ್ ತಾಳ್ದಿದನುತ್ತರೋತ್ತರತೆಯಿಂ ಶ್ರೀವರ್ಮಭೂಮೀಶ್ವರಂ॥೨೫॥

ಅನಂತರಂ

ಸಮನಿಸಿ ಮನದೊಳ್ ರತ್ಯು ।
ತ್ಸವಮಂ ಕರಜಾತಹತಿಗೆ ಮೆಯ್ಯಾನಿಸಿದಂ ॥
ಕ್ರಮದೆ ಬಲಿಕ್ಕಂ ಪ್ರಜೆಯಂ ।
ಪ್ರಮದೆಯನೆಂತಂತೆ ನಯವಿದಂಗರಿದುಂಟೇ ॥ ॥೨೬॥

ಅದುಮಲ್ಲದೆಯುಂ

ಕರಿಸೇನಾಕರಲೂನವೈರಿವನದುರ್ಗವ್ರಾತನಶ್ವಾವಳೀ ।
ಖುರಟಂಕಾಹತಿಪಾತಿತಾರಿಗಿರಿದುರ್ಗವ್ರಾತನನ್ಯೋನ್ಯಸೈ ॥
ನ್ಯರಜೋವ್ರಾತಸಮೀಕೃತಾನ್ಯಜಳದುರ್ಗವ್ರಾತನುತ್ತಾನತೂ ।
ರ್ಯರವಾಕಂಪಿತಶತ್ರುದಿಗ್ವಿಜಯಯಾತ್ರಾಕ್ರೀಡೆಯಂ ಮಾಡುವಂ ॥೨೭॥

ತುರಗಾರೋಹಣದಿಂದಮೊರ್ಮೆ ಗಜಶಿಕ್ಷಾಲೀಲೆಯಿಂದೊರ್ಮೆ ಕಾ ।
ವ್ಯರಸಾಸ್ವಾದದಿನೊರ್ಮೆ ವೈಣಿಕಕೃತಪ್ರಸ್ತಾವದಿಂದೊರ್ಮೆ ಗ ॥
ರ್ಗರಿಕಾಸ್ವಾದನದಿಂದದೊರ್ಮೆ ವನವಾರಿಕ್ರೀಡೆಯಿಂದೊರ್ಮೆ ಚಿ ।
ತ್ರರುಚಿಪ್ರೀತಿಗಳಿಂದೆ ಪೊಳ್ತುಗಳೆವಂ ಶ್ರೀಗೋಮಿನೀವಲ್ಲಭಂ ॥೨೮॥

ಅಂತಂಗೀಕೃತಕಳಾವರ್ಗನುಂ, ಕೃತಾರ್ಥೀಕೃತವಂದಿವರ್ಗನುಂ, ವಶೀಕೃತವಧೂವರ್ಗನುಂ, ಪ್ರಸನ್ನೀಕೃತಗುರುವರ್ಗನುಂ, ತರಳೀಕೃತಾಶಾವರ್ಗನುಂ, ದೂರೀಕೃತಾರಿಷಡ್ವರ್ಗನುಂ, ಸಮೀಕೃತತ್ರಿವರ್ಗನುಂ, ದೃಢೀಕೃತತಳವರ್ಗನುಂ, ನಮೀಕೃತಸಾಮಂತವರ್ಗನುಮಾಗಿ ಪ್ರಭಾವತೀ

ಮಹಾದೇವಿವೆರಸು ಇಷ್ಟವಿಷಯಕಾಮಭೋಗಾನುಭವನಿರತಂ ಪಲಕಾಲ ಮರಸುಗೆಯುತುಮಿರೆ

ಜಳದಾಘಶ್ಯಾಮಧೂಮಪ್ರತತಿ ಚಳತಟಿನ್ಮಾಳಿಕಾಲೋಲಕೀಲಾ ।
ವಳಿ ಸಂಜಾತೇಂದ್ರಗೋಪಪ್ರಸರವಿಸರದರ್ಚಿಃಕಣಂ ಪಶ್ಚಿಮಾಶಾ ॥
ನಿಳಪಾತೋಜ್ಜೃಂಭಿತಂ ಬಂದುದು ವಿರಹಿತರುವ್ರಾತಮಂ ಪರ್ವುವುಗ್ರಾ ।
ನಳನೆಂಬಂತಬ್ದಕಾಲಂ ಸ್ತನಿತಧಗಧಗಧ್ವಾನರೌದ್ರಾಯಮಾಣಂ ॥೧೯॥

ಅಗಳ್

॥ ಮಾಳಿನೀವೃತ್ತಂ ॥

ವರುಣಮಕರಹಸ್ತೋಚ್ಛೀಕರಾರ್ದ್ರಂ ಪ್ರತೀಚೀ ।
ಶರಧಿವಿಮಳಫೇನಾಪಾಂಡುವಸ್ತ್ರದ್ರಿಕುಂಜ ॥
ಸ್ಫುರಿತಕುಟಜಕುಂದಾಮೋದನಿಷ್ಪಂದಿ ತೀಡಿ ।
ತ್ತಿರದೆ ಮುದಿತವಿಶ್ವಂ ನಾಭಸಂ ಮಾತರಿಶ್ವಂ ॥ ॥೩೦॥

ಘನವಹ್ನಿಜ್ವಾಲಧೂಮಾವಳಿಯೊ ಗಗನಗಂಗಾತಟೋದ್ಯತ್ತಮಾಳೀ ।
ವನವೋ ವಿದ್ಯುನ್ನಟೀಕರ್ಬುರಜವನಿಕೆಯೋ ಚಾರುಮೇಘಾಗಮಶ್ರೀ ॥
ವನಿತಾಪಿಂಛಾತಪತ್ರಪ್ರಕರವೊ ವಿಯದುತ್ತುಂಗಮಾತಂಗಭೂಷಾ ।
ಜಿನಪಕ್ಷತ್ರಾಣವೋ ಮೇಣೆನೆ ನೆಗೆದುದಳಿಶ್ಯಾಮಳಂ ಮೇಘಜಾಳಂ ॥

ಸ್ತನಿತಘನಬೃಂಹಿತಂ ದು ।
ರ್ದಿನಮದಪ್ರಾರಂ ಪಯೋದಗಜಘಟೆ ಸುಖಿದ ॥
ತ್ತಿನರುಚಿಪಲ್ಲನಕುಳಕಬ ।
ಳನಲೀಲೆಯಿನಂತರಿಕ್ಷಕಕ್ಷ್ಯಾಂತರದೊಳ್ ॥ ॥೩೧॥

ಮುಂ ಬಿಸಜೋದ್ಭವಂ ಸಮಿದನಂಬುದಮಂ ಪವಮಾನಧೂಮತೇ ।
ಜೋಂಬುಗಳಿಂದಮೆಂಬ ನುಡಿ ಸತ್ಯಮದಲ್ಲದೊಡುಂತೆ ಕಾರ ಕಾ ॥
ದಂಬಿನಿ ಮಾಬ್ಬಿಮೇ ಬಿರಯಿಗಂಗಜನಹ್ನಿ ವಿಜೃಂಭಮಂ ವಿಳೋ ।
ಳಾಂಬುಕವಾರಿಯಂ*ಹೃದಯತಾಪಮನುತ್ಕಳಿಕಾಪ್ರಪಂಚಮಂ ॥೩೩॥

* ತನುವಿಧಾಮಹ.

ಇಂಬುಗಿಡಿಸಿದುವು ದೆಸೆಗಳ ।
ನಂಬರಮಂ ಪೀರ್ದುರ್ವಹಿಮಹಿಮಕರಕಿರಣಾ ॥
ಡಂಬರಮಂ ನೊಸೆದುವು ಪಿರಿ ।
ದುಂ ಬೀಸಱಿಸಿದುವು ಬಿರಯಿಯಂ ಜಳದಂಗಳ್ ॥ ॥೩೪॥

ಪಿಕಮೌನವ್ರತದುಂದುಭಿಧ್ವನಿ ಬಲಕಾಗೃಶ್ಯಚೂಡೋದಯಾ ।
ಸಕರಾವಂ ಶಿಖಿನೃತ್ಯವಾದ್ಯರುತಿ ಪೋತಕ್ಯುದ್ಭಗಭೋರ್ತ್ಸವೋ ॥
ತ್ಸುಕವಾದಿತ್ರರವಂ ಮರಾಳಗಮನಾತೋದ್ಯಸ್ವನಂ ಚಾತಕೋ ।
ದಕಕೇಳೀಕೃತತೂರ್ಯನಾದಮೆಸೆದತ್ತಂಭೋದನಿಘೋರ್ಷಣಂ ॥೩೫॥

ಸಕಳಾಬ್ದಾಂಭಸ್ಸಿರಾಮೋಚನಸುನಿಶಿತಶಸ್ತ್ರಂ ಪ್ರಯಾಣೋತ್ಕಹಂಸ ।
ಪ್ರಕರಪ್ರಸ್ಥಾನಭೇರೀಕನಕಮಯಕನತ್ಕೋಣಮಾಸಾರಲಕ್ಷ್ಮೀ ॥
ಪ್ರಕಟಾಂಭೋದಾವಳೀವಿಶ್ಲಥಕಬರಿಭರಸ್ರಂಸಿದಾಮಂ ಚಳಚ್ಚಾ ।
ತಕರಾಜ್ಯಶ್ರೀಕಟಾಕ್ಷದ್ಯುತಿಲತಿಕೆ ತಟಿನ್ಮಾಲೆ ಚೆಲ್ವಾದುದಾವಂ ॥ ೩೬॥

ಘನಸಮಯಶಬರಕರಗತ ।
ಕನತ್ತಟಿದ್ದಂಡಪಾತವಿಗಳನ್ನೀಳ ॥
ಸ್ತನಯಿತ್ನುಕುಳತಮಾಳೀ ।
ವನಪ್ರಸೂನಂಗಳನಿಸಿದುವು ಕರಕಂಗಳ್ ॥ ॥೩೭॥

ಕಱೆದುವು ಕಾಳಮುಮಂ ಮುಂ ।
ಕಱೆದುವು ಮಿಂಚಂ ಬಱಿಕ್ಕೆ ಕರಕೋಪಲಮುಂ ॥
ಕಱೆದುವು ಬಱಿಕಂ ಬಱಿಕಂ ।
ಕಱೆದುವು ನುಣ್ಬನಿಯನೊಗೆದ ಮುಗಿಲೆಳಗಾರೊಳ್ ॥ ॥೩೮॥

ಕಾಮರ್ಗಿಲಿಂ ಜಲಲವತತಿ ।
ಕಾಮರ್ಕದಿಂ ಸ್ಮರಶರಂ ವಿಯೋಗಿಗಳ ಮನೋ ॥
ಧರ್ಮದಿನೊಂದಿರ್ದಱಿಯುಮೆ ।
ಯೊರ್ಮೆಯೆ ಬಿಡುತಂದುವೈದೆ ಜಲದಾಗಮದೊಳ್ ॥ ॥೩೯॥

ಅಧೃಥಾಗಾರವಿಪನ್ನಖಿನ್ನಗೃಹಿಣೀನಿಶ್ವಾಸದಿಂ ಕೂಡೆ ತೂ ।
ಱಿದುವಾವಾಸಪರಿಕ್ರಿಯಾಕುಲವಧೂವಕ್ಷೋಜದೊಳ್ ಬಿಟ್ಟಿ ಸೇ ॥
ಱಿದುವುತ್ಕಂಠವಿಯೋಗಿನೀಜನತೃಷಾತ್ಯುಷ್ಣಾಂಗಸಂಸಂಗದಾ ।
ಱಿದುವಾದಂ ನನನೀಲನೀರಧರಮುಕ್ತ್ವ್ಯಕ್ತ್ವಾಬ್ಧಿಂದುಗಳ್ ॥ ॥೪೦॥

ಪುರಮಂತದ್ವೀರ್ಪಮೆಂಬಂತಿರೆ ವಿಪಿನಚರಾನೇಕಪಾನೀಕಮಂಭಃ ।
ಕರಿಯೂಥಂ ತಾನಿದೆಂಬಂತಿರೆ ನಗನಿಕರಂ ಪಕ್ಷಕುತ್ಕ್ಷೇಳಮೆಂಬಂ ॥
ತಿರೆ ಮತ್ತಂ ಲೋಕಮೇಕಾರ್ಣವಮೆನಿಸಿದುದೆಂಬಂತಿರೆತ್ತ್ತ್ತಲುಂ ಕಾ ।
ಟ್ಪಿರನಾದಂ ಕೊರ್ವೆಬಿರ್ದಂ ಕಱೆದುದುಬಪಳಾಸಾರಮಂ ನೀರದೌಘಂ॥

ಮಿಳಿರ್ವ* ಕುಡಿ ಮಿಂಚು ಸುರಧನು ।
ತಳಿದೋರ್ಗರಣವಾಲಿ ರಂಗವಲಿ ಬದ್ಧವಣಂ* ॥
ಜಳದರವಮಾಗೆ ಜಯಮಂ ।
ಗಳೆಸೂಚಕವಾದುದತನುಗಾಘನಸಮಯಂ ॥ ॥೪೨॥

ಮತ್ತಮದು ಸಮುಚಿತನೀಲಕಂಠವಿಳಾಸಮಾಗಿಯುಂ ವೀತಕೇತಕಮು ಲ್ತು; ವಿಧೃತಮದನಜನಕತ್ವಮಾಗಿಯುಂ ಕಮಲೋತ್ಸವಕಾರಿಯಲ್ತು; ಅಂಗೀಕೃತಕುಟಿಜಶೋಭಾಪ್ರಭಾವಮಾಗಿಯುಂ ಸಂಶೋಷಿತಜಡಾಕರ ಮಲ್ತು; ಸಮುಚ್ಛ್ರಿತಾನೇಕಮೇಘಡಂಬರಚಾರುತಾವಳಂಬಿಯಾಗಿಯುಂ ಪ್ರಕಟೀಕೃತರಾಜಲೀಲೋದಯಮಲ್ತು; ಪ್ರಕರ್ಷಾನೇಕವರ್ಷಾನುಗ ತಮಾಗಿಯುಂ ಅಚಪಳಾಚರಣಪರಿಣತಮಲ್ತು; ಅತಿಪರುಷಘನನಿನದಯು ಕ್ತಮಾಗಿಯುಂ ಅಸಾಧ್ಯತಾನುವಿದ್ಧಮಲ್ತು; ಅತಿಕ್ರಾಂತವೈಶಾಖವೃತ್ತಿ ಯಾಗಿಯುಂ ಅಬರ್ಹಿಲೀಲಾಹರ್ಷಮಲ್ತು; ಅಂತುಮಲ್ಲದೆಯುಂ,

ಉಪಶಾಂತರಜೋವಿಕೃತಿಯಿ ।
ನುಪಾತ್ತಕಾಳಿಮಪಯೋಧರಾಸ್ಯತೆಯಿಂ ಮ ॥
ತ್ತುಪಚಿತಜಡವೃತ್ತಿಯಿನೆ ।
ಯ್ದೆ ಪೋಲ್ತುದಭ್ರಾಗಮಂ ಸಗರ್ಭಾಂಗನೆಯಂ ॥ ॥೪೩॥

ವಿಳಸಿತಕಂದಳಂ ವಿನಿಪತತ್ಕರಕಂ ಕ್ಷುಭಿತೋರುವಾಹಿನೀ ।
ಕುಳನಿನದಂ ಗಳಚ್ಛರಸಮುದ್ಗ್ರಮುದಗ್ರಸುಪರ್ವಚಾಪಮಂ ॥

ಚಳಲಲಿತಾಂಬರಂ ವಿಹರಿದಶ್ವಸಮುತ್ಕರಮಂದಗುರ್ವನೇಂ ।
ತಳೆದುದೊ ಪೋಲ್ತು ಯುದ್ಧಸಮಯಕ್ರಮಮಂ ಜಳದಾಗಮಕ್ರಮಂ॥

ಆಸಮಯದೊಳ್,

ಮಲ್ಲಿಗೆಯಂಬೇವುವು ಗಿರಿ ।
ಮಲ್ಲಿಗೆಯಂಬುಳ್ಳೊಡೆನಗೆ ಬೆಳ್ಗಬಿನ ಮೆ ॥
ಲ್ಬಿಲ್ಲೀವುದೊಗೆದ ಕಾಮನ ।
ಬಿಲ್ಲುಳ್ಳೊಡೆನುತ್ತೆ ಕಂತು ಮುಯ್ಯಾಂತಿರ್ಪಂ ॥ ॥೪೫॥

ಅದಿರ್ದುದು ಪಶ್ಚಿಮಾನಿಳನಗುರ್ವಿಸೆ ಕೆಮ್ಮುಗಿಲುರ್ಬೆ ಪರ್ಬುಗೆ ।
ಟ್ಟುದು ಕುಡಿಮಿಂಚು ಸಂಚಳಿಸೆ ಸಂಚಳಿಸಿತ್ತು ಘನಾಘನಸ್ವನಂ ॥
ಪೊದಳೆ ಪೊದಳ್ಕೆಗುಂದಿದುದು ವಾಃಕಣಸಂತತಿ ಸೋರೆ ಸೋರ್ದಡಂ ।
ಗಿದುದೆಳಗಾರೊಳಾಸಕಳಚಾತಕಪೋತತೃಷಾವಿಷಾದನಂ ॥ ॥೪೬॥

ಬಡಪಂ ಬೆಂಬತ್ತೆ ಮೇಪಂ ಮುಱೆದು ಬಿಡದೊಡಲ್ ಕೋಡೆ ತನ್ನಿಚ್ಛೆಗೆ ಪಿಡಿ । ದೆಡೆಯೊಳ್ ಬೆಚ್ಚಂತೆ ಬಾಲಂ ನಿಲೆ ನವಿರೊಡೆದುರ್ವೆಟ್ಟು ಬೆಂ ಪ್ರೋಗೆ ಕಾಲೊಳ್ । ನಡುಕಂ ಮೆಯ್ವೆರ್ಚಿ ಗಂಟಲ್ ಕುಸಿದು ಕಿವಿಯೆಲಿ ಲ್ತಂದು ನಿಂದಿರ್ದುದೋರೊಂ । ದೆಡೆಯೊಳ್ ತಾಱಲ್ಗಳೊತ್ತಂಬಿಡಿದು ಮೃ ಗಮೃಗೀವೃಂದವೋರಂದದಿಂದಂ ॥ ॥೪೭॥

ನೊರೆವುಲ್ಲಂ ಮೇದಿರಲ್ಕಿಣ ತುಮುಳೆ ಕುಡಿದು ಪೂರಾಂಬುವಂ ಬೀಗಿ ಬೆನ್ನಿಂ । ಬಿರಿವನ್ನಂ ಕೊರ್ವಿ ಮುಂಗಾಲ್ ಗಡಿಯೆನೆ ಕಡುಗೆಚ್ಚಲ್ ಪೊದ ಟ್ಟಿಂದು ವತ್ಸೋ ॥ ತ್ಕರಮೆಲ್ಲಂ ಬಾಲವಂಬಂ ಕಱೆಯೆ (?) ಬಹಳರೋ ಮಂಥಘೋನಾವಳೀಪಾಂ । ಡುರವಕ್ತ್ರಂ ಮಾಹಿಷೀಸಂತತಿ ವಿಪಿನಭವಂ ಕಣ್ಗಗುರ್ವಾಯ್ತು ಕಾರೊಳ್ ॥ ॥೪೮॥

ಅದಲ್ಲದೆಯುಂ

ವಿಯದವಳಂಬಿನೀಳಘನಮಾಳಕೆಯಂ ಗಜರಾಜೆಯೆಂದು ದಿ ।
ಕ್ಜಯಪರಿಪೂರ್ಣಮೇಘರುತಿಯಂ ಪಟಹಧ್ವನಿಯೆಂದು ಮಿಂಚಿನಂ ॥
ಗಿಯ ಪೊಳೆಪಂ ಘಟಾಸ್ತ್ರರುಚಿಯೆಂದಿರದಂಗಜರಾಜಸೈನ್ಯಭೀ ।
ತಿಯನೊಳಕೆಯ್ದುದಬ್ದಸಮಯೋತ್ಸವದೊಳ್ ಪಥಿಕಾಂಗನಾಜನಂ ॥೪೯॥

ಅಂತು ಬಂದ ವರ್ಷರ್ತುವಿರಾಮಸಮಯದೊಳೊಂದು ದಿವಸಂ ಪಲ್ಲವಿತಫಲ್ಲೀತರುಗಹನಕೇದಾರಹರಿತಾಯಮಾನಮಪ್ಪ ಹರಿತ್ಪ್ರದೇಶಸ್ಥಿತಿಶಂ ಮಹಾಪ್ರಾಸಾದದುಪರಿಮತಳದೊಳಿರ್ದು ನೋಡುತಿರ್ಪನ್ನೆಗಂ;

ಎಸೆವ ನಭಸ್ಸರೋವರದೊಳುಣ್ಮಿ ಕೆಲಕ್ಕೆ ತೆರಳ್ದ †ನೀಲಿಕಾ ।
ಪ್ರಸರಮೊ ಮೇಣಿದಂಬರಮಹಾಂಬುಧಿಪಾರದಪಾರರತ್ನರು ॥
ಗ್ವಿಸರಮೊ ಭಾವಿಪಂದಿದು ವಿಯಚ್ಚಕ್ಕಿಕಂಠದ ವರ್ಣರಾಜಿಯೊಂ ।
ದೆಸಕವೊ ತಾನಿದೆಂದೆನಿಸಿತಂದು ಪುರಂದರಚಾಪವಿಭ್ರಮಂ ॥೫೦॥

ಆಗಳದಲಿ ಚಾಷಚ್ಛದಚ್ಛಾಯಾನುಕಾರಿಯಪ್ಪ ಮಸೃಣವರ್ಣಪ್ರಸರಮೇಳಾಪವೈಚಿತ್ರ್ಯಮಂ ಚಿತ್ರಕಳಾವಿಶಾರದಂ ಪರಿಭಾವಿಸುತ್ತುಮಿರ್ಪನ್ನೆಗಂ;

ನರರ ಸಿರಿ ಕರಗುವಂತಿರೆ ।
ನರರ ವಯೋಲಕ್ಷ್ಮಿ ಕರಗುವಂತಿರೆ ಮತ್ತಂ ॥
ನರರಾಯು ಕರಗುವಂತಿರೆ ।
ಕರಗಿದುದದು ನೋಡೆ ನೋಡೆ ಗಗನಾಂತರದೊಳ್ ॥ ॥೫೧॥

ಅಂತಾಬಿಸಜರೋಹಿತಂ ತಿರೋಹಿತಮಾಗೆ ವೈರಾಗ್ಯರಸಾವಗಾಹಿತಮತಿ ಮಹೀಪತಿ ಸಂಸೃತಿಯ ಅನಿತ್ಯತೆಗಿಡುವೆ ನಿದರ್ಶನಮೆಂದು ಆತ್ಮಗತದೊಳಂತೆಂದಂ:—

ಕತಿಪಯನಿಮೇಷಮಾತ್ರ ।
ಸ್ಥಿತಿ ಸಾಂಸಾರಿಕವಿಳಾಸಮದನೆ ಬಲಂ ಶಾ ॥
ಶ್ವತಮೆಂದೆ ಬಗೆದು ರಾಗಾಂ ।
ಧತೆಯಿಂ ಗತಿಗಿಡುವರೇಂ ವಿಚಿತ್ರಮೊ ಕರ್ಮಂ ॥ ॥೫೨॥

ತರುಣೀಲೋಚನಲೋಲಮಾಯುವಚಲಸ್ರೋತಸ್ವಿನೀಸಂಚಲಂ ।
ಸಿರಿ ಹಸ್ತಿಶ್ರವಣಾಂಚಳಾಸ್ಥಿರತರಂ ತಾರುಣ್ಯಮಾಕಾಲಿಕೀ ॥
ಸ್ಫುರಿತಾತಿಕ್ಷಣಿಕಂ ಶರೀರಮೆನಿಪೀವಮಾನುಷ್ಯಮಂ ದೂಷ್ಯಮಂ ।
ಚಿರಮೆಂದಾಟಪನಾವನಾತನೆ ಬಲಂ ನಿಶ್ಚೇತನಂ ಲೋಕದೊಳ್ ॥ ॥೫೩॥

† ಪೀಲಿಗಾಚ್ಛಸರವೊ

॥ ತ್ರಿಪದಿ ॥

ಕೇಡನಾಗೆಂದಾಗಂ ಕಿಡೆಂದು (?) ವಿಪರೀತಂ ।
ಮಾಡಿಯೆ ನೆಗಳ್ದು ಜಡಜಂತು ಮೂಡಿ ಮು ।
ಟ್ಟಾಡುಗುಂ ಜನ್ಮಜಡಧಿಯೊಳ್ ॥ ॥೫೮॥

ಬಕ್ಕಮುಳಿಮುಳಿಯಜ್ಞಾಂಬುವ ।
ಸಕ್ಕಟ! ಪಲ್ವಲಸಮುಲ್ಬಣಾಂಬುವನೀಂಟಿ ॥
ಲ್ಕಕ್ಕುಮೆ ನಿರ್ವೃತಿಯಂ ಪೆಱ ।
ಗಿಕ್ಕಿ ಬುಧಂ ತೊಡರಲಕ್ಕುಮೇ ಸಂಸೃತಿಯೊಳ್ ॥ ॥೫೯॥

ಅನಿಪಱಿವನೆನ್ನದಿದೆಂ ।
ಬೀನುಡಿಯಿಂದಾದಣುಸ್ರವಾಣದ ಸುಖಕ ॥
ಜ್ಞಾನದೆ ಜೀವಂ ದುಃಖಮು ।
ನೇನೆಯ್ದಿದಪ್ರದೊ ಮಹಾಮಹೀಧರಸಮಮಂ ॥ ॥೫೬॥

ಜಳಬುದ್ಬುದಮಂ ಕಬ್ಬೊ ।
ಳ್ನೊಳೆ ಕಟ್ಟಪೆನೆಂಬ ಮರುಳ ಗುರುವಾಗದಿರಂ ॥
ವಿಳಯಸ್ವಭಾವಮಂ ಸಲೆ ।
ತಳೆದೊಡಲಂ ನಿಟ್ಟೆಮಾಡಲುಜ್ಜಗಿಪಾತಂ ॥ ॥೫೭॥

ಅದುಕಾರಣದಿಂ,
ಕಲ್ಲಿಂ ಕಾಂಚನಮಂ ತಡ ।
ಮಿಲ್ಲದೆ ಸತ್ಕ್ರಿಯೆಯ ಬಲದೆ ತೆಗೆವಂತೆ ಈರಂ ॥
ಪೊಲ್ಲಮೆನಿಪ್ಪೊಡಲಿಂ ಕೇ ।
ಡಿಲ್ಲದ ಪುಣ್ಯಮನುಪಾರ್ಜಿಪಾತಂ ಚತುರಂ ॥ ॥೫೮॥

ಅದಲ್ಲದೆಯುಂ
ಅಱಿಯದೆ ಬಹ್ವಾರಂಭದೊ ।
ಳುಱಿ ಬೆಂದೆಂ ತೊಡರ್ದುಮುನ್ನವದೆ ಸಾಲದೆ ಮು ॥
ತ್ತಱಿದುಂ ತೊಡರ್ದೊಡೆ ನಾಡೆಯು ।
ಮಱಿವರುಳಿಂದಱಿವರೆನ್ನನುಱಿವರ್ ಬಱಿಯಂ ॥ ॥೫೯॥

ಎಂದು ಪರಿಚ್ಛೇದಿಸಿ

ಜನನಾಥಂ ಗೋತ್ರಮಿತ್ರಾಧಿಕೃತಸಚಿವಸಾಮಂತಶುದ್ಧಾಂತಕಾಂತಾ । ಜನಕಾತ್ಮೋದ್ಯೋಗಮಂ ಪೇಳ್ದಿರದೆ ಬಿಡಿಸಿ ತನ್ಮೋಹಮಂ ರಾಜ್ಯಮಂ ನಂ । ದನನೊಳ್ ಶ್ರೀಕಾಂತನೊಳ್ ಯೋಜಿಸಿ ತಳರ್ದುಂ ತಪೋಲಕ್ಷ್ಮಿಯಂ ತಾಳ್ದಿದಂ ಪಾ । ವನನುಂ ಶ್ರೀಶ್ರೀಪ್ರಭಾಚಾರ್ಯರ ಪದಕಮಲೋಪಾಂತದೊಳ್ ಶಾಂತಚಿತ್ತಂ ॥ ॥೬೦॥

ಅಂತಖಂಡಿತವೈರಾಗ್ಯಮಂಡಿತಂ ಶ್ರೀವರ್ಮಮಂಡಲೇಶ್ವರಂ ದುರ್ಧರತಪೋಮಹಾತಪಕ್ಷಪಿತಜೀವನಂ ಜೀವಿತಾನ್ತ್ಯದೊಳ್ ಸಮಾಧಿವಿಧಿಯಿನವತೀರ್ಣಶರೀರಭಾರನಾಗಿ ಸಕಲಸಂಸಾರಸುಖಕಾರ್ಮಮೆನಿಪ ಸೌಧರ್ಮಕಲ್ಪದ ಶ್ರೀಪ್ರಭವಿಮಾನದುಪಪಾತನಿಕೇತನದೊಳ್

ಶರದದ ಬೆಳ್ಮುಗಿಲ್ವೊಱೆಯಿನುಣ್ಮುವ ನಿರ್ಮಳಮೌಕ್ತಿಕಕ್ಕೆ ತಾಂ ।
ದೊರೆಯೆನೆ ಪುಟ್ಟಿದಂ ಧವಳತಲ್ಪಯುಗಾಂತರದೊಳ್ ನಮೇರುಶೇ ॥
ಖರಧರನಾತ್ತನೂತ್ನವಯಸಂ ಮಣಿಕುಂಡಲಮೌಳಿಮೇಖಳಾ ।
ಭರಣವಿರಾಜಿತಂ ತರುಣಕಂಚುಕಿಕಂಚುಕಚಂಚುರಾಂಬರಂ ॥೬೧॥

ಅಂತು ಪುಟ್ಟಲೊಡಂ

ನೆಱೆದಾತನ ಪುಣ್ಯಮೆ ಕ ।
ಣ್ದೆಱೆದಂತಿಱೆ ತೆಱೆದುವಾವಿಮಾನದ ಪಡಿಗಳ್ ॥
ನಱುಗಂಪು ಪೊಣ್ಮಿ ಸಗ್ಗದ ।
ಮಿಱುಪಿನಿಯರ ಮನಮುಮೊಡನೆ ಪಡಿದೆಱೆವಿನೆಗಂ ॥ ॥೬೨॥

॥ ರಗಳೆ ॥

ಆಸಮಯದೊಳರಲ್ಗಳ್ ಸುರಿಯುತ್ತಿರೆ ।
ಬೀಸಿದುದೆಲರುತ್ಸವಮೊಱೆಯುತ್ತಿರೆ ॥
ತೆಱೆದತ್ತು ಪಗೈಹನಿವಹದ ಪಡಿಗಳ್ ।
ತುಱುಗಿದುವೆತ್ತಂ ಜೈನರ ಗುಡಿಗಳ್ ॥
ಹರಿನೀಳಸ್ಥಳಿಯೊಳ್ ಬಣ್ಣವುರಂ ।
ಪರಿಪೆತ್ತುದು ಬಗೆ ಮರುಳ್ವನ್ನೆವರಂ ॥

ಪರಿಚಂದನವಂದನಮಾಲಿಕೆಗಳ್ ।
ಪರಿವೇಷ್ಟಿಸೆ ಮೆಱೆದುವು ಶಾಲಿಕೆಗಳ್ ॥
ಕೆದಱಿದ ಪೂವಲಿಗೆಱಗಿತು ಸುತ್ತುಂ ।
ಮದಪಟುಧುಪಾವಳಿ ಗಾವರಿಸುತ್ತುಂ ॥
ಮುತ್ತಿನ ಕಡೆ ಭಿತ್ತಿಯ ಕಡೆಗಡೆಯೆನೆ ।
ಸುತ್ತಿಱಿದುದು ಮಣಿಗೃಹದೆಡೆಯೆಡೆಯನೆ ॥
ಸೂಸುವ ನವಪಟವಾಸದ ಚೂರ್ಣಂ ।
ಮಾಸರಮಾದುದು ದಿಕ್ಪರಿಪೂರ್ಣಂ ॥
ಮಂಗಳಗೀತಿಯ ನಿನದದೊಳಾದಂ ।
ಸಂಗಳಿಸಿದುದು ಮೃದಂಗನಿನಾದಂ ॥
ಬಿಡದಚ್ಚರಸಿಯರಂತಾಲಯಮಂ ।
ಪಿಡಿದಭಿನಯಿಸಿದರೆಸೆವಭಿನಯಮಂ ॥
ಸುರವಂದಿವ್ರಜಜಯಜೀಯರವಂ ।
ಪರಿಪೂರಿಸಿದತ್ತಾಶಾಂಬರವಂ ॥
ವಿಕರಣಸಂಭವದೇವೀಪ್ರಕರಂ ।
ಸಕಳೋಪಕರಣನಿಕರಾತ್ತಕರಂ ॥
ಬಂದಿದಿರೊಳ್ ನಿಂದುದು ನಲವಿಂದಂ ।
ಸಂದಣಿಸಿರ್ದುದು ದೇವೀವೃಂದಂ ॥
ಕನ್ನಡಿಯಡಪಡ ಡವಕೆಯ ಚೆನ್ನೆಯ ।
ರೇನ್ನಡೆದೆಯ್ತಂದರೊ ಸುರಕನ್ನೆಯ ॥
ರುಲ್ಬಣರಾಗದಿನೆಱಗಿದುದನಿತುಂ ।
ಕಿಲ್ಬಿಷಕಪ್ರಕರಂ ಜೀಯೆನುತುಂ ॥
ವಿವಿಧಾಪ್ಸ್ಯಕರರ್ ಕಾಣ್ಬುಜ್ಜಗದಿಂ ।
ಭವನಮಹತ್ತರದೇವರ್ ಕ್ರಮದಿಂ ॥
ಬರೆ ಸುರಪತಿ ಕಂಡಿನಿತು ಮಹಕ್ಕಂ ।
ಪಿರಿದುಂ ಚಿಕ್ಕಸಮುತ್ತು ಬೆಳಕ್ಕಂ ॥ ॥೬೩॥

ಪೆಣದೆರ್ದೆಯಲ್ಲಿ ತಣ್ಮಲೆವ ಸಂತಸವೆತ್ತಣದೀವಿಮಾನವೆ ।
ತ್ತಣದಿದಿರೊಳ್ ನಿಗುಂಬಿಪಮರಾಳಿಯೆತ್ತಣದೆಯ್ದೆ ತೋರ್ಪ ಪೆ ॥
ಕ್ಕಣದ ವಿಳಾಸವೆತ್ತಣದು ಲೋಕವಿದೆತ್ತಣದಾನುಮಿಾಗಳೆ ।
ತ್ತಣನೆನುತುಂ ವಿಚಾರಿಸಿದನೇಂ ಭವಸಂಧಿವಿಮೋಹದಂದಮೋ ॥೬೪॥

ತದನಂತರಂ,

ತೊಟ್ಟನಿರುಳ್ ನಡೆವಂ ಪೊಲ ।
ಗೆಟ್ಟಲ್ಲಿಯೆ ನೇಸಱೊಗೆವಪ್ಪೊಲ್ ಕಲ್ಲೆರ್ದೆಯೊಳ್ ॥
ಪುಟ್ಟಿ ಭವಪ್ರತ್ಯಯವೊಡ ।
ವುಟ್ಟಿದರ್ ಱಿಯಮೆಯನಳಱಿ ದಿವಿಜಂಗಾಗಳ್ ॥ ॥೬೫॥

ಅಂತು ಪಲಕಾಲಮೇನಾನುಮಂ ಪೂಣಿ ಮಱೆದವಂಗೆ ನೆನವಿ ಪುಟ್ಟುವಂತೆ ಪುಟ್ಟಿದ ಭವಪ್ರತ್ಯಯಜ್ಞಾನಪ್ರಭಾವದಿಂದಂ

ಪ್ರಥಮಸ್ವರ್ಗಮಿದೀವಿರಾಜಿಪ ವಿಮಾನಂ ಶ್ರೀಪ್ರಭಂ ಸತ್ತಪಃ ।
ಪಥಮಂ ಶ್ರೀಜಿನನಾಥದರ್ಶಿತಮನಾಂ ಮುಂ ಪೊರ್ದಿ ಬಂದಿಲ್ಲಿ ತ ॥
ತ್ಪೃಥುಪುಣ್ಯೋದಯದಿಂದೆ ಪುಟ್ಟಿದೆನಿದೆಲ್ಲಂ ಪ್ರಾಪ್ತಸೇವಾಮನೋ
ರಥಮಸ್ಮತ್ಪರಿವಾರಮೆಂದಱಿದನಾವೃತ್ತಾಂತಮಂ ಸ್ವಾಂತದೊಳ್ ॥೬೬॥

ಅನ್ನೆಗಮೆಯ್ದೆವಂದು ಪೊಡೆಮಟ್ಟು ಮಹತ್ತರದೇವರೀಶ ನೀಂ ।
ಮುನ್ನಿನ ಜನ್ಮದೊಳ್ ನೆಗಟ್ಟಿ ಜೈನತಪಃಫಲದಿಂದಮೀನಿಳಂ ॥
ಪೊನ್ನತಸೌಖ್ಯಮಂ ಪಡೆದೆಯಂತದಱಿಂ ಜಿನರಾಜಪೂಜೆಯಂ ।
ಮುಂ ನೆಗಟಿಲ್ಕೆ ವೇಟ್ಟುಕುಮದು ಕೃತ್ಸ್ನಸುಖಪ್ರಭವೈಕಕಾರಣಂ ॥೬೭॥

ಜಿನಪದಯುಗಪ್ರಸೂದದಿ ।
ನಿನಿತು ಸುರಶ್ರೀಯನೆಯ್ದೆ ತಾಳ್ದಿದೆಯದಱಿಂ ॥
ನಿನಗನ್ವರ್ಥಂ ಶ್ರೀಧರ ।
ವಿನುತಾಹ್ವಯಮೆಂದು ಪೊಗಟ್ಟಿದಾದಿವಿಜಜನಂ ॥ ॥೬೮॥

ಅನಂತರಮಾದೇವಂ ದೇವಾಧಿದೇವಪದರಾಜೀವಸೇವಾಧೀನಮಾನಸಂ ತದ್ವಿಮಾನದಿಂ ಪೊಱಮಟ್ಟು ಆತ್ಮರಕ್ಷಕಾಭಿಯೋಗ್ಯಪ್ರಕೀರ್ಣಸಂಮಾನಿತಾಮರಾದಿಸರಿಜನಸರೀತನುಂ, ಅನರ್ಘಪೌಳಿಮಣಿಗಣಪ್ರಭಾಪ್ರಸರಪರಿ

ವೇಷವರಿನೃತೋದ್ದಂಡಪುಂಡರೀಕಪೂರ್ಣಿಮಾಚಂದ್ರನುಂ, ದೇದೀಪ್ಯಮಾನ ಮಾಣಿಕ್ಯಕುಂಡಲಪ್ರತಿಬಿಂಬಮಾರ್ತಂಡಮಂಡಳಮಂಡಿತಾಂಶೂದಯಾಚಲ ಶಿಖಂಡನುಂ, ಆನಾಭೀವಲಯಪ್ರಲಂಬಮಾನಚಕಚಕಿತಮುಕ್ತಾಹಾರಭಾರ ಮುಳ್ಳಯಜಸ್ಸ್ಯಾಸಕಸ್ಥಗಿತವಿಸ್ತೀರ್ಣವಕ್ಷಸ್ಸ್ಥಲನುಂ, ಅಯನಲೀಲಾಂಬೋ ಳಾಯಿತಧತ್ನವಳಯೋನ್ಮುಖಮಯೂಖಲತಿಕಾಪ್ರತಾನಪರಿವೇಷ್ಟಿತಭುಜಾ ದಂಡಪಾರಿಜಾತಕಾಂಡನುಂ, ಉತ್ತಪ್ತತಪನೀಯಚ್ಛಾಯಾಪ್ರಾಯಕಾ ಯಕಾಂತಿಸಂತಾನಸಂಗಮಪಿಶಂಗೀಭೂತಸಹಜಾತನೂತನದುಕೂಲಾಂಚಲ ನುಂ, ಅತಿವಿಶದಚರಣನಖಕಿರಣಶಂಕಾಸಮುತ್ಪಾದಕಪಾದಾಲಂಕಾರಶೋಕ್ತಿ ಕೇಯದೀರ್ಘದೀಧಿತಿಕ್ಷೀರಧಾರಾಪ್ರಕ್ಷಾಳಿತಾಕ್ಷಿಣಹರಿನೀಳಮಣಿಕುಟ್ಟಿಮ ನುಮಾಗಿ ಪಾದಮಾರ್ಗದಿಂ ಪೋಗಿ ಸೌಧರ್ಮಕಲ್ಪದೊಳುಳ್ಳಕೃತಕಚೈತ್ಯಾ ಲಯಂಗಳಂ ಕಲ್ಪಪಾಡಪಪ್ರತಿಪಾದಿತವಿವಿಧಾರ್ಚನಂಗಳಿಂದರ್ಚಿಸಿ ಬಂದು ನಿಜಮಂದಿರಪುರೋಭಾಗದ ಚಂಚತ್ಪಂಚರತ್ನಮಯಮಂಡಪಮಧ್ಯಾಧಿಷ್ಠಿ ತನಿಷ್ಟಪ್ತಕಾಂಚನಸಿಂಹಾಸನವಿಷ್ಟರದೊಳ್

ಎಸೆವ ಜಿನೇಂದ್ರಬಿಂಬಮನಳುಂಬಮಿದೆಂಬಿನವುಚ್ಚಿಯಿಂ ಪ್ರತಿ ।
ಷ್ಠಿಸಿ ಮನವಾಱೆ ಮಾಡಿ ಸವನೋತ್ಸವಮಂ ಕ್ರಮದಿಂ ಬಚಿಕ್ಕಮ ।
ರ್ಚಿಸಿ ನೆಱೆದೆಂಟುಮರ್ಚನೆಗಳಿಂ ರಸವೃತ್ತಿಯ ನೃತ್ತಮಂ ಪ್ರವ ।
ರ್ತಿಸಿ ಮಗುಳ್ದಾಪ್ರಕಾರದಿನನುಷ್ಠಿಸಿದಂ ದಿವಸಾಷ್ಟಕಂಬರಂ ॥೬೯॥

ಅಂತಷ್ಟಾಹ್ನಿಕಮಹಾಮಹಮನರ್ಹತ್ಪರಮೇಶ್ವರಂಗೆ ಮಾಡಿ ಬಚಿಕ ಮಣಿಮಾದಿಗುಣಸಂಪನ್ನನುಂಜರಾರೋಗಸ್ವೇದಸಂತಾಪಾಕ್ಷಿಪಕ್ಷಪಾತವ್ಯ ಪೇತನುಂ, ಸಪ್ತರತ್ನಿಪ್ರಮಾಣದೇಹೋತ್ಸೇಧನುಂ, ಸಾಗರೋಪಮದ್ವಿತ ಯಸಮ್ಮಿತಾಯುಷ್ಕನುಂ, ದ್ವಿಸಹಸ್ರಹಾಯನಾಂತರಕೃತಾಮೃತಾಶನನುಂ, ಪಿಕೈಕಮಾಸಪ್ರಭವದಭಿನವಸುರಭಿನಿಶ್ವಾಸೋಚ್ಛ್ವಾಸ್ವನುಂ, ಕಾಯಪ್ರ ವಿಚಾರಚತುಸ್ಸಹಸ್ರಪ್ರಿಯಪ್ರಮಾಧೀಶ್ವರನುಂ, ಅತರ್ಕ್ಯವಿಭವವಿಳಸಿತ ನುಮಾಗಿ

ಉರವುಮರ್ದಪ್ಪಿ ಚಪ್ಪಲರ್ದ ಪೆರ್ಮೊಲೆಯಿಂ ವದನಂ ಸುಧಾಮಯಾ ।
ಧರಪರಿಸೇವೆಯಿಂ ತೊಡೆ ತೊಡಂಕಿದ ಸುಣ್ಣೊಡೆಯಿಂ ಮನಂ ನಿರಂ ॥

ತರಸುರತಪ್ರಸಂಚಸುಖದಿಂ ಪೆಱಿಟಿಂಗದಿನಿತ್ತು ಮೆಂಬಿನಂ ।
ಸುರನುಪಭೋಗಮಂ ತ್ರಿದಶವಾರವಧೂಜನದೊಳ್ ನಿಮಿರ್ಚಿದಂ ॥೭೦॥

ಮತ್ತಂ

ಸೊಗಯಿಪ ಪೊಂಕು ಲಾಲಿಸುವ ಲಲ್ಲೆ ಮರಲ್ಚುವ ಮಾತು ಚಿತ್ತಮಂ।
ತೆಗೆವ ತೆಗಟ್ಟೆ ಮೋಹಿಪ ವಿನೋದಮರಲ್ಚುವಪಾಂಗವೀಕ್ಷಣಂ ॥
ಪೊಗಱಿಪ ಪೊರ್ದುವಾಸೆ ಬಸದಾಗಿಪ ಬಟ್ಟೆನಿಪೀವಿಭಾವಚೇ ।
ಷ್ಟೆಗಳಿನದೇನಲಂಪನೆರ್ದೆಗಿತ್ತರೊ ಸಗ್ಗದ ಪೆಂಡಿರಾತನಾ ॥ ॥೭೧॥

ಅಮರ್ದುಣಿಸಗ್ಗದಚ್ಚರಸಿಯರ್ ವಧುವರ್ ನಿಳಯಂ ಪರಾರ್ಥ್ಯರ ।
ತ್ನಮಯವಿಮಾನಮಾಳ್ಗಳಮರರ್ ಹರಿನೀಳತಳಂ ಧರಾತಳಂ ॥
ಪ್ರಮದವನಂ ಸುರದ್ರುಮವನಂ ಬಿನದಂ ನವದಿವ್ಯನಾಟಕೋ ।
ದ್ಯಮಮೆನೆ ಬಣ್ಣಿಪಂಗೆ ಸುಖಸಂಪದಮೇಂ ಗಳ! ಮೊಗ್ಗೆ ಸಗ್ಗದಾ ॥೭೨॥

ದಿಟದಿಂದೊಲ್ದವರಂ ಲಂ ।
ಪಟತೆಯಿನಮರ್ದಪ್ಪಿ ನೆರೆವ ನೆರೆವನಿತು ಸುಖಂ ॥
ಘಟಿಯಿಸದು ತಮ್ಮೊಳೆನಿಸುವ ।
ಮಿಟಮಿಟಸಗ್ಗಂಗಳೋಳಿಯೇ ಸೌಧರ್ಮಂ ॥ ॥೭೩॥

ಅದಲ್ಲದೆಯುಮೋರೊರ್ಮೆ ನಿಜವಿಮಾನದುಪವನಂಗಳೊಳಗಣೋಲಗ ಸಾಲೆಯೊಳನೇಕನಾಕಿನಿಕರಪರಿವೃತನಾಗಿರ್ಪಲ್ಲಿ

ಜಲಜಲಿಸುತ್ತುಮಿರ್ಪ ಮಣಿಭಿತ್ತಿಗಳೊಳ್ ನಿಜಮೂರ್ತಿಯೆತ್ತಲುಂ ।
ನೆಲಸಿ ಜಲಕ್ಕನಾಗಿರೆ ನಿರೀಕ್ಷಿಸಿ ಲೀಲೆಯಿನೋಲಗಕ್ಕೆ ವ ॥
ರ್ಲಘನಿತಂಬೆಯರ್ ಸುರಪುರಂಧ್ರಿಯರೆತ್ತಣಿನೆಂದು ನಿಟ್ಟಿಪಾ ।
ಕುಲತೆಯನೊಂದೆ ಕಂಡು ದಿವಿಜಂ ತಳೆವಂ ದರಹಾಸಲಕ್ಷ್ಮಿಯಂ ॥೭೪॥

ಮಱಪಿಕ್ಕಿ ನೋಡುವಮರಿಯ ।
ತುಱುಗೆಮೆಗಣ್ಬೆಳಗು ಬಳೆಯೆ ಚಾಮರದೆಲರಿಂ ॥
ನೆಱೆ ಮಿಳಿರ್ದುಮಿಱುಪ ದುಗುಲದ ।
ಸೆಱಗೆಂದೆಂದಂದು ತೆಗೆಯಲಾತಂ ಬಗೆದಂ ॥ ॥೭೫॥

ಸಂಕೇತಸೆನುಯುವಮಂ ನಲ ।
ವಿಂ ಕಿವಿಯೊಳ್ ಪಚ್ಚುವೆಚ್ಚರಸಿಯಧರಮುಯೂ ॥
ಖಂ ಕರ್ಣಪೂರಪಲ್ಲವ ।
ಶಂಕೆಯನೊದವಿಸೆ ಸುರೋತ್ತಮಂ ಸೊಗಯಿಸಿದಂ ॥ ॥೭೫॥

ಮತ್ತಂ ಕ್ರೀಡಾಸ್ವಭಾವೆಯರಪ್ಪ ಪಲರುಂ ದೇವಿಯವೆರಸು ವಾಹನಾಮರವಿಕ್ರಿಯಾಶಕ್ತಿಸಂಜನಿತವಾಜಿಸಾಮಜಾದ್ಯನೇಕಯಾನಂಗಳನೇಱಿ ಪೋಗಿ,

ಸುಮನೋಭೂಭೃದ್ದರೀಸುಂದರತರವನದೊಳ್ ನಿರ್ಮಳಾಂಭಸ್ಸ್ವಯಂಭೂ । ರಮಣಾಕೂಪಾರದೊಳ್ ಲೋಚನಹೃದಯಸುಧಾಸ್ಯಂದಿನಂ ದೀಶ್ವರದ್ವೀ ॥ ಪಮಹಾಚೈತ್ಯಾಳಯೊಳ್ ಪಾವನತರನವಸಂಗೀತಕಕ್ರೀಡೆಯಂ ಮಾ । ಡಿ ಮನಃಪ್ರಹ್ಲಾದಮಂ ತಾಳ್ದುವನನವರತಂ ಶ್ರೀಧರಂ ಕೇಳಿಶೀಳಂ ॥ ॥೭೬॥

ಅಂತಾತ್ಮೀಯಸುಕೃತಾಸಾದಿತಮುಮಂ ಅನತಿಶಯಮುಮಂ ಅನನೂನವಿಭವಮುಮಂ ಅಪ್ರತಿಬಂಧಕಮುಮಂ ಅಭಿಮತಾನುಗತಮುಮಪ್ಪ ದೇವಲೋಕಶ್ರೀಯನನುಭವಿಸುತ್ತುಮಿರೆ ನಿಜಾಯುರಬ್ದಿದ್ವಯಮರ್ಧವತ್ಸರಾವಶೇಷಮಾಗಲೊಡಂ

॥ ಹರಿಣೀವೃತ್ತಂ ॥

ತಳೆದ ಸುಮನೋದಾಮಂ ನೀರೋಡಿ ಬಾಡಿದುದಾಗಳಾ ।
ಗುಳಯನೊಳಕೆಯ್ದುತ್ತಾ ಸ್ಯಾಂಭೋರುಹಂ ನಿಜದೇಹದು ॥
ಜ್ಜ್ವಳಿಕೆ ಮಸುಳ್ದೃತಂದಂದೊಂದು ತಂದ್ರತೆ ಚಿತ್ತಮಂ ।
ಬಳಸಿದುದು ಪೇಱಾವೊಂಗೇನಾಗದಾಯುವ ತೌಗೆಯೊಳ್ ॥ ॥೭೭॥

ಅಂತೆಯೆದ್ದಿವರ್ಷ ಜವನ ಜವದಿನಾಜವಂಜವದಸಾರತೆಯನಱಿದಱುದಿಂಗಳುಮನಾತ್ಮತತ್ವಭಾವನೆಯೊಳಂ ಪುಣ್ಯಕಥಾಶ್ರವಣಸಂಭಾವನೆಯೊಳಂ ಜಿನಪೂಜಾಪ್ರಭಾವನೆಯೊಳಂ ಕಳಿಪಿ ಬಳಿಯಂ ಸೌಧಮೌಳಿಂದ್ರಮಂದಿರಾಭ್ಯರ್ಣದ ಕೃತ್ರಿಮಚೈತ್ಯಾಗಾರದೊಳ್

ಪಂಚಗುರುಚರಣಸರಸಿರು ।
ಹಂ ಚಿತ್ತದೊಳಖಿಳವೆಳಹರಂ ನಾಲಗೆಯೊಳ್ ॥
ಪಂಚಪದಂ ನೆಲಸಿರೆಯಿರೆ ।
ಪಂಚತೆಯಂ ನಿಷ್ಪ್ರಪಂಚನೆಯ್ದಿದನಮರಂ ॥ ॥೭೯॥

ಆ ಸಮಯದೊಳ್

ಘಟಿಲನೆ ಬಳಾಕೆಯಾಕೃತಿ ।
ಮಟಿಗಾಲದೊಳಿರದದೃಶ್ಯಮಪ್ಪಂದದಿನಿ ॥
ತ್ತುಟಿಯದೆ ಕಡೆಗಾಲದೊಳಳ ।
ವಟಿಯೆ ಸುರಂ ಮಾಯಮಾಯ್ತು ದಿವಿಜನ ದೇಹಂ ॥ ॥೮೦॥

ಅಂತಲ್ಲಿಂದಂ ತಳರ್ದು ಬಂದೀದ್ವಿತೀಯದ್ವೀಪದ ಯಾವ್ಯದಿಶೆಯೊಳೆಸೆ ವಿಷ್ಣುಕಾಧಾರಿಣೀಧರದ ಮೂಡಣ ಭರತದೊಳ್ ಲುಬಹಿತಲೋಭವಶಜನಸರಿಪೂರ್ಣನಾನಾನಗರನಂದನವನನದೀರತ್ನನಿಕರಾಕರಸರಃಕೇದಾರಸೂರಸಂಪದ್ವಿಷಯಮುಪ್ಪ ಅಳಕಾವಿಷಯಮೆಂಬ

ದೇಶದೊಳೊಪ್ಪುಗುಂ ನಗರಿ ಕೋಸಳೆಯೆಂದದನಾಳ್ವನುಗ್ರಖಿ ।
ಡ್ಗಾಶನಿಪಾತಿತಾನ್ಯಮಹಿಭೃದ್ವ್ರಜನಪ್ಪಜಿತಂಜಯಂ ತದು ॥
ರ್ಕಶನ ಯೋಷೆ ಸಂಜಿತಸೇನೆ ಬಲಿಕ್ಕವರ್ಗಾಸುಧಾಶನಿ ।
ದೇಶಿತವೇಶ್ಯಕನಪ್ಪಜಿತಸೇನನಮಾಪ್ಪಯನಾದನಾತ್ಮಜಂ ॥ ॥೮೦॥

ಆತನನವವ್ಯರಾಜವಿದ್ಯಾಸಮುದಯವಿಶಾರದನುಂ, ಶಾರದಶಶಿಪ್ರಭಾವಿಶದಯಶೋದೀಪ್ತಿದಿಗ್ದಿಕ್ಚಕ್ರನುಂ ಚಕ್ರವರ್ತಿಲಕ್ಷ್ಮಿಕೋಪಲಕ್ಷಿತಾಕ್ಷೂಣಶೋಭಾಸಂಗತಾಂಗಪ್ರತ್ಯಯನುಂ, ಅಂಗಪ್ರತ್ಯಂಗಸಂಭವಾಂಗಿಕಾದ್ಯಭಿನಯಚತುಷ್ಟಯಪ್ರಯುಕ್ತ ಶ್ರುತಕಳಾಪರಿಣತನುಂ ಪರಿಣತಪ್ರವಾಳಪಾಟಿಳಿಮಲೀಲಾಧರನಿಜಾಧರಪಲ್ಲವನುಂ, ಪಲ್ಲವಪಾರಿಯಾತ್ರಪ್ರಭೃತಿನಾನಾದೇಶಯೋಷಿದ್ಗೀಯಮಾನಸೌಭಾಗ್ಯಗೀತನುಂ, ಗೀತವಾದ್ಯವಿದ್ಯಾವಿವೇಕವಿಚಿತಚತುರಾನನುಂ ಚತುರಾನನಸಂಸ್ಕಾರಸಂಯುತೋಪನ್ಯಾಸವಿತ್ರಾಸಿತಪರಮತನುಂ, ಪರಮತತ್ತ್ವಾರಿಚಿತಗುರುಜನಮನೋಪಹ್ಲಾದಜನಕನುಂ, ಜನಕಪ್ರತಿಷ್ಠಿತಪ್ರಾಜ್ಯಯೌವರಾಜ್ಯಪದವೀಸುಸ್ಥಿತನುಮಾಗಿ,

ಕುಳಿಶರಥಾಂಗಾಂಕಂ ಕರ ।
ತಳದೊಳ್ ಕರಮೆಸೆಯೆ ಲಸಿತವೈಭವಲಕ್ಷ್ಮೀ ॥
ನಿಳಯಂ ಯುವರಾಜಂ ಕ ।
ಣ್ಗೊಳಿಸಿದನಿಂದ್ರನೊಳುಹೇಂದ್ರನೊಳ್ ಸರಿವರುತುಂ ॥ ॥ ೯೦॥

ಮಣಿಮಯಮಂ ವಿಭೂಷಣಸಮುಚ್ಛ್ರಯಮಂ ಸಹಜಾತಮಂ ವಪುಃ ।
ಕಿಣಕರಮಂ ನಿರರ್ಥಮಮರ್ತ್ಯತೆಯೊಳ್ ಸಲೆ ಪ್ರೋತ್ತೆನೆಂಬುದೊಂ ॥
ದೆಣಿಕೆ ಮನಕ್ಕೆ ವಂದುದೆನೆ ಮರ್ತ್ಯತೆಯೊಳ್ ತಳೆದಂ ಸಹಾರ್ಥಮಂ ।
ಗುಣಮಯಮಂ ವಿಭೂಷಣಕದಂಬಮನಂಗಸುಖಾವಳಂಬಮಂ ॥ ೯೧॥

ದಿವಿಜತೆಯ ಮೂರ್ತಿ ಮೈಯ್ಯಿ ।
ಕ್ಕುವುದುಂ ತಾನೆ ಗಡ ಮಾಣ್ದುದದು ಚೆಲ್ವಲ್ತೆಂ ॥
ದವನ ಮನುಜತೆಯ ತನು ನೋ ।
ಟ್ಪವರೊಳ್ ಮಾಣಿಸಿದುದಾದಮೆಮೆಯಿಕ್ಕುವುದಂ ॥ ॥ ೯೨॥

ಎನಿಸಿ ಸಕಲಸೌಂದರ್ಯಸಾರಸಂಪನ್ನತೆಯನಪ್ಪುಕೆಯ್ದು,
ಸಕಳಾರ್ಥಿವ್ರಾತಚಕೇತೋಮುದನುನನುಲರೈಧಾರೆಯಿಂ ವೈರಿಭೂಪಾ ॥
ಳಕಜಾಳಸ್ವಾಂತಚಿಂತಾಭರಮನಸಿಲತಾಧಾರೆಯಿಂ ಕಿಲ್ಬಿಷವಾ ।
ತಕಳಂಕೋಚ್ಛಿತ್ತಿಯಂ ಸಂತತಜಿನಸವನೋದ್ಯತ್ವಯೋಧಾರೆಯಿಂಮಾ ।
ಡಿ ಕರಂ ಪ್ರಖ್ಯಾತಿವೆತ್ತಂ ನೃಪತನಯನನೇಕಾಂತವಿದ್ಯಾವಿನೋದಂ॥ ೯೩॥

॥ ಗದ್ಯಂ ॥

ಇದು ಪರಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿ ತ್ರೈವಿದ್ಯಾಚಕ್ರವರ್ತಿಪದಪದ್ಮನಿಧಾನದೀಪವರ್ತಿ
ಶ್ರೀಮದಗ್ಗಳದೇವ
ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಶ್ರೀಧರಾಮರ ಸ್ವರ್ಗಾವತರಣವರ್ಣನಂ
ಚತುರ್ಥಾಶ್ವಾಸಂ

ಶ್ರೀಜನ್ಮನಿಳಯನಖಿಲಮ ।
ಹೀಜೀವನಮೂರ್ತಿ ವಾಹಿನೀಪ್ರಿಯನೇಂ ರಾ ॥
ರಾಜಿಸಿದನೊ ಶರನಿಧಿಯೆನೆ ।
ರಾಜಸುತಂ ಜೈನಜನಮನೋಹರಚರಿತಂ ॥ ॥೧॥

ತನ್ನಯ ತನಯನನಮಳಕ ।
ಳೋನ್ನತನಂ ನೋಡಿ ವಾರ್ಧಿ ಪೆಚ್ಚುವ ತೆಱದಿಂ ॥
ತನ್ನಯ ತನಯನನಮಳಕ ।
ಳೋನ್ನತನಂ ನೋಡಿ ಪೆಚ್ಚುವಂ ನೃಪತಿಲಕಂ ॥ ॥೨॥

ಅಂತನೂನಪ್ರಮೋದಾಲಿಂಗಿತಾಂತರಂಗನಾಗಿರ್ಪೊಂದು ದಿವಸಮುಜಿ ತಂಜಯಮಹಾರಾಜಂ ಯುವರಾಜಂಬೆರಸು ನಿಜಭುಜಾಕ್ರಾಂತಪ್ರತ್ಯಂತ ರಾಜಸಮಾಜಂಬೆರಸು ಪ್ರೇಷಿತಾಶೇಷಪ್ರಕೃತಿಸಮೇತಸಚಿವಸಂದೋಹ ಸಂದರ್ಶನಾರ್ಥಂ ಸರ್ವಾವಸರಸಭಾಮಂಟಪದೊಳಂತಃಪುರಾಂಗನಾಜನ ಸಂಗತನಖಿಳಪ್ರಧಾನಪರಿವಾರಪರಿಕೃತನುಮಾಗಿರೆ

ಸಿರಿಯಂ ಮಂದಾರಮಂ ಚಂದ್ರನನಮಲಮಣಿಶ್ರೇಣಿಯಂ ಮಾಣದಂತೆ। ಕರಿಸಿರ್ದಾ ಪೂರ್ಣಿದುಗ್ಧಾರ್ಣವದೊರೆಗೆಣೆವಂದತ್ತು ಮಾದೇವಿಯಂ ಭೂ ವರನಂ ತತ್ಪುತ್ರನಂ ಸೇವಕಸಕಲನೃಪಾನೀಕಮಂ ಕೂಡೆ ಗರ್ಭೀರ್ । ಕರಸಿರ್ದುದ್ದಾಮಸೌಧದ್ಯುತಿಭರಿತಹರಿದ್ವ್ಯೂಹಮಾಸ್ಥಾನಗೇಹಂ ॥ ೩॥

ಅಂತೊಡ್ಡೋಲಗಂಗೊಟ್ಟಿರ್ಪಿನೆಗಂ,

ಭರದಿಂದಂಬರವೀಥಿಯೊಳ್ ನಿಜವಿನೋದಾಪಾದನೋದ್ಯೋಗದಿಂ ।
ಬರುತುಂ ಈಶ್ಚೊಲನಾಗೆ ಚಂಡರುಚಿಯೆಂಬೊಂ ದೈತ್ಯನತ್ಯಂತದು ॥
ರ್ಧರಜನ್ಮಾಂತರವೈರದಾರುಣವನಂ ಭೂಪಾಂತಿಕಾಸೀನನಾ ।
ಗಿರೆ ಕಂಡಂ ಶನಿ ಕಾಣ್ಬವೊಲ್ ಕುವಳನಂ ವಿಸ್ಫಾರತಾರೇಕ್ಷಣಂ ॥ ೪॥

ಕಾಣಲೊಡಮುಕ್ಷಿಶ್ರುತಿಯಂ ಕಂಡ ತಾಕ್ಷ್ಯರ್ನಂತೆ ರೂಕ್ಷಭಾವಮುಸ
ಪ್ಪುಕೆಯ್ದನಿತಱೊಳಂ ನಿಲ್ಲದೆ

ಕುದುಕುಳಿ ದಾನವಂ ನಿಜವಿಮೋಹನವಿದ್ಯದಭೇದ್ಯಶಕ್ತಿಯಿಂ ।
ದೊಡವಿಸೆ ಮೋಹಮಂ ಹೃದಯದೊಳ್ ಸಭೆಗಾಸಭೆ ತಾಂ ಬಱಿಕ್ಕಚಿ ॥
ತ್ರದ ಸಭೆಯಂತೆ ನೋಡುತಿರೆ ಬಂದು ಕುಮಾರನನೆತ್ತಿಕೊಂಡು ಮಾ ।
ಣದೆ ಗಗನಕ್ಕೆ ಮತ್ತೊಗೆದನುರ್ವಿಗೆ ಬಿಟ್ಟಿ ಸಿಡಿಲ್ ಸಿಡಿಲ್ವವೊಲ್ ॥೫॥

ಅಂತು ಭಾನುವಂ ಸ್ವರ್ಭಾನು ಪಿಡಿದುಯ್ವಂತೆ ಗಗನಮಾರ್ಗದಿನು
ಯ್ವನ್ನೆಗಮಿತ್ತಲ್

ದನುಜನ ಮಾಯೆಯೊಂದಿನಿಸು ಬೇಗದಿನೊರ್ಮೆಯೆ ಮಾಯಮಾಗೆ ಬೇ ।
ತನವಡೆದಿಂದ್ರಜಾಲದ ವಿಮೋಹಮೊ ಮೇಣಿದು ಮೂರ್ಛೆಯೊಂದು ಸಂ॥
ಜನನಮೊ ನಿದ್ರೆಯೇಱ್ತಿರಮೊ ಮುನ್ನ ಱಿವಂತುಟುಮಲ್ಲದೆಂದು ತ ।
ಜ್ಞನಮನಿತುಂ ಮನಂಬಸುತುಮಿರ್ದುದು ನಿಟ್ಟಿಸಲಾರದೇನುಮಂ ॥೬॥

ಆಗಳರಸಂ ವಿಸ್ಮಯರಸಾಕುಳಮನಸ್ತಾಮರಸನಾಗಿ ನೋಟ್ಪನ್ನೆಗಂ ;

ಇನನುದಯಿಸಿ ಪೋದುದಯಾ ।
ವನಿಧರಚೂಳಿಕೆವೊಲಿರ್ದುದಂ ಕಂಡೆರ್ಬೆ* ಪ ॥
ವ್ವನೆ ಪಾಱಿದತ್ತು ನಿಜನಂ ।
ದನನಿಲ್ಲದ ಬಲದ ಕೆಲದ ಹೇವಾಸನಮಂ ॥ ॥೭॥

ಅನಂತರಂ

ದನುಜಾಮರಖಚರರೊಳಾ ।
ಮನಾನುಮೊರ್ವಂ ವಿಮೋಹಮಂ ಪುಟ್ಟಿಸಿ ಸಂ ॥
ಜನಿತಭವಬದ್ಧರೋಷಂ ।
ತನಯನನೆಟೆದುಯ್ದನೆಂದು ವಿಹ್ವಳನಾದಂ ॥ ॥೮॥

ಆಗಲೊಡಂ

ಕ್ಷಿತಿಪತಿಯ ಧೈರ್ಯಗುಣಪ ।
ರ್ವತಮಂ ತಱಿಗೆಲೆಗಳೊಟ್ಟಲಂ ತೂಳ್ದುವವೊಲ್ ॥

ಅತಿವೇಗದೆ ಪಾಱಿಸಿದುದು ।
ಸುತವಿರಹಪ್ರಳಯಪರುಷಪವನಾಪಾತಂ ॥ ೯೯॥

ಅಂತು ವಿಗತಗುರುಷಾಕಾರಂ ಭಾಗ್ಯಾನರ್ಘ್ಯವಜ್ರಪಾತಸಂತಪ್ಯಮಾನ ಮಾನಸನುಂ ಅವಿರಳಗಳದಶ್ರುಬಿಂದುಸಂದೋಹಮಿಶ್ರಿತಶ್ಮಶ್ರುಲೇಖನುಂ ಅನ್ಯೋನಮನ್ಯೋದ್ಗತೋಚ್ಛ್ವಾಸಕಂಠನಾಳಸಂಕಟಪ್ರಕಟಿತನಿರ್ಯನ್ನಿಶ್ವಾಸನುಮಾಗಿ

ಮಾಯ್ದು ವಿಧಾತ್ರನೆನ್ನಣುಗಿನಗ್ರತನೂಜನನಿಂತಗಳ್ಚಿ ಕೊಂ ।
ಡುಯ್ದನಪಾರಶೋಕರಸಪೂರದೊಳೀಸಭೆಯುಂ ನಿರಾಕುಳಂ ॥
ತೊಯ್ದನಡುರ್ತುಗುರ್ವಿದನೆದಲ್ತೆದೆ* ನಿಚ್ಚನರಲ್ಚಿ ತನ್ನೊಳಂ ।
ಪೊಯ್ದನಿದರ್ಕೆ ಕೃತ್ಯವೆನಗೇನೆನುತುಂ ತಳೆದಂ ಪ್ರಳಾಪಮಂ ॥ ೧೦೦॥

ಬಳೆಯಿಸೆ ಬಾಸುಳಂ ಬಸಿಱೊಳ್ಳೈದೆ ಕರಾಂಗುಲಿಗಳ್ ಕಪೋಲದೊಳ್ ।
ಬಳೆಯಿಸೆ ಬಾನಲಂ ಸುರಿವ ಬಾಷ್ಪಜಳಂ ಕರುಣಾರ್ದ್ರಹಾರವಂ ।
ಬಳೆಯಿಸೆ ಬಾಯ ಬತ್ತುಗೆಯನಿಂತೆದೆ* ಗೆಟ್ಟೆಱಿತುಂ ಮೃಣಾಳಕೋಲ್ ।
ಮಳತನು ಬಿಟ್ಟಿಳಂದಜಿತಸೇನೆ ನೃಪಾಲಪದಾಬ್ಜಮೂಲದೊಳ್ ॥ ೧೦೧

ಅದಂ ಕಾಣಲೊಡಂ ದ್ವಿಗುಣೀಭೂತಶೋಕೋದ್ರೇಕನಾಗಿ

ತ್ವಜ್ಜನನಿಯ ಹಾರಮನಾಂ ।
ತುಜ್ಜಳಪ ಶಿರೋಧಿ ಹಾರವಮನಸುವರೆತಂ ॥
ಕಜ್ಜಳಮಂ ತಳೆವಕ್ಷಿ ಗ ।
ಳಜ್ಜಳಮಂ ತಾಳ್ದಿ ತನಯ ನೀಂ ಸೈರಿಪುದೇ ॥ ೧೦೨॥

ಸುತ ನಿನ್ನ ಚಂದ್ರವದನ ।
ವ್ಯತಿರಿಕ್ತತೆಯಿಂ ಸಭಾನಭೋವಳಯಂ ಸಂ ।
ಪೃತವಾಯ್ತು ತಮುದಿನದು ಸ ।
ಮ್ಮತಮೊಸರ್ದ*ಪುದೇಕೆ ನಯನಶಶಿಕಾಂತಂಗಳ್ ॥ ೧೦೩॥

ಘನಶೋಕಘನಾಗಮಜಳ ।
ಜನಿತೋತ್ಕರ್ಷಮನೆನೂನಬಾಂಧವನಜನಿತಾ ॥

ಶ್ರುನದೀಪೂರಮನುಡುಗಿಪು ।
ದಿನತೇಜ ವಸಂತದಂತೆ ಬಂದೀಕ್ಷಣದೊಳ್ ॥ ॥೧೪॥

ಇರದಧಿಕಾಭ್ರಾಂತತೆಯಂ ।
ಧರಿಯಿಸಿ ಕಡುಗಂದಿ ಜೆನುಗುವಾಲಿಡಿಯಾದಂ ॥
ತಿರೆ ತೋಪಿರ್ಪ ಪರಿಜನನುಂ ।
ಹರಿಸದೊಳೊಡಗೂಡಿ ತೋಱಿ ಚರಣಾಂಬುಜಮಂ ॥ ॥೧೫॥

ಎನಗೆ ಸುತ ಸುಜನವತ್ಸಲ ।
ನೆನವಿಗೆ ಗೋಚರನೆಯಾಗಿ ಪೋಗದೆ ಮತ್ತೆಂ ॥
ದಿನ ತೆಱದೆ ನಯನಗೋಚರ ।
ನೆನಿಪ್ಪುದಂ ಪೇಳಿ ಪುಣ್ಯತರವಾಸರಮಂ ॥ ॥೧೬॥

ಎಂದು ಕಾಣದೆ

ಆರ ವೃದೂಕ್ತಿಯಂ ಬಯಸಿ ಕೇಳ್ದು ತನೂಜ ಮದೀಯಕರ್ಣದೊಳ್ ।
ಪೂರಿಪೆನಿಂ ರಸಾಯ ನಮನಾರ ಮುಖೇಂದುವನೊಲ್ದು ನೋಡಿ ವಿ ॥
ಸ್ತಾರಿಪೆನೀಮದಕ್ಷಿಗೆ ಸುಧಾರಸಪೂರಮನೆಂದು ತಾರಹಾ ।
ರಾರವದಿಂದವಳ್ ತಳವಗಲ್ದಳೊಱಲ್ದನಿಳಾತಳಾಧಿಪಂ ॥ ॥೧೭॥

ಅನ್ನೆಗಂ

ಶೋಕಾಗ್ನಿಭರದಿನರಸಂ ।
ವ್ಯಾಕುಳನಾದಪ್ಪನಿನಿತಗಲ್ಲುವೆನಾನೆಂ ॥
ಬೀಕರುಣದಿಂದೆ ಬಂದವ್ರೊ ।
ಲಾಕಳಸಿತ್ತಂದತುಚ್ಛಮೂರ್ಚ್ಛಾವೇಗಂ ॥ ೧೮

ಉಸಿರೆಲರೊಯ್ಯನೊಯ್ಯನೊಳಸಾರ್ದುಡುಗುತ್ತಿರೆಲೋಚನದ್ವಯಂ ।
ನಸುಮುಗುಳ್ದಶ್ರು ಪೊಣ್ಮದಿರೆ ಹಸ್ತಪದಂಗಳವಿರ್ದುವಿರ್ದವೋಲ್ ॥
ಮಿಸುಕದೆ ಪೊಂಗುಗೆಟ್ಟರೆ ತದಂತರದೊಳ್ ಬಿಡದನ್ನೆಗಂ ವಿಡಂ ।
ಬಿಸಿಡುದು ಮೂರ್ಚ್ಛೆಯಾಳುವನದಿರ್ದೆ ಪುತ್ರವಿಯೋಗವಿಕ್ಲಬಂ॥೧೯॥

ಅನಂತರವಂತಪುರದ ಬಾಲೆಯರ್ ಬೀಸುವ ಬಾಳೆಯೆಲೆಯ ತಾಳವೃಂತದ ತಣ್ಣೆಲರ ತಾಮುಟ್ಟಿನೊಳಳವಿದಪ್ಪಿದಾಕುಳತೆಯಿಂ ಬಂಧುಜನಂಗಳ್

ಕೆದಱೆ ಮುಂಜೆನಂತೆ ಪಸರಿಸುವಭಿಷೇಕದ ಪುಡಿಯು ಪೊರೆಹದೊಳಂ ಕಳವಳಿಸಿ ಪರಿಜನಂಗಳ್ ತಳಿವ ಪಿಲಿಗರದಾಲಿಗುಡುವ ನೀರ ತೋರವನಿಯು ತಂದಲೊಂದುಗೆಯೊಳೆಮೆಂತಾನುಂ ಹನ್ನೆದದಿನಗಲ್ದು ತನ್ನವಸ್ಥಾಂತರಕ್ಕೆ ತಾನೆ ಬೆಕ್ಕಸಂಬಡುತ್ತಿರ್ಪನ್ನೆಗಂ

ದೆಸೆಯಂ ಬಾಲಾತಪಂ. ಬಾಸಣಿದುದೆನೆ ತಳ್ಪೊಯ್ಯೆ ದೇಹಾಂಕುವಂದಾಗಸದಿಂದುಗ್ರತ್ವಮಂ ಬಿಟ್ಟನನಿಪತಿಯನಾಶ್ವಾಸಿಸಲ್ ಬಂದಪಂ ತಾ ॥
ನೆ ಸಪಸ್ರೋಸ್ರಂ ದಲೆಂಬಂದದಿನಿಱಿದು ತಪ್ರೋಭೂಷಣಾಭಿಖ್ಯನೊರ್ವಂ।
ರಿಸಿ ಬಂದಂ ಚಾರಣಂ ಕಾರಣವಱಿದಿನನೆಂದೆಂಬಿನಂ ರಾಜಲೋಕಂ ॥೦೦॥

ಅಂತಾಸ್ಥಾನವೆಲ್ಲಂ ಕೌತುಕಂಬಡುವನ್ನಮೆಯ್ದೆ ಬರ್ಪುದುಂ
ವಾಸರಮುಖದರ್ಶನದಿಂ ।
ದೋಸರಿಸುವ ಚಕ್ರವಾಕದೆರ್ದೆಯದವಲಿಲಂ ॥
ತಾಸಕುಯದೊಳವನಿಪನಲಿ ।
ಲೋಸರಿಸಿದುದಾಮುನೀಂದ್ರಮುಖದರ್ಶನದಿಂ ॥ ॥೦೧॥

ಮುಱೆಯೆ ಸುತಶೋಕಮಂ ಮನ ।
ದೆಱಕದಿನಿದಿರ್ವ್ರೋಗಿ ಯೋಗಿಪದತಳಮಿಳೆಯಂ ॥
ನೆಱೆ ಮುಟ್ಟಿದ ಮುಂ ದುಗುಳದ ।
ಸೆಱಿಗಂ ಪಡಿಪಾಸಿ ಮೊಱ್ಗಿದಂ ಮುನ್ನಡಿಯೊಳ್ ॥ ॥೦೨॥

ಅಂತು ಭಕ್ತಿಭರದಿನೆಱಗುವಂತೆಱಗಿ ಕೈಗೊಟ್ಟೊಡಗೊಂಡು ಬಂದು ತಾನೆತಂದಿಕ್ಕಿದ ಪವಿತ್ರವೇತ್ರಾಸನದೊಳರಿಸಿ ವೈಹಾಯಸಮಾರ್ಗದಿನಸ್ಪಷ್ಟಪಾಂಕುವಾದೊಡಂ ಶಾಂತಿಧಾರಾಥ ಮಾಗಿ

ಶ್ರೀಪದಮಂ ಹರ್ಷಾಶ್ರು ।
ವ್ಯಾಪಿತಜಳದಿಂದೆ ತೊಳೆದು ತಲೆಯೊಳ್ ತಳೆದಾ ॥
ಭೂಪತಿ ನಲಿದಂ ಗತಸಂ ।
ತಾಪಂ ಮುನಿಜನದ ಮೈಮೆ ಮಱೆಯಿಸದೇನಂ ॥ ॥೦೩॥

ಅನಂತರಂ ಸಸಂಭ್ರಮಂ ಪುರೋಹಿತೋಪನೀತಬಹುವಿಧಾಸ್ಥಾಪೂಜಾಸಮೋಜಂಗಳಿಂದಮುಚಿತಿಸಿ,

ಜೀವಸಮುಸುತವಿಯೋಗದೊ ।
ಳಾವರಿಸಿದ ಖೇದವಿನಿತು ಪಿರಿದಲ್ತೆನೆ ಮ ॥
ತ್ತಾವರಿಸಿದುದವನಿಪನಂ ।
ಭೂವಿಶ್ರುತಯೋಗಿನಾಥಯೋಗಾಹ್ಲಾದಂ ॥ ॥೨೪॥

ಆಗಳ್ ಮಹಾಪ್ರತೀಹಾರಂ ಪೊಸಿದುತ್ತರೀಯವಸನದೊಳ್ ಕುಳ್ಳಿರ್ದು ಅಮರ್ದಿಂದಳ್ಳೆಮನಿತ್ತಪ್ಪ ।
ದು ಮುಖೇಂದು ಮುನೀಂದ್ರಪದನಖೇಂದುಗೆನಿಪ್ಪಂ ॥
ತಮರೆ ದಶನಾಂಶು ನುಡಿದಂ ।
ಕ್ರಮದಿಂ ಪ್ರಶ್ರಯನಿಯುಕ್ತಮಧುರೋಕ್ತಿಗಳಂ ॥ ॥೨೫॥

ಸೊಗಯಿಪ ಮನೋರಥಕ್ಕಂ ।
ಮಿಗಿಲೆನಿಸುವ ನಿಮ್ಮ ಬರವು ದೊರಕೊಂಡತ್ತಿಂ ॥
ಜಗತೀಮಾನ್ಯಂ ಧನ್ಯಂ ।
ಬಗೆವೊಡೆ ಮತ್ತಾವನೆನ್ನವೋಲನ್ಯನೃಪಂ ॥ ॥೨೬॥

ಕೃತಕೃತ್ಯತೆಯಿಂ ವಾಂಛೆಯಿ ।
ನತಿಶಮಭಾವನೆಯಿನೆಲ್ಲಿಯುಂ ಪ್ರೇಮಮನೂ ॥
ರ್ಚಿತಗುಣಿ ಬಿಟ್ಟಿರ್ದುಂ ಪರ ।
ಹಿತದೊಳೆ ಸಲ್ವುದೆ ವಲಂ ಭವದ್ವಿಧರ್ಗೆ ನಿಜಂ ॥ ॥೨೭॥

ಅದಲ್ಲದೆಯುಂ
ಬಂಧುವಿಯೋಗದಿನೆನಗನು ।
ಬಂಧಿಸಿದ ಮಹೋಪತಾಪಮುದು ನೀಂ ಬರೆ ನಿ ॥
ರ್ಬಂಧದಿನಳಿಯಿತ್ತಜಿಂ ।
ಬಂಧುಗಳಿಂ ನೀನೆ ಬಂಧು ಜಗತೀಬಂಧೂ ॥ ॥೨೮॥

ವಿಗತಾಳೋಕಂ ಶಿವಪಥ ।
ವಿಗಳಿತಮೆನಿಸಿದ ಜನಕ್ಕೆ ಕೃತಸನ್ಮಾರ್ಗಾ ॥
ನುಗತೋಪದೇಶದಿಂದೀ ।
ಜಗದೊಳ್ ನೀನಾದೆ ನಾಥ ಕಣ್ಣಂ ಗತಿಯುಂ ॥ ॥೨೯॥

ಎಂದು ನುಡಿದು ವಿನಯವಿನಮಿತನಾಗಿರ್ಪ ಜನಪತಿಯಂ ಮುನಿಪತಿಯಿಂ ತೆಂದಂ:—

ಬೋಧದಿನಿಂದು ಭೂಭುಜ ಭವಾಂತರವೈರವಶಪ್ರಕಾಶಿತ ।
ಕ್ರೋಧನೆನಿಪ್ಪ ದಾನವನಿನಾದ ಸುತಾಹ್ವತಿಯೊಳ್ ಪೊದಲ್ದಿ ನಿ ॥
ನ್ನಾಧಿಯನಾನಭೀಕ್ಷಿಸಿ ಗುಣಪ್ರಣಯಿತ್ವದೆ ಬಂದೆನಲ್ತೆ ಸಂ ।
ಬೋಧಿಸಲೆಂತುವೊಳ್ಗುಣವೊಡರ್ಚುಗುಮಾರ ಮನಕ್ಕಮಲ್ಕಿಂ ॥೩೦॥

ಶ್ರುತನಿಧಿ ತತ್ತ್ವಾಭ್ಯಾಸಾ ।
ನ್ವಿತಮತಿ ಚರಮಾಂಗಮೆನಿಪ ನಿನಗೀಜನ್ಮ ॥
ಸ್ಥಿತಿಯಂ ಪೇಳ್ಕೊಡೆ ಭೂಪತಿ ।
ಶತಮನ್ಯುಗೆ ಪೇಳ್ವಿ ತೆಱನೆ ನಾಕಶ್ರೀಯಂ ॥ ॥೩೧॥

ಪ್ರಿಯಮಪ್ರಿಯಮೆಂಬೆರಡಱ ।
ವಿಯೋಗಸಂಯೋಗವೆಂಬಿವೆಲ್ಲ ಜನಕ್ಕಾ ॥
ರಯೆ ಸಾಧಾರಣಮೆಂದ ।
ಲ್ತೆ ಯಥಾರ್ಥಜ್ಞರ್ ಬಿಸುಟ್ಟರಟಿಲೊಸಗೆಗಳಂ ॥ ॥೩೨॥

॥ ಮಾಳಿನಿ ॥

ಅದಱಿನುಱಿವುದಿಂತೀದೇಹದಾಹಾವಗಾಹ ।
ಪ್ರದಮೆನಿಪ ವಿಷಾದೋನ್ಮಾದಮಂ ನೋಳ್ಪೊಡೆಂತುಂ ॥
ಪುದಿದೆಡರ್ಗಳೊಳಾದಂ ಮಚ್ಚದಿಂ ಭೀರು ಬಾಯ್ವಿ ।
ಟ್ಟದಿಗುರ್ಮದಿರ್ವನೇ ಪೇಳ್ ಧೀರಚಿತ್ತಪ್ರವೃತ್ತಂ ॥ ॥೩೩॥

ಅದಲ್ಲದೆಯುಂ

ನಂದನನ ದೆಸೆಗೆ ಪಿರಿದಾ ।
ನಂದಂದಾಳ್ದಪ್ಪುದಲ್ಲಿ ನಿಲ್ಲಂ ಕೆಲವಾ ॥
ನುಂ ದಿವಸದೊಳಗೆ ಬರ್ಪಂ ।
ಸಂದೆಯುಮಿಲ್ಲವನ ಪುಣ್ಯಮುಪ್ಪೊಡಗಣ್ಯಂ ॥ ॥೩೪॥

ಅದೆಂತೆಂದೊಡೆ—

ಷಟ್ಖಂಡಕ್ಷಿತಿನಾಥನಪ್ಪಧಿಕಪುಣ್ಯಂ ತತ್ಪ್ರಭಾಸಾದಿವಿ ।
ದ್ವಿಟ್ಸ್ವೀದೋದಯಹೇತುವಪ್ಪತುಳವಿಕ್ರಾಂತಂ ಸಮುದ್ಯನ್ನಿಜ ॥
ತ್ವಿಟ್ಸಂಜೇಕೃತಸೂರ್ಯಪಾದಚಯಮಪ್ಪುದ್ದಾಮತೇಜಂ ತುರಾ ।
ಷಾಟ್ಸಡ್ಗೋಪಮಮಪ್ಪ ತೀಕ್ಷ್ಣತರಚಕ್ರಂ ಸಾರ್ಗುಮಿನ್ನಾತನಂ ॥೩೫॥

ಅದುಕಾರಣದಿಂ

ಕುಳಗಿರಿಗಾವಗಂ ಪವನಬಾಧೆಯನಾಪವನಂಗೆ ಬಂಧನಾ ।
ಕುಳತೆಯನಬ್ದಿಗಗ್ನಿಭಯಮಂ ಬಿಡದಗ್ನಿಗೆ ಶೀತಭೀತಿಯ ॥
ಗ್ಗಳಿಕೆಯನೈದೆ ಚಿಂತಿಪ ಮರುಳ್ಗೆಣೆಯಾಗದೆ ಪೋಗನಾಮಣಾ ।
ಬಳಸೊಳತಿಪ್ರತಾಪನೊಳುಪಪ್ಪ ವಮಂ ಬಗೆವೊಂ ಮಹೀಪತೀ ॥೩೬॥

ಎಂದು ಪೇಳ್ದಾಮಹಾಋಷಿ ಪರಸಿ ಭೋಂಕನೆ ಮಿಂಚಿನಂತೆ ಗಗನಕ್ಕೊಗೆದು ನಿಜವಾಸಕ್ಕೆ ಪೋಪುದುಮರಸನುಂ ಪರಿಜನಮಂ ವಿಸರ್ಜಿಸಿ ತಾನುಮರಸಿಯುಂ ತನ್ಮನೀಶ್ವರದಿವ್ಯವಚನಮೃತ್ಯುಂಜಯಮಂತ್ರಸಾಮರ್ಥ್ಯಸಂಧಾರ್ಯಮಾಣಜೀವಿತರಾಗಿದರ್ರ್. ಇತ್ತಲ್

ಮೇರುನಗಾಗ್ರದಿಂ ಧರೆಗುರುಳ್ಚುವೆನೋ ರಸೆಯೊಂಕೆಯುಪ್ಪಿನಂ ।
ವಾರಿಧಿಯಲ್ಲಿ ನೂಂಕುವೆನೊ ನಟ್ಟುರಿವೀವನಹ್ನಿವಕ್ತ್ರದೊಳ್ ॥
ಪೂರಿಪೆನೋ ಕಱುತ್ತುಗಿದು ಕತ್ತಿಗೆಯಿಂದೆರಡಾಗಿ ಪೋಳ್ವೆನೋ ।
ನಾರಕದುಃಖಮಂ ಸೆಱೆಯೊಳೂಡುವೆನೋ ಪಲಕಾಲಮೀತನಂ ॥೩೭॥

ಎಂದು ನಿಶಾಚರಂ ರೋಷಾವೇಶಮಾನಸಂ ಮಾನಸದೊಳ್ ಬಗೆಯುತ್ತುಂ ಪೋಗೆ ಮುಂದೊಂದು ಮಹಾಟವೀಮಧ್ಯದೊಳ್

ಮೇರುವನೊತ್ತಿ ಕೆಱೊತ್ತೆ ಪಯೋಧಿಯುವಾಯೊತ್ತಿ ನಭಂ ನೆಲಕ್ಕನಾ ॥
ಧಾರತೆಯಿಂದೆ ಬೆಳ್ದುದೊ ದಿಶಾಗಜರಾಜಿಯ ವಾರಿಕೇಳಿಕಾ ॥
ಸಾರವೊ ಬಾಡಬಾಗ್ನಿಭಯದಿಂ ವರುಣಂ ಮಡಗಿಟ್ಟ ನೀರ್ ಭಂ ।
ಡಾರವೊ ಭಾವಿಸಂದದೆನೆ ಕೌತುಕಮಾಯ್ತು ಮಹಾಸರೋವರಂ ॥೩೮॥

ಪಾತಾಳವರಂ ಸ್ವಾಚ್ಛಗು ।
ಣಾತಿಶಯದಿಂ ಕಾಣಲೆಯ್ದೆ ಬಂದಪುದೆಂಬೀ ॥
ಮಾತನೊಡವಿಪುದು ತಟತರು ।
ಜಾತಪ್ರತಿಬಿಂಬವಿಸರವಂತಾಸರದೊಳ್ ॥ ॥೩೯॥

ಕಾಂತಮಧುಸಮಯಮಾಧವಿ ।
ಯಂತುತ್ಕಳಿಕಾನ್ವಿತಂ ನಭೋಮಂಡಳದಂ ॥
ತಂತಃಕೃತಭುವನಂ ನಟ ।
ನಂತೆ ದಿಟಂ ಪ್ರಬಳನಕ್ರಮಕರಸಮೇತಂ ॥ ॥೪೦॥

ಮತ್ತಮದು ವಾರಿಯೊಳರ್ದಿಕೊಳ್ವರಣ್ಯವಾರಣಂಗಳೊಡನೆ ಭರದಿಂ ಪೋರ್ಗಂಮೊಗಂಬುಗುವ ಸೀರ ಪೇರಾನೆಗಳ ತೊಳವಿಗೆಗಳೊಳಂ, ನೀರ್ಗುಡಿವೆಡೆಯೊಳ್ ಪೊಳೆವ ತಮ್ಮ ನೆಲಿಲಂ ಮಾರ್ಪಡೆಯೆ ಗೆತ್ತು ಎಡೆವಾಡಗದೆ ಕಡುಪಿನಿಂ ಪಾಯ್ದು ಬಾಯ್ದೆಱೆದೆಲ್ದಿ ನೆಗಳಿ ಮೊಗದೊಳರ್ದಡಂಗುವ ಶಾರ್ದೂಲಸಂದೋಹಂಗಳೊಳಂ, ಕಾಡಾನೆಗಳ ಕೋಡೇಱಿಂದಿಡಿದು ಕಳೆದ ಖರ್ಜೂರದ ಕಡಿಗಳಂತೆ ತಡಿದಡಿಯ ತಳುಂಬಿನೊಳ್ ಬಿಸಿಲಂ ಕಾಯ್ವ ಮೊಸಳೆವಿಂಡಿನ ಪಸರಂಗಳೊಳಂ, ನೀರ್ವಾನಸಂ ಮೆಲ್ದು ಬಿಸುಡೆ ಪಸರಿಸುವ ತೆರೆಗೊನೆಯೊಳ್ ತೇಂಕಿ ಬಪರ್ ಜಳಮೃಣಾಳನಾಳಮಂ ಜಳವ್ಯಾಳಮೆಂದು ಕೆಲದ ಬಿಲದಿಂ ಪಿಡಿಯಲೆಂದು ಛೀಂಕಿಡುವ ವಿಷಾಪಹಾರ ಶಾಲೂರಜಾಲಂಗಳೊಳಂ, ಮೇಗೆ ನೆಗೆದಿಸುವ ಪೊವಸೆಗೊಂಡ ಪೇರಾವೆಯುಂ ತಾವರೆಯ ಕೊಡೆಯೆಲೆಗೆತ್ತ ಱಿಯದೆಱಗಿದೊಡದು ತಳುಂಬೊಳೆಯೆ ಬೆಚ್ಚಿ ಬಿಚ್ಚ ತಂಬಾಱಿ ಕಳವಳಿಪ ವಿಕಳಕುರವಕನಿಕರಂಗಳೊಳಂ, ಕಾಲ್ದೊಳೆಯಲೊಳಪೊಕ್ಕು ಪಟ್ಟ ಕಾಂತಾರಸೈರಿಭಂಗಳ ಭಂಗುರಶೃಂಗತಾಡನೆದಿನುಜ್ಜ್ವಳಿಪ ಜಳವೇಣಿಯುಂ ಪೊಣ್ಮಿ ಪೊಳೆವೆಳವಾಳೆಯೆಂದು ಕ*ರ್ದಂಕಿ ಕನಲ್ವ ಬಾಳಬಕಕದಂಬಂಗಳೊಳಂ, ಭೀಷಣರಮಣೀಯಮೆನಿಸಿತ್ತು. ಅಂತುನುಲ್ಲದೆಯುಂ

॥ಮಾಲಿನಿ॥

ಕುಸುಮರಜದ ಕೆಂಪಂ ತಾಳ್ದ ನೀಳ್ದೀಱಿಯಂ ಲಂ ।
ಪಿಸುವ ತೆರೆಯ ಜಿಹ್ವಾಡಂಬರಂ ಪೊಣ್ಮೆ ಸುತ್ತಂ ॥

ಮಿಸುಪ ಪಿರಿಯ ಮೀಂಗಳ್ ದಾಡೆ ತಾಮೂಗಿಳಾರಾ ।
ಕ್ಷಸಿಯ ತೆಱೆದ ಬಾಯಂತಿರ್ದುದಾಪದ್ಮಸದ್ಮಂ ॥ ॥೪೧॥

ಅಂತನೂನವುಮತಳಸ್ಪರ್ಶವುಮಮಾನುಷಮುಮತಿಕ್ರೂರಸತ್ವಮು ಮಪ್ಪ ಮನೋರಮಣಮೆಂಬ ಸರೋವರಮಂ ಕಂಡು

ಇದು ಕಡಲಂದದೆ ಕಡುಗಡಿ ।
ವಿದಱೊಳಗಾನಿಪನನಿಕ್ಕಿ ಕೋಪಮನಾಱಿ ॥
ಪ್ಪುದೆ ಪಂಥಮೆಂದು ಬಂದಂ ।
ತದಗ್ರದೇಶಕ್ಕೆ ಕೋಣಪಂ ವಿಗತಕೃಪಂ ॥ ॥೪೭॥

ಬಂದು ತನ್ನನೆತ್ತಿಕೊಂಡಾಗ್ರಹಮನೊಡೆಯಿಕ್ಕುವಂತಿಕ್ಕಿ ಪೋಪುದು ಮಾಕುಮಾರಂ

ಬಿಟ್ಟಿ ಭರದಿಂದೆ ವಾರಿಯೆ ।
ರಟ್ಟಿಸೆಗಂ ಪಚ್ಚು ಸೂಸೆ ಕೊಳದೊಳಗೆ ಬಯಲ್ ॥
ಬಿಟ್ಟುದು ತದ್ರಭಸಕ್ಕು ।
ರ್ಚಿಟ್ಟಿ ಕಡಂಗಿದುವು ಜಳಚರಪ್ರಕರಂಗಳ್ ॥ ॥೪೩॥

ಅಂತು ಪಾತಾಳಮೂಲಂಬರಂ ಮುಟಿಗಿ ದಿವಿಜದೀರ್ಘಿಕೆಯೊಳ್ ಮುಟಿಗಿ ನೆಗೆವ ಅಭ್ರಮೂಪತಿಯಂತೆ ನೆಗೆಯಲೊಡಂ

ಇನನೊಗೆಯೆ ತಾರೆಗಳ್ ಭೋಂ ।
ಕನೆ ನಭದೊಳದೃಶ್ಯವಪ್ಪ ತೆಱದಿಂ ನೃಪನಂ ॥
ದನನೊಗೆಯೆ ಜಳಚರಂಗಳ ।
ವನಿತುಂ ಕೊಳದೊಳಗೆ ಮತ್ತಡಂಗಿದುವಾಗಳ್ ॥ ॥೪೪॥

ಏನಂ ಪೇಳ್ವೆಂ ತನ್ನೃಪ ।
ಸೂನುವ ಪುಣ್ಯಪ್ರವಾಹಮಂ ಗ್ರಾಹಮಸಾ ॥
ಮೀನಕುಳೀರಾಹಿಗಳಂ ।
ದೇನುಂ ಪೊಸೆಯಿಸುದುವಿಲ್ಲ ನಿಜವಿಷಮತೆಯಂ ॥ ॥೪೫॥

ಆಗಳ್ ಪ್ರೇಂಖೋಳನವಿಳಾಸದಿಂದಾಸರವುಂ ಲೀಲಾಸರವುನುತ್ತರಿಸು
ವಂತುತ್ತರಿಸಿ ತತ್ತೀರದೊಳನಿತುಬೇಗಂ ವಿಕ್ರಮಿಸಿ ಬಲಿಯಂ ಮುಲಯುಪ
ವನನಂತುತ್ತರಾಭಿಮುಖನುಂ ವಿಕ್ರಮೈಕಸಹಾಯನುಮಾಗಿ ನಡೆಯೆ

ಪರುಷತರಕರಭಕೇಸರಿ ।
ವಿರಾವದಿಂ ಕಿ ರ್ರಡುವಡಿಸುತುಂ ದೆಸೆಗಳನಾ ॥
ಸರಸಿಯು ತಡಿವಿಡಿದಿರ್ದುದು ।
ಪರುಷಾಟವಿಯೆಂಬ ಪೆಸರರಣ್ಯಮುಗಣ್ಯಂ ॥ ॥೪೬॥

ಕರಿಗಳ ಕಣಿ ಕಬರರ ನಿಧಿ ।
ಮುರಗಳ ಪಡ್ಡಾಗರಂ ದವಾಗ್ನಿಯು ಸತ್ರಂ ॥
ಹರಿಣಂಗಳ ಹರವರಿ ಕೇ ।
ಸರಿಗಳ ಸರಿ ಪರ್ವಿದಡವಿ ಪತೆದುದಗುರ್ವಂ ॥ ॥೪೭॥

ಅಲ್ಲಿ

ಮುರದ ತುದಿಗೋಡುಗಳ್ ಕೊಳೆ ।
ಧರೆಗಲ್ಲುಗುತಿರ್ಪ ತರಳತಾರೆಗಳೆನಿಕುಂ ॥
ಖರಸೂಕರದಂಷ್ಟ್ರಾಹತಿ ।
ಪರಿಸ್ಫುಟದ್ವೇಣುಮುಕ್ತಮುಕ್ತಾನಿಕರಂ ॥ ॥೪೮॥

ನಡಪಾಡುವ ವನದೇವಿಯು ।
ರಡಿಯೂಡಿದಲಕ್ತಕದ್ರವಂ ಪತ್ತಿದವ್ವೋಲ್ ॥
ಕಡುಗೆಂಪನಾಳ್ದುವ್ವೊಂದೊಂ ।
ದೆತೆ ವನಚರವಿದ್ಧಮೃಗಗಣಾರುಣಜಳದಿಂ ॥ ॥೪೯॥

ಮದಗಂಧಸಾರಸಪ್ತ ।
ಚ್ಛದಂಗಳಂ ಪ್ರದಿದು ಬೆಳೆದ ತಾಪಿಂಛದ ಪೆ ॥
ರ್ವೊದಲಿ ಕರಿಶಂಕೆಯಿಂ ಪಾ ।
ಯ್ದುದಱೊಳ್ ಹರಿವಿತತಿ ಬಂಜೆವಡಿಪ್ರದು ಮುಳಸಂ ॥ ॥೫೦॥

ಅತಿನಿಶಿತದರ್ಭಸೂಚೀ ।
ಹತಿಗಳ್ಳಿದ ತೆಱದಿನುಗ್ರಕರನತುಳವನ ॥

ಸ್ವತಿಸಂಕೀರ್ಣವೆನಿಪ್ಪೀ ।
ವಿತತಾಟವಿಯಲ್ಲಿ ಸಲಿಸನೆಂದುಂ ಕರಮುಂ ॥ ॥೫೧॥

ಬಿಗಿದಡರೆ ಸುತ್ತಿ ಮರನಂ ।
ಮೊಗಂಗಳಂ ನೆಗಪಿ ಸುಯ್ವ ಶ್ವಯುನಿಕರದ ಮೇ ॥
ಗೊಗೆವ ನಿಡುಸುಯ್ಯ ಕಡುವೆಂ ।
ಕೆಗಳಿಂ ಕಳಿಪುವುವು ಕಪಿಗಳದಱೊಳ್ ಹಿಮುಮುಂ ॥ ॥೫೨॥

ಮತ್ತಪೂಮಹಾವನಂ ಯೌವನದಂತೆ ಮದನೋತ್ಕಳಿಕಾಕಮನೀಯ ಮುಂ ಚಿತ್ರಕಾಯಶೋಭಾಪ್ರಾಯಮುಂ, ಕಾಂತಾಕದಂಬದಂತೆ ಲೋಹಿತಚಂದನಾಲಂಕೃತಮುಂ ತಮಾಲಪತ್ರಶೋಭಿತಮುಂ, ಸನ್ನದ್ಧಸಪ್ತಿಯಂತೆ ಖಲೀನಶಾಖಾಮುಖಮುಂ ಉಪಕಂಠಚಳಚ್ಛಾಮರಮುಂ, ತಾಳಪಾತವಿಧಿಯಂತೆ ಶಮ್ಯಾರವ್ಯಮುಂ ತಳೋನಲಾತಮುಂ, ರಣಾಂಗಣದಂತೆ ಚಮೂರಚಿತಪ್ರಹರಣವಿಶೀರ್ಣರೂಪಮುಂ ದಂತಿದಾನವವಿಲೀನಶಿಲೀಮುಖಮುಂ, ಪಾಂಡವಪ್ರಕರದಂತಾತ್ತಭೀಮನಕುಲದ್ರುಪದಮುಂ ಅರ್ಜುನೋರ್ಜಿತಮುಂ, ನಾಕಿನಿಳಯದಂತೆ ಅನೂನಾಪ್ಸರೋಗಣಪ್ರಣೂತಮುಮತಕ್ಯರ್ಗೋಚರಮುಂ, ಅಸಂಯುತಹಸ್ತಸಮುದಯದಂತೆ ಆತ್ತಕಪಿತ್ಥಮುಂ ತಾಮ್ರಚೂಡಾವಲೀಢಮುಂ, ಕ್ಷೇತ್ರಾಕರ್ಷದಂತೆ ಪೋತ್ರಿಪೋತ್ರಾಹತಧರಣಿತಳಮುಂ ಗೃಹೀತಗೋಲಾಂಗೂಲಮುಂ, ಗಗನಮಂಡಲದಂತೆ ಋಕ್ಷಾಕೀರ್ಣಮುಂ ಕುಟಿಜಕುಜವಿಭ್ರಾಜಿತಮುಂ, ಜಾಂಬೂನದಪ್ರದೇಶದಂತೆಅಷ್ಟಾಪದೋತ್ಪತ್ತಿಸ್ಥಾನಮುಂ ಅಚರಿಮಿತಕುಶಪ್ರಸರಮುಂ, ಸಭಾಸದನದಂತೆ ವೇತ್ರಾಸನಾಧಿಷ್ಠಿತರಾಜರಾಜಿತಮುಂ, ಸ್ವರಸಮುದಯದಂತೆ ನಿಷಾದನಿಷೇವ್ಯಮುಂ, ಆರಾಧನಂತಕ್ಷಮಾಲಾಗಣಿತಜಪೋಪೇತಮುಂ, ರಾಜ್ಞೀನಿವಾಸದಂತೆ ಜರತ್ಕಂಚುಕಿಶತೋದಂಚಿತಮುಂ, ನಾಟಕಪ್ರಕರದಂತೇಹಾಮೃಗೋಪಗೂಹಿತಮುಂ, ಅಭಿನಯದಂತೆ ನೇಕಾಹಾರ್ಯಕನಿವಿಷ್ಟಮುಂ, ಭೈರವಾವಳಿಯಂತೆ ರುರುಪರಿಚಿತಮುಂ, ಪಿತಾಮಹಾನನದಂತೆ ಸಾಮಜಪದಾಭಿರಾಮಮುಂ; ಸ್ಥಾಣುನಿವಸನವೂಗಿಯುಂ ಅಪರ್ಣಾನ್ವಿತಮುಲ್ಲು; ಬಹುಳಸತ್ಪೋಪೇತಮೂಗಿಯುಂ ತ

ವೋವಿರಹಿತವುಲ್ತು ; ಮಯೂರಾಧಿರೂಢವಾಗಿಯುಂ ವಿಶಾಖಾಕರವು ಲ್ತು ; ಆತ್ಮಸಾರಸ್ವತಾತಿಶಯವಾಗಿಯುಂ ವಿವೇಕಾಕರವುಲ್ತು ; ನಿರಂತ ರಚ್ಛಾಯಾಶೇಷವಾಗಿಯುಂಕೃತಾಂತರೂಪವುಲ್ತು . ಅಂತುಮಲ್ಲದೆಯುಂ

ಪಾತ್ರವಿಕೀರ್ಣಮಾತತಸುತಾಳಧರಂ ವಿವಿಧಾನನದ್ಧವಾ ।
ಸೂತ್ರಿತವಂಶಕಾರನಿಕರಂ ಕಳಕಂಠಸಮೂಹಸಂಶ್ರಿತಂ ॥
ಚಿತ್ರಿತರೂಪಶೋಭೆಗೆಜೆಯಾದುದು ಭಾವಿಸಿ ನೋಡೆ ನಾಡೆ ತೂ ।
ರ್ಯತ್ರಯಸಂಪ್ರದಾಯಮೆನೆ ಕಾನನಮಾವೃತದಿಕ್ಕುಳಾನನಂ ॥೫೩॥

ಆಮಹಾಟವೀಮಧ್ಯದೊಳೊಂದು ಪುಲ್ಲಗಿಟ್ಟಿವಿಡಿದು ನಡೆಯೆ ಮುಂದೊಂ ದು ವಿರಳತರತರುಪ್ರದೇಶದೊಳ್

ಹೊಸಹೊದೆಗಟ್ಟುವಂಬುಗಳ ಕುಪ್ಪಿಯನಾವರಿಪಾರ್ದ್ರಜಾಳವುಂ ।
ಪಸರಿಪ ಸೆಂಡುಗೋಲನುಡಿಗಟ್ಟುವ ಪೀಲಿಗಳಿಂ ತರಂಗವುಂ ॥
ಪೊಸೆಯಿಪ ಚಿತ್ತಗಣ್ಣಿವಲೆಯಂ ಸಮಕಟ್ಟುವ ಬೆಟ್ಟುಗೊಂಟವುಂ ।
ಬಸಿವ ಪುಳಿಂದಸಂಕುಳದ ಪೆರ್ಕಣದಿಂದೆಸೆದತ್ತು ಪಕ್ಕಣಂ ॥

ಪರಿಕಿಸೆ ವೃಕ್ಷಾರೋಹಣ ।
ಪರಾಹಚವಿತಕವೇಣುದಾರಿತಕಂಗಳ್ ॥
ಕರವೆಸೆಯೆ ಕಾಮಶಾಸ್ತ್ರದ ।
ದೊರೆಯಾದುದು ಶಬರಶಿಶುಗಳುಜ್ಜ್ವಗವುದಜೊಳ್ ॥ ॥೫೫॥

ಮತ್ತಂ ತತ್ಸಮೀಪದ ವಿಶಾಲತಾಲಷಂಡದೊಳ್

ಸ್ಮರಸಮ್ಮೋಹನಧೂಪಧೂಮಕಳಕಾಸಂದೋಹವೋ ಚಿತ್ತಜೋ ।
ದ್ಭವವಶ್ಯಾಂಜನಮಂಜರೀನಿಕರವೋ ಕಾಮತ್ರಿಲೋಕೀಜಯಾ ॥
ಕರಶಾಖಾಸಿಲತಾಳಯೋ ಬಗೆವ್ರೆಂಡೆಂಬಂತಿರ್ದುದಿಂದ್ವಂಕಕ ।
ಬುರಕಾಯಂ ಶಬರೀಚಯಂ ನೆರೆದು ಪಾನಕ್ರೀಡೆಯೊಳ್ ನಾಡೆಯುಂ ॥

ಮತ್ತೊಂದೆಡೆಯೊಳೊರ್ವಂ ಮೃಗಯಾನಿಮಿತ್ತದಿಂ ಬರುತ್ತುಂ

ವಿಕರಾಳಾಳೋಕನೀಷಜ್ಜಳಗತನಳಿನೀಶ್ಯಾಮಸುದ್ಯಾಮ್ಯದೇಹಾ ।
ಸ್ತ್ರಕರಾಗ್ರಂ ವೇಣುಬಾಣಾಸನವಿನಿಹಿತಕಕ್ಷಂ ಸಕಾಳೇಯಕಸ್ತ್ರ ॥

ನಿಕರಂ ಹ್ರಸ್ವಾಸಿಧೇನುಸ್ಥಗಿತಜಘನನಂದೊಪ್ಪಿದಂ ದ್ವೀಪಿಲಾಂಗೂ ।
ಲಕೃತೋಪ್ಪಿಣೀಷಂ ಶಿರೋಳಂಕೃತನರವಿಕಸತ್ಕಿಂಕಿರಾತಂ ಕಿರಾತಂ ॥

ಚಕಿತೇಣೇನಯನಾಂಶುವಿಂ ಶ್ರವಣಪೂರೇಂದೀವರಂ ಪುಂಡರೀ ।
ಕಕನಚ್ಛಾಯೆಯನೀಯೆ ಬಿಂಬರುಚಿರೋಷ್ಠದ್ಯೋತಿಯಿಂ ವೇಣುಮೌ॥
ಕ್ತಿಕಹಾರಂ ಗುರುಗುಂಜೆಯೆಕ್ಕಸರಮಂ ಕೀಲ್ಮಾಡೆ ಸಂದಳ್ ಪುಳಂ ।
ದಿ ಕುಚಶ್ರೋಣಿಗಳಿಕ್ಕೆಯಿಂದೆ ತನಿಗೆತ್ತುತ್ತೊಪ್ಪೆ ಪಿಂದೋಪನಂ॥೫೪॥

ಅಂತು ಪೋಪಲ್ಲಿ

ಇದಿರೊಳ್ ಗರ್ಜಿಸಿ ಪುಲಿ ನಿಲೆ ।
ಬೆದಱಿ ಕರಂ ಶಬರಿ ಬರಿಯನಪ್ಪಲೊಡಂ ರೋ ॥
ಷದಿನಲದರ್ಶದೊಂದು ಕಣ್ ರಾ ।
ಗದೆ ಮುಗುಳ್ದದೊಂದು ಕಣ್ ವನೇಚರಪತಿಯೂ ॥ ॥೫೯॥

ಅದಲ್ಲದೆಯುಮೊಂದು ಪಲ್ವಲಪ್ರಾಂತದೊಳ್ ಕಾಂತಾರಕಳಭಪ್ರಾಯ ಪೋತ್ರಿಸಂತಾನದೊಳಗೆ

ಬರಿಗಂಡಂ ಪಿಣಿಲೇಱೆ ರೋಮಮುಡಿದಿರ್ಪನ್ನಾಗೆ ಮುಂಗಾಲಗ ।
ಲ್ತರೆ ಬಿಕ್ಕುರ್ವೆ ಮೊಗಂ ಕರಂ ಪೆಗಲ ಬಿಣ್ಪಿಂ ಜೋಲ್ವಬಾಲಂಮುಟಿಂ
ಕಿರೆ ಬಂಬಲ್ಗಡಿವಂ ಪೊದಲ್ದಿಗಸೆವ್ರೊಗೊಂಬೊಪ್ಪೆ ಕೋಲ್ಕಿಟ್ಟ ಪೆ ।
ರ್ನೊರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತುತ್ಕೇಕರಂ ಸೂಕರಂ ॥೬೦॥

ಬೇಱೊಂದೆಡೆಯೊಳ್

ಗುರುನಿದ್ರಾಭಂಗಜಭ್ರೂಕುಟಿವಿಕಟಲಲಾಟಂ ಜಪಾಪಾಟಲಾಪಾಂ ।
ಗರುಜಂ ವೇಶಂತಶಯ್ಯಾಪರಿಮಿಳಿತಲಸತ್ಕರ್ದಮಾರ್ದ್ರಂ ಬೃಹತ್ಕಂ ॥
ಥರಕಂಡೂಬಂಧನೋಲ್ಲೇಖನಮುಳಿನಿತಶಾಖಿಪ್ರತಾನಪ್ರಕಾಂಡಂ ।
ನೆರೆದಿರ್ದತ್ತೊಂದು ನಾನಲ್ವಿಡಿದು ಮಹಿಷವೃಂದಂ ಯಥಾಸ್ವೇಚ್ಛೆಯಿಂದಂ॥

ಆಮಹಾಮಹಿಷಮಂಡಲಮಿರ್ದುದಲ್ಲದೆಯುಂ

ನೆರೆದೇಟ್ಟಿಂದತ್ತು ತೀವ್ರಾನಿಳಭಯವಶದಿಂದಲ್ಲಿಗಾನೀಳಮೇಘೋ ।
ತ್ಕರಮೆಂಬಂತಿರ್ದುದಾಬೃಂಹಿತರುತಿ ಮೊಟಿಗಂ ಪಿಂಗಳಾಪಾಂಗರುಗ್ಮಂ ॥

ಜರಿಯುದ್ಯದ್ವಿದ್ಯುತೋದ್ಯೋತಮನವಿರಳದಾನಂ ಗಳದ್ವರ್ಷಮಂ ಪೋ।
ಲ್ತಿರೆ ಪೇಲ್ಲತ್ಸಲ್ಲಕೀಸಂಕುಲವೆನಿಪೆಡೆಯೊಳ್ ಹಸ್ತಿಯೂಥಂ ವನೋತ್ಥಂ ॥

ಅದು ಬಗೆಯೆ ಮಹಾಪ್ರಾಸಾ ।
ದದಂತೆ ಭದ್ರೋಪಲಕ್ಷಿತಂ ಗ ।ಹಕುಳಿದಂ ॥
ತದು ಮಂದಬಂಧುರಂ ಮಂ ।
ತ್ತದು ಸಕಲಶಶಾಂಕನಂತೆ ಮೃಗಸಂಸ್ಥಗಿತಂ ॥ ॥೬೩॥

ಅಂತಳುಂಬುವಾದ ಮದಸ್ತಂಬೇರಮುಕದಂಬದೊಳ್

ಪಸಿದೊಡೆ ಸಲ್ಲಕೀಕಿಸಲಯಂಗಳನೊಯ್ಯನೆ ನೀಡಿ ಮೆಯ್ಯ ತೀರ್ಪ ।
ಮುಸೆದೊಡೆ ಕೋಡೊಳಟ್ಟೊರಸಿ ನೀರ್ಗೆಳಸಿರ್ಪೊಡೆ ತಂದು ನೀರನೂ ॥
ಡಿಸಿ ನಸೆಯಿಚ್ಛೆಯಾದೊಡೆಯೊಡಗೂಡಿ ಒಟಿಲ್ದೊಡೆ ಕರ್ಣವಾತಮಂ ।
ಪಸರಿಸಿ ತನ್ನ ಕೈಪಿಡಿಯವೊಲ್ ಪಿಡಿಯಂ ಪಿಡಿದಿರ್ದುದೊಂದಿಭಂ ॥೬೪॥

ಲಳಿತವಿಷಾಣಕೋಟಿಗಳನೀಡಿಱಿದಾಗಳೆ ತಾಳವಟ್ಟಮಂ ।
ಸೆಳೆದು ತುಡುಂಕಿ ಮತ್ತೆ ಮೊಲೆಯಂ ನಲವಿಂ ಕಡೆವಾಯ ಪಲ್ಲವಂ ॥
ಗಳನೆಳೆಕೊಂಡು ಸೂಸೆ ಪೆಱಗಾಲೆಡೆಯಿಂ ನುಸುಳ್ದೊಡೆ ಕಾಡಿ ಸಂ ।
ಗೆಳಸಿತದೊಂದು ಪಲ್ಲವಮಱಿ ತಾಯ್ವಿಡಿಗಂತುಮನಂತಸೌಖ್ಯಮಂ ॥೬೫॥

ಅದಲ್ಲದೆಯುಂ ಮುಂದೆಡೆಯೊಳ್ ಉತ್ತಾಳತಾಳಚಲಾಳದಿಂ ಬಿಟ್ಟೊಡೆ ದು ಪಸರಿಸುವ ಪಣ್ಣ ರಸದಿಂ ತಳಂಗಳಂ ತೊಯ್ದು ನಕ್ಕುವ ಗೋಳಾಂ ಗೊಳಂಗಳುಂ, ಒಂದೊಂದೆಡೆಯ ಮುಳ್ಗಿಡುಗಳೊಳ್ ತೊಡರ್ದ ಮೆಯ್ನ ವಿರ್ ಪೆಱಿಗುಮೆಂದು ಮಿಡುಕಲೊಲ್ಲದಲ್ಲಿಯೆ ನಿಂದು ಬಿಲ್ಲಗೆರ್ ತಮ್ಮಿಂ ತಾ ಮೆ ಪಡುವಿಗಂಗುಡುವ ಚಮರೀಮೃಗಂಗಳುಂ, ಒಂದೊಂದೆಡೆಯೊಳ್ ಮು ರದ ಮಱಿಗಳೊಳ್ ಬಱಿದಪ್ಪಿದ ಮಱಿಯನಱಿಸಿ ಮಱುಕದಿಂ ಸೂಱ್ವಿರ್ಪ ಖಡ್ಗಧೇನುಗಳ ತೊರೆದ ಮೊಲೆಯಿಂದಂಬರಿವಿಡಿದು ಸುರಿವ ಪಾಲ್ಗೆ ಪಜ್ಜೆವಿ ಡಿದು ಪರಿವರಣ್ಯಮಾರ್ಜಾರಪೋತಕಂಗಳುಂ, ಒಂದೊಂದೆಡೆಯೊಳುಡಿದು ಪಲ್ಲಟಂಬಿದುರ್ ಸುವ್ರುಗೆಟ್ಟ ಪುಲ್ಗಳಿಂ ಪರ್ವಿದ ಮೆಯ್ಯ ತೀನ್ಗೆ ಪೆವ್ರು ಲಿಗಳ್ ಪೊರಳ್ದು ಪೋದುದಂ ಪಿಸುಣ್ಬೇಲ್ವಿ ಜೀರ್ಣತಾರ್ಣಸ್ಥಳಿಗಳುಂ

ಬಂದೊಂದೆಡೆಯೊಳೊಗೆವ ದಾವಶಿಖಿಯು ಪೊಗೆಗೆ ಬೆಗಡುಗೊಂಡು ಪುಲಿಗಳ್ ಬಿಟ್ಟುಪೋದ ನಟ್ಟಿಗೊಂಬಿನ ಜೇನ ಪುಟ್ಟಿಯಂ ಸಾದರ್ ಪೀವರ್ ಜತುಕನಿಕರಂಗಳುಂ, ಬಂದೊಂದೆಡೆಯೊಳಡವಿಯಾನೆಗಳಡಿಗೊಂಬುಗೊಂಡ ತದುಕಿನ ಮರದ ಮುಱುಗಣ್ಣೊಳೊಗೆದ ಪಗಿನೊಳಗ್ಗಿವೆಗಡಿಂ ಕಾಲ್ದೊಡದರ್ ಮಿಡುಕಿ ಕಳವಳಿಪ ಕಳವಿಂಕಸಂಕುಳಿಂಗಳುಂ, ಬಂಧೊಂದೆಡೆಯೊಳುಣ್ಮುವ ಮೆಯ್ಯ ಸುಯ್ಯ ಕಡುಗಂಪಿಂಗೆ ಕವ್ವರೆಗೊಂಡು ಮುಸುಱುವೊಱುವ ತುಂಬಿಯ ಬಂಬಲ್ಗೀವಯ್ಸಿ ಬೆಳೆದ ಮೆಳೆಗಳೆಡೆಯೊಳ್ ನುಸುಳ್ದಡಂಗಿ ಪೋಪ ಕತ್ತುರಿಮಿಗದಮೊತ್ತಂಗಳುಂ, ಅಗುರ್ವುವಡೆಯೆ ನೃಪತನೂಜಂ ವಿಪಿನಚರವಿವಿಧಸತ್ವಂಗಳಂಗಚೇಷ್ಟಾಭಾವಂಗಳಂ ಭಾವಿಸಿ ವಿಸ್ಮಯಂಬಡುತ್ತುಂ ಪೋಗೆಪೋಗೆ ಪುರೋಭಾಗದೊಳ್,

ಶರಭಗ್ರಸ್ತೋತ್ಕಂಠೀರವಕಟುರಟನೋತ್ಥಪ್ರತಿಧ್ವಾನವದ್ಗ ।
ಹ್ವರದುಶ್ಶ್ರಾವಶ್ರವಂ ನಿಷ್ಠುರಗರಳರಸಾರ್ದ್ರಸ್ಫುರಜ್ಜಿಹ್ವದರ್ವೀ ॥
ಕರದುರ್ದರ್ಶಂ ಸಮುತ್ಕಂಟಿಕವಿಟಪಿಲತಾವೀರುದತ್ಯಂತವೃತ್ಯ ।
ತ್ಕರದುರ್ವೀಶಂ ಮನಕ್ಕದ್ಭುತರಸದೊಡವಂ ತಂದುದಂದೊಂದಗೇಂದ್ರಂ ॥

ಅಂತು ತೋಱುತಿರ್ದ ವಂಶಧರಮೆಂಬ ಗಿರಿವರಮಂ ಕಂಡೆಯ್ದುವ ಪರ್ವಗಳ್

ಆಕುವರನ ಬಂದೊಸಗೆಯೊ ।
ಳೋಕುಳಿಯಾಡಿದಪುದಚಲಮೆನೆ ಸೊಗಯಿಸಿದ ॥
ತ್ತಾ ಕೀರ್ಣಧಾತುನಿರ್ಝರ ।
ಶೀಕರತತಿ ನೆಗೆದು ನಗದ ನಾಲ್ಕುಂ ದೆಸೆಯೊಳ್ ॥ ॥೬೩॥

ಮತ್ತಂ

ಈಗಳೆ ಸಮನಿಸಿದಪ್ಪುದು ।
ರಾಗಂ ನಿನಗೆನ್ನೊಳೆಂದು ನೃಪತನಯನನಂ ॥
ತಾಗಿರಿ ಕರೆವಂತಾದುದು ।
ಕೇಗುವ ಸೋಗೆಗಳ ತಾರಕೇಕಾರವದಿಂ ॥ ॥೬೪॥

ಆಗಳಾಪರ್ವತಮನೇಱಿ ದುರ್ಗದುರ್ಗಮಮಾರ್ಗಮಂ ನೋಟ್ಪೆನೆಂದು ಬಗೆದಂದು,

ಗುರುವಂಶಮತುಳದಂತಂ ।
ಪರಿವೃತಘನಸತ್ವಮುನ್ನತಂ ತಾನೆನಿಪಂ ॥
ಗಿರಿಪತಿಯಂ ನೃಪತಿಸುತಂ ।
ಕರಿಪತಿಯಂ ಲೀಲೆಯಿಂದಮೇಱುವ ತೆಱದಿಂ ॥ ॥೧೯॥

ಪಿಱಿ ತದಧಿತ್ಯಕದೊಳ್ ನಿಂದು ನೋಟ್ಪಿನ್ನೆಗಂ

ಬಿಟ್ಟ ಕುರುಳ್ ಪೊದಳ್ದಿ ಕಿಸುಗಣ್ ನಸುಗೆತ್ತುವ ಮೀಸೆ ಬಾಂಗೆತೂಂ।
ತಿಟ್ಟವೊಲಪ್ಪ ಮೆಯ್ ಮಿಳಿರ್ವರ್ ನಾಲಗೆಯುಬ್ಬಿದ ಪುರ್ವು ಕರ್ವುನ ॥
ಕ್ಕಿಟ್ಟಳಮಪ್ಪ ಕರ್ಕಶತೆಯೆತ್ತಿದ ಕೆಚ್ಚಿನ ಡಂಗೆ ಭೀತಿಯಂ।
ಪುಟ್ಟಿಸೆ ಬಂದು ಕಟ್ಟಿದಿರೊಳಿರ್ದನದೊರ್ವನಡುತುರ್ ಜಟ್ಟಿಗಂ ॥೭೦॥

ಇರ್ದನಂತರಂ ಪ್ರತಿನಿನಾದಿತವಿಯದ್ವಿವರಮಪ್ಪ ಘೋರಘರ್ಘರಧ್ವನಿಯಿನಿಂತೆಂದಂ:—

ಈಗಿರಿ ಮದ್ಭುಜಾಪರಿಘಪಾಲಿತಮಾವನುಮಿಲ್ಲಿ ಪೊಕ್ಕವಂ ।
ಬೇಗದೆ ಪೊಕ್ಕವಂ ಯಮನಿವಾಸಮನಂತದಱಿಂದಮಾವುರು ॥
ದ್ಯೋಗಿವಿಯಚ್ಚರರ್ ಮುಱಿದುಮೆನ್ನಯ ಬೆಟ್ಟದ ಮೇಲೆ ಬಟ್ಟೆಯಂ ।
ಪೋಗರದರ್ಕೆ ಸಕ್ಕಿಯಿದಱಿಕ್ಷತಪಲ್ಲವಪುಷ್ಪಸಂಕುಳಂ ॥ ॥೭೧॥

ಅತಿಬಳತುಹಿನಗನಿರ್ಘರ ।
ತತಿಯೆನಿಸಿದ ಮುದ್ಗಿರೀಂದ್ರಮಂ ಚಂಡಕರ ॥
ದ್ಯುತಿ ಪುಗದು ಪೊಕ್ಕೊಡಂ ತಿ ।
ಗ್ಮತೆಯಂ ಬಿಡುವುದದು ಮತ್ಪ್ರತಾಪದಿನಲ್ತೇ ॥ ॥೭೨॥

ಏನೆಂದು ಪೊಕ್ಕೆಯದಱಿಂ ।
ದೀನಗಮಂ ನಾವಿಚಾರಿತಂ ಕೃತ್ಯಮೆನಿ ॥
ಪ್ಪೀನುಡಿ ನಿನ್ನಯ ಕಿವಿಯಂ ।
ತಾನೆಂದುಂ ತಾಗದಕ್ಕುಮುಕ್ಕಟ ಪೆಱದೇಂ ॥ ॥೭೩॥

ಅಗಲ್ಲದೆಯುಂ

ಮೀಱಿ ಮದಾಜ್ಞೆಯಂ ಗಿರಿಯನೇಱಿದ ನಿನ್ನಯ ನೆತ್ತಿಗೀಗಳಂ ।
ತೇಱಿಸಿ ಜೀವಮಂ ಜವನ ಲೆಕ್ಕದೊಳೀಱಿಸಿ ಮುತ್ತಿ ನಿನ್ನನಾ ॥
ನೇಱಿಪೆನೆನ್ನ ತೋಳ್ಗಿ ಬಲಿಯಂ ನೆರೆಗೆಲ್ಲಮನಲ್ಲದಂದು ಬ ।
ಲ್ಪೇಱದೆನುತ್ತವಂ ತಿರಿಪಿದಂ ನಿಜನಿಷ್ಠುರಕಾಷ್ಠದಂಡಮಂ ॥ ॥೭೮॥

ಆಗಳವನ ಗರ್ವಗರ್ಭಂಗಳಪ್ಪ ನಿರ್ಭರೋಕ್ತಿಗಳಂ ಕೇಳ್ದು ಕುಮಾ
ರಂ ಪರ್ಜನ್ಯಗರ್ಜನಮಂ ಕೇಳ್ದ ಕೇಸರಿಕುಮಾರನಂತು ಕೆಳದುಂ

ವಿಗತಾರ್ಥಂಗಳೆನಿಪ್ಪ ಮಾತುಗಳೊಳಾರಂ ಬೆಚ್ಚಿಸಲ್ಬಂದೆ ಬೇ ।
ಡಗಡಾ ಸಾಯದೆಪೋಗು ಪೋಗದೊಡೆ ಮೇಣ್ ಮೇಲ್ವಾಯ್ದುನೋಡೀಗ
ಳಂತೆ ಗಜಾರಾತಿಯನಾಂತ ದಂತಿಗಣೆಯಾಗಾಂ ಮಾಡಿ ನಿನ್ನಂ ಬಲಿ ।
ಕ್ಕಗವಂ ವ್ಯಾಧವಧೂಜನಕ್ಕೆ ವನಕೇಳೀಶೈಲಮಂ ಮಾಡುವೆಂ ॥೭೫॥

ಎನೆ ಕೈದುವಿಡಿಯೆನಾಂ ನಿನ ।
ಗನಾಯುಧಂಗೆಂದು ಕೈಯ ಪಾವಂ ವಿನತಾ ॥
ತನಯಂ ಬಿಸುಡುವವ್ರೋಲ್ ತೊ ।
ಟ್ಟನೆ ಬಿಸುಟಂ ಪಿಡಿದ ಬಡಿಯನಂತಾದಡಿಯಂ ॥ ॥೭೬॥

ಅಂತು ಬಿಸುಟ್ಟು ಮಲ್ಲಯುದ್ಧಸನ್ನದ್ಧರಾಗಿರ್ವರುಂ ಭುಜಾಸ್ಫಾಲನಂ
ಮಾಡಲೊಡಂ

ಕುವರನ ಬಾಹಾಸ್ಫಾಲನ ।
ರವಮುರ್ಬಿಸೆಯಗಿದು ಪಾಡಿ ಬಿಡದೊದಱುತ್ತಿ ॥
ರ್ದ್ವೊಲಾದುದು ತದ್ಗಹ್ವರ ।
ನಿವಹಪ್ರಭವಾತಿಭೀಷಣಂ ಪ್ರತಿಘೋಷಂ ॥ ॥೭೭॥

ಅನಂತರಮಾಶಿಖರಿಶಿಖರಮೆ ಕಳನಾಗಿಯುಂ, ವನದೇವತಾಪೇಟಕಮೆ
ನೋಟಕರಾಗಿಯುಂ, ಪಳುಕಿನ ಕೋಡುಗಲ್ಗಳೊಳ್ ಪೊಳೆವ ತಮ್ಮ
ನೆಱಿಲೆ ನೆರೆದ ಮಲ್ಲರ ನೆರವಿಯಾಗಿಯುಂ, ನಿಕುಂಜೋಪಾಂತಜರ್ಝರನಿ
ರ್ಝರಧ್ವನಿಯೆ ಮಲ್ಲದಾಳವಾಗಿಯುಂ, ಕಳಂಬೊಕ್ಕು ನಿರಿಸುಗೆಯುದ್ದ

ನಖಹತಿ ದಶನಹತಿ ಪಾದಪಾತಂ ಮುಷ್ಟಿಪಾತವೆಂಬ ದೋಷಂಗಳಂ ಪೊರ್ದದ ನಾಲ್ಕುಂ ಸ್ಥಾನದೊಳಂ ಮೂಱುಂ ಲಗ್ಗದೊಳಂ ಐದುಂ ಡೊಕ್ಕರದೊಳಂ ಎಣ್ಬತ್ತುನಾಲ್ಕು ಬಿನ್ನಣದೊಳಂ ಪಲತೆಱದ ಪಾತಂಗಳೊಳಂ ನೆಱೆದು

ಎಸೆವ ಮುಹಗ್ಗಳಂ ತಡಕಿ ಕಕ್ಷವಡಂ ಮುಹಡಂ ತುಳಾಡಿ ಸಂ ।
ದಸುವಿಡಿವಟ್ಟಿ ಸಂಗುಣವಳುಂಬಗೆ ಪಾಸಗೆವನ್ನಿಮುಟ್ಟಿ ಚ ॥
ಟ್ಟುಸಿರಣವಟ್ಟಿ ಬಾಹುದಣೆ ಖಮ್ಮರಿ ಕತ್ತರಿ ಖೋಡವಂಕುಕಂ ।
ಸಸಿಕುವೆನಿಪ್ಪ ಜಿಟ್ಟಿಗನ ನಚ್ಚಿನ ಬಿನ್ನಣಮೊಪ್ಪೆ ಕಾದಿದರ್ (?) ॥ ೭೯॥

ಕರಿಯೊಳ್ ಕರಿ ಗಿರಿಯೊಳ್ ಗಿರಿ ।
ಹರಿಯೊಳ್ ಹರಿ ಪೋರ್ವರ್ ತೆಱದೆ ಪೋರ್ದರ್ ತಮ್ಮೊಳ್ ॥
ಭರದಿಂ ವನದೇವತೆಯರ ।
ನೆರವಿಯ ಕಣ್ಬಸಿವು ನಿಸದವೋಸರಿಸುವಿನಂ ॥ ॥ ೭೯॥

ಮಿಕ್ಕುದು ವಜ್ರಪಾತಮುಮನೆಂಬಿನಮುಬ್ಬಸಮಾದ ತೋರಹ ।
ತ್ತಕ್ಕೆ ತಗುಳ್ದು ಪತ್ತಿಸುವ ಮಾನಸಗೋಳಮೆನಿಪ್ಪ ಡೊಕ್ಕರ ॥
ಕ್ಕಿಕ್ಕಿದ ವಜ್ರಲೇಪಮೆನೆ ಪತ್ತುವ ಲಗ್ಗಗೆ ಮಾರಿಯೊಳ್ ಪೊಗಂ ।
ಬೊಕ್ಕವ್ವೊಲಾಗೆ ಬೆಚ್ಚಿದನವಂ ಕುವರಂಗೆನಸುಂ ನಿಯುದ್ಧದೊಳ್ ॥

ಅಂತು ಬೆಚ್ಚಿ ಬೆಗಡುಗೊಂಡು

ಭೋಂಕನೆ ತಾಂ ನಭಕ್ಕೊಗೆದು ಭಾಸುರರತ್ನಕಿರೀಟಮುಂ ಫಣಾ ।
ಸಂಕುಳಮುಂ ಚಳನ್ಮಕಳಕುಂಡಳಮುಂ ಕಟಿಸೂತ್ರಮುಂ ಕನ ॥
ತ್ಕಂಕಣಮುಂ ಕರಂ ಸೊಗಯಿಸನ್ನೆಗಮಾಗಳೆ ತೋಱಿ ತನ್ನ ರೂ ।
ಪಂ ಕಱೆದಂ ಬಱಿಕ್ಕಳವಿದಪ್ಪಿದ ಹರ್ಷದೆ ಪುಷ್ಪವರ್ಷಮಂ ॥೮೦॥

ಅದಂ ಕಂಡು ಕುಮಾರಂ ನೀನಾರ್ಗೇನೆಂಬೆಯೆಂದು ಬೆಸಗೊಳ್ವುದು ಮಾತನಿಂತೆಂದಂ:— ಆಂ ಭವನಾಮರನೆಂ, ಹಿರಣ್ಯನೆಂಬೆನಿಂಗು ವಂದನಾ ಭಕ್ತಿಯಿಂ ಮಂದರಕ್ಕೆ ಪೋಗಿ ಬರುತ್ತುಮಿಲ್ಲಿ ನಿನ್ನಂ ಕಂಡು,

ಆಂ ಭರದಿಂದೆ ನಿನ್ನಯ ಭುಜಾಬಲಬೆಟ್ಟಿರವಂ ಪರೀಕ್ಷಿಸಲ್ ।
ಡಂಭದಿನೊಂದು ರೂಹುದಳೆದಿನ್ನೆವರಂ ಪೊಣರ್ದಿಕ್ಕುವಟ್ಟು ಕಂ ।

ಡೆಂ ಭವದೀಯಸಾಹಸಮನೀಗಳದಂ ನೆನೆವಂಥು ನಾಡೆ ಮ ।
ತ್ತಂ ಭಯಮುತ್ತು ಕುಂದಿದಪ್ರದೆನ್ನ ಮನಂ ಸುಭಟೈಕವಂಡನಾ ॥ ೮೦॥

ಸತಿ ವೀರಜನನಿಯೆನಿಪೊಡೆ ।
ಸುತನಂ ನಿನ್ನನ್ನನಂ ದಿಟಂ ಪೆತ್ತಂದ ॥
ನ್ವಿತಮಕ್ಕುಮಲ್ಲದಂದಾ ।
ನುತಿಯಿಂದೆ ಸುಲೋಚನಾಖ್ಯೆಯೆನಿಪನಿತೆವ್ರೊಲಂ ॥ ॥೮೩॥

ಇನಿವಿರಿದು ಪರಾಕ್ರಮವು ।
ಳ್ಳ ನಿನಗೆ ತೀಱದ ಪದಾರ್ಥಮಿಲ್ಲೆಂಬುದನಾಂ ।
ನೆನೆನೆನೆದು ಲಜ್ಜೆಯಿಂ ಬೇ ।
ಡೆನಲಱಿದಪೆನಿಲ್ಲ ನಿನ್ನನಿನ್ನುಂ ಬರವಂ ॥ ॥೮೪॥

ಆದೊಡಮೇಂ ಯತ್ನೋಚಿತ ।
ಮಾದೆಡೆಯೊಳ್ ನೆನೆವ್ರದೆನ್ನನಸಹಾಯಸಮು ॥
ತ್ಪಾದಿತಮೆನಿಸಿದ ಕಾರ್ಯಮು ।
ದೇದೊರೆಯಂಗಂ ಸಮಂತು ಸಿದ್ಧಿಸದಲ್ತೇ ॥ ॥೮೫॥

ಮತ್ತಂ ತೃತೀಯಜನ್ಮದ ।
ವೃತ್ತಕವೊಂದುಂಟು ನಿನಗದಂ ಪೇಳ್ದಿಪೆನಾಂ ॥
ಚಿತ್ತೈಸಿ ಕೇಳ್ ಸುಗಂಧಿಳ ।
ವರ್ತಿಳವೀಶ್ರೀಪುರಾಹ್ವಯಂ ಪುರಮುದಱೊಳ್ ॥ ॥೮೬॥

ನೀಂ ಶ್ರೀವರ್ಮನೆಂಬರಸನಾದೆಯಲ್ಲಿ
ಪೊಱವ್ರೊಲಿಲೊಳರ್ಪರಿರ್ವರ ।
ನೆಱೆದೊಕ್ಕಲ್ತನದ ಪೆರ್ಮೆಯೊಕ್ಕಲಿಗರ್ ಪೇ ॥
ರಱಿಕೆಯ ಶಶಿಸೂರ್ಯಾಖ್ಯರ್ ।
ಪಱಿನಂಟರ್ ತಮತದೊಂದು ಕೇಱಿಯ ಮನದೊಳ್ ॥ ॥೮೭॥

ಇರ್ದೊಂದು ದೆವಸಂ ಸೂರ್ಯನಾವಂ ಬೇಱೂರ್ಗೆ ಪೋಗೆ ಭೇದಿಸಿ ಶಶಿಕೃಷ್ಣವಲಂ ಅವನ ಪೊಟ್ಟೊಡಮೆಯಂ ಕಂಡೆತ್ತಿಕೊಂಡೊಡಾತನಱಿಯ ಬೆಂದು ನಿನಗೆ ಪೇಳಿ

ಶಶಿಯಂ ಘಾತಿಸಿ ಸೂರ್ಯನಂ ।
ಗಣೇಷಧನಮಂ ಬಲಿಕ್ಕೆ ನೀನಿತ್ತೊಡೆ ತ ॥
ಚ್ಛಶಿ ಪಲವು ಯೋನಿಯೊಳ್ ನಿಂ ।
ದಶಾಂತಮುತಿ ಚಂಡರುಚಿನಿಶಾಚರನಾದಂ ॥ ॥೮೮॥

ಕೃತಸುಕೃತವೇಷದಿಂದೀ ।
ಗತಿಯೊಳ್ ಸೂರ್ಯಚರನಾಂ ಹಿರಣ್ಯನೆನಾದೆಂ ॥
ಪ್ರತಿಕೂಲನಾದನವನೂ ।
ರ್ಚಿತನಿನಗಾಂ ಮಿತ್ರನಾದೆನದುಕಾರಣದಿಂ ॥ ॥೮೯॥

ಸಾತಿಶಯಸತ್ವನಿಧಿ ನೀ ।
ನಾತಂಗೊಳಗಾಗಿ ಬಂದೆಯಿಲ್ಲಿವರಂ ಶ್ರಾ ॥
ರ್ಯೇತರನಂದದೆ ಕರ್ಮವು ।
ದೇತಿಳಿದೊಳವೂಡಿದಲ್ಲದುಪಶಮಿಸುಗುಮೇ ॥ ॥೯೦॥

ಎಂದು ಪೇಳ್ದಾಭವನಾಮರನದೃಶ್ಯವಾಗಿ ಪೋಗೆ ಕುಮಾರನುಂ ತದ್ದೇ ಶಪ್ರಭಾವದಿಂ ಕಾಂತಾರಪಾರಮನೆಯ್ದಿ ನಗರನಂದನನಾನಾಕೇದಾರಪ್ರತಾ ನಪ್ರಾಯಮಪ್ಪ ಜನಪದಮಂ ಕಂಡು

ಅನ್ನೈಚಪಾರ್ಶ್ವಮೆತ್ತ ಸುರನೆತ್ತ ಸರೋವರಪಾತಮೆತ್ತರ ।
ಣ್ಯಾನಿಯದೆತ್ತ ಪರ್ವತಮುಮೆತ್ತ ಹಿರಣ್ಯನ ಕಾಣ್ಕೆಯೆತ್ತ ಮ ॥
ತ್ತೀನೆಲನೆತ್ತ ಮತ್ಕೃತಪುರಾತನಪುಣ್ಯದ ಪಾಂಗನೇನನಿ ।
ನ್ನೇನೆನಲಕ್ಕುಮೆಂದಿನಿಸು ವಿಸ್ಮಯಮುತ್ತು ಬರುತ್ತುಮಿರ್ಪಿನಂ ॥ ॥೯೧॥

ಶಕಟಾರೋಪಿತಸಂಶ್ರಯೋಪಕರಣಂ ಸ್ವಾರಿಪ್ರಜಾರೂಢಬಾ ।
ಳಕುಳಂ ಧಾಮನಿಯುಕ್ತಕಂಠವಿಚಳದ್ಗ್ರೀವಮಂಡಳಂ ಶತ್ರುಸೈ ॥
ನ್ಯೈಕೃತಾಸ್ಕಂಧವಿಳೋಕನೋತ್ಸುಕವಳದ್ಗ್ರೀವಾಂಗನಾಸಂಚಯಂ ।
ಚಕಿತಂ ತದ್ವಿಷಯಪ್ರಜಾಪ್ರತತಿಯೋಡುತ್ತಿರ್ದುದೆತ್ತೆತ್ತಲುಂ ॥ ॥೯೨॥

ಆಗಳಾಜನಸಂಕುಳದೊಳೊರ್ವನನಗ್ರಾಮ್ಯಾಕೃತಿಯನಿದಿರೊಳ್ ಬ ರ್ಪನಂ ಕಂಡು ತತ್ಪ್ರಜಾಪಲಾಯನಕಾರಣಮಂ ಮಾಗೋರ್ಪಕಂತ

ದೊಳ್ ನಿಂದು ಬೆಸಗೊಳ್ವುದುಮವನುಮಾತನ ಮನುಜಾಸಾಧಾರಣಾಕಾ
ರಮಂ ಕಂಡು ರಾಜಪುತ್ರನೆಂದಱಿದಿಱಿಗಿ ಪೊಡೆಮಟ್ಟು

॥ ಪೃಥ್ವಿ ॥

ನಿರಂತರಿತಶಾಲಿಸಸ್ಯಚಯಶಾಡ್ವಲೋರ್ವೀತಳಂ ।
ಪರೀತನವಪ್ರಾಗನಾಗವನಕರ್ಬುರಾಶೋತ್ಕರಂ ॥
ಸ್ಫುರನ್ಮಣಿಖನಿಪ್ರಭಾಶಬಳಿತಾಂಬರಂ ತೋರ್ಪುದಿಂ ।
ತರಿಂಜಯಸಮಾಹ್ವಯಂ ಜನಪದಂ ಸುಖೈಕಾಸ್ಪದಂ ॥ ॥೯೩॥

ಈಭೂಮಂಡಲಲಕ್ಷ್ಮಿಗೆ ।
ನಾಭೀಮಂಡಲಮಿದೆನಿಸಿ ಮಧ್ಯದೊಳೆನಸುಂ ॥
ಶೋಭಿಸುವುದು ನಗರಂ ವಿಪು ।
ಳಾಭಿಖ್ಯಂ ವಿಪುಳಶಾಳವಮತುಳಾಟ್ಟಾಳಂ ॥ ॥೯೪॥

ಆಳ್ವನದಂ ಜಯವರ್ಮಂ ।
ತೋಳ್ವಲದಿಂದಾತನಗ್ರಮಹಿಷಿ ಜಯಶ್ರೀ ॥
ಯಾಳ್ವಳ್ ತನ್ಮನಮಂ ಕ ।
ಣ್ಗೊಳ್ವ ನಿಜಾಕಾರಸಾರವಿಳಸನದಿಂದಂ ॥ ॥೯೫॥

ರತಿಗಂ ಮದನಂಗಂ ವಿ ।
ಶ್ರುತಮೋಹನಶಕ್ತಿ ಪುಟ್ಟುವಂದದಿನಾದಂ ॥
ಪತಿಗೆ ಸತಿ ಪುಟ್ಟಿದಳ್ ಸ ।
ನ್ಮತಿ ಗುಣವತಿ ರೂಪವತಿ ಶಶಿಪ್ರಭೆಯೆಂಬಳ್ ॥ ॥೯೬॥

ಮೊದಲೊಳ್ ಲಾವಣ್ಯಸರ್ವಸ್ವದ ತವಿಲನಣಂ ನೋಡದಾಕನ್ನೆಯಂಮಾ।
ಡಿದನೀಗಳ್ ಸ್ವೇಚ್ಛೆಯಿಂದಿರ್ದವನಿಪತಿಗಳೊಳ್ಳ ಕಾಮಸಂತಾಪಮಂ ಕೂ॥
ಡಿದನಾದಂ ತತ್ಸ್ತ್ರಿತ್ವದ್ವಂದ್ವದ ಮನಕೆ ಸಮಾಕಾರಸಂಪದ್ವರಾಲಾ ।
ಛದುರಂತೋದ್ವೇಗಮಂ ನೀಡಿದನತಿತರನಿರ್ಬಂಧದಿಂ ಪದ್ಮಸನ್ಮಂ ॥೯೭॥

ಅದಲ್ಲದೆಯುಂ

ಮನದ ವಿವೇಕಂ ಪೀನ ।
ಸ್ತನದೊಳ್ ನಾಲಗೆಯ ಮಾಳ್ಪ ಕಣ್ಣೊಳ್ ಕರತ ॥

ಚರ್ನಸಮುಡರೆ ನಿಮಿರ್ದ* ಪುರ್ವಿನ ।
ಕೊನೆಯೊಳ್ ನೆಲಸಿದುದು ಯೌವನಂ ಪೆಲಸಲೊಡಂ ॥ ೯೯॥

॥ ಮಲ್ಲಿಕಾಮಾಲೆ ॥

ಹಾಸಕಾಸುನುಮುಂಬಕದ್ಯುತಿಚಂದ್ರಿಕಂ ಸಸುಗಂಧನಿ ।
ಶ್ವಾಸದಕ್ಷಿಣವಾಯು ಮಂಜುಳವನ್ಯಪುಷ್ಪರುತಂ ತದು ॥
ದ್ಭಾಸಿನೂತನಯೌವನೋದಯಮಾಧವಂ ನೆರವೆಂದುಮಾ ।
ಯ್ತಾಸಮಸ್ತಜಗಜ್ಜಯಕ್ಕಿರವೆಂದು ಪೊಂಗುವನಂಗಜಂ ॥ ೯೯॥

ಪೆಡೆಯುಡುಗಿದ ಭೋಗಿನಿಯೆಮೆ ।
ಮಿಡುಕಂ ಸಂಗಳಿಸದಮರಿ ಗಗನಸ್ಥಳಿಯೊಳ್ ॥
ನಡೆ ಮಾಣ್ದ ಖಚರಿಯೆಂಬೀ ।
ನುಡಿಗೆಡೆಗೊಟ್ಟಳ್ ಲತಾಂಗಿ ನವತರುಣಿಮದೊಳ್ ॥ ೧೦೦॥

ಆಕೆಯನಂಗಜವಿಜಯುಪ ।
ತಾಕೆಯನಸಮಾಸ್ತ್ರಶರಶಲಾಕೆಯನೆರೆದು ॥
ವೀರ್ಕಾಂತನಲ್ಲಿಗಟ್ಟಿದ ।
ನೇಕಾಗ್ರಮನಂ ಮಹೇಂದ್ರನೆಂಬ ನರೇಂದ್ರಂ ॥ ೧೦೧॥

ಅಟ್ಟಲೊಡಂ ಜಯವರ್ಮಂ ।
ಕೊಟ್ಟಪೆನೆಂದಿರ್ದೊಡಾತನಚಿರಾಯುಷ್ಯಂ ॥
ಮುಟ್ಟಲ್ಲನೆಂದು ಮಾಣಿಸಿ ।
ಕಟ್ಟಿದನಾದೇಶಮಂ ನಿಮಿತ್ತದಿನೊರ್ವಂ ॥ ೧೦೨॥

ಬೇಡಿದೊಡಾರುಮಾರ್ಗೆ ಗಡ ಕೊಟ್ಟಪರಾವುದನಂತದಿರ್ಕಣಂ ।
ಬೇಡದೆ ಕೊಳ್ಳೇನಿಂ ನಿಜತನೂಜೆಗೆ ಸಂಗಡವಾಗೆ ನಾಡುಮಂ ॥
ಬೀಡುಮನೆಂದು ಬಂದು ಪುರಮಂ ನೆರೆ ಮುತ್ತಿ ಮಹೇಂದ್ರನಿರ್ದೊಡಂ
ತೋಡಲೊಡರ್ಚಿ ಕೆಟ್ಟಿ ಲೆಕೆಟಿಂದಲೆಯಾದಪುದೀಜಗಜ್ಜನಂ ॥ ೧೦೩॥

ಎಂದು ಪೇಳ್ದಾತಂ ಬೀಳ್ಕೊಂಡು ಪೋಗೆ

ಅಯಾಸಮನೀಮತ್ಯ್ಯನಿ ।
ಕಾಯಕ್ಕಪಡರಿಸಿ ದುರ್ಬಲಸ್ಯ ಬಲೋ ಕಾ ।
ಜಾಯೆಂಬುದನಾಂ ಮಾಡದೊ ।
ಡೀಯಿಡೆಯೊಳ್ ವ್ಯರ್ಥಮುಲ್ತ್ತ ಪಾರ್ಥಿವಜನ್ಮಂ ॥ ॥೧೦೪॥

ಅದುಕಾರಣದಿಂ ವಿಪುಳನಗರಕ್ಕೆ ನಡೆವೆನೆಂದು ತತ್ಪುರಾಭಿಮುಖಮಾಗಿ ನಡೆದೆಯ್ದುವರ್ಪಾಗಳ್

ಬಿಡುಪುರಿಯಿನ್ನೆ ಸೂಸುವ ಕನಲ್ಗಿಡಿ ಬೀಸುವ ಪೊಸವೋರೆಯಿಂ ।
ಬಿಡುವರೆ ಪೊಯ್ವ್ವ ಕತ್ತಳಿಕೆ ಕುತ್ತುವ ಕೊಂತಮುರುಳ್ಳ್ಚ್ಚ್ವೊಡ್ಡುಗಲ್ ॥
ಕಡೆಸಿರಗೆಯ್ದ ನೂಂಕುದಳಿಯಿಕ್ಕುವ ಬಲ್ದಸಿ ಭೀತಿಯಂ ಮನ ।
ಕ್ಕೊಡರಿಸೆ ಲಗ್ಗೆಯೊಟ್ಟಳದೊಳಟ್ಟಳವಾದುದು ಕೋಂಟೆಗಾಳಗಂ॥೧೦೫॥

ಇಡಿಸುವ ಡೆಂಕಣಕ್ಕೆ ನೆಲವಾಳಗೆ ಕೊತ್ತಳದಂಬುಗಂಡಿಯಿಂ ।
ದುಡುಗದೆ ಪಾಯ್ವ್ವ ಕೂರ್ಗಣೆಗೆ ಬದ್ದರಮೊಡ್ಡಿಪ ಕೋಂಟೆಗಾವಗಂ ॥
ಕೆಡಪುವ ಗಗ್ಗೆ ವಂಕದರದಿಂ ಪೊಳಿಮಟ್ಟಿಯಿವಾಳ್ಗ್ಗಮಾನ್ತ್ತಿಯಾಳ್ ।
ಗಡಣಿಸೆ ಕಾದುತಿರ್ದುದು ಮಹೇಂದ್ರಪದಾತಿನಿ ಮುತ್ತಿ ಸುತ್ತಲುಂ॥೧೦೬॥

ಅಂತು ಮುತ್ತಿ ಕಾದುತಿರ್ದ ಸೇನಾಮಹೋದಧಿಯಂ ಮಂದರಾಚಲದಂತೆ ಪೊಕ್ಕು ನಿರ್ಗಹನವೃತ್ತಿಯಿಂ ಪುರಮಂ ಪುಗಲ್ ಪೋಪಾಗಳ್

ನೆರೆದೊಡ್ಡಿರ್ದೊಡ್ಡನೇಸುಂ ಬಗೆದುದೆ ಮಹಧೀಶಾಜ್ಞೆಯಿಂ ಬಂದಪ್ಪೊಲ್ ನೀಂ । ಪುರಮಂ ಬೇಗಂ ಪುಗಲ್ ಪೋದೊಡೆ ತಲೆ ಪೊಱಯೇ ನಿನ್ನ ಮಿಯ್ಗಕ್ಕಟಾ ಸೈ ॥ ತಿರು ನೀನಾರ್ಗೆಂದು ತನ್ನಂ ನುಡಿದ ಭಟಕಟೊಡಕ್ಕೆ ಕಣ್ಣಿಂದೆ ಸೂಸು । ತ್ತುರಿಯಂ ಕಲ್ಪಾಂತದುಗ್ರಾಂತಕನ ಮಸಕಮಂ ತಾಳ್ದಿದಂ ರಾಜಪುತ್ರಂ ॥ ॥೧೦೭॥

ಅಂತು ಕಡುಮುಳಿದಾಬಲದೊಳೊರ್ವನ ಕೈಯ ಕೋದಂಡಕಾಂಡಂಗಳನೆಳೆದು ಕಳೆದುಕೊಂಡು

ಪೆಱಗಿಕ್ಕಿ ಪುರಮನೊಡ್ಡಿದ ।
ಮಱಿವಕ್ಕದ ಮೇಲೆ ಪೋಗದಂಬಿನ ಮಳೆಯಂ ॥

ಕಱುದಂ ನಂಬಿನ ಮುಟೆಯುಂ ।
ಕಱುವಂದದೆ ವಿಳಯಸಮಯದೊಳ್ ಕೀನಾಶಂ ॥ ॥೧೦೯॥

ಆಗಳ್

ನೆರೆದಟ್ಟಾಳಂಗಳೊಳ್ ನೋಡುವ ನಗರಜನಕ್ಕಾವಗಂ ಕೋಲನಾಂತಂ ತಿರುವಾಯೊಳ್ ತೊಟ್ಟಪಂ ತೊಟ್ಟರದೆ ತೆಗೆದಪಂ ಬಿಟ್ಟಪಂ ತಾನೆನಿಪ್ಪಂ ॥
ತರಮೀನುಂ ವೇಗಸಂಧಾನದಿನಱಿಯಲಣಂ ಬಂದುದಿಲ್ಲೆತ್ತಲುಂ ದಿಂ ।
ಡುರುಳುತ್ತಿರ್ಪನ್ಯಸೈನ್ಯಂಗಳ ತಲೆಗಳೆ ಕಾಣಲ್ಕೆ ಬಂದತ್ತದೆತ್ತಂ ॥೧೧೦॥

ದ್ವಿರದಂಗಳ ಹರಿಗಳ ಮು ।
ತ್ತೆ ರಥಂಗಳ ಮೇಗಣುಗ್ರಭಟಪಟಿಳಮುನಾ ॥
ದುರುಳೆಚ್ಚಂ ಪೊರಳೆಚ್ಚಂ ।
ಮರಳೆಚ್ಚಂ ಚಾಪಚಾಪಳಂ ಯುವರಾಜಂ ॥ ॥೧೧೧॥

ಆಗಳ್ ಕಾಡಿಯುಂ ನೋಡಿಯುಂ ಪೋಪ ನಿಜಧ್ವಜಿನಿಯನತಿದೂರದ ನೆಲೆಯೊಳ್ ನೆರೆದ ರಾಜಲೋಕದ ನಡುವಿರ್ದ ಮಹೇಂದ್ರಮನುಜೇಂದ್ರಂ ಕಂಡಿದೇನೆಂದು ಬೆಸಗೊಳ್ವುದುಮೊರ್ವನಿಂತೆಂದಂ—

ಎತ್ತಣನಕ್ಕೆ ಬಂದು ಕಡುಪಂ ಪಡೆದೊರ್ವನ ಬಿಲ್ಲನೀಟ್ಟುಕೊಂ ।
ಡೆತ್ತುತೆ ಮೊಗ್ಗರಂ ಕೆಡೆವಿನಂ ಬಿಡದೆಚ್ಚು ಭವನ್ಮಹೀಶನಂ ॥
ಮಿತ್ತುಗೆ ಬೋನವೆತ್ತಿದಪನಿತ್ತಲೆ ಪೋ ಬರವೇಜೆನುತ್ತುಮು ।
ದ್ವೃತ್ತನದೊರ್ವನಿರ್ದಪನಿದಿರ್ಚುವರಾರೆನಗೆಂಬ ಪೆರ್ಚಿನಿಂ ॥ ॥೧೧೧॥

ಎನಲೊಡಂ ರೋಷಲೋಹಿತಲೋಚನನುಮುದ್ಭೂತತ್ರಿಪತಾಕಾಕರಾಳಭಾಳನುಂ, ಘರ್ಮಬಿಂದುಸಂತಾನದಂತುರಿತಗಂಡಮಂಡಳನುಂ, ಪ್ರಸ್ಫುರಿತಧನವಸನನುಮಾಗಿ

ಒರ್ವಂಗೀರಾಜಲೋಕಂಬೆರಸು ನಡೆಯೆ ಬಂಟಿಂಗದೆಗ್ಗಿಂದು ಮೊಗ್ಗಿಂ ದಾರ್ವೆನ್ನೊಳ್ ಬಂಬೊಡಿಲ್ಲಿಂದವರ್ಗೆ*ಬಲಿಕಮೆನ್ನಾಣೆಯೆಂದಾಮಹೇಂದ್ರಂ ಗರ್ವಾಂಧಂ ಸಿಂಧುರಸ್ಕಂಧದಿನಿಳಿದು ಸಕೌಕ್ಷೇಯಕಂ ಬಿಪ್ಪುದಂ ಕಂ ।
ಡುರ್ವೀಭಾಗಕ್ಕೆ ಕೋಲುಂ ತಲೆಯುಮೊಡನೆ ಬೀಳ್ವಿನ್ನಮೆಚ್ಚಂಕುಮಾರಂ

ಆಸಮಯದೊಳ್ ಸಮಸ್ತ ಸಾಮಗ್ರಿವೆರಸು ಜಯವರ್ಮನುಂಡಲೇಶ್ವರನಿದಿರ್ವಂದಕಾರಣಬಾಂಧವನುಮನಿಮಿತ್ತ ಮಿತ್ರನುಮಾಗಿರ್ಪ ಜಿನಸೇನನಂ ಮಹಾವಿಭೂತಿಯಿಂ ಮುಂದಿದೊಡಗೊಂಡು ಪುರಮಂ ಪುಗುವಾಗಳ್

ಈತಂ ಕಾದಿ ಮಹೇಂದ್ರನಂ ಬಲಸಮೇತಂ ಬಾಣದಿಂ ಕೂಡೆ ಪೂ ।
ಬ್ಪೊತಂ ನಮ್ಮ ಪುರೀಪುರಂಧ್ರಿಯರ ಕಣೋರ್ತ್ತಂಸಮಂ ನಾಡೆ ಕಾ ॥
ದಾತಂ ರಾಜ್ಯಪದಕ್ಕೆ ಮತ್ತೆ ಜಯವರ್ಮೋರ್ವೀಶನಂ ತಾನೆ ತಂ ।
ಬಾತಂ ನೂತನನೆಂದು ನೋಡಿದುದತಿಪ್ರೀತಂ ಪುರಾಂತರ್ಜನಂ ॥೧೧೩॥

ಅನಂತರಂ ರಾಜಭವನಮಂ ಪೊಕ್ಕು ಪಳಕಿನೋಲಗಸಾಲೆಯೊಳಗಣಮಣಿಮಯಾಸನಂಗಳನಲಂಕರಿಸಿ ಕುಮಾರಂ ಬಂದ ವೃತ್ತಾಂತಮಂ ಬೆಸಗೊಳುತ್ತಿರ್ಪನ್ನೆಗಂ ಶಶಿಪ್ರಭೆಯುಮಾತನಂ ನೋಡುವಟ್ಟಿಯಿಂ ತಾನಲ್ಲಿಗೆ ಸಾವಿದಲ್ಲನನಟ್ಟಿ ಲಬ್ಧಾಗಮನಾಭ್ಯನುಜ್ಞನಾಗಿ

ನೃಪಲೀಲಾಪರಿಷನ್ನಿಕೇತನಪುರೋಭಾಗಕ್ಕೆ ಸಾರ್ತಂದಳಂ ।
ದುಪದೇಶಂಗುಡುವಂದದಿಂದಲಸಯಾನಪ್ರೌಢಿಯಿಂ ಹಂಸಿಗಾ ॥
ತಪಮಂ ಕೊರ್ವಿಸುವಂದದಿಂ ಮಣಿವಿಭೂಷಾರಶ್ಮಿಯಿಂ ನೂಪುರೋ ।
ಲ್ಲಪನವ್ಯಾಜದಿನಾಗಳೇಸುವೆಸನಂ ಕಾಮಂಗೆ ಪೇಳ್ವಂದದಿಂ ॥೧೧೪॥

ನಯನಪ್ರಭೋಜ್ಜ್ವಲಜ್ಯೋ ।
ತ್ಸ್ನಯಿನಾದಂ ಕನ್ನೆ ಮುನ್ನ ಧವಳಿಸಿ ಭೂಷಾ ॥
ಚಯಮಣಿಗಣನಿಚಯದೆ ತಾಂ ।
ಬಯಲಂ ಚಿತ್ರಿಸಿದಳೆಯ್ದೆ ಗಮನೋತ್ಸವದೊಳ್ ॥ ॥೧೧೫॥

ನಡೆವಂತೆ ನುಡಿವ ಪುತ್ರಿಕೆ ।
ಮಿಡುಕುವ ರಸಚಿತ್ರದೆಸೆವ ಪೆಣ್ಣಂಬೊಳ್ಪಂ ॥
ಪಡೆದಳ್ ಕಣ್ಗಂ ಮನಕಂ ।
ಪಡೆದಳ್ ಪೊಸವೇಟದೆಸಕಮಂ ನೃಪಸುತನೊಳ್ ॥ ॥೧೧೬॥

ಅಂತು ಬಂದು

ಪದನಖಚಂದ್ರಬಿಂಬಚಯದೊಳ್ ಪ್ರತಿಬಿಂಬಕದಂಬಶೋಭೆಯಿಂ ।
ದೊಡವಿಸುವನ್ನೆಗಂ ಕುಟಿಳಕುಂತಳಮಾಳಿಕೆ ಲಕ್ಷ್ಮಲಕ್ಷ್ಮಿಯಂ ॥

ಪದಪಿನೊಳಂದು ಕಾಲ್ಗೆ ಅಗಿದಾತ್ಮಜೆಯಂ ಪರಸುತ್ತು ಮೆತ್ತಿ ಪೀ ।
ಠದ ಕೆಲದಲ್ಲಿ ಕುಳ್ಳಿರಿಸಿದಂ ನಲವಿಂ ವಿಪುಳಾಧಿನಾಯಕಂ ॥ ॥೧೧೭॥

ಆಗಳ್

ಬಿದಿ ಮುಟ್ಟಿ ಮಾಡಿದಂದಿನಿ ।
ತೊದವದು ಲಾವಣ್ಯಮಂತದಲ್ತೊಲವಿಂದೀ ॥
ಸುದತಿಯನತನುವೆ ತಾಂ ಮು ।
ಟ್ಟದೆ ಮಾಡಿದನೆಂದು ನೋಡಿದಂ ನೃಪತನಯಂ ॥ ॥೧೧೮॥

ಆರಯೆ ಮತ್ತವೇಂ ಭರಸಹಂಗಳೊ ಜಂಘೆಗಳಾಂತುವೀಕಟೀ ।
ಭಾರಮನೇನುರಂ ಪಿರಿದೊ ತಾಂ ನೆರೆದತ್ತು ಪಯೋಧರದ್ವಯೀ ॥
ಭೂರಿವಿಜೃಂಭಣಕ್ಕೆ ಮುಖಮೇನವಗಾಹನಶಕ್ತಮೋ ನಿಜಾ ।
ಕಾರದೊಳಿಟ್ಟುದೀಜಗದ ಚೆಲ್ವನಶೇಷನುಮಂ ಕುಮಾರಿಯಾ ॥೧೧೯॥

ಎಂದಾಕೆಯ ಭುವನತ್ರಯಲೋಚನೀಯಾಕಾರಮಂ ಸೌಂದರ್ಯಮಂ ನೋಡಿ ಮನದೊಳ್ ವಿಸ್ಮಯಂಬಡುತ್ತುಮಿರ್ಪನ್ನೆಗಂ

ಅಮರ್ದಂ ಸಿಂಪಿಸುವಂತೆ ಸಾಂದ್ರಮಳಯಸ್ಸ್ನಾವೋದಮಂಸೂಸುವಂ
ತೆ ವ್ಯಾಳಾಭರಣಂಗಳಂ ತುಡಿಸುವಂತುತ್ಫುಲ್ಲಶುಭ್ರಾಬ್ಜಪ ॥
ತ್ರಮಯಸ್ರಗ್ವಿಸರಂಗಳಂ ಮುಡಿಸುವಂತಾಕೇಕರಜ್ಯೋತಿಗಳ್ ।
ನಿಮಿರ್ವನ್ನಂ ಯುವರಾಜನಂ ಯುವತಿ ತಾನುಂ ನೋಡಿದಳ್ ನಾಡೆಯುಂ ॥

ಅಂತು ನೋಡಿಯುಂ

ನೋಟಂ ನೃಪಸುತನೊಳ್ ಕ ।
ಣ್ಬೇಟಂ ಮನದೊಳ್ ವಿಕಾರಚೇಷ್ಟೆಗಳೊಡಲೊಳ್ ॥
ನಾಟೆ ಬೆದಱದಳನಂಗನ ।
ಬೇಟೆಯೊಳೊಳಗಾದ ಹರಿಣಿಯೆನೆ ತರುಣಿ ಕರಂ ॥ ॥೧೨೧॥

ಆತನಿನಾದ ಬೇಟಮಭಿಜಾತತೆಯಿಂ ನೆಗಳ್ದೊಂದು ಧೈರ್ಯಮಂ ।
ತಾತನಿನಾದ ಭೀತಿ ನಿಜಬಾಲ್ಯದೊಳುಣ್ಮಿದ ಲಜ್ಜೆ ಹೃತ್ಸಮು ॥

ದ್ಯೂತನಿನಾದ ಸೊಕ್ಕುಗ್ ಸುಚರಿತ್ರತೆಯಿಂ ಸಮಸೆಂದ ಸೌಷ್ಮವಂ ।
ಚೇತದೊಳುಣ್ಮೆ ಕನ್ನೆ ತಳಿದಳ್ ಕಿಲಿಕಿಂಚಿತಭಾವಚೇಷ್ಟೆಯಂ ॥ ೧೦೬॥

ಅನಂತರಮರಸನುಂ ವಾಕ್ಪ್ರಸ್ತುತಕಥಾವಸಾನದೊಳ್ ಕುಮಾರನಂ ಪ್ರಮದವನದೊಳಗಣ ದಿಗ್ವಲೋಕನಮಹಾಪ್ರಾಸಾದಮಂ ಬಿಡುವಾಣಂ ಮಾಡಿ ದಿವಸವ್ಯಾಪಾರಮಂ ತೀರ್ಚುವಂತು ತದಧಿಕೃತಜನಂಗಳುಮಾಸ ಲಿಕೆಯಾಗದಂತು ಗೀತದ್ಯೂತಸಾಹಿತ್ಯನಿತ್ಯವಾದ್ಯವಾದಿತ್ರವಿಕಾರದೆಯಿಂ ಪ್ಪ ವಿಳಾಸಿನೀಜನಂಗಳುಮನಪ್ಪಯಿಸಿ ಕಳಿಪಿ ತಾನುಂ ಯಥೋಚಿತ ವ್ಯಾಪಾರದಿಂದಿರ್ದೊಂದು ದಿವಸಂ ಯಾಮಿನೀಪ್ರಥಮಯಾಮವಿರಾಮಸ ಮಯದೊಳ್ ಸೆಜ್ಜೆವನೆಯೊಳ್ ಜಯಶ್ರೀಮಹಾದೇವಿವೆರಸಿರ್ಪವಸರದೊ ಳ್ ಶಶಿಪ್ರಭಾದೇವಿಯ ವಯಸ್ಯೆ ಕನಕಪ್ರಭೆಯೆಂಬಳ್ ಬಂದು ಪೊಡೆಮ ಟ್ಟು ಕುಳ್ಳಿರ್ದುಗ್

ಎಂದು ಮಹೇಂದ್ರಮರ್ದನನನೀಕ್ಷಿಸಿದಳ್ ಭವದಾತ್ಮಜಾತೆಯಂ ।
ದಿಂದಮೆಮಾನಮನ್ಮಥವಿಕಾರಶತಂಗಳೊಳೊಂದಿ ಪಾಡಳಾ ॥
ನಂದದಿನಾಡಳೋದಳೊಡನಾಡಿಗಳೊಳ್ ಸುಡಿಯಲ್ಕವೊಲ್ಲಳಾ ।
ಸ್ಥಾಂದರಿ ಶಕ್ಕುವಿಟ್ಟಿ ತೆಱನಿರ್ದಪಳೀವುದದರ್ಕಧೀಶ್ವರಾ ॥ ॥೧೦೩॥

ಅದಲ್ಲದೆಯುಂ,

ನಡು ನಡಪಿತ್ತು ತನ್ನನೆನೆ ಮೆಯ್ ಬಡವಾದುದು ಲೋಚನಾಂಕುಗಳ್ ।
ಬಿಡೆ ತೊಡರ್ದಂತೆ ಗಂಡಯುಗಳಂ ಬಿಳಿದಾದುದು ತೋಳ್ಗಳೊಳ್ ಬರಂ ॥
ಬಿಡೆದವೊಲೆಯ್ದೆ ಸುಯ್ ಸರಳವಾದುದು ಹಾವರಸಪ್ರವಾಹದೊಳ್ ।
ಗಡಣಿಸಿದಂತೆ ಬಾಷ್ಪಜಲಸಂತತಿ ಕಾಪ್ಪಿರಮಾದುದಾಕೆಯಾ ॥೧೦೪॥

ದಿನದೊಳ್ ಸಜಳತೆಯಿಂ ಮ ।
ತ್ಸ್ಯನಳನಮಂ ಮತ್ತಮಿರುಳೊಳುನ್ನಿದ್ರತೆಯಿಂ ॥
ದಿವಸಂ ಚಕೋರಕುಮುದಮ ।
ನನುಕರಿಸಿದುದಾವಿಯೋಗವಿಧುರೆಯ ಕಣ್ಗಳ್ ॥ ॥೧೦೫॥

ಕರದಿಂ ಮೆಯ್ಯೊಳ್ ಪನಿತ ।
ಕ್ಕರದಂತಿರೆ ಸಾಂಜನಾಂಬುಕಣತತಿ ಕಾಮಂ ॥

ಬರೆದ ನೃಪಸುತನ ಸೊಬಗಿನ ।
ನರಕಾಸನದಂತೆ ವಿರಹವಿಹ್ವಲೆಯಿರ್ಪಳ್ ॥ ॥೧೫೫॥

ಸುರಿದಬಲೆ ಕಣ್ಣನೀರ್ಗಳ ।
ಸರಿಯುಂ ಸ್ತನಮಂಡಲಂಗಳೊಳ್ ವಿರಹಮಹಾ ॥
ಜ್ವರಮನಿತಪುಳಕಸಸ್ಯಾಂ ।
ಕುರಂಗಳಂ ಬಳೆಯಿಪಳ್ ನಭೋಲಕ್ಷ್ಮಿಯಪೊಲ್ ॥ ॥೧೫೬॥

ಮತ್ತ ಮೂಕೆಗೆ
ತಂದುದು ನೊಸಲ್ಗೆ ತಾಪಮೆ ।
ಚಂದನಮಂ ಕರ್ಣಪೂರತೆಗೆ ಕೆಂದಳಮೈ ॥
ತಂದುದು ಹಾರಂ ಕಣ್ಬನಿ ।
ಯಿಂದಾದತ್ತುಟಿದ ಭೂಷೆಯಂ ದೂಷಿಪವೊಲ್ ॥ ॥೧೫೭॥

ಪರಿಕಿಪೊಡಗ್ನಿಗಮೂಕೆಯ ।
ವಿರಹಾಗ್ನಿಗಮಿಲ್ಲ ಭೇದಮುಲ್ಲದೊಡೇಂ ಕ ॥
ಪ್ಪರದ ರಜಕ್ಕಂ ವೀಜನ ।
ದೆರಲ್ಗಮದು ಕಿಡದೆ ಬಳ್ವಳಂ ಬಳೆದಪುದೇ ॥ ॥೧೫೯॥

ಮಗ್ನತೆಯಿನೆಱಗಿ ಸುಯ್ಯೆಲ ।
ರಗ್ನಿಯಿನಟ್ಟಿದಳಿಗಳುದುಬುತಿರೆ ಪೊತ್ತುದು ಸಂ ॥
ಲಗ್ನವಿರಹಾಗ್ನಿತಾಪೋ ।
ದ್ವಿಗ್ನೆಯ ನಾಸಿಕಮಭೇದಮಂ ಚಂಪಕದೊಳ್ ॥ ॥೧೬೦॥

ಅಂಬುಜದಮನನುಬರ್ಚಿ ನಿ ।
ತಂಬಿನಿ ಪಿಡಿದಿರ್ದ ಕುಚಮೆ ತಪ್ತಾಯಃಪಿಂ ॥
ಡಂಬೋಲ್ತಿರೆ ನಲ್ಮೆಗೆ ದಿ ।
ವ್ಯಂಬಿಡಿದಳೊ ಪೇಳಿಮೆನಿಪಳಾವ್ಯತಿಕರದೊಳ್ ॥ ॥೧೬೧॥

ಕುಳಿರ್ವೆಳಲತೆವನೆಗಂ ಕೆಂ ।
ದಳಿರ್ವನೆಗಂ ಸೂಸುವಾಲಿನಿಃಶ್ವಸನಿಗಳ್ಗಂ ॥

ಮಿಳಿಕೆಳವಿಜ್ಜಣಿಗೆಗಳಂ ।
ತೆಳವೆಲರ್ಗಂ ಕಾಂತೆ ಕರಮೆ ಹಂಗಿಗೆಯಾದಳ್ ॥ ॥೧೩೨॥

ಪುಗೆ ಪೊಗೆಯೆಟ್ಟಿ ಕೆಂದಳರ ಜೊಂಪಮಿವಂತವಳೀಸೆ ಕಾಯ್ದು ನೀ ।
ರ್ದೆಗೆದ ಸರೋವರಂಗಳವು ಜೋಲ್ದು ಮಲಂಗೆ ಕರಿಂಕುವಿಟ್ಟಿ ಬಾ ॥
ಳಗಳ[illegible]ದರ್ ಸುಯ್ಯುಡರೆ ನೀಡ ಲತಾಳಯಿಟ್ಟೆ ಬೆಂದು ಕಂ ।
ಡೊಗೆಬೆಳಗಾಂಗಿವೆಂಬ ಕುಱುಪಂ ಪಲವಾಂತುವೆ ನಂಜಸಿಗಳ್ ॥

ಅಪಹರಿಸಿದಳೀಕಾಮಿನಿ ।
ಉಪಸಶ್ರೀಯಿಂದವೆನ್ನ ಚೆಲ್ವಂ ತಾ[illegible] ॥
ಬಿಪಕಾಲಪಾಶದಿಂ ಕಟಿ ।
ಯಪಾರಕರಪಾತದಿಂದೆ ಪುಥಿಯಿಸುತಿರ್ಪಂ ॥ ॥೧೩೩॥

ಎನ್ನಯ ಸೊಬಗಂ ಗೆಲ್ದಳ್ ।
ಕನ್ನೆ ಚಲೆಂದೆಂದು ರತಿಯೆ ಪರ್ಚಿಸುತಿರ್ಪಳ್ ॥
ತನ್ನಯ ನಲ್ಲನನಲ್ಲದೊ ।
ಡೆನ್ನರೊಳಂ ಮಾಡನಿನಿಸು ಮುನಿಸಂ ಮದನಂ ॥ ॥೧೩೪॥

ಸ್ಮರನಲರ್ಗಣೆಗಳ್ ತಮ್ಮೊಳ್ ।
ದೊರೆಕೊಳ್ಳದ ತಾಪಮಂ ಸಮಂತಿತ್ತಪುವೀ ॥
ತರುಣಿಗೆ ತಮಗುಳ್ಳುದನೇಂ ।
ನಿರವಿಪುದತಿಶಯಮೆ ಪಂಚತೋದಂಚನಮಂ ॥ ॥೧೩೬॥

ಕಾರಣದಿನಾಕೆ ದಶಮಾವಸ್ಥೆಗೆ ಪಕ್ಕಾಗದನ್ನೆಗಮಿದರ್ಕೆ ತಕ್ಕುದಂ ದೇವರ್ ಸಮಕಟ್ಟುಪುದೆಂದು ಪೇಳ್ದಿಪೋಗಲ್ ಅವಳ ಬಿನ್ನಪಮನವಧಾರಿಸಿ ನಿಜವೃತ್ತಿಗೆ ಸದೃಶಮಾದ ಮಗಳ ಮನೋವೃತ್ತಿಗೆ ಅತ್ಯಂತಸಂತುಷ್ಟಹೃದಯನಾಗಿ

ಆಕುವರನೊಳಲ್ಲದೆ ಪೇ ।
ಟೀಕನ್ನೆಗೆ ನಲ್ಮೆ ಸಮನಿಕುಮೆ ನವವಿಕಚಾ ॥
ಬ್ಜಾಕರದೊಳಲ್ಲದುದಯಿಕು ।
ಮೇ ಕಳಹಂಸೆಗೆ ಮನಃಪ್ರಮೋದಮುದೆಂದುಂ ॥ ॥೧೩೭॥

ಎಂದು ಪೊಗೆಟ್ಟಿ ಮಱುದಿವಸಂ ಸಮಸ್ತ ಮೌಹೂರ್ತಿಕನಿಕುರಂಬಮಂ ಬರಿಸಿ ಶಶಿಪ್ರಭಾವಿವಾಹವಿಭವಮುಹೂರ್ತಮಂ ಬೆಸಗೊಂಡು ತನ್ನಂಗಳ ದಿನಾಗಮಮಂ ಪಾರುತ್ತುಮಿರ್ದಂ. ಅನ್ನೆಗಂ

ಕುಮುದಂ ಶಶಿಪ್ರಭಾಸಂ ।
ಗಮಮಂ ಪೂರ್ವಂದದಿಂದೆ ಸಂಜನಿತಲಸ ॥
ತ್ಕುಮುದಂ ಶಶಿಪ್ರಭಾಸಂ ।
ಗಮಮಂ ಪಾರುತ್ತುಮಿರ್ದನಾಯುವರಾಜಂ ॥ ॥೧೩೪॥

ಮದನಪ್ರಸ್ಪರ್ಧಿಸೌಂದರ್ಯದೆ ನೃಪಸುತೆಯಂ ಸತ್ಕಳಾಜಾಳಬಾಹು ರ್ಯದೆ ತತ್ತದ್ವಿದ್ಯೆರಂ ದುರ್ಧರಸಮರಜಯಪ್ರೌಢತಾರೂಢಡೋಜ್ಯೆ ॥ ರ್ಯದೆ ಶೂರಾರಾತಿಸಂದೋಹವನೆಱಗಿಸಿ ನಿತ್ಯೋದಯಾವಾನಜೈತ್ರ । ಮ್ಮದನಿರ್ದಂ ಸೌಖ್ಯಸೀಮಂ ಚತುರಜನಮನೋವ್ಯೋಮಪೀಯೂಷ ಧಾಮಂ ॥ ॥೧೩೯॥

॥ ಗದ್ಯಂ ॥

ಇದು ಪರಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ
ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಶಶಿಪ್ರಭಾವಿರಹ ವಿಜ್ಞಾಪನಂ

ಪಂಚಮಾಶ್ವಾಸಂ

ಶ್ರೀಗೆ ಜಯಶ್ರೀಗೆ ಯಶ ।
ಶ್ರೀಗೆ ಶಶಿಪ್ರಭೆಯೆ ಸವತಿಯಾದಪಳೆಂಬು ।
ಗ್ಯೋಳಿಕೊಳರ್ದಂ ಸಕಲಸ್ತ್ರೈ ।
ಮಾಗಮಗುರು ಜೈನಜನಮನೋಪರಚರಿತಂ ॥ ॥೧॥

ಎರಡನೆಯಬ್ಧಿಯುಂ ಮೊದಲ ವಾರಿಧಿಯುಂ ಗಡಿಯಾಗೆ ನೀಳ್ದು ಬಂ ।
ಧುರಭರತತ್ರಿಖಂಡಧರೆಗಿಕ್ಕಿದ ಸೀಮೆಯ ಕೋಂಟೆಯೆಂಬಿನಂ ॥
ಕರಮೆಸೆದಿಪ್ಪ ದಾತಕಗುಹಾದ್ವಯವಜ್ರಮಯೀದರೀಪ್ರಭಾ ।
ಪರಿಚಿತಪಾರ್ಶ್ವಮಗ್ರನಿಭೃತಾಂಬುಧರಂ ವಿಜಯಾರ್ಧಭೂಧರಂ ॥ ॥೨॥

ಆಕುತ್ತ್ರೀಲಂ ಸೊಗಯಿಸ್ಪ ।
ದಾಕಾಶೋರಗವಿಮುಕ್ತನಿರ್ಮಳತರನಿ ।
ರ್ಮೋಕಂ ತಾನೆನೆ ರಜತಾ ।
ಳೋಕಸಹಸ್ರಾಂಶುಧವಳತಾಕಾವಳಿಯಂ ॥ ॥೩॥

ಪ್ರತಿಬಿಂಬಿಸಿದುದು ರಜತಾ ।
ಚ್ಛತೆಯಿಂ ಸುರಲೋಕಮೆಂಬಗುರ್ವಿಂದಾಪ ॥
ರ್ವತದುತ್ತರದಕ್ಷಿಣದಿ ।
ಕ್ಪ್ರತಿಬದ್ಧಶ್ರೇಣಿಯೊಳ್ ಪುರೋತ್ಕರಮೆಸೆಗುಂ ॥ ॥೪॥

ಅಲ್ಲಿ ದಕ್ಷಿಣಶ್ರೇಣಿಗಲಂಕಾರವಾಗಿ

ಪ್ರತ್ಯಹವೊಪ್ಪುಗುಂ ವಿವಿಧರತ್ನವಿನಿರ್ಮಿತಕೂಟಕೋಟಿಯಂ ।
ಚ್ಚೈತ್ಯಗೃಹಾವಹಂ ಶುಕಪಿಕಾಕುಳಸೌಂದರನಂದನಾವಳೀ ॥
ವೃತ್ಯುಪಶೋಭಿತಂ ಚತುರಖೇಚರವಾರವಧೂನಿಧಾನಮಾ ।
ದಿತ್ಯಪುರಂ ಪುರಂದರಪುರಪ್ರತಿಮಂ ಪುರುರತ್ನಗೋಪುರಂ ॥ ॥೫॥

ನಿಜರೂಪವಿಜಿತಮಕರ ।
ಧ್ವಜನಖಿಳದಿಕಾಂತರಪ್ರತಿಷ್ಠಿತಕೀರ್ತಿ ॥

ಧ್ವಜನದನಾಳ್ವಂ ಧರಣೀ ।
ಧ್ವಜನೆಂಬಂ ಖೇಚರೇಂದ್ರನಪಗತತಂದ್ರಂ ॥ ॥೬॥

ಅಪರಿಮಿತಖಚರಭೂಭೃ ।
ದ್ವಿಪಕ್ಷಕೃಂತನವುನೀಯೆ ದಕ್ಷಿಣಬಾಹಾ ॥
ಚಪಳಾಸಿಕುಳಿಶಮೂವಗ ।
ಮುಪಮೆಗೆ ವಂದಂ ಸುರೇಂದ್ರನೊಳ್ ಖಚರೇಂದ್ರಂ ॥ ॥೭॥

ಆತನೊಂದುದಿವಸಂ ಸಭಾಭವನದೊಳ್
ಮಂಡಳಿಸಿರ್ದ ಖೇಚರಸಮೂಹದ ಮಧ್ಯದೊಳಿರ್ದು ದೂರದಿಂ ।
ಗುಂಡಿಗೆ ಕೈಯೊಳೊರ್ಚಿ ಅಗಿನಿಂ ಪೊದೆದಂಬರಮುಟ್ಟ ಕಚ್ಚುಟಂ ॥
ಮುಂಡಿತಮೂರ್ಧಮೊಪ್ಪೆ ಬರುತಿರ್ಪೆಡೆಯೊಳ್ ವ್ರತಚಿಹ್ನಧಾರಿಯುಂ ।
ಕೂಡನಣುವ್ರತಪ್ರಕರಫಾಲಕನಂ ತ್ರಿಯುಥರ್ಮನಾಮನಂ ॥ ॥೮॥

ಇದಿರೆಳ್ದು ಕೈಗಳಂ ಮುಗಿ ।
ದುದಾತ್ತವಿಷ್ಟರದೊಳಿರಿಸಿ ಪಾದ್ಯಮನಿತ್ತಂ ॥
ಪದಪಿಂದಾಖಚರೇಶ್ವರ ।
ನಧಾರ್ಗೆ ಜಿನಮುದ್ರೆ ಮೂಡಿಸದೊ ಮುಚದೊದವಂ ॥ ॥೯॥

ಅನಂತರಂ ಸಕಲವಿದ್ಯಾಧರಲೋಕಮಂ ವಿಸರ್ಜಿಸಿ
ಇಂದು ನಿಜಾಗಮನದೆ ಮ ।
ನ್ಮಂದಿರಮಂ ಪೂತನೃತ್ತಿಗೆಯ್ದಿಸಿದುದದೇ ॥
ನೆಂದಱಿಪಿಮೆಂದೊಡಂದಿಂ ।
ತೆಂದಂ ತದ್ದೇಶಯತಿಕೃತಾಶೀರ್ವಾದಂ ॥ ॥೧೦॥

ನೀರಾಗರೆನಿಸಿಧೆನುಗಮ ।
ಕಾರಣದಿಂದೊಲವು ನಿನ್ನೊಳಾದತ್ತೆನೆ ಮ ॥
ತ್ತಾರಯೆ ಸರ್ವಗೆತ್ತಂ ಸಂ ।
ಸಾಭಧೊಳೀವೋಹನೊಂದೆ ದಲ್ ಖಚರೇಂದ್ರಾ ॥ ॥೧೧॥

ಅದುಕಾರಣದಿನಿಂದು ಭವದೀಯ ವಾರ್ತೆಯೊಂದನೀಶಿಖರಿಶಿಖರದಿಂ ಕೂ
ಟಚೈತ್ಯಾಯತನಕ್ಕೆ ವಂದಿರ್ದ ಸುದರ್ಶನೆಂಬ ಸರ್ವಾವಧಿಬೋಧಸಂಪ

ನ್ನ ಮುನಿಮುಖ್ಯರಿನಱಿದು ಬಂದೆಂ. ಅದಾವುದೆಂದೊಡೆ ಧರಿಂಜಯಮಹಾಂತದ ವಿಪುಳನಗರಾಧಿಪತಿ ಜಯವರ್ಮನೆಂಬೊಂ ಜನನಾಥಂ. ಆತನರಸಿ ಜಯಶ್ರೀಯೆಂಬಳ್. ಅವರಿರ್ವರ್ಗರ್ಂ

ತ್ರಿಭುವನಮೋಹನದೀಪ ।
ಪ್ರಭೆ ನಿಜಕಣೋರ್ತ್ಪಳಾಯತಾಕೇಕರದೃ ॥
ಕ್ಷ್ ಭೆ ಪುಟ್ಟಿದಳೆಸೆವ ಕಶಿ ।
ಪ್ರಭೆಯೆಂಬುಚಿತಾಭಿಧಾನಕನ್ಯಾರತ್ನಂ ॥ ॥೧೨॥

ನಿನ್ನಂ ಧುರದೊಳ್ ಸಾಧಿಸು ।
ವನ್ನನದೊರ್ವಂಗಡಾದಪಂ ಮದುವೆಯನಾ ॥
ಕನ್ನೆಯನೆನೆ ಕಿವಿಯಂ ಕ ।
ಬೊನ್ನಸರಲ್ ತಾಗಿಧಂತಿರಾದಂ ಕುಚರಂ ॥ ॥೧೩॥

ಎಂದು ಮನದೊಳ್ ಮೆಚ್ಚರಮುಮನುದ್ರೇಕಮುಮನೊಳಕೆಯ್ದುಂ ಸ್ವಭಾವಗಂಭೀರವೃತ್ತಿಯುಪ್ಪುದಱಿನವಹಿತಭಾವಮನವಳೆಂಬಿಸಿ ಬಲಿಯಮಿಲ್ಲಿಗೆ ತಕ್ಕುದಂ ಪ್ರತೀಕಾರಮನಪ್ರಮತ್ತವೃತ್ತಿಯಿಂ ನೆಗಳ್ದಿಪ್ಪೆನೆಂದು ವಿನಯದಿನಾಕ್ಷುಲ್ಲಕಮುನಿಯುಮನಂದಿನ ದಿವಸಮುಮಂ ಕಳಿಪಿ ಮುಂದುದಿವಸಂ

ಕಿವಿ ಚಬ್ಬಿಗಿಡೆ ಘಂಟಿಕಾಘನತಣತ್ಕಾರಂಗಳಂಬೆಯ್ದಿ ದಿ ।
ಜ್ಜಿವಪಂ ಮೇಳಕುಳಂ ಚಳಧ್ವಜಪಟೀವಾತಂಗಳಂ ಕೂಡೆ ತೂ ।
ಳ್ದಿ ವಿಯನ್ಮಂಡಲಮಧ್ಯದೊಳೆ ಬಹುತರಂ ನಕ್ಷತ್ರಸಂಭಿನ್ನವಾ ।
ಗೆ ವಿಮಾನಾವಳಿ ಕೋಪದಿಂದೆ ತಳರ್ದಂ* ವಿದ್ಯಾಧರಾಧೀಶ್ವರಂ ॥ ॥೧೪॥

ಗಗನದೊಳಿಕ್ಕೊಪ್ಪಿರೆ ಮಿಗೆ ।
ನೆಗಪಿದ ಧೂಳೀಸಮುಚ್ಚಯಂಗಳಿವೆಂತೆಂ ॥
ತೊಗೆದುವೆನೆ ನಾಕಹೇತುಗ ।
ಳೊಗೆದುವು ಸುತ್ತಿಱಿದು ಧೂಮಕೇತುಗಳಾಗಳ್ ॥ ॥೧೫॥

ಅಳ್ಕೆ ಮನಂ ನೋಳ್ಪಿರ ಕ ।
ಣ್ಣಳ್ಕೆ ವಿಯಚ್ಚರಕಿರೀಟರತ್ನಾಂಶುಚಯಂ ॥

ಗಳ್ಕೊವೆ ಮಿಱುಗಿದುವು ಪಗ ।
ಲುಳ್ಕಂಗಳ್ ದೆಸೆಯೊಳವಿರಳಪ್ರಸರಂಗಳ್ ॥ ॥೧೬॥

ಇವು ಮೊದಲಾಗಿ ಮತ್ತಮನೇಕವೈಹಾಯಸೋತ್ಪಾತಂಗಳಾಗೆ ಕಂಡು ಜಯಮನೆಮಗರಿಗೆ ಪಿರಿದುಂ ।

ಭಯಮಂ ಪೇಳ್ದಿಪುವಿವೆಂದು ನಡೆದಂ ಖಚರಾ ॥
ನ್ವಯಪತಿಯುಪನತಮೃತ್ಯು ।
ದಯಂಗೆ ದುರ್ಗ್ಯಯಮೆ ಸುನಯಮೆನಿಸುಗುಮೆ ವ್ರೊಲಂ ॥ ॥೧೭॥

ಅಂತು ನಡೆದು ವಿಪುಳಾಪುರಮನೆಯ್ದಿದಾಗಳ್

ಕೇಳೀಭೂಧರಮೂರ್ಧದೊಳ್ ಬಹುವಿಧೋದ್ಯಾನಾವಳೀಚೂಳದೊಳ್ । ಶಾಳೋದ್ಯತ್ಪರಿಕೂಟಜಾಳಶಿರದೊಳ್ ಹಮ್ಯೋರ್ಧ್ವದೊಳ್ ಸಂವೃತೋ ತ್ತಾಳಾಟ್ಟಾಳಕಕೋಟಿಯೊಳ್ ಪುರಮಹಾದ್ವಾರಾಗ್ರಿಮಸ್ಥಾನದೊಳ್ । ಲೋಳತ್ಕೇತುಚಯಂ ವಿಮಾನನಿಚಯಂ ನಿಂದತ್ತದೆತ್ತತ್ತಲುಂ ॥೧೮॥

ಅಂತುವಿಸ್ತೃತಾಶೇಷಪೌರಜನವಿಲೋಕ್ಯಮಾನಾನೂನನಯನನಾಗಿದುರ್ವಿಯಚ್ಚರೇಶ್ವರಂ ಜಯಮರ್ಮಜನೇಶ್ವರನಲ್ಲಿಗನ್ವಯಾಗತನುಂ ನಿಸೃಷ್ಟಾರ್ಥನುಂ ನೀತಿನಿರತನುಮಾಕಾರವಂತನುಂ ವಚನಚತುರನುಮಪ್ಪುದ್ದವನೆಂಬ ದೂತಮುಖ್ಯನನಟ್ಟಿದೊಡಾತಂ ಬಂದು ದೌವಾರಿಕನಿವೇದಿತಂ ಸಭಾಭವನಮಂ ಪೊಕ್ಕು ಸಮುಚಿತಾಸನದೊಳ್ ಕುಳ್ಳಿರ್ದು

ಖೇಚರಚಕ್ರವರ್ತಿ ಧರಣೀಧ್ವಜನಸ್ಮದಧೀಶನುದ್ಧತಾ ।
ರಾಚಳೆಚೂಳಶೇಖರನರಾತಿಮದದ್ವಿಪಕೂಟಪಾಕಳಂ ॥
ಯಾಚಕಯಾಚಿತಾರ್ಥಸುಸಮರ್ಥನಗೋಚರಚಿತ್ತನರ್ಥಶಾ ।
ಸ್ತ್ರೋಚಿತಚಾರಚಕ್ಷು ವಿಮಳಾಚರಣಂ ಸಚರಾಚರಸ್ತುತಂ ॥೧೯॥

ಬಂದು ಭವತ್ಪುರಾಗ್ರಿಮನಭೋವಳಯಾಂತರದಲ್ಲಿ ನಿಂದು ಪೋ ।
ಗೆಂದೊಡೆ ಬಂದೆನಾಂ ನಿಜಪದಾಂಬುರುಹದ್ವಿತಯಾಂತಿಕಕ್ಕದೇ ॥
ಕೆಂದೊಡೆ ನಿನ್ನ ನಂದನೆ ಶಶಿಪ್ರಭೆಯೆಂಬ ಕುಮಾರಿಯೊರ್ವಳಾ ।
ನಂದಿತಲೋಕಲೋಚನವಿಳಾಸನಿವಾಸವೊಳಳ್ ಗಡಾಕೆಯಂ ॥ ॥೨೦॥

ಅನಭಿಜ್ಞಾತಕುಲಕ್ರಮಂಗೆ ಪಥಿಕಂಗೇಕಾಕಿಗೊಲ್ದೀವ ತ ।
ಕ್ಕಿನೊಳರ್ಪ್ಪೆ ವಿವಾಹಲಗ್ನಮನೆ ನೀಂ ಪಾರುತ್ತುಮೆಂಬಿಂತಿದಂ ॥
ಜನದಿಂ ಕೇಳ್ದದು ಸಜ್ಜನಾಚರಿತಮುಲ್ತಾರಯ್ಯೆ ಸದ್ವಸ್ತುಭಾ ।
ಜನನಪ್ಪೆನ್ನೊಳೆ ಮಾಲ್ಪುದಾಕೆಗೆ ವಿವಾಹೋದ್ಯೋಗಮಂರಾಗದಿಂ॥೦೧॥

ಎಂದಪನಲ್ತೆ ನಭಶ್ಚರ ।
ವೃಂದಾರಕನೀವುದದಱಿನಾಕೆಯನೊಲವಿಂ ॥
ದಿಂದೆ ಬಱಿಕ್ಕೀಯದೊಡೀ ।
ಬಂದಾತಂ ಬಱಿದೆ ಪೋಗಲೇನರಿದಪನೇ ॥ ॥೦೭॥

ಎಂದು ಸಾಮಾಭಾಸದಿಂ ದಂಡೋಕ್ತಿಯನೆ ನುಡಿಯಲೊಡಂ

ಒದವಿದ ನಿದ್ರೆ ದೂತಜನಗರ್ಜನದಿಂ ಕಿಡೆ ಹೃದ್ಗುಹಾಂತರಾ ।
ಳದಿನುರುಕೋಪಸಿಂಹಮಿರದೆಲ್ದುದು ಮೀಸೆಯ ಕೆತ್ತು ಕೇಸರಂ ॥
ಕೆದಱುವ ಭಂಗಿ ಪರ್ವಿನ ಪೊಡರ್ಕೆಯೆ ಮೆಯ್ಮುಱುವೋಜೆ ಕಣ್ಗಳಿಂ ।
ದುದಯಿಪ ಕೆಂಪದಾಗುಱಿಪ ವಕ್ತ್ರದ ಕೆಂಪೆನೆ ರಾಜಮೇರುವಾ ॥೦೩॥

ಅಂತು ಕಡುಮುಳಿದು

ಹೃದಯದೊಳೊಂದು ನಾಲಗೆಯೊಳೊಂದೆನಿಪಾನುಡಿ ಬೇಡ ಕನ್ನೆಯ ।
ಲ್ಲದೆ ಗಡ ಪೋಗೆನೆಂದು ಕಡೆಯೊಳ್ ನುಡಿದಾನುಡಿಯಂ ಪ್ರತಿಷ್ಠಿಸಲ್ ॥
ಪಡೆವೊಡೆ ಪೋಗು ನಿನ್ನ ಪತಿಯಂ ಬರವೇಳೆಡೆಪೂತನಟ್ಟಲೇಂ ।
ಕದನದೊಳಾನೆ ಪೇಳ್ದಿಪೆನವಂಗಿರದಿತ್ತಪೆನೀಯೆನೆಂಬುದಂ ॥ ॥೦೪॥

ಅದಲ್ಲದೆಯುಂ

ಸಿಂಗದ ಮುಂದಣ ಕನ್ನೆಯ ।
ದೇಂ ಗಡ ಮೇಷಕ್ಕೆ ಸಾಟಿಯೆನಿಕುಮೆ ರೋದೋ ॥
ರಂಗದೊಳಿನಿತು ತೊಟಲ್ದುಂ ।
ಪಿಂಗಿದುದಿಲ್ಲಿನಿತು ಸಂಶಯಂ ಚರ ನಿನ್ನೊಳ್ ॥ ॥೦೫॥

ಎಂದು ನಿಜಭುಜವಿಕ್ರಮಮಂ ವಕ್ರೋಕ್ತಿಯಿಂ ನುಡಿದು ದೂತನಂ ಕಳಿಪಿ ಸೆನ್ನಾಹಭೇರಿಯಂ ಪೊಯ್ಯಲ್ವೇಟ್ಟಿ ಅಜಿತಸೇನನಂ ಬರಿಸಿ ತ

ದ್ವೃತ್ತಾಂತಮಂ ನಿವೇದಿಸ್ಪದುಮಾತನೀಷದ್ರೋಷಹಸಿತಭಾಸುರಮುಖಸರೋಜನಾಗಿ

ತನಗೇಕೀಯುದ್ಧಸನ್ನದ್ಧತೆಯ ಗಸಣಿ ಮುಂ ಕಾದಲೆಂದುರ್ಬಿ ಬಂದಾ। ತನದೊಂದಾಯಾಸಮಂ ಕೇಳನೆ ರಣಮುಖದೊಳ್ ಭೀಕರಂಕೊಲ್ಲನಾನೆಂ ಬಿನಿತಂ ತಾಂನಚ್ಚಿ ಮೆಯ್ವೆರ್ಚಿದನೊಕಲಿತನತಕ್ಕಲ್ತ್ತಿ ಮೋಣೀಗಳಾಯ್ತೋ ಮನದೊಳ್ ಪೋಬರ್ಕದಂತುಂಪರಿಬವನಿನಿತುಂ ಟಕ್ಕನಾಂತಲ್ಲಿನೋಲ್ಕುಂ ॥

ಬಗೆಗೆನಿತು ಸಮರಸಂಭ್ರಮ ।
ಪೊಗೆವಂತಿರೆ ನಿಮಗೆ ಗಹನಮಾವುದೊ ಬಂದೀ ॥
ಖಗಸೇನೆಯನಾನೊರ್ವನೆ ।
ಖಗತತಿಯಂ ಕ್ಯೇನನೆಂದದಿಂ ಪಡೆಪಾಯ್ವೆಂ ॥ ॥೨೬॥

ಎನುತೆನುತುಂ ನಿಯುದ್ಧಜಯದೊಂದೊಲವಿಂದೆ ಹಿರಣ್ಯನೆಂದುದಂ । ಮನದೊಳನಿತ್ತು ಭಾವಿಸ್ಪದುಮಾಭವನಾಮರನಾಯಕಂ ಪುರಾ ॥
ವನಿತಲದೊಳ್ ಸಭಾಸದಗ್ರೆ ಕಾತುಕಮಾಗಿರೆ ನಿಂದನಾವಗಂ ।
ನೆನೆಯದ ಮುನ್ನ ಬಂದು ಸಮುದಂ ಸಶರಂ ಸರಥಂ ಸಕಾರ್ಮುಕಂ॥೨೭.

ಆಗಳರಸನಂ ಬಲಸಮೇತಮಲ್ಲಿಯೆ ನಿಲಿಸಿ ಬಳಿಯಮಂ ಸಕಲಾಯುಧಸನಾಥಮಪ್ಪ ತದ್ದಿವ್ಯರಥಮನಾಳಾಧರನೆ ಸಾರಥಿಯಾಗೇಱಿ ಗಗನಕ್ಕೆ ನೆಗೆದಂಬರದ ತೆಱಂಬೆ ಕಳನಾಗಳುಂಬಮಾಗೊಡ್ಡಿನಿಂದ ವಿದ್ಯಾಧರವರೂಥಿನಿಯಂ ನೋಡಿ ತೋಳ ತೀನೆಯನಡಂಗಿಸಲಿನಿತೆಡೆಮಡೆದೆನೆಂದು ಮನದೊಳುತ್ಸಾಹಮನಪ್ಪಕೆಯ್ದು

ಕುಳಿಕನ ದಾಡೆಯಂ ನುಱುವ ದಿಗ್ಗಜಮಂ ಪಡೆ ಪಾಯ್ವ ವಾರ್ಧಿಯಂ ಚುಳುಕದೊಳಾಂಪ ಮೇರುಗಿರಿಯಂ ಮರಳೊತ್ತುವ ವಜ್ರವಹ್ನಿಯಂ ॥
ತಳದೊಳಗಿರ್ದಿಲಾಗೆ ಪೊಸೆದಿಕ್ಕುವ ಸಿಂಗದ ಕೇಸರಂಗಳಂ ।
ಸೆಳವಳವಂ ಸಮಂತು ತಳೆದಂ ರಣದೋಹಳನಾಕುಮಾರಕಂ ॥ ೨೮॥

॥ ಪೃಥ್ವಿ ॥

ಅನಂತರಮುದೆತ್ತಲುಂ ತರದೆ ಸುತ್ತಿದತ್ತಾ ಕುಮಾ ।
ರನೇಱಿದ ವರೂಥಮಂ ಖಚರಯಾನಸಂದೋಹಕಂ ॥

ವಿನಾಧಿಪತಿಯೇಱಿ ನಿಂದ ರಥಮಂ ನಭೋವೀಥಿಯೊಳ್ ।
ಘನಾಘನಕದಂಬಕಂ ಬಳಸುವಂದದಿಂದಾವಗಂ ॥ ॥೨೯॥

ಅನ್ತು ಪಥಾಕಿತವಾಗೆ ಕೈ ।
ತಾನ್ತ ಭ್ರೂಭ್ರುಕುಟಿಕುಟಿಲಮಂ ಜಯಲಕ್ಷ್ಮೀ ॥
ಕಾನ್ತಂ ಕಾರ್ಮುಕಮಂ ತಳೆ ।
ವಿಸ್ತಳಿದೇಱಿಸಿ ಬಲಿಕ್ಕೆ ಜೇವ್ರೊಡೆಯಲೊಡಂ ॥ ॥೩೦॥

ಒಡೆದುದೊ ಪದ್ಮಜಾಂಡಮುವನೀವಳಯಂ ಪಿಳಗಿತ್ತೊ ಮೇರು ಮೇಣ ।
ಕೆಡೆದುದೊ ವಾರ್ಧಿಯುರ್ಕಿದುದೊ ಪೇಱೆನೆ ತನ್ನ ನಿಮಿರ್ಕೆಗಾದುದಿ ॥
ಟ್ಟೈಡೆ ಜಗಮೆಂಬಿನಂ ಪೊಡರ್ದು* ಪೊಣ್ಮಿದುದಾತನ ಕೆಯ್ಯ ಬಿಲ್ಲ ಜೇ ।
ವ್ರೊಡೆಯ ರವಂ ಲಯಪ್ರಭವದಂತಕಸ್ಯೈರಿಭಘೋಷಭೀಷಣಂ ॥ ॥೩೧॥

ಆಸವುಯದೊಳ್

ಕತ್ತರಿವಾಣಿಯೊಳೆಱಗುವ ।
ಚಿತ್ತದೆ ಕವಿತರ್ ಜಳವಿಹಂಗಂಗಳವ್ರೋಲ್ ॥
ಎತ್ತಂ ಕವಿತಂದುವು ಭೂ ।
ಭೃತ್ತನಯಂಗಾಗಿ ಖಚರರೆಚ್ಚ ಶರಂಗಳ್ ॥ ॥೩೨॥

ಅದಂ ಕಂಡು,

ಮುರಸುತ್ತನಿಸಲೊಡಂ ಭೋ ।
ರ್ಗರೆದೈತಪರ್ಗಾ ಸರಲ್ಗಳಂ ಖಂಡಿಸುತುಂ ॥
ಬರುತಿರ್ದುವು ಬಳಸಿದ ಪಂ ।
ಜರದಂತಿರೆ ಸುತ್ತಿ ನಿಶಿತವಿಶಿಖಾವಳಿಗಳ್ ॥ ॥೩೩॥

ಅಣಿಯರಮಿಸೆ ಕುವರನ ಕೂ ।
ರ್ಗಣೆಯೇಱಿಂ ಪಱಿದು ಬಿದರ್ ಖಚರರ ತಲೆ ಸಂ ॥
ದಣಿಸೆ ವಿಮಾನಂಗಳ ಪೇ ।
ರಣಿ ಪೋಲ್ತುದು ತೆಱೆದ ಪೊಗೆದ ಪೇಳಿಗಳಿರವಂ ॥ ॥೩೪॥

ಪೊಸವುಸೆಯ ಸಡಲ್ಗಳಂ ತೊ ।
ಟ್ಟಿಸೆ ಕೊಂಡೋಡಿದುವಿನೇಂದುಬಿಂಬಂಗಳನಾ ॥
ಗಸದೊಳ್ ಕೊಂಡೋಡುವ ರಾ ।
ಹುಸಮೂಹಂಗಳವ್ವೊಲಾವಿಮಾನಾವಳಿಯುಂ ॥ ॥೩೫॥

ಅದಲ್ಲದೆಯುಂ

ಪೊದೆಯೊಳಗಿಂದಮುಚ್ಚರ್ಕುವೆಡೆಯಲ್ಲಿ ಸರಲ್ ದಿಟವೊಂದು ಮತ್ತೆ ಮಾ।
ಣದೆ ತುಡುವಲ್ಲಿ ಪತ್ತು ಪೊಱಮುಯ್ವುವರಂ ತೆಗೆವಲ್ಲಿ ನೂಱು ಬೇ ॥
ಸದೆ ಬಿಡುವಲ್ಲಿ ಸಾಸಿರಮಿದಿರ್ಚಿದರಂ ನಡುವಲ್ಲಿ ಲಕ್ಕಮಂ ।
ಬುದನೆನೆ ಬಿಲ್ಲ ಬಿನ್ನಣಮನಾರಣದೊಳ್ ಮೆಱೆದಂ ಯುವಾಧಿಪಂ ॥ ॥೩೬॥

ಪೂತೆಲವಕ್ಕೆ ಪೌರವನಭೂರುಹಮೊಪ್ಪುವ ಮುಳ್ಳಿಗುಚ್ಚಳ ।
ಕ್ಕೇತನಚೀನಚೇಳವರುಣೋಪಲಭಿತ್ತಿಗೆ ಪೊನ್ನಕೋಂಟೆ ಸಂ ।
ಧ್ಯಾತಪನಂಗೆ ತೋರಣಕನನ್ಮುಕುರಂ ದೊರೆಯಾಗಿ ತೋಱುದ ।
ಪ್ತಾತನೊಳಾಂತು ಪುಣ್ಣಡೆದ ಬೇಚರಸೇನೆಯ ರಕ್ತಸೇಕದಿಂ ॥ ॥೩೭॥

ಅಂತು ಕಡುಕೆಯ್ದು ಕಾದುವ ಕುಮಾರನಂ ಬೆಱಗಣ್ಮಱಯದಂತ
ಳ್ಕಿದರುಮೊರ್ವರುಱಿಯದಾದಿತ್ಯಸುತಪುರಮುಮಾದಿತ್ಯಪುರಮುಂ ಗುಱಿ
ಯಾಗಿ ಪೋಗೆ ತನ್ನ ವಿಮಾನವೊಂದೆ ನಿಂದುದಂ ದರಣೀಧ್ವಜವಿದ್ಯಾಧರ
ಚಕ್ರವರ್ತಿ ಕಂಡು,

ಪೊಟ್ಟೆಲರಿಂ ಪಾಱುವವ್ವೋಲ್ ।
ಬೆಟ್ಟಂ ಪಾಱುಗುಮೆ ರಿಪುಶರಾಹತಿಗೆ ಭಯಂ ॥
ಒಟ್ಟಳಿಕನೋಡುವಂತಿರೆ ।
ಕಟ್ಟಾಯದ ಕಣಿಯೆನಿಪ್ಪನೇನೋಡುಗುಮೇ ॥ ॥೩೮॥

ಎಂದು ಪರಿಚ್ಛೇದಿಸಿವಧ್ಯಾಭಾವದಿಂ ಹಿರಣ್ಯನೊಳ್ ಪ್ರಧಾನವ್ಯಾಪಾರ
ಮಂ ನುಡಿಯುತಿರ್ದ ಶಶಿಪ್ರಭಾಪ್ರಿಯನ ರಥಕ್ಕಾಗಿ ಬೇಗನೆ ಬಂದಂಬುವೀ
ಡಿನೊಳ್ ನಿಂದು ವಿದ್ಯಾಧರರ್ ಯುದ್ಧಸನ್ನದ್ಧರಾಗಿ

ಇರದೆ ವಿಯಚ್ಚರಾಧಿಪತಿಯಚ್ಚ ಕೃಶಾನುಪೃಷತ್ಕಮಂ ಪಯೋ ।
ಧರಶರದಿಂ ಪಯೋಧರಶಿಲೀಮುಖಮಂ ಮರುದುಗ್ರಬಾಣದಿಂ ॥

ಮರುದಿಪುವಂ ಫಣಿಪ್ರಬಳಸಾಯಕವಿಂ ಫಣಿಚಂಡಕಾಂಡಮುಂ ।
ಗರುಡಪತತ್ರಿಯಿಂದಜಿತಸೇನನಡುರ್ತಿರಗೆಚ್ಚು ತೂಳ್ದಿದಂ ॥ ॥೭೯॥

ಅಂತಪಳಾಧ್ಯವಸಾಯನಾದುದಕ್ಕೆ ವೈಸಿ ಮುಸಕದಿಂದಸಿದೇನುವಂ ಕಿ ಟ್ಟು ಮೇಲೆವಾಯ್ದಿ ಅಯಲಡಪಡಿಸಿ ಬರ್ಪಲ್ಲಿ

ಅವನ ತಲೆ ಪಲುದು ಗಗನಾ ।
ಗ್ರವಿಭಾಗಕ್ಕೊಗೆದು ರಾಹುಶಿರದನ್ತೋಲಾದಂ ॥
ರವಿಯಂ ಬೆಚ್ಚಿಸಿ ಕುವರಂ ।
ಕವಲಂಬಿಂದೆಚ್ಚು ಬಿಚ್ಚ ತಂ ನಲಿದಾರ್ದಂ ॥ ॥೮೦॥

ಆಗಳ್

ತೀವಿದುದು ದಿವಿಜನಿವಹನು ।
ಕಾವೀರಧ್ವನಿ ದಿಗಂತಮುಂ ವ್ಯೋಮವುವುಂ ॥
ತೀವಿದುದು ತತ್ಕರಪ್ರ ।
ಸ್ತಾವಿತಮಂದಾರಪಾರಿಜಾತಾಸಾರಂ ॥ ॥೮೧॥

ಅನಂತರಂ ಜಿತಖಚರಸೇನನಜಿತಸೇನಂ ಬಂದು

ವಿರಚಿತತೋರಣಮಾಳಾ ।
ಕರಮುತ್ತಂಭಿತಜಯಧ್ವಜೋತ್ಕರಮೆನಿಪಾ ॥
ಪುರವುಂ ತರುಣೀಕೇಕರ ।
ಮರೀಚಿನೀರಾಜಿತಾಕ್ಷತಾಂಗಂ ಪೊಕ್ಕಂ ॥ ॥೮೨॥

ಅಂತುಪೊಕ್ಕು ಅರಮನೆಗೆ ಬಂದು ಸುಹೃಜ್ಜನಾಗ್ರಗಣ್ಯನಾಂ ಹರಿಣ್ಯ ನಂ ಸನ್ಮಾನಪೂರ್ವಕಂ ವಿಸರ್ಜಿಸಿ ಪರಮೋತ್ಸವದಿನಿರ್ದನನ್ನೆಗಂ

ಎನೆದೊಳ್ ಮುನ್ನಾದ ರಾಗಂ ದ್ವಿಗುಣಿಸೆ ತನಗಿಂತೀಗಳೀಯಂದದಿಂ ಪಾ ತ್ತನಯಾಪೂರ್ವಾನುರಾಗೆಂದ್ವಿಗುಣಸದಿರದುದ್ವಾಹಲಗ್ನಾಹಮುಂ ಭೂಂ। ಕೆನೆ ಸಾರ್ತಂದಿರ್ದುದೇನುಂ ತಡೆದಿರಲೆಡೆಯಿಲ್ಲುತ್ಸವಪ್ರಸ್ತುತಾವಾ । ದನವುಂ ವೆಂಡಲ್ಕೆವೇಟ್ಟುಂ ಪಿತ್ನವಿರಹದೆ ಜಾಮಾತ್ಸವಿನ್ನಿರ್ಪನಲ್ಲಂ ॥

ಎಂದು ಜಯವೆನ್ಮಭೂಭುಜಂ ಬಗೆದಂದು ಗೃಹಮಹತ್ತರನಂ ಬರಿಸಿ ಬೆಸಸಿದಾಗಳ್

ನೀಲಾಬದ್ಧಸ್ಥಲೀಕಂ ಮರಕತಜಗತೀಮಂಡಲಂ ಸ್ಫಾಟಿಕಸ್ತಂ ।
ಭಾಲಂಬಂ ಚಾರುಚಾಮೀಕರಮಯರುಚಿಮದ್ಭಿತ್ತಿ ವೈಡೂರ್ಯನಿರ್ಮ್ಯಾ॥
ಹಾಶೀಠಂ ವ್ಯಕ್ತಮುಕ್ತಾಫಟಿತಪಟಿಳಸಂಪರ್ಕಕರ್ಕೇತನಪ್ರಾ ।
ರಾಲಂಕಾರಂಗೆಳಂ ಕಣ್ಗೆಸೆದುದನುಪಮಂ ತತ್ಕೃತೋದ್ವಾಹಗೇಹಂ॥೪೪॥

ಅದಱ ನವರತ್ನಕೂಟಾ ।
ಗ್ರದಿನುಣ್ಮುವ ಬೆರಕೆವೆಳಗು ತುಂಗಧ್ವಜಚೀ ॥
ನದ ಕಡೆಗಡೆಯೊಳ್ ಕಣ್ಗೆಸೆ ।
ದುದು ಸಾರಾವಳಿಯು ವಿಳಸವಿಕ್ಕಿದ ತೆಱದಿಂ ॥ ॥೪೫॥

ದಿಟ್ಟಿಗೆವರೆ ಬಂಧವಿಧಂ ।
ಕಟ್ಟಿದ ಪಲತೆಱದ ಮಣಿಯ ಸೂಸಕದ ನೆಲಿಲ್ ॥
ಕುಟ್ಟಮತಲದೊಳ್ ಪೊಳೆದೆಡೆ ।
ಗಟ್ಟುತ್ತಲ್ಲಲ್ಲಿ ಬಣ್ಣಪುರವಮಂ ತೀವಲ್ ॥ ॥೪೬॥

ಸುಱುವೆಳವೆಂಡಿರ ಕಡೆಗ ।
ಣ್ಬಱಯಂ ಪಸರಿಸುವ ಬೆಳಗು ಬೆಳದಿಂಗಳೆ ಪ್ರೋಂ ॥
ಪ್ರಱಯೆಂದು ಸುರಿವ್ರವದಱೊಳ್ ।
ಮಱೆಯಿಲ್ಲದೆಯುಂ ಪ್ರಣಾಳಶಶಿಕಾಂತಂಗಳ್ ॥ ॥೪೭॥

ಮತ್ತಮಲ್ಲಿ

ಸಿರಿಸದ ಮಾಲೆಯೆಂದೆಸೆವ ದಾಡಿಮಬೀಜಸಮೂಜವೆಂದು ಸೌಂ ।
ದರಬಿಸಕಾಂಡವೆಂದು ನಲವಿಂದಳಿಯುಂ ಗಿಳಿಯುಂ ಮರಾಳಮುಂ ॥
ಪರಿಮರಿಯಾಡಿ ವಾಸಿಸದೆ ಪೀರದೆ ನೀಱದೆ ಮಾಣ್ದ ಪಚ್ಚೆಯೊ ।
ಳ್ವರಲ ತೊಳಪ್ಪ ಮಾಣಿಕದ ಮುತ್ತಿನ ಲಂಬಣಮಿಲ್ಲದೆಲ್ಲಿಯುಂ ॥೪೮॥

ವಿವಹನದುತ್ಸವಕ್ಕೆ ನೆಲೆಯಾದುದಿದೆಂಬಿನಿತಲ್ತು ಕಾಮನು ।
ತ್ಸವಕೆ ವಸಂತನುತ್ಸವಕೆ ನಾಟಕದುತ್ಸವಕಾದುದಕ್ಕೆ ನೋ ॥
ಡುವ್ರೊಡೆನೆ ನಲ್ಲರೊಳ್ ನಲಿವ ಸಿಂಪಿಣಿಯಾಡುವ ನರ್ತಿಪ್ರೊಂದು ಚಿ ।
ತ್ರವಿಧದ ಚಿತ್ರಕಾಮಿನಿಯರಿಂದೆಸೆದಿರ್ದುದು ತಜ್ಜನಾಶ್ರಯಂ ॥೪೯॥

ತನ್ಮಧ್ಯದೊಳ್

ಮರಕತಸೋಪಾನಚತು ।
ಷ್ಕರಾಜಿತಂ ಕೋಣಶೋಣಮಣಿಕಲಶಮನೋ ॥
ಹರಮುತ್ತುಂಗಂ ಭಾಸುರ ।
ಹಿರಣ್ಮಯಂ ವಿಪುಳವೇದಿಯೆಸೆದತ್ತಾದಂ ॥ ॥೫೦॥

ಪಳಕಿನ ಭೃಂಗಾರದ ಬೆ ।
ಳ್ವಳಗುಂ ಜಾಗಂಗಳೆಸೆವ ಪಸುವೆಳಗುಂ ಪ್ರ ॥
ಜ್ವಳಪ ಮಣಿಸ್ತಂಭದ ಕೆಂ ।
ಬೆಳಗುಂ ಪಸರಿಪುವು ಸುರಶರಾಸನಶತಮಂ ॥ ॥೫೧॥

ಬಳಭಿಚ್ಚಾಪಲತಾವಳಿ ।
ಬಳಸಿದ ಬೆಳ್ಮುಗಿಲ ಮುಱಿಯಿದೆನೆ ಬಣ್ಣವುರಂ ॥
ಬಳಸಿದೊಡೆ ಸೊಗಯಿಸಿದುದು ।
ಪಳಕಿನ ಪಟ್ಟವಣೆ ವೇದಿಕಾಧಿತ್ಯಕದೊಳ್ ॥ ॥೫೨॥

ತತ್ಪುರೋಭಾಗದೊಳ್

ಸ್ವಸ್ತಿಕಲಕ್ಷ್ಯಲಕ್ಷಮಣಿದರ್ಪಣಮಂಡಿತಮುಲ್ಲಸತ್ಪ್ರವಾ ।
ಳಸ್ತಬಕಂ ಪವಿತ್ರಬಿಸಸೂತ್ರವೃತಂ ನವಪಿಷ್ಟಚರ್ಚಿಕಾ ॥
ಶಸ್ತಮುಪಾತ್ತದರ್ಭರಚನಂ ನಿಖಿಲೌಷಧಿಪುಂಜಿತಂ ಪರಿ ।
ನ್ಯಸ್ತಮದೊಂದು ಪೂರ್ಣಕಲಶಂ ತಳೆದತ್ತತುಳಂ ವಿಳಾಸಮಂ ॥ ॥೫೩॥

ಆವೇದೀಸ್ಥಳದೊಳ್ ಹರಿದ್ವಸುವ ಪಾತ್ರಂಗಳ್ ಲಸದ್ದೂರ್ವೆಯಿಂ ।
ತೀವಿರ್ದುಂ ನವಚಂದ್ರಕಾಂತಚಷಕಂಗಳ್ ಚಂದನಕ್ಷೋದದಿಂ ॥
ತೀವಿರ್ದುಂ ಮಣಿಶುಕ್ತಿಗಳ್ ಪರಿಮಿಳತ್ಕ್ಷೀರಸಾರಾಂಬುವಿಂ ।
ತೀವಿರ್ದುಂ ಬಱಿದಿರ್ದವೋಲೆಸೆದುವಾದಂ ವರ್ಣಸಾಮಾನ್ಯದಿಂ ॥ ॥೫೪॥

ಮತ್ತಂ ಮಣಿಕನಕರಜತಪಾತ್ರಂಗಳೊಳ್ ಪರಿಪಕ್ವಸಾಮಿಪಕ್ವಶಲಾ
ಟುಭೇದಭಿನ್ನಂಗಳಪ್ಪ ಮಾಕಂದಮಾತುಲುಂಗಜಂಬೀರನಾರಂಗದಾಡಿಮ
ದ್ರಾಕ್ಷಾಚೋಚಮೋಚಾದಿಫಳಕುಳಂಗಳುಂ ಸೊಗೆಯಿಪುವದಲ್ಲದೆಯುಂ

ಘಸೃಣಾಭ್ಯುಕ್ಷಣವರ್ಣಪೂರಭರಣಸ್ಥಾಳಾವಳೀವಾರ್ಜನ ।
ಪ್ರಸವಾಬಂಧನದೀಪಿಕೋಜ್ವಲನದರ್ಭಾಗರ್ಭಶಾಲ್ಯಕ್ಷತ ॥

ಪ್ರಸರಕ್ಷಾಲನ ತೋರಣಗ್ರಥನ ಮುಕ್ತಾಮಾಳಿಕಾಳಂಬನ ।
ವ್ಯಸನವ್ಯಗ್ರಕರಂ ಕರಂ ಸೊಗಯಿಸಿತ್ತಂತಲ್ಲಿ ಕಾಂತಾಜನಂ ॥೫೫॥

ಆಂತನಂತಮಂಗಳದ್ರವ್ಯಸಂಸೇವ್ಯಮುಂ ಉತ್ಸವೋನ್ಮತ್ತಪರಿವಾರಜನಪರಿಪೂರ್ಣಮುನಾಗಿ ಪರಿಣಯನಮಂಡಪಂ ರಾಜಾಶ್ರಯಶ್ರೀಗೆ ಮಂಗಳಸದನಮೆನಿಸಿತ್ತು. ಅನ್ನೆಗಮಿತ್ತಮಶೇಷೌಷಧಿಸನಾಥತೀರ್ಥಜಲಂಗಳನುತ್ಸಾಹಪಟಹರವಂಗಳಿಸೆಯೆ ಮಜ್ಜನಂಬೊಕ್ಕು ನೈಪಥ್ಯಗೃಹಕ್ಕೆ ವಂದು ಕೈಗೆಯ್ಯಲೊಡಂ

ಆತಾಜಶೇಖರಂಗೇಂ ।
ರಾರಾಜಿಸಿದುದೊ ವಿಚಿತ್ರಮಣಿಗಣರಚನೋ ॥
ದಾರಂ ಶೇಖರಮುಜ್ಜ್ವಳ ।
ಮೇರುಶಿಖರಿಶಿಖರರತ್ನದೊಳ್ ಸರಿವರುತುಂ ॥ ॥೫೬॥

ಮಸುಳಿಸಿದುದಜಿತಸೇನನ ।
ಮಿಸುಪ ಮೊಗಂ ರತ್ನಕುಂಡಳಪ್ರಭೆ ತನ್ನೊಳ್ ॥
ಪಸರಿಸುತಿರೆ ಸೊಗಸಿನ ಕೆಂ ।
ಬಿಸಿಲೆಳಸಿದ ಕನಕಕಮಳಕಮನೀಯತೆಯಂ ॥ ॥೫೭॥

ಅಗಲದೆ ನೆಲಸಿದ ಲಕ್ಷ್ಮಿಯ ।
ನಗೆಗಣ್ಣಳ ಬೆಳಗು ಬಳೆದು ಬೀಲಿಲ್ವರಿದ ॥
ತ್ತಗಲ್ದುರದೊಳಂಬ ತೆಱದಿಂ ।
ಸೊಗಯಿಸಿದುದು ವಿಮಳತರಳತಾರಾಹಾರಂ ॥ ॥೫೮॥

ಅರಿಬಳಜಳನಿಧಿಮಥನೋ ।
ದ್ಧುರಭುಜವುಂದರಮನೆಯ್ದೆ ಸುತ್ತಿದ ತಾರಾ ॥
ಪರಿಕರಮೆನೆ ವಜ್ರಾವಳಿ ।
ನಿರಚತಕೇಯೂರವಳಯಮೇಂ ತೊಳಗಿದುದೋ ॥ ॥೫೯॥

ಕರಟನಿಘರ್ಷಣದೆ ಮದಂ ।
ಬೊರೆದಾನೆಯ ಕೈಯನಳಗಳಾವರಿಸಿದವೊಲ್ ॥

ಮುದಕತಕಂಕಣಮೆಸೆದುವು ।
ತಿರುವೊಯ್ಲಂ ಕರ್ಪುವೆತ್ತ ತತ್ಕರಯುಗದೊಳ್ ॥ ॥೬೦॥
ಅರುಣತಲದ್ಯುತಿತತಿಯೆಡೆ ।
ದೆರಪ್ಪುಗುಳಂದುಣ್ಮುವಂದದಿಂ ಕೆಂಬೆರಲುಂ ॥
ಗುರದಿನೊಗೆವರುಣರುಚಿಯಂ ।
ಜರಿ ತಳಿರ್ವೆಣಿಸಿದುದ್ಭೈದೆ ಕರಕಾಂಚಿಗಳಂ ॥ ॥೬೧॥
ಕರೆ ಕತ್ತರಿಸಿದ ಚೀನಾಂ ।
ಬರದೊಪ್ಪುವ ಸುತ್ತಿನಿಂದೆ ಡಿಂಡೀರಪರಂ ॥
ಪರೆ ಬಳಸಿದವುಳಕವುಳಾ ।
ಕರಮೆನೆ ನೇತ್ರಾಳಗಿತ್ತನಾಕರ್ಷಣಮಂ ॥ ॥೬೨॥

ಪೂಗಣೆ ಕರ್ಪುವಿಲ್ ಮಿಳಿರ್ವ* ಮೀಂಗುಡಿ ಮಲ್ಲಿಗೆ ಮೊವು ತೆಂಬೆರಲ್ ।
ಕೋಗಿಲೆ ಜೊನ್ನಮಿಂದೊಳದ ನುಣ್ದನಿ ಸುಗ್ಗಿಯೆನಿಪ್ಪವೆಲ್ಲವೊಂ ॥
ದಾಗಿಯೆ ದರ್ಪಕಂಗೆ ಸವುನಿಪ್ಪ ಜಗಜ್ಜಯದರ್ಪಮಂ ಸಮಂ ।
ತಾಗಿಸಲೊಂದೆ ಸಾಲ್ಗುಮೆನಿಸಿತ್ತು ಕುಮಾರಕೃತಪ್ರಸಾಧನಂ ॥ ॥೬೩॥

ಆಪ್ರಸಾಧನದೊಳನೇಕಾಂತಃಪುರಕಾಂತೆಯರುಂ ಶಶಿಪ್ರಭಾಪ್ರಸಾಧನಕರಣಸಿರತೆಯರಾಗಿ ಶರದದ ನಿಱುವುಗಿಲ ತುಱುಗಲನೆಡೆಗೆಲಸಿದ ವಿದ್ಯಾಧರಿಯ ಪರಿಯನನುಸರಿಸೆ ಪೊಸದುಗುಲಮಂ ನಿಱುವಿಡಿದುಡಿಸಿಯುಂ, ಘುಸೃಣರ ಸದಿನಸುಗೆದಳರಂ ತೊಯ್ವಂತೆ ಯಾವಕದ್ರವದಿಂ ಪದತಳಮಂ ಲೇಸೆನಿಸಿಯುಂ, ಚರಣನಖಚಂದ್ರಮಂಡಳಕ್ಕೆ ಪರಿವೇಷಮಂ ಪಡೆವಂತೆ ಬೆರಕೆವೆಳಗು ಬಳಸೆ ನವರತ್ನನೂಪುರಂಗಳಂ ತುಡಿಸಿಯುಂ, ಮನೋಜಗಜಕುಂಭದೊಳ್ ನಕ್ಷತ್ರಮಾಲೆಯಂ ಸುತ್ತುವಂತೆ ರತ್ನರಶನಾಸೂತ್ರಮಂ ವೃತ್ತಕಟಿಯೊಳ್ ವೇಷ್ಟಿಸಿಯುಂ, ಮದನಮಂಗಳಭೃಂಗಾರಂಗಳಂ ಬರ್ಚಿಸುವಂತೆ ಮೊಲೆಗೆಲದೊಳ್ ಕಸ್ತೂರಿಕಾಪತ್ರಭಂಗಮಂ ಚಿತ್ರಿಸಿಯುಂ, ದರಹಾಸಭಾಸುರಮುಖಸರೋರುಹಮೃಣಾಳನಾಳಂಗಳೆನಿಸಿ ಪೊಳೆವ ಮುತ್ತಿನ ಸರಂಗಳಂ ಕೊರಲೊಳಿಕ್ಕಿಯುಂ, ಕೋಮಲಬಾಹಾಲತೆಗಾಳವಾಳವಳಯುವಮಂ ಸಮೆವಂತೆ ಕನಕವಳಯಮಂ ಮುಂಗೈಯೊಳ್ ಸಂಗಳಿಸಿಯುಂ,

ಮದನಮೋಹನಶರಂಗಳಂ ಪಲತೆಱದಲರ್ಗಳಿಂದರ್ಚಿಸುವಂತೆ ಪೊಸಪರಿಯ ಕೇವಣದುಂಗುರಂಗಳಂ ಬೆರಲ್ಗಳೊಳ್ ನಿರವಿಸಿಯುಂ, ಮನ್ಮಥಮನೋರಥಕ್ಕೆ ರಥಾಂಗಯುಗಳಮಂ ಸಂಗಳಿಸುವಂತೆ ಮೊಗಕ್ಕೆ ಸೊಗಯಿಸುವ ರತ್ನರಚನೆಯೋಲೆಯುಂ ಪಾಲೆಯೊಳ್ ತೊಡರ್ಚಿಯುಂ, ಕರ್ಣಾವತಂಸದೊಳ್ ಕೀಲಿಸಿದ ನೀಲದುನ್ಮುಖಿಮಯೂಖಸಂಕುಳಂ ಕೊಡಂಕೆಯೊಳ್ತಿಂಬಿತೆಂಬಂತೆ ಕೊಗ್ಗಿಯ ಕತ್ತುರಿಯುಂ ಪತ್ತಿಸಿಯುಂ, ಬೆಳತಿಗೆಗಣ್ಣ ಬಳಮಿಗಿದುವೆಗುಱಿಯೆಂದು ಕುಱುಪನಿಕ್ಕುವಂತೆ ಕೊನೆಗೊಡಂಕೆಯೊಳ್ ತೋರಮುತ್ತಿನ ಮುಗುಳಂ ತೆಗಳ್ಚಿಯುಂ, ನೇತ್ರಪುತ್ರಿಕೆಗೆ ನಿರ್ವಾಣರೇಖೆವಡೆವಂತೆ ನಗೆಗಣ್ಗಳೊಳ್ ಕಜ್ಜಳರೇಖೆಯನಳಂಕರಿಸಿಯುಂ, ಕರ್ವುವಿಲ್ಲಂ ಗೊಲೆಗೊತ್ತುವಂತೆ ನಿಡುವುರ್ವಂ ಕುಡುವುರ್ವಾಗೆ ಸಮುಱಿಯುಂ, ವದನನಳಿನಮಂ ಬಳಸಿದಳಿಮಾಲೆಯೆನಿಸಿ ಸುಱಿಗುರುಳನಳವಡಿಸಿಯುಮನಂತರಂ

ಲಳಸೆಯ ಕೇಶದಲ್ಲಿಯುಲರುಂ ತಳರುಂ ಪೊಳೆವಂದದಿಂದೆ ಕೋ ।
ಮಳೆನಖಕಾಂತಿಯುಂ ಮೃದುತಳದ್ಯುತಿಯುಂ ನಿಮಿರ್ವನ್ನ ಮೊಯ್ಯನಾ ॥
ಗಳೆ ತಲೆವಿಕ್ಕಿ ಕಲ್ತ ಲೆಗಮಿಂದುಮರೀಚಿಗಮೊಯ್ತು ನಾಡೆ ಕ ।
ಣ್ಗಳವಡೆ ಮಲ್ಲಯುದ್ಧಮೆನೆ ದೇಸೆಯ ಪೂಮಡಿಯಂ ತೊಡರ್ಚಿದರ್ ॥೬೮॥

ಮಳಯಜಮೃಗಮದಪಂಕಂ ।
ಗಳನಡಕಿಲ್ಪೊಟ್ಟನೊರ್ವಳಾಕೆಯ ಭಾಳ ॥
ಸ್ಥಳಿಯೊಳಳವಡಿಸಿದಳ್ ಸ್ಮರ ।
ಕುಳದೇವತೆ ಮಿಸುಪ ನೊಸಲ ಕಣ್ದೋಱಿದವೋಲ್ ॥ ॥೬೯॥

ಅಂತಲಂಕರಿಸಿ

ಮಸೆದಸನಮಾಸ್ತ್ರನುನ್ಮದನಬಾಣಶಲಾಕೆ ವಿಳಾಸದಿಂದಮೀ ।
ಱಿಸಿದಲವಿರ್ಲ್ಲನೈಕ್ಷವಧನುರ್ಲತೆ ಬರ್ಚಿಸಿ ಮೀನಕೇತುವೆ ॥
ತ್ತಿಸಿದ ಸಮುಲ್ಲಸಜ್ಜ್ವಲಪತಾಕೆಯೆನಿಪ್ಪ ಪೊಲಾಂತಳಾಕೆಯಾ ।
ಪಸದನದೊಳ್ ಜಗತ್ತ್ರಿತಯಚಿತ್ತವಿಮೋಹನಶಕ್ತಿಯೇಱ್ಗೆಯಂ ॥೬೬॥

ಆಗಳ್

ಕಟಿ ಕಳಕಾಂಚಿಯಿಂದೆ ಕಳಕಾಂಚಿಯುಮೀಕಟಿಯಿಂ ಕರಂ ಕನ ।
ತ್ಕಟಕದಿನೀಕನತ್ಕಟಕಮುಂ ಕರದಿಂ ನಿಟಿಲಂ ಲಲಾಮದಿಂ ॥
ನಿಟಿಲದಿನಾಲಲಾಮಮುಮುಲಂಕರಿಸಿರ್ದುವೆನುತ್ತೆ ನೋಡಿದರ್ ।
ಘಟಕುಚೆಯರ್ ಸಮಂದರುತುಮಾಕೆಯ ಭೂಷ್ಯವಿಭೂಷಣಂಗಳಂ॥೬೩॥

ಅದಲ್ಲದೆಯುಂ

ಬಡತನಮನಾಂತ ನಡು ಕೊ ।
ರ್ವಡರ್ದ* ಕುಚಂ ಬಿಣ್ಪಿನಾಳ್ದೆ ಜಘನಂ ಬೆಳಗರ್ದಂ* ॥
ಪಿಡಿದಧರಮಿಂಪನಪ್ಪಿದ ।
ನುಡಿ ತಡೆಸಂಬೆತ್ತ ನಡೆ ನಿಜಂ ಕೋಮಳೆಯಾ ॥ ೬೪॥

ಎಂದು ಚತುರಯುವತಿಯರ್ ಪೊಗಳುತ್ತಿರ್ಪಿನಂ ವಿವಾಹಲಗ್ನಂ ಸಂ ತರ್ಂದುದೆಂದು ಬರವೇಟಿಲೊಡಂ

ನಭಮಂ ಸಂಜೆಮುಗಿಲ್ ಪಗಿಲ್ತ ತೆಱದಿಂ ತಳ್ಪೊಯ್ಯೆ ಭೂಷಾಮಣಿ ।
ಪ್ರಭೆ ದಿಕ್ಚಕ್ರಮನಚ್ಚಜೊನ್ನಮೆಳಸಿತ್ತಂಬನ್ನೆಗಂ ತುಂಬೆ ದೃ ॥
ಪ್ರಭೆ ಭೂಭಾಗಮನೆಯ್ದೆಬೆಳ್ಪಮರ್ದ* ಪಾಂಗಿಂ ಪೆರ್ಚರ್ ಪಾದೋಲ್ಲಸ ॥
ತ್ಪ್ರಭೆ ಬಂದರ್ ಕುಡುತುಂ ಶಶಿಪ್ರಭೆ ಜನಾಕ್ಷೀಂದೀವರಾನಂದಮಂ॥೬೯॥
ಉರದೊಳ್ ಹಾರಾಂಶುಗಂಡಸ್ವಳಿಯೊಳಮಳಕರ್ಣಾವತಂಸಾಂಶುಮತ್ತಂ।
ಶಿರದೊಳ್ ರತ್ನಾವಳೀಶೇಖರಶಿಖರಸಮುತ್ಥಾಂಶುಗಳ್ ಮೊತ್ತಮಂ ಬಿ ॥
ತ್ತರಿಪನ್ನಂ ಸಿದ್ಧವಿದ್ಯಾಧರದಿವಿಜಕುಮಾರರ್ಕಳಂ ಚೆಲ್ವಿನಿಂ ಮಾಂ ।
ಕರಿಸುತ್ತುಂ ಬಂದನಾಸಾದಿತನಿರುಪಮಶೃಂಗಾರಸಾರಂ ಕುಮಾರಂ ॥ ೭೦॥

ಅಂತು ಬಂದ ವಧೂಕಾಂತರಿರ್ವರುಮಂ ವಿವಾಹವೇದಿಕಾಮಧ್ಯದೊಳ್ ದಳಂಬದಿಂ ಪಚ್ಚವಡಿಸಿದ ಪಳಿಕಿನ ಪಟ್ಟವಣೆಯೊಳಿರಿಸಿ ಮುನ್ನಮೆ ಹುತಾಗ್ನಿಯಾಗಿರ್ದ ಪುರೋಹಿತಂ ಪ್ರಣವಪೂರ್ವಕಮುಚ್ಚರಿಸಿದ ಪುಣ್ಯಾಹರವದೊಡನೆ

ಮುಗುಳಂ ಪೇಱುವಿಡ ಕುಂದವಲ್ಲಿಗಮರೆಲ್ತಂದಾಕದಂಬೋದ್ಗಶಾ ।
ಪೆಗಮುಚ್ಚಾಂಬುವನಂಬುದಂ ಕಱುವ ಪಾಂಗಿಂ ಸಾತ್ವಿಕಸ್ವೇದಬಿಂ ॥

ದುಗೆ ರೋಹೋದ್ಗತಿಗಿರ್ಕೆಯಾದ ಸುತೆಗಂ ಜಾಮಾತೃಗಂ ಪ್ರೀತಿ ಕೈ ।
ಮಿಗೆ ಕೈನೀರೆಪಿದಂ ಕನತ್ಕಳಶಹಸ್ತಂ ತಜ್ಜನಶ್ರೀಪ್ರಿಯಂ ॥ ॥೭೧॥

ಅಪ್ರಸ್ತಾವದೊಳ್
ಮುಸುಕಿದುದು ದುಂದುಭಿಧ್ವನಿ ।
ದೆಸೆಯಂ ಮಾಂಗಲ್ಯಗೀತರುತಿ ತಿಂಬಿದುದಾ ॥
ಗಸಮಂ ಶಂಖಧ್ವನಿ ಪೂ ।
ರಿಸಿದುದು ತಳ್ಳೊಯ್ದು ರೋದಸೀಮಂಡಳಮಂ ॥ ॥೭೨॥

ಅನಂತರಂ
ಪ್ರಿಯತರಲವಂಗಲವಲೀ ।
ವ್ಯಯಕ್ಕಮೇಕೈಕಲಲಿತಶಾಖಾಯೋಗಂ ॥
ನಯದಿಂ†ಸಮನಿಪವ್ರೋಲಾ ।
ಪ್ರಿಯಂಗಮಾಪ್ರಿಯೆಗಮಾಯ್ತು ಪಾಣಿಗ್ರಹಣಂ ॥ ॥ ೭೩॥

ನಳನಿಯ ನಳನಮನಿನನಾ ।
ಕಳಸಂತಿರೆ ಕರದೆ ವಧುವ ಕರಮಂ ಕರದಿಂ ॥
ತಳೆದಂ ಕುಮಾರನಾದ್ರ್ಯಾಂ ।
ಗುಳದಳಕಂಟಕಿತಬಾಹುನಾಳಾನ್ವಿತಮಂ ॥ ॥೭೪॥

॥ ಮಾಲಿನಿ ॥

ಮನನನೊಲಿಸೆ ತಿರ್ಯಗ್ವರ್ತಿತಸ್ಮೇರಶಾರಂ ।
ಜನಪತಿಸುತನಾಗಳ್ ಕಾಂತೆಯಂ ನೋಡಿದಂ ಮೆ ॥
ಲ್ಲನೆ ಸಮದಸಲೀಲಾಪಾಂಗದಿಂ ನೋಟ್ಟವ್ರೋಲ್ ಹ ।
ಸ್ತಿನಿಯನಿನಿಯನಾದ್ರ್ಯಪ್ರೇಮದಿಂ ಸಾಮಜೇಂದ್ರಂ ॥

ಮಸಪಳಪಿಂ ಪ್ರಿಯಾನನಮನೀಕ್ಷಿಸಲುದ್ಯತೆಯಾಗಿ ತಾನೆ ಲ ।
ಜ್ಜೆಸಿ ತಲೆವಾಗಿ ಕಂಡು ಮಣಿಕುಟ್ಟಿಮದೊಳ್ ನೆರೆ ನೋಡಿ ಮತ್ತ ಮಾ॥
ನಸದೊಳಗಿಟ್ಟೊಡಂ ನವಸುಖಾನುಭವಕ್ಕರಮುಚ್ಚಿ ಕಣ್ಗಳಂ ।
ಪಸರಿಪ ಹೋಮಧೂಮತತಿಗಂದು ಶಶಿಪ್ರಭೆ ದೂರನೇಱಿಪಳ್ ॥ ॥೭೬॥

†ಸಮನಿಪೊಲಂತಾ, ಎಂದು ಪಾಠಾಂತರ.

ಅಂತು ಪರಸ್ಪರಲೀಲಾವಲೋಕನಸುಖಮನನುಭವಿಸಿ ಬಟಿಯಂ ಪುರೋಹಿತಾದೇಶದಿಂ ಹೋಮಾಗ್ನಿಯಂ ಪ್ರದಕ್ಷಿಣಂಗೈದು ಲಾಜಾಂಜಲಿಯನಿಕ್ಕಿ ಬಂದೊಂದೆ ಪಸೆಯೊಳ್ ಕುಳ್ಳಿರ್ದನೇಕಾಶೀರ್ವಾದಪುರಸ್ಸರಮಾದ್ರಾಕ್ಷತಾರೋಪಣಮಂಗಳಮನಂಗೀಕರಿಸೆ

ಆರಮಣೀರಮಣರ ಶೃಂ ।
ಗಾರರಸಾಪೂರ್ವತರತರಂಗಿಣಿಯೊಳದೇಂ ॥
ಪಾರೈಸಿ ತೊಳಲ್ದುವೊ ರಸ ।
ಪೂರದ ಮೀಂಗಳನೆ ಪೋಲ್ತು ನೋಟ್ಪಿರ ಕಣ್ಗಳ್ ॥ ॥೭೭॥

ರತಿಯೊಡನಿಂದ್ರನೆಂತು ನೆರೆದಂ ಶಚಿಯೊಳ್ ಸ್ಮರನೆಂತು ನಾಡೆ ಸಂ ।
ಗತಿವಡೆದಂ ದಲೆಂದವಳ ರೂಪುಮನಾತನ ಲೀಲೆಯಂ ಮನ ॥
ತ್ಕತಿಶಯಮಾಗೆ ಮತ್ತವಳ ಲೀಲೆಯನಾತನ ರೂಪುಮಂ ಜನ ।
ಪ್ರತತಿ ಮರಲ್ದು ನೋಡಿದುದು ನಿಂದು ವಿವಾಹಗೃಹೈಕದೇಶದೊಳ್ ॥೭೮॥

ಅಲ್ಲಿ ಕೆಲಂಬರ್

ಇಂದು ಪಯೋಜಜಂಗೆ ಕೃತಕೃತ್ಯತೆ ಸಾರ್ದುದು ಪುಷ್ಪಸಾಯಕಂ ।
ಗಿಂದೊಳಸೋರ್ದುದೇಸುವೆಸನಿಂದು ಸನಾಭಿಜನಕ್ಕೊಡರ್ಚಿತಾ ॥
ನಂದಪರಂಪರಾಜನನಮಿಂದು ಫಲಂ ಪೊಸಜವ್ವನಕ್ಕಮಾ ॥
ಯಿಂದು ಸುರೂಪವೃತ್ತಿ ಬೊರೆವೆತ್ತುದು ನಾಡೆಯುಮೆಂದು ನೋಡಿದರ್ ॥

ಅನ್ನೆಗಂ ಜಯಶ್ರೀಮಹಾದೇವಿಯುಂತಃಪುರಕಾಂತಾಜನಕ್ಕಂ ಪ್ರಧಾನವಧೂಜನಕ್ಕಂ ಸಾಮಂತಸೀಮಂತಿನೀನಿವಹಕ್ಕಂ ಪುರಪುರಂಧ್ರೀಸಮೂಹಕ್ಕಂ ವಾರನಾರೀಪ್ರತಾನಕ್ಕಂ ತಾನುಂ ಪರಿಚಾರಿಕಾಜನಮುಂ ಕೈಗೈಯೊಳ್

ವಿದಳಿತಪುಷ್ಪಮೂಲಿಕೆಗಳಿಂ ಮಳಯೋದ್ಭವದಿಂ ತೊಳಪ್ಪ ರ ।
ನ್ನದ ತೊಡವಿಂದಳಂಕರಿಸಿ ಕಾಂಚನಭಾಜನದಿಂದೆ ಪಂಚರ ॥
ತ್ನದ ಘನಸಾರಮಾರಿಯ ಮೃಗೋತ್ಥಕುಳುತ್ಥದ ಬಾಯಿನಂಗಳಂ ।
ಮುದದೊಡವಿಂದಮಿತ್ತು ಮೆಱೆದರ್ ನೆಲೆವೆರ್ಚಿದುದಾತ್ತವೃತ್ತಿಯಂ ॥೮೦॥

ಹೃದಯದೊಳೆನ್ನವರ್ ಪೆಱರಿವರ್ ಧನಿಕರ್ ಬಡವರ್ ಸಮಂತು ಬೀ ।
ಡದವರಡುರ್ತು ಬೇಡಿದವರೆನ್ನದೆ ರನ್ನದ ಪೊನ್ನ ಚಿತ್ರವ ॥

ಸ್ತ್ರೀದ ಪೊಸಪೆಚ್ಚದೊಪ್ಪಿಲನೆ ಕೋಶಗೃಹಂ ಬಳಿದಾಗೆ ಕೊಟ್ಟುಮಾ।
ಣದೆ ಮಗುಳಾನೆಯಂ ಕುದುರೆಯಂ ಧರಣೀಪತಿ ಸಾಲಿ ಬೀಳಿದಂ ॥ ೮೦॥

ಆವಿವಾಹಕಲ್ಯಾಣಾನಂತರಂ

ಎಡೆಗುಡೆ ಸಾರ್ದು ಕೇಳಲೆಳಸುತ್ತಿರೆ ಮಾತಳಿದಾಡಿ ಕೇಳಿಯೊಳ್ ।
ತೊಡರ್ದಿರೆ ಸೋಂಕಿ ಮೆಯ್ಯನಿನಿತೊಪ್ಪಿಸೆ ಪಾಂಗಳಿದಪ್ಪಿ ತಾಂ ಮೊಗಂ॥
ಗುಡೆ ಪದವೆತ್ತು ಚುಂಬಿಸಿ ಭಯಂಗೆಯೆ ಬಲ್ವಿಣಸಂ ಪೊದಳ್ಚಿ ನಾ ।
ಣ್ಗಿಡೆ ನೆರೆದೊಳೆಯಂ ಪ್ರಥಮಸಂಗಮದೊಳ್ ಕುವರಂ ಮರುಳ್ಚಿದಂ ॥

ಮಸಪ ನಸುಲಜ್ಜೆಯಂ ಮಾ ।
ಣಿಸಿದುದು ಭಾಯೊಗ್ಗಿಟದಿಂಪು ಮಣಿತಮುಮಂ ಮ ॥
ಳ್ಗಿಸಿದುದು ಮೆಯ್ಯೊಂಕಿನ ಹರ ।
ವಸವಳಿವುಮಸೆರರೆ! ತೊಳ್ದಿದುದು ಪೊಸಸುಸಿಲೊಳ್ ॥ ॥೮೩॥

ಚುಂಬನಮೊರ್ಮೆಗೊರ್ಮೆ ತನಿವೆಚ್ಚುವುದಪ್ಪಿರದೊರ್ಮೆಗೊರ್ಮೆ ಮ । ತ್ತಂ ಬಿಗುಪೇಳುತಿರ್ಪುದು ವಿಳಾಸದ ಗೆಯ್ತುಮದೊರ್ಮೆಗೊ ರ್ಮೆಗಿಂ ॥ ಪಿಂ ಬಗೆಯಂ ಮರುಳ್ಚುವುದು ನುಣ್ಣುಡಿಯುಂ ಕಿವಿಗೊರ್ಮೆ ಗೊರ್ಮೆ ಸೋ । ಲಂಬಡೆಯುತ್ತು ಮಿರ್ಪುದವರ್ಗಳ್ಗವಕಾಶಮದುಂಟೆ ಬೇಟದೊಳ್ ॥ ॥೮೪॥

ಅನವರತಂ ರತೋತ್ಸವದೊಳುಣ್ಮುವ ಘರ್ಮಜಲಂಗಳಿಂದೆ ಮ ।
ಜ್ಜನಮನತಿಪ್ರಿಯಾಧರಸುಧಾರಸಸೇವನೆಯಿಂದಮೂಟಮಂ ॥
ಮನದಳಿವಂ ಕಳಲ್ಚುವ ರತಾಂತಸುಖೋದಯದಿಂದೆ ನಿದ್ರೆಯಂ ।
ನೆನೆಯದೆ ಪೋದುವಂತವರ್ಗೆ ಚಿತ್ತಜಕೇಳಿಗಳಿಂದೆ ಪೊಟ್ಟುಗಳ ॥ ॥೮೫॥

ಅಂತು ಕತಿಪಯದಿನಂಗಳಂ ಪ್ರತಿದಿನಪ್ರವರ್ಧಮಾನನವಪ್ರಣಯಪ್ರ ಸ್ತುತವಿನೋದಂಗಳಿಂ ಕಳಿಪಿ ಬಳಿಯಂ ಜನನೀಜನಕದರ್ಶನೋತ್ಕಂಠತೆ ಯಿಂ ನಿಜಪುರಗಮನಾಭಿಮುಖನಾದ ಕುಮಾರನಭಿಪ್ರಾಯಮನಱಿದು ಜ್ಞ ಯವರ್ಮಮಂಡಲೇಶ್ವರಂ ನಿಜತನೂಜೆಯೊಡವ್ರೋಪಂತು ಚಾಮರದ ಕುಂಚದಡಸದ ಡವಕೆಯ ಕನ್ನಡಿಯ ಪಡಿಗದ ಪಾವಾಗೆಯ ಸೆಜ್ಜೆಯ

ಮಜ್ಜನದ ಖಜ್ಜಯದ ಹೀಲಿಕರಗೆದ ಬೋನದ ಪರಿಯಣದ ಮುಡಿಯಿಕ್ಕು ಪಡಿಯೂಡುವಡಿಗುಟ್ಟುವಾರತಿಯೆತ್ತುವ ತಿಳಕವಿಡುವ ನಿಱಿವಿಡಿವ ಮಾಲೆಸ ಮಿವ ಪಟ್ಟಿಮಗುಳ್ಳುವ ನೆಲನನುಗ್ಗುಡಿಪ ಪಲವುಂ ನಿಯೋಗದನ್ವಯಾಗ ತೆಯರುಮುಪ್ಪ ಆಕಾರವತಿಯರಂ, ವಿಳಾಸಿನೀಜನಂಗಳುಮನನುಜತನುಜ ಪ್ರೀತಿಯಿಂ ನಡೆಪಿದ ಕೇಳೀಕೀರಶಾರಿಕಾಪಾರಾವತಮಯೂರಹಾರೀತಕಚ ಕೋರಹಂಸಹರಿಣಕರಿಕಳಭಸಂದೋಹಮುಮಂ, ವಿನೋದಪಾತ್ರಂಗಳು ಮುಪ್ಪ ಬರ್ಬರಶಾಕಬಧಿರವರ್ಷಧರಮೂಕಕಿರಾತಜಡುಲಗಡುಲ ಖಂಜರಂ ಜಕಸಮಾಜಮುಮಂ, ವೈಣಿಕಪಾಣಿವಿಕವಾಂಶಿಕಮಾರ್ದಂಗಿಕಗಾಯಕನ ರ್ತಕಾದಿ ಕುತಪಪ್ರತತಿಯುಮಂ, ಶಿಬಿಕಾಂದೋಳವಾಜಿವಾರಣವರೂಥವಿ ಸರಾದಿನಾನಾಯಾನಂಗಳುಮಂ, ಅನುಕುಪ್ಯರೂಪ್ಯಕನಕಾಂಬರರತ್ನಾಭರ ಣಭಾರಧಾರಣಧೌರೇಯಮಹಾಕಾಯವೈವಧಿಕನಿಕರಮುಮಂ, ಸಮಕಟ್ಟು ವಿಶಿಷ್ಟವಾರವಾಸರತಾರಾಕರಣಯೋಗಸಂಯೋಗದೊಳ್ ಮಗಳುಮನಳಿ ಯನುಮಂ ಬರಿಸಿ ಕುಳ್ಳಿರಿಸಿ

ನಿನ್ನಯ ಕೂಟಮಂ ಬಯಸಿ ಪೆತ್ತವಳೆಂತುಮೊಡಂಬಡಂ ದಿಟಂ ।
ನಿನ್ನ ಮನಕ್ಕೆ ಮಾಡಳೆದು ದೈವಕೃತಂ ದೊರೆಕೊಂಡುದಪ್ಪೊಡಂ ॥
ಮನ್ನಿಪುದೆಮ್ಮ ಕಾರಣದಿನಿತ್ತಣ ಪಂಬಲನೀಕೆ ಮಾಡದಂ ।
ತಿನ್ನಡೆಯಿಪ್ಪುದೊಂದೆ ತೆಱನಪ್ಪುದಿದಂ ಸೆಱಗೊಡ್ಡಿ ಬೇಡಿದೆಂ ॥೪೬॥

ಎಂದು ಕುಮಾರಂಗೆ ಪೇಳ್ದು ತಾನುಂ ಜಯಶ್ರೀಮಹಾದೇವಿಯುಂ ಶಶಿ ಪ್ರಭೆಯ ಮೊಗಮಂ ಪ್ರೇಮರಸವಿಸರವಿಲುಳಿತ ಲೋಚನಂಗಳಿಂ ನೋಡಿ,

ಅಕ್ಕ ನಿಜಪ್ರಿಯಂಗೆ ಮನದನ್ನದೆ ನೀಂ ಬೆಸಕೆಯ್ವುದಾಗಳುಂ ।
ಮಕ್ಕಳ ಮಾಲ್ಕೆಯಿಂದಿರದೆ ನೀನೊಡವಂದ ಜನಕ್ಕೆ ಸಂತಸಂ ॥
ಮೊಕ್ಕಳಮಾಗೆ ಮನ್ನಿಪುದು ಮಾನನ ಪೆರ್ಮೆಗಮತ್ತೆಯೊಲ್ಮೆಗಂ ।
ತಕ್ಕ ನೆಗಳ್ತೆಯುಂ ನೆಗಳ್ವುದೀವುದು ಪೆತ್ತೆಮಗಂ ಪ್ರಮೋದಮಂ ॥೪೭॥

ಎಂದು ಬುದ್ಧಿಪೇಳ್ದು ಶೇಷಾಕ್ಷತಮನಿಕ್ಕಿ ಮಂಗಳಮೃದಂಗರವಮೊಸೆ ಯೆ ಪುರಮಂಪೊಱಮಟ್ಟು ಕಿಱಿದಂತರಮಂ ಕಳುಪಿ ಮಗುಳ್ದು ವಿಪುಳಪು ರಮಂ ಪೊಕ್ಕರ್. ಇತ್ತಯುವರಾಜನುಂ ನದ್ಯುಭಯತಟೋಪಾಧ್ಯಾನಂಗಳೊ

ಳಂ, ಮಹಾಸರೋವರತೀರನಂದನಂಗಳೊಳಂ, ಪರ್ವತನಿತಂಬಪಾವನವನಂಗಳೊಳಂ, ಬಳ್ಳಿಮಾವುಗಳೆ ಬಳ್ಳಿಮಾಡಂಗಳಾಗೆಯುಂ, ಶ್ರೀಖಂಡಪಂಡಂಗಳೆ ಪರಿಪನ್ಮಂಡಪಂಗಳಾಗೆಯುಂ, ತಮಾಲಮಾಲೆಗಳೆ ಸಂಗೀತಶಾಲೆಗಳಾಗೆಯುಂ, ಲತಾವಿತಾನಂಗಳೆ ವಿತಾನಂಗಳಾಗೆಯುಂ, ಅದಿಮುತ್ತೆಯ ಸುತ್ತುಗಳೆ ತೆರೆಸುತ್ತುಗಳಾಗೆಯುಂ, ಎಸಳವಸರಂಗಳೆ ಮುಸುರಿಗೆಗಳಾಗೆಯುಂ, ಕೆಂದಳರ ಗೊಂದಳಂಗಳೆ ಬೊಂದರಿಗೆಗಳಾಗೆಯುಂ, ಚಂಪಕವೀಥಿಗಳೆ ವಿನೋದವಿಹರಣವೀಥಿಗಳಾಗೆಯುಂ, ಬೀಡುಬಿಡುತ್ತುಂ ಕೆಲವಾನುಂ ದಿವಸದಿಂದನ್ಯಯೋಗತರಾಜಧಾನಿಯಂ ಕಾಕಲಿಯುನೆಯ್ದಿ ಕ್ರೋಶದ್ವಯಮಾತ್ರದೊಳ್ನಿಂದು ನಿಜಾಗಮನವಾರ್ತೆಯಂ ಜನಕನಲ್ಲಿಗೆ ವಾರ್ತಾಚರರ ಕೈಯೊಳಿಟ್ಟುವುದುಮವರ್ ಬಂದು ಓಲಗದೊಳಿರ್ದ ನರನಾಥಂಗಱಿಪಲೊಡಂ,

ಕಡವಲರ್ದಂತೆ ಕಂಟಕಿತಮಾಗಿರೆ ಮೆಯ್ ಸರುಜಂ ರಸಾಯನಂ ।
ಬಿಡೆದವ್ವೊಲಾಗೆ ತಾಂ ಪೊದೆದ ಮೇಲುದಱಿಂ ಗುಡಿಯಂ ತೊಡರ್ಚಿ ವಾಂ ॥
ಗುಡಿವಿಡೆ ಹರ್ಷವೊಂದು ಪೊಱಮೇಱುದನಿತ್ತ ಜಿತಂಜಯಂ ಮನ ।
ಕ್ಕೊಡರಿಸದಾಗೆ ರಾಗದೊದವಂ ಪಿರಿದುಂ ಪ್ರಿಯಬಂಧುಸಂಗಮಂ ॥

ಆಗಳಾವಾರ್ತೆಯನಜಿತಸೇನಮಹಾದೇವಿ ಕೇಳ್ದು ಘನನಿನದಮಂ ಕೇಳ್ದ ಮಯೂರವನಿತೆಯಂತೆ ಮನಃಪ್ರಮೋದಮನೊಳಕೆಯ್ದು ಅರಸನಲ್ಲಿಗೆ ನಂದು ಚರರ್ಗಂಗಚಿತ್ತಮನಿತ್ತು ಪುರದೊಳೊಸಗೆಯಂ ಮಾಡಲ್ವೇಱಿಂದ್ದು,

ದೆಸೆಯಂ ವಾರ್ಧಿತರಂಗಮಾಲೆ ನೆಲನಂ ನೀಲಾಚಲಾನೀಕಮಾ ।
ಗಸಮಂ ಶಾರದನೀರದಪ್ರತತಿ ತಿಂಬಿತ್ತಿಂಬಿನಂ ಜಾತಿವಾ ॥
ಜಿಸಮಾಜಂ ಮದವದ್ಗಜೇಂದ್ರಘಟೆ ಪಾಂಡುಚ್ಛತ್ರಪಿಂಡಂ ನಿಗುಂ ।
ಬಿಸೆ ಪುತ್ರಂಗಿದಿರ್ವಂದರಂದರಸಿಯುಂ ಭೂಪಾಲನುಂ ಲೀಲೆಯಿಂ ॥೪೯॥

ಅಂತು ಬಂದು ವಾಹನದಿನಿಳಿದು,

ಚರಣಸರೋರುಹಕ್ಕೆ ಮಕುಟದ್ಯುತಿನಾರಿಗಳಿಂದೆ ಪಾದ್ಯಮಂ ।
ವಿರಚಿಸಿದಾತ್ಮಜಂಗೆ ಬಿಡುಮುತ್ತಿನ ಸೇಸೆಯನಿಕ್ಕುವಂದದಿಂ ॥
ಸುರಿದು ಮುದಶ್ರುಬಿಂದುಚಯಮಂ ಬಲಿಯಂ ಪರಸುತ್ತೆ ಮತ್ತೆ ಮಂ ।
ತ್ರಿರದೊಳಮಿಂದಮಪ್ಪಿ ಬಿಡದಿರ್ದನದೊಂದರೆಜಾವನಂ ನೃಪಂ ॥೯೦॥

ಅನಂತರಂ ನಿಜಪದಸರೋಜಕ್ಕಾನಂದಾಶ್ರುಬಿಂದುಗಳಂ ಮುಕರಂದಬಿಂದುಗಳನೋಲಗಿಸಿದ ಕುಮಾರನನಜಿತಸೇನಮಹಾದೇವಿ ನಲ್ವರಕೆಯಿಂ ಪರಸಿ ಮೋಹರಸಪರವಶತೆಯಿಂ ತೊಱೆದ ಮೊಲೆಗೆಲಕ್ಕೆ ತೆಗೆದು ಪುಳಕಕಳಕಾಕುಳತೆಯಿಂ ಕದಂಬಕುಸುಮಸ್ರಜಂಗಳಂತಿರ್ದ ಭುಜವಲ್ಲರಿಗಳಂದಪ್ಪಿ

ಎನ್ನಯ ತಂದೆ ಬಂದನೆನಗಿಂದು ಮನೋರಥಸಿದ್ಧಿಯಾದುದಿಂ ।
ದುನ್ನತಿವೆತ್ತುದಗ್ರಮಹಿಷೀಪದವಿಂದಧಿದೇವತಾಚಯಂ ॥
ಸನ್ನಿದಮಾದುದೆಂದು ಸಿರಿಗಂಪಿನ ಪಂಕದೊಳಣ್ಪನಿಕ್ಕಿ ತಾಂ ।
ಜೊನ್ನದ ಜೊಂಪದೊಳ್ ನೆಲಸಿದಂತೆರ್ದೆಯಾಱಿಸಳೊಪ್ಪಿ ತೋಱುದಳ್ ॥

ಆಗಳೆ ಪೊಡೆವುಟ್ಟಿ ಶಶಿಪ್ರಭೆಯನಖಂಡಿತಕರ್ಣಪತ್ರಶೋಭಾಪಾತ್ರಿಯಾಗೆಂದು ಪರಸಿ ಪುರಾಭಿಮುಖನಾಗಿ

ಬಡತನದೊಳ್ ಸಿರಿ ಮೆಯ್ ಬೆಮು ।
ಪೆಡೆಯೊಳ್ ತಂಗಾಳಿ ಮುವ್ರ್ ಪರ್ವಿದ ಸಮಯ ॥
ಕ್ಕುಡುಪೋದಯಮೆಂಬಂದದೆ ।
ಗಡಣಿಸಿದುದು ಸುತನ ಬರವು ಬಯಸುವ ಪದದೊಳ್ ॥ ॥೯೦॥

ಅಂದೆ ವಿಗತಾಶರಪ್ಪೆವು ।
ಗಂ ದೇವಿಗಮಾಮುನೀಶ್ವರಂ ನಿಮ್ಮ ಸುತಂ ॥
ಬಂದಪನೆಂಬಾದೇಶದಿ ।
ನಿಂದುವರಂ ಪಿಡಿದುದೊಡಲನಾಶಾಪಾಶಂ ॥ ॥೯೨॥

ಅವಧರಿಪ್ಪೊಡೆ ನೆಲನಂ ಪೊ ।
ಯ್ದವನ ಕರಂ ಬೆಟ್ಟಮೆಚ್ಚ ಧನ್ವಿಯು ಸರಲಂ ॥
ಬಿವು ತಪ್ಪವ್ರೊಡಂ ಪೋಲ್ವುವು ।
ಸವಣರ ನುಡಿಯೆಂದುಮೆಂತುಮೇಂ ತಪ್ಪುಗುಮೇ ॥ ॥೯೩॥

ಎಂದು ಪಕ್ಕದಾನೆಗಳೊಳ್ ಬರ್ಪ ಪಾರ್ಥಿವರೊಳರಸಂ ನುಡಿಯುತುಂ ಬಂದನೇಕ ವಸನಕಿಸಲಯಕುಸುಮಮಣಿವಿಸರರಚಿತತೋರಣಮಾಲಾಮನೋಹರಮುಂ, ಅವಿರಳಕಾಶ್ಮೀರರಸವಿಸರಸಂಸಿಕ್ತರಾಜವೀಥೀಸನಾಥ

ಮುಂ, ಉಚ್ಛ್ರಿತಸಮೀಚೀನಚೀನಧ್ವಜವಿತಾನವಿರಾಜಿತಮುಂ, ಉತ್ಸಾ ಹಪಟಿಹರಟಿನಪ್ರತಿನಾದಿತನಾನಾಪ್ರಾಸಾದಕುಂಜರಂಬಿತಮುಂ, ಅಟ್ಟಾಳ ಸಾಳಗೋಪುರಸೌಧಸಂಕುಳಸಮಾರೂಢದರ್ಶನೋತ್ಸುಕಜನಜನಿತಸಂಕಟ ಮುಮಪ್ಪನಗರಿಯಂ ಪುಗುವಾಗಳ್,

ಪಸರಿಪ ಪಾದರಾಗಮಿಳಿಯಂ ತಳಿರ್ಮೆಱಿಸಿ ಲೋಚನಾಂಶುಗಳ್ ।
ದೆಸೆಯನಲಬಕೆ ದೇಹರುಚಿ ಪೊಂದೊಡವಂ ಗಗನಾಂಗದೊಳ್ ನಿಯೋ ॥
ಜಿಸಿ ಕಳಕಾಂಚಿಕಾವಿರುತಿ ಕರ್ಣದೊಳಂಚೆಯ ತುಪ್ಪಟಿಂಚೆಯಂ ।
ಪೊಸೆಯೆ ನಿರೀಕ್ಷಣವ್ಯಸನದಿಂ ನಡೆತಂದುದು ಸೌಂದರೀಜನಂ ॥೯೫॥

ಅಂತು ಬಂದು

ಜನಸಮ್ಮದೋರ್ತ್ಥಕೋಳಾಹಳಕುಪಿತಹಯಸ್ಕಂಧಮೂಲಸ್ಥಳಾಸ್ಫಾ ಳನಲೀಲಂ ತಾಂ ಕುವರಂ ಗಮನಚತುರಚಂಚದ್ವಿಶಾರೂಢೆ ತತ್ಕಾ ॥
ಮಿನಿ ಮಾದ್ಯತ್ಕುಂಭಿಕುಂಭಸ್ಥಳನಿಹಿತನಿಶಾತಾಂಕುಶಂ ಭೂಭುಜಂ ಖ ।
ಲ್ಗಿನಿಕಾಯಪ್ರಾವೃತೋದ್ಯನ್ಮಣಿಮಯಶಿಬಿಕಾರೂಢೆ ಮಾದೇವಿಯಲ್ತೀ ॥

ಎಂದು ನುಡಿವ ಯುವತಿಯರ ನುಡಿಯೊಳ್ ತಡಂಗಲಸಿದ ಪುಣ್ಯಪಾಠಕ ಜನಂಗಳಾಶೀರ್ವಾದನಾದಮುಮಂ ಅಗಣ್ಯಪ್ರಣಾಮಾಂಗನಾಜನಂಗಳ್ ತಳಿವ ಶೇಷಾಕ್ಷತಂಗಳುಮನಾಕರ್ಷಿಸುತ್ತುಮಾಂತುಕೊಳುತ್ತುಂ ಬಂದು ರಾಜ ಮಂದಿರಮಂ ಪೊಕ್ಕು ಕರುಮಾಡದ ಮೊದಲ ಭೂಮಿಕೆಯೊಳಿಕ್ಕಿದ ವಿಶಾ ಲಹಂಸತೂಲದೊಳರಸಿಯುಂ ತಾನುಂ ಕುಳ್ಳಿರ್ದು ಯುವರಾಜನುಮನೊಲ್ಲೆ ನೆನೆಯೆನೆ ತಮ್ಮ ಸಮೀಪದೊಳ್ ಕುಳ್ಳಿರಿಸಿ ಶಶಿಪ್ರಭೆಗೌಚಿತ್ಯಾಸನಮನಿ ತ್ತು ಅಶೇಷಪರಿವಾರಮಂ ವಿಸರ್ಜಿಸಿ,

ಅಡಿಗಡಿಗಪ್ಪಿಕೊಳುತ್ತುಂ ।
ನುಡಿನುಡಿಗೊರ್ವೊರ್ವರ್ ತೆಗೆದು ಮುಂಡಾಡುತ್ತುಂ ॥
ಪಿಡಿದು ಚುಬುಕಾಗ್ರಮಂ ನಲ ।
ವ್ಪೊಡರಿಸಿ ಮುದ್ದಾಡಿಸುತ್ತುಮಿರ್ದರ್ ಸುತನಂ ॥ ॥೯೭॥

ಇರ್ದು ಕಿಱಿದಾನುಂ ಬೇಗದಿಂ

ಪಿನೆಂದುಯ್ದುನವಂ ಬಲಿಕ್ಕವನಿನಾದಾಪತ್ಪದೇನಾತನಂ ।
ನೀನೇಗೆಯ್ದೆಯಿನಿತ್ತು ಕಾಲವಿರವೆಂತಾದತ್ತು ನುತ್ತೀವಿವಾ ॥
ಹಾನಂದಂ ದೊರೆಕೊಂಡುದಾರಿನಿದು ಮುಚ್ಚಿತ್ತಕ್ಕೆ ಚಿತ್ರಾವಹಂ ।
ತಾನೆಂದಾತ್ಮಜನಿಂ ನೃಪಂ ತಿಳಿದನಾವೃತ್ತಾಂತದಾದ್ಯಂತಮಂ ॥೯೮॥

ತಿಳಿದು ಬಲಿಯಂ ಯಥೋಚಿತದಿವಸವ್ಯಾಪಾರಮಂ ತೀರ್ಚಿ ಪರಮ ಪ್ರಮೋದಪರಂಪರೆಯನಪ್ಪುಕೆಯ್ದಿರ್ಪಿನಂ

ಸ್ಫುರದುಗ್ರೋರಗಪೂರ್ವಮಪ್ಪ ರಸೆಯೊಳ್ ತಿಗ್ಮಾಂಶುಬಿಂಬೋದಯಂ ।
ಪಿರಿದುಂ ಚೋದ್ಯಮಿದೆಂಬಿನಂ ನಿಶಿತಶಸ್ತ್ರಾಕೀರ್ಣಮಪ್ಪಸ್ತ್ರಮಂ ॥
ದಿರದೊಳ್ ಯಕ್ಷಸಹಸ್ರರಕ್ಷಿತಮುದಗ್ರಾರಾಂಶುಭಾರಂ ಭಯಾ ।
ತುರಚೇತಃಪರಚಕ್ರಮುಣ್ಮಿದುದು ಚಕ್ರಂ ವಿಕ್ರಮೈಕಕ್ರಮಂ ॥೯೯॥

ಅಂತು ಪುಟ್ಟಿದ ಚಕ್ರೋತ್ಪತ್ತಿಯುತ್ಸವಮನಾಯುಧಾಧ್ಯಕ್ಷಂ ಬಂದರ ಸಂಗೆ ಬಿನ್ನವಿಸೆ ಮಗನಗಣ್ಯಪುಣ್ಯಪ್ರಭಾವಕ್ಕೆ ಮನದೊಳಾನಂದಮುಮು ನಾಶ್ಚರ್ಯಮುಮಮನಾಂತು ಕುಮಾರನಂ ಬರಿಸಿ

ಉದಯಿಸಿತಾಯುಧಾಲಯದೊಳಿಂದು ರಥಾಂಗಮದಲ್ತೆ ನಿನ್ನ ಪು ।
ಣ್ಯದ ಫಲಮೋಫಲಂ ಜಿನಪದಾಂಬುಜಪರ್ಯಸಪರ್ಯೆಯಿಂದಮೊ ॥
ಯ್ತದನಲ್ಲದಿಚ್ಛೆಯರ್ಚನೆಗಳಿಂದೆ ತದಂಘ್ರಿಯನೈದೆ ಮುಂ ಬಲಿ ।
ಕ್ಕದನೊಲವಿಂದಮರ್ಚಿಸು ತನೂಭವ ಪೆರ್ಚಿಸು ರಾಜ್ಯಲಕ್ಷ್ಮಿಯಂ ॥

ಎಂದಾತನ ಮನೋಗತಾನುವಾದಮಂ ಮೊಳುವುದುಂ ಮಹಾವಿಭೂತಿಯಿಂ ಜಿನರಾಜಮಂದಿರಕ್ಕೆ ವಂದು

॥ ರಗಳೆ ॥

ಪ್ರಥಿತತೀರ್ಥಾಹ್ವಯಸರಿತ್ಸರಸ್ಸಲಿಲದಿಂ ।
ಪೃಥುಕಮಲಪರಿಮಲಪರಾಗಭರಕಲಿಲದಿಂ ।
ರಂಗೆಕಲಶೋನ್ಮಿಶ್ರಚಂದನಕ್ಷೋದದಿಂ ।
ಭೃಂಗಾಂಗನಾಕೃಷ್ಟಿಪರಿಣತಾಮೋದದಿಂ ।
ಶಶಿಶಕಲಸಮಕಳನುತಂಡುಲನಿಕಾಯದಿಂ ।

ವಿಶದಸದ್ಭಕ್ತಿಲತಿಕಾಂಕುರಪ್ರಾಯದಿಂ ।
ಅಪರಿಮಿತವಿಕಚಕುಸುಮಸ್ರಕ್ಸಮೂಹದಿಂ ।
ಸ್ವಪರಿಮಳಭರಜಡೀಕೃತಗಂಧವಾಹದಿಂ ।
ಅಕ್ಷೂಣಕನಕಪಾತ್ರೋದ್ಧೃತನಿವೇದ್ಯದಿಂ ।
ಭಕ್ಷೋಪದಂಶಕೃತಸಿತನಿಚಯಹೃದ್ಯದಿಂ ।
ವರ್ತಿಕಾರತ್ನಪ್ರಮಿತದೀಪ್ತದೀಪದಿಂ ।
ವರ್ತೀಕೃತೋದ್ಧೂಮಶಾರೀಕಳಾಪದಿಂ ।
ಲಸಿತಾಗುರುಪ್ರಬಳತರಧೂಪಧೂಮದಿಂ ।
ವಿಸರದಾಮೋದಾಧಿವಾಸಿತವ್ಯೋಮದಿಂ ।
ರಾಜಕದಳಾಮ್ರಜಂಬೀರಫಲಗುಚ್ಛದಿಂ ।
ಪೂಜನಾಮಾತ್ರಸಂಪಾದಿತಹೃದಿಚ್ಛದಿಂ ।
ಪರಮಜಿನರಾಜನಂ ದುರಿತಾಬ್ದರಾಜನಂ ।
ಪೂಜಿಸಿ ಸುಭಕ್ತಿಯಿಂ ರಾಜಿಸಿ ವೃದೂಕ್ತಿಯಿಂ ।
ವಾಸ್ತವಗುಣಸ್ತವದೆ ಶಸ್ತರೂಪಸ್ತವದೆ ।
ಪೊಗಟ್ವಿಳ್ತಿ ವರೆ ತನಗೆ ಮುಗುಳ್ದನಿಂತರಮನೆಗೆ ॥ ॥೧೦೧॥

ಅನಂತರಂ ತನ್ನ ಪುಣ್ಯೋದಯಾಚಲದೊಳುದಯಿಸಿದ ತೇಜೋಮೂರ್ತಿಂಡಮಂಡಳದಂತೆ ಸೊಗಯಿಸುವ ಸುದರ್ಶನಮೆಂಬ ಚಕ್ರರತ್ನಮುಂ, ತನ್ನ ಪೆಂಪಿನೊಳ್ ಸೆಣಸಿ ಕೀಟ್ವಿಟ್ಟು ಅಳ್ವಿಸಕ್ಕೆ ವಂದ ಗಗನತಳದಂತೆ ಪೆರ್ಮೆಯಂ ತಳೆದ ವಜ್ರಮಯಮೆಂಬ ಚರ್ಮರತ್ನಮುಂ, ತನ್ನ ಪುಣ್ಯಪ್ರಭಾವದಿಂ ನಿಯೋಗಿಸಿಟ್ಟನಿತೆ ಬೇಗದಿಂ ಬೆಟ್ಟಿಪೆಟ್ಟಿಹಳ್ಳಕೊಳ್ಳಮೆಂಬ ವಿಷಮಭೂತಳಮಸನಿತುಮಂ ನಾಲ್ವತ್ತೆಂಟು ಯೋಜನಪ್ರಮಾಣವಿಸ್ತೀರ್ಣಕಟಕಕ್ಕೆ ಸುಖಪ್ರಯಾಣನಿಮಿತ್ತಂ ಸಮತಳಮಂ ಮಾಡೆಕೈಗೆ ಬಂದ ದಂಡರತ್ನಮುಂ, ಕೂಟಮಂ ಬಯಸಿ ಬರಲ್ಕೆ ಸಾಮ್ರಾಜ್ಯಲಕ್ಷ್ಮಿ ಮುಂದಟ್ಟಿದ ಲೀಲಾಸನಾಳಧವಳಶತಪತ್ರಮೆನಿಪ ಸೂರ್ಯಪ್ರಭಮೆಂಬ ವಿಚಿತ್ರಚ್ಛ

ತ್ರರತ್ನಮುಂ, ತನ್ನ ವಿಶದಯಶಃಪ್ರಭಾವದೊಳ್ ಮುಟಿಮಿಂಗಿ ಪಗಲೊಳಂ ವರ್ತಿಪಿಕ್ಕೆಯಿಂ ಬರ್ಚಿ ಬಂದ ಶಶಿಕಳೆಯದೆಂಬಂತೆಸೆವ ಚಿಂತಾಜನನಿಯೆಂಬ ಕಾಕಿಣೀರತ್ನಮುಂ, ತನ್ನ ರಾತ್ರಿಗಳ ಜೀವನರಸಾಸ್ವಾದತೃಷ್ಣೆಯಿಂ ನಿಸ್ತ್ರಿಂಶವಿಷದಿನೋಲಗಿಪ ಜವನ ನಾಲಗೆಯ ಪೊಲ್ವೆಯಾದ ಸೌಗಂಧಕಮೆಂಬ ಖಡ್ಗರತ್ನಮುಂ, ತನ್ನ ಮಕುಟಕ್ಕೆ ಶಿಖಾಮಣಿಯಾಗಿ ಭುವನೈಕರಕ್ಷಾಮಣಿಯಪ್ಪ ಜಿನಚರಣನಖಕಿರಣಮಣಿಯೊಳೊಂದಿ ಪವಿತ್ರಮಪ್ಪೆನೆಂಬ ಚಿಂತೆಯಿಂ ಬಂದ ಚಿಂತಾಮಣಿಯೆಂಬಂತಿರ್ದ ಚೂಡಾಮಣಿಯೆಂಬ ಮಣಿರತ್ನಮುಂ, ಇಂತೀ ಪಿಟಿಂ ಜೀವರತ್ನಂಗಳುಮಂ ಮತ್ತಮಯೋಧ್ಯ ಭದ್ರಮುಖ ಕಾಮವೃಷ್ಟಿ ಬುದ್ಧಿಸಾಗರ ವಿಜಯಪರ್ವತ ಪರಂಜಯ ಶಶಿಪ್ರಭಾ ಪರನಾಮಂಗಳಪ್ಪ ಸೇನಾಪತಿ ಸ್ಥಪತಿ ಗೃಹಪತಿ ಪುರೋಹಿತ ಗಜವಾಜಿ ಸ್ತ್ರೀರತ್ನಂಗಳೆಂಬೇಳಿಂ ಜೀವರತ್ನಂಗಳುಮಂ ಕಾಳ ಮಹಾಕಾಳಪದ್ಮಪಾಂಡುಕ ನೈಸರ್ಪ ಮಾಣವಕ ಪಿಂಗಳ ಶಂಖ ಸರ್ವರತ್ನಂಗಳೆಂಬೊಂಬತ್ತು ನಿಧಿಗಳುಮನನುಕ್ರಮದೊಳರ್ಚಿಸಿ ಬಂದು, ತಂದೆಯ ಪಾದಾರವಿಂದಕ್ಕೆ ಅಗಲೊಡಂ,

ಭುವನದ ಕಣ್ಣ್ಗೆ ಸಂದಣಿಸೆ ಕೌತುಕಮೊರ್ಮೆಯ ಸಾರ್ದತಕ್ಕ್ಯಾವ್ಯೆ ॥
ಭವವಿಭುವಪ್ಪ ರಾಜ್ಯವಿಭವೋದಯದಿಂದೆ ವಿರಾಜಿಪಂಗೆ ದಿ ॥
ಟ್ಟ ವಿಷಮುಮಪ್ಪುದೆಂದು ಪದಪಿಂ ಪ್ರಭುಸೂನುಗೆ ತಾನೆ ರಕ್ಕೆಗ ॥
ಟ್ಟುವ ತೆಱದಿಂದೆ ಕಟ್ಟಿದನಿಳಾಪತಿ ತನ್ನ ಧಿರಾಜಪಟ್ಟಮಂ ॥ ॥೧೦೨॥

ಅಂತು ಕಟ್ಟಿದ ಸಾರ್ವಭೌಮಪದವೀಪಟ್ಟಮನಾತ್ಮೀಯಲಲಾಟಪಟ್ಟದೊಳಲಂಕರಿಸಿ ತನ್ನ ಹೋತ್ಸವದೊಳ್

ಇದೆ ದೇಯಂ ಮತ್ತದೇಯಂ ಬಗೆವ್ರೊಡಿದು ದಲೆಂಬೀವಿಚಾರಕ್ಕಣಂ ಸಲ್ಲದೆ ಕೆಯ್ಗೀವಂದೊಡಂ ತನ್ನಯ ಕೆಲದೊಳದಾರಿದೊಡಂ ಕೊಟ್ಟುದಾರಿದ್ರ್ಯದ ಮಾತಿಲ್ಲಲ್ಲಿಯುಂ ಬಾಲ್ಕೆಗನುಖಿಳಧರಾಚಕ್ರದೊಳ್ ತಾನೆನಿಪ್ಪ ॥
ಗ್ಗದ ಮಾತಂ ಮಾಡಿದಂ ಚಕ್ರಧರನೊಸೆದು ಸಾಹಿತ್ಯವಿದ್ಯಾವಿನೋದಂ ॥

|| ಗದ್ಯಂ ||

ಇದು ಪರಮಪುರುನ್ನಾಥಕುಲಕುಳ್ಳತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಿಕೀರ್ತಿತ್ರೈವಿದ್ಯಾಚಕ್ರವರ್ತಿಪದಪದ್ಮವಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಚಕ್ರೋತ್ಪತ್ತಿವರ್ಣನಂ

ಷಷ್ಠಾಶ್ವಾಸಂ

ಸಪ್ತಮಾಶ್ವಾಸಂ

ಶ್ರೀಜಾಯಾಪತಿ ಧರೆಯಂ ।
ರಾಜನ್ವತಿವಾಡಿ ತನ್ನ ಸೌರಾಜ್ಯಗುಣಂ ॥
ರಾಜಿಸೆ ನೆಗಳ್ದಿಂ ನೂತ್ನವು ।
ನೋಜಾಕೃತಿ ಜೈನಜನವನೋಹರಚರಿತಂ ॥ ॥೦॥

ಜನವುನಿತುಮುದ್ಧಸಿಂಹಾ ।
ಸನವುಂ ತಚ್ಚಕ್ರಿಯೋಳಿ ನೀಳ್ಪೇಳಿದುದಿಂ ॥
ದಿನಿತಿರದುದಯಗಿರೀಂದ್ರವು ।
ವಿನನೇಳಿ ಸರೋಜಸಮಿತಿ ನಯವೇಳುವವೊಲ್ ॥ ॥೧॥

ಸುತನೊಳಜಿತಂಜಯಂ ವಿ ।
ಸ್ತೃತವುಂ ಭೂಭರವನೆಯ್ದಿ ಯೋಜಿಸಿ ನಿಶ್ಚಿಂ ॥
ತತೆಯನೊಳಕೆಯ್ದುನುಂತುಂ ।
ಪಿತೃಗೆ ಸುಪುತ್ರಂ ಸುಖೈಕಕಾರಣವುಲ್ತೇ ॥ ॥೩॥

ಚಕ್ರವುಮುಂ ಸಕಳೋರ್ವೀ ।
ಚಕ್ರವುಮುಂ ತೋಳೊಳಾಂತು ಸೊಗಯಿಸುತಿರ್ದಂ ॥
ಚಕ್ರವುಮುಂ ಕಳಹಂಸೀ ।
ಚಕ್ರವುಮುಂ ತೆರೆಯೊಳಾಂತು ಕೊಳನೊಪ್ಪುವವೊಲ್ ॥ ॥೪॥

ಅಂತಪೂರ್ವಸಾರ್ವಭೌಮಶ್ರೀಯೊಳಜಿತಸೇನಂ ನೆರೆದ ಪರಮೋತ್ಸವ ಮುತ್ಸವಾಂತರಮನಾಕರ್ಷಿಸೆ

ಪ್ರಭವಂ ನೀಳಪನಾಳನಂ ಸಮವಸೃತ್ಯುರ್ವೀತಳಂ ಮಿಂಚಿಸ ।
ಪ್ರಭರೈತೋರಣಮಾಲಿಕಲ್ ಸುರಿವ ಮಂದಾರಪ್ರಸೂನಂಗಳಾ ॥
ಗಭಿರಾಜನ್ನವಮೇಳಕಾಲಮೆನೆ ಬಂದಂ ದೇವದೇವಂ ಸ್ವಯಂ ।
ಪ್ರಭನುದ್ಯನ್ಮನಿಜಾತಕಂ ಕಳಿಯುತುಂ ಧರ್ಮಾಮೃತಾಸಾರವುಂ ॥೫॥

ಆಗಳೆದಂ ಕೇಳ್ದು ಅಜಿತಂಜಯಂ ಚಕ್ರಧರಸ್ವರಸ್ಸರಂ ಪರಮನ ಪದಪ
ಯೋಜವಂದನಾನಂದದಿಂ ಬಂದು ಸಮವಸರಣಮನ್ನೈದಿ ಪಾದಲೇಪೌಷಧಿ
ಪ್ರಭಾವದಿಂ ವಿಂಶತಿಸಹಸ್ರಸೋಪಾನಂಗಳನಸಂಗದಿಂದಮೇಱಿ ಗಂಧಕು
ಟಿಯಂ ಪೊಕ್ಕು ಪೀಠತ್ರಯಾಗ್ರನಿಷ್ಠಿತನಂ ಪರಮೇಷ್ಠಿಯಂ ಪ್ರದಕ್ಷಿಣಂಗೆ
ಯ್ದು ಪುರೋಹಿತರತ್ನಾನೀಕನಿಧಿನಿಕರದತ್ತಮರ್ಚನಾಪರಿಕರಂಗಳಿಂದಮ
ರ್ಚಿಸಿ

ಅತ್ಯಂತಭಕ್ತಿಯಿಂ ಪದ ।
ನತ್ಯಂತದೊಳೆಯ್ದಿ ತಾಳ್ದಿದಂ ತೀರ್ಥಕರ ॥
ಸ್ತುತ್ಯೋದ್ಯಮಮಂ ದಿಟದಿಂ ।
ಸ್ತುತ್ಯರೊಳಾರ್ ಸ್ತೋತ್ರಭಾವಮಂ ತಾಳ್ದವರ್ ॥ ॥೬॥

ಜಯ ವಿಮಳಕೇವಳಾಕೋರ್ ।
ದಯಗಿರಿವರ ಜಯ ದಯಾರಸಾರ್ಣವ ಜಯ ನಿ ॥
ರ್ವ್ಯಯ ಲಕ್ಷ್ಮೀನಿಳಯಾಂಬುಜ ।
ಜಯ ದಿವಿಜಕಿರೀಟದೀಪವರ್ತಿನಿಧಾನಾ ॥ ॥೭॥

ಕಡಡಿದ ನೀರ್ ಕತಕದಿನ ।
ಲ್ಲದೆ ತಿಳಿಗುಮೆ ಪುದಿದನಾದಿಮಿಥ್ಯಾತ್ವದೆ ಮ ॥
ಲ್ಗಿದ ಮತಿಯದು ನಿನ್ನಿಂದ ।
ಲ್ಲದೆ ಪೆಜ್ಜಳಿಸುಗುಮೆ ಬೇಗಮಪಗತರಾಗಾ ॥ ॥೮॥

ಮನಮುಳ್ಳೊಡೆ ಜನಿಯಿಸುವಂ ।
ಮನಸಿಜನಾಯುಷ್ಯಮುಳ್ಳೊಡಂತಕನೆಯ್ತ ॥
ರ್ನೆನುತ್ತಮನುಭಿದಂತವ ।
ರ್ಗಿನಿತೆಗೆಗುಡದಿರ್ದೆ ನೀನೆ ದಲ್ ನಿರಪೇಕ್ಷಾ ॥ ॥೯॥

ಪಿಂಗರ್ಗೆಱಗೆಯಾರುಮಂ ನೀ ।
ನೆಱಗಿಪೆ ನೀಂ ಬಾಯಸೆಯೇಸುಮಂ ಬಯಸಿದುದಂ ॥
ಪೆಱಗರ್ಗಿವೆ ಸಕಳಮಂ ನೀ ।
ನೆಱಿವೆಯದರ್ಕಱಿಯಲಱಿಯೆ ವಿಸ್ಮಯವೃತ್ತಾ ॥ ॥೧೦॥

ನಿನ್ನಂ ಪೊಗಳ್ದೀಕ್ಷಿಸುವಲ್ಲಿ ।
ಪಿಂ ನಾಗೇಂದ್ರತೆಗಮಿಂದ್ರತೆಗಮೂಟಸ್ಪದಿ ॥
ನ್ನೆನ್ನ ಮನವುಂತುಮುಂತವು ।
ನಿನ್ನರ್ಹಂತತ್ವದಿಂದವಗ್ಗಳವೆ ಜಿನಾ ॥ ॥೧೧॥

ಇದು ಚಿತ್ರಂ ವಜ್ರಾಂಗಂ ।
ಗೆ ದೃಢೀಕೃತಮಾದ್ರವಪ್ರಭಾವಂ ನಿಸ್ನೇ ॥
ಹದವಂಗೆ ಭುವನಭವನನ ।
ಪ್ರದೀಪಕತೆ ನಿನಗೆ ಜಿನ ಜಗತ್ತ್ರಯಮಿತ್ರಾ ॥ ॥೧೭॥

ಪೆಱಪೆಱರನಾಪ್ತರೆಂದೆಂ ।
ದೆಱಗಿಯುಮುಡಿಗಡಿಗೆ ಕೆಂಡೆವುಂ ಮಾಣಿಕವೆಂ ॥
ದಱಿಯದೆ ಪಿಡಿದುಂ ಮನ್ಮಲ ।
ಮಱುಗುವುದಚ್ಚರಿಯೆ ಪರಮಪದವೀನಾಥಾ ॥ ॥೧೩॥

ಭವ್ಯತೆ ಮಾಟ್ಟುಂ ನಿಜಸೇ ।
ವಾವ್ಯಸನಮನದಱಿನಱಿವು ಸಮನಿಕುಮಱಿವಿಂ ॥
ದವ್ಯಾಮೋಹತೆ ಸಾರ್ಗುಮ ।
ದವ್ಯಾಹತಸುಖಮನೀಗುಮನವಧಿಬೋಧಾ ॥ ॥೧೪॥

ಸುವಿಧೃತರತ್ನತ್ರಯರ ।
ಪ್ಪ ವಿನೇಯರ್ ಭವಪಯೋಧಿಯಂ ದಾಂಟಲ್ಕೇ ॥
ಱುವ ಧರ್ಮಯಾನಪಾತ್ರ ।
ಕ್ಕವೆ ನೀನೇ ನೋಡೆ ಕರ್ಣಧಾರನೆ ಅಹಾ ॥ ॥೧೫॥

ಕಿವಿಗುಡಿತೆಗಳಿಂ ನಿಜವಿಷ ।
ಳವಚಕಿಳಿಯೂಷರಸಮನೀಂಟಿದನಂ ಪೊ ॥
ರ್ದುವುದಲ್ಲವು ತೃಷ್ಣೆಯಿನಾ ।
ದವಿಭೇದಂ ಬಱಿಕೆ ಮೋಹತಿಮಿರೋಗ್ರಕರಾ ॥ ॥೧೬॥

ಎಂದು ನುತಿಗೆಯ್ದು ಬಱಿಯಂ ।
ಮುಂದಣ್ಗಿನಿಸಂ ಮುಹುರ್ಮುಹುರ್ನುತಿಯಿಂ ಸಾ ॥

ರ್ತ್ಂದು ಕಿರೀಟಮನೆಡಗೆ ।
ಯ್ಯೆಂದೋಸರಿಸುತ್ತುಮುಚಿತಕೋಷ್ಠೈದೊಳವರ್ಗ್ಗ ॥
ಕುಳ್ಳಿದರ್
ಎಂತು ದುರಿತಂಗಳಿಂ ದುರಿ ।
ತಾಂತಕ ಸಂಸಾರಿ ಬದ್ಧನೆನಿಸುಗುಮೆದಱಿಂ ॥
ದೆಂತು ಗಡ ! ಮುಕ್ತನಕ್ಕುಮಿ ।
ಪಂ ತಿಳಿಪುವುದೆಂದು ಪರಮನಂ ಬೆಸಗೊಂಡರ್ ॥ ॥೧೭॥
ಬೆಸಗೊಳಲೊಡಂ
ಹಸ್ತವಿಕಾಸವಿಹೀನಮು ।
ಪಾಸ್ತೋಷ್ಠಸ್ಪಂದನಂ ಪ್ರಸನ್ನಂ ಮಧುರಂ ॥
ವಾಸ್ತವಯುತಮೊಗೆದುದು ಭ ।
ವ್ಯಸ್ತೋಮಪ್ರಮದಕಾರಿ ದಿವ್ಯನಿನಾದಂ ॥ ॥೧೮॥
ಅದೆಂತೆಂದೊಡೆ—
ಧೃತಮಿಥ್ಯಾದರ್ಶನನವಿ ।
ರತಿಯುಕ್ತಂ ಸತ್ಪ್ರಮಾದನಾತ್ತಕಷಾಯಂ ॥
ಯುತಯೋಗನೆನಿಸ ಜೀವಂ ।
ಸತತಂ ದೃಢಕರ್ಮಬಂಧದೊಳ್ ತಾಂ ತೊಡರ್ಗುಂ ॥ ॥೧೯॥
ಅಂತು ತೊಡರ್ದದಱ ವಶದಿಂ ।
ಸಂತತಮಿರಲೆಡೆಯೊಳತಿಕುಯೋನಿಗಳೊಳ್ ಜೀ ॥
ವಂ ತಿಱ್ಱನೆ ತಿಱಿವುದಯ ।
ಸ್ಕಾಂತದ ಬಟಿವಿಡಿದ ಕೃಷ್ಣಲೋಹದ ತೆಱದಿಂ ॥ ॥೨೦॥
ಅದು ಬಟಿಕೆ ಕಾಕತಾಳೀ ।
ಯದೆ ದೊರೆಕೊಂಡ ಪ್ರಮಾದದಿಂ ಮನುಜತೆವೆ ॥
ತ್ತದಱೊಳಮುಪಶಾಂತಿಯ ಬ ।
ಟ್ಟೆದಪ್ಪಿ ಕಡೆಯೊಳ್ ಕುಯೋನಿಯೊಳ್ ಮತ್ತಾಟ್ಟುಂ ॥ ॥೨೧॥

ಇದನಱಿದು ಜನ್ಮಭೀರುಗ ।
ಳುದಾತ್ತಮನರಱಿಳಕರ್ಮವೈರಿವಿನಾಶ ॥
ಪ್ರದಮೆಂದುಱಿಯರ್ ಸಜ್ಞಾನ ।
ನದ ಸದ್ದರ್ಶನದ ಸಚ್ಚರಿತ್ರದ ಬಱಿಯಂ ॥ ೨೦॥

ಜ್ಞಾನಂ ಯಥಾರ್ಥಬೋಧಾ ।
ಧಾನಂ ದರ್ಶನಮುಪಾತ್ತ ಜಿನತತ್ವಶ್ರ ॥
ದ್ಧಾನಂ ಚರಿತಂ ಸುಕೃತನಿ ।
ಧಾನಂ ತಾನೆಂದು ಪೇಳ್ವಿರಲ್ತ್ ಮಹಾತ್ಮರ್ ॥ ೨೩॥

ಇವು ಸಕಲಕರ್ಮಮಂ ತವಿ ।
ಪುವು ಸಮುದಿತಸಮಾದೊಡುಂತುಮೊಂದೊಂದೆ ದಲಾ ॥
ದುವದಂತುಟೆ ಪಲರಿಂ ತೀ ।
ರ್ಚುವ ಕಾರ್ಯಮದೊರ್ವರೊರ್ವರಿಂ ತೀರ್ದಪುದೇ ॥ ೨೪॥

ಅಱಿಯಿಸ್ತದು ಕರ್ಮಮುದಯಿಸ ।
ತೆಱನಂ ಜ್ಞಾನಂ ಚರಿತ್ರಮದನುಱಿಪುದಿವಂ ॥
ನೆಱೆಪುವುದಾದರ್ಶನಮಂ ।
ತಱಿವಿಂದುಪಯೋಗಶುದ್ಧಿಕಾರಣಮೆನಿಕುಂ ॥ ೨೫॥

ಜ್ಞಾನಮೆ ಕಿಡಿಸುಗುಮುಪಸಂ ।
ತಾನಮನೆಂದೆಂದು ನುಡಿವ ನುಡಿ ಭಾವಿಪ್ರೌಢ ॥
ಜ್ಞಾನೋಕ್ತಂ ಭೈಷಜ್ಯ ।
ಜ್ಞಾನಮೆ ಮಾಡುಗುಮೆ ವೇದನಾನಿಗ್ರಹಮಂ ॥ ೨೬॥

ಎಂದು ಜಿನೇಶ್ವರಂ ಬೆಸಸೆ ಕೇಳ್ದ ಜಿತಂಜಯಭೂಮಿಪಾಲಕಂ ।
ಸಂದು ವಿರಕ್ತಿಗಾಗಳೆ ತದೀಯಸಮಕ್ಷದೆ ದೀಕ್ಷೆಗಂ ಮನಂ ॥
ದಂದನದಂತೆ ಭವ್ಯತೆ ನಿರಾಮಯಲಕ್ಷ್ಮಿಯ ದೂತಿಯೂಕೆಯೊಳ್ ।
ತಂದೊಡಗೂಡುವನ್ನೆಮೆಯೊಳ್ ನಿಲಲೀಗುಮ ಶುದ್ಧವೃತ್ತರಂ ॥ ೨೭॥

ಅಂತು ಬಗೆದನಂತರಂ ಸಮಾಶ್ರಿತದಿಗಂಬರಶ್ರೀಕನಾದಂ. ಇತ್ತ ಚಕ್ರವರ್ತಿ ಗೃಹೀತಸದ್ದರ್ಶನನನಂತದರ್ಶನನಂ ತ್ರಿಶುದ್ಧಿಯಿಂ ತ್ರಿಃಪ್ರದಕ್ಷಿಣಂಗೆ

ಬ್ದು ವಿನಯದಿಂ ಬೀಳ್ಕೊಂಡು ವಿನತಾಪುರಮಂ ಪೊಕ್ಕು ಬಳಿಯಂ ಸಹಜವಿಜಿಗೀಷುವೃತ್ತನಪ್ಪುದಱಿಂ ದಿಗ್ವಿಜಯೋದ್ಯೋಗಮನೆತ್ತಿಕೊಂಡುಮನೊನಪುಣ್ಯಾಂಗಸಾಧ್ಯಮಿಲ್ಲೆಂಬುದಂ ನನ್ನಿಮಾಡುವಂತೆ ಕೆಲವಾನುಂ ದಿವಸದೊಳ್

ಮೇದಿನಿಯಂ ಹಿಮಾದ್ರಿಯಿಷುಕಾರನಗಂ ಲವಣಾಂಬುರಾಶಿ ಕಾ ।
ಳೋಗಕವಾರ್ಧಿ ಸೀಮೆಯೆನೆ ಸಾಧಿಸಿ ಬಾಹುಪರಾಕ್ರಮಂ ಸನೂ ॥
ಸಾದಿತಚಕ್ರಭೃತ್ಕ್ರಮಮನಾಗಮೆ ಪೆರ್ಚಿಸೆ ಪೆರ್ಮೆವೆತ್ತನಿಂ ।
ತಾದಿಯ ಸಾರ್ವಭೌಮರಿನಖರ್ವಯಶೋನಿಧಿ ಕೌಶಳೇಶ್ವರಂ ॥೨೯॥

ಆರಾಜೇಂದ್ರನ ಜಯಯೂ ।
ತ್ರಾರಭಸದೊಳೊಗೆದ ಸೈನ್ಯರಜವರಿಭೂಭೃ ॥
ನ್ನಾರಿಯರ ಕಣ್ಗಳೊಳ್ ಕ ।
ಣ್ನೀರಂ ದೂರದೊಳೆ ಮಾಟಿಪ್ಪುದೇಂ ಕೌತುಕಮೋ ॥ ॥೨೯॥

ಉಱಿದು ಘನಮಾನಗರ್ವಮು ।
ನಱಿಪಿ ನಿಜೈಶ್ವರ್ಯಪದವಿಗೆಱಗಿದರಂದೊ ॥
ಳ್ಪಱಿಯದವಂಗೆ ನೃಪಾಲರ ।
ಘಟಿಲನೆ ಜಿನಪತಿಗೆ ಭವ್ಯರೆಱಗುವ ತೆಱದಿಂ ॥ ॥೩೦॥

ಕಡಲ ತಡಿದಡಿಯೊಳಾತಂ ।
ನಡಿಸಿದ ಕಾಂಚನಜಗಜ್ಜಯಸ್ತಂಭಂಗಳ್ ॥
ಕುಡಿನಿಮಿರ್ದುರ್ ನಾಕಿನಿಳಯಮು ।
ನಡವರ್ ಯಶೋಲತೆಗೆಡರ್ನಿಟ್ಟವೊಲೆಸೆಗುಂ ॥ ॥೩೦॥

ಅವನೊಳ್ ತೊಡರ್ದರಿಭೂಪರ ।
ಭವನಂಗಳ ಚಿತ್ರಪುತ್ರಿಕಾನಿವಹಕ್ಕೊ ॥
ಪ್ಪುವ ನವಚೀನಾಂಶುಕಮೂ ।
ದುವು ತರುಣೋರಗನಿಕಾಯನಿರ್ಕಂಗಳ್ ॥ ॥ ೩೦॥

ಪರನೈಪರಟ್ಟಿದ ಕಪ್ಪದ ।
ಕರಿಗಳ ಮದಜಳಮನುಂಡು ಕಂಪೇಱಿದ ತ ॥
ದ್ಧರಣೀಶಗೃಹಾಂಗಣದೊಳ್ ।
ಪರಿವರಿಯಾಡುವುವು ಪಱವೆಮವಱಿಗಳ ಬಳಗಂ ॥ ॥೩೩॥

ಜನಿಯಿಸುವರ್ಕನಂ ನೃಪನ ಚಕ್ರಮೆಗೆತ್ತಿಱಿವಂ ಪ್ರಭಾಸನಾ ।
ಸನದಿನುದನ್ವದುಗ್ರತಿಮಿಯಂ ಸಲೆ ತಮ್ರಚಿಯೆಂದು ಬೆಚರ್ಕುವಂ ॥
ಮನದೊಳೆ ಮೂಗಧಂ ಘನನಿನಾದಮನಾತನ ದಂಡರತ್ನಚಂ ।
ಡನಿನದಮೆಂದೆ ಕಟ್ಟುಕೆಡೆವಂ ವಿಜಯಾರ್ಧಕುಮಾರನೀಗಳುಂ ॥೩೪॥

ಅದಲ್ಲದೆಯುಂ

ಚತುರಂಗಸ್ತನವಿನುತಂ ।
ಪ್ರತೀತನಯವತ್ಸವತ್ಸಲಂ ವಸ್ತುಪಯ ॥
ಸ್ಸ್ಥಿತಿಯಂ ಗೋಮಂಡಲಮಾ ।
ಕ್ಷಿತಿಪತಿಗೋರಂತೆ ಕಱುವುದಿರುಳುಂ ಪಗಲುಂ ॥ ॥೩೫॥

ಅಂತೇಕಚ್ಛತ್ರೀಕೃತಭಾರತವರ್ಷನುಂ, ದ್ವಿಗುಣೀಕೃತಪ್ರಕೃತಿಪ್ರಮೋದನುಂ, ತ್ರಿವಿಧಶಕ್ತಿಪ್ರಯುಕ್ತನುಂ, ಚತುರ್ಸ್ಯಪವಿದ್ಯಾವಿಚಾರದನುಂ, ಪಂಚಗುರುಪರಿಚರ್ಯಾತತ್ಪರನುಂ, ಷಡಂಗಸೇನಾವಿರಾಜಮಾನನುಂ, ಸಪ್ತಾಂಗಸಂಪತ್ಸಮೇತನುಂ, ಅಷ್ಟದಿಗ್ಜಯೋಪಾರ್ಜಿತಯಶನುಂ, ನವನಿಧಿಸನಾಥಶ್ರೀನಿವಾಸನುಂ, ದಶಾಂಗಭೋಗಸಂಗತನುಮಾಗಿ,

ತನಗೆ ಕರಂ ಶಶಿಪ್ರಭೆಯೊಳಾದನುಕೂಲತೆಯೊಪ್ಪಿ ವಿಗ್ರಹೋ ।
ಜ್ಜ್ವಲನದೊಳಳಂಕೆಗೊಂಡು ಸಲೆ ಸದ್ರತಿಯೊಳ್ ನೆರೆದಿಂತು ನೂತನಂ ॥
ಮನಸಿಜನೆಂಬವೋಲಜಿತಸೇನರಥಾಂಗಧರಂ ಸಮಸ್ತಭೂ ।
ಜನದ ಮನಕ್ಕೆ ತನ್ನೊಳನುರಾಗಮನಾವಗಮುಂಟುಮಾಡುವಂ ॥ ॥೩೬॥

ಅಂತು ಸೊಗಯಿಸುವ ಚಕ್ರಧರಕುಸುಮಾಯುಧಂಗೆ ವಿಳಾಸಕೇಳೀಸಹಾಯಂ ಬರ್ಪಂತೆ

ನವಪುಷ್ಪೋತ್ಕರಪಾಂಡುಚೂತನಿವಹಂ ಶ್ವೇತಾತಪತ್ರಾಳಿ ಭೃಂ ।
ಗವಧೂರುಂಕೃತಿ ಶಂಖಧ್ವಾತ್ಕೃತಿರುತಂ ಸನ್ಮಾಧವೀಕುಟ್ಮಲ ॥
ಸ್ತವಕಂ ಚಾಮರಮುಚ್ಚಕೋಕಿಳರವಂ ಭೇರೀಧ್ವನಧ್ವಾನಮಾ ।
ಗೆ ವಸಂತಂ ಋತುಸಾರ್ವಭೌಮವಿಭವಂ ಮೆಯ್ವೆತ್ತದೇಂ ಬಂದುದೋ ॥

ಆಸಮಯದೊಳ್

ಸರಸೀವಾರಿಯೊಳಾದಮುಚ್ಚಿಕೊಳುತುಂ ಮಾಣಿಕ್ಯಸಂದೋಹದು ।
ಷ್ಪರಜೋವ್ರಾತಮನೋವದೊಟ್ಟಿಕೊಳುತುಂ ಪಲ್ಲೀನಿವಾಸಂಗಳಂ ॥
ಪರಪುತ್ತುಂ ಮಳಯಾವನೀಧರಚರಂ. ತಾಂ ಬಂದುದಾದಾನಬಂ ।
ಧುರಗಂಧಾಕುಳಭೃಂಗಮಂಗಜಜಗಜಂ ಬರ್ಪಂತೆ ಚೈತ್ರಾನಿಳಂ ॥ ॥೩೪॥

ಇನನುಲಿದಂ ವಸಂತನುಮುಮರ್ಚಿದನಿತ್ತಲುಮಗ್ನಿಯಿತ್ತಸ ।
ಮ್ಮನಿಸಿದ ರಕ್ಕಸಂ ಬಲಿಕಮಾಂ ನಡುವೆಂಬವೊಲಾದುದಾನೆ ಭೂ ॥
ಜನವೆನಿಸಿರ್ದನಂತಕನಡುರ್ಕೆಗೆ ಪೋ ಪೆಪಿತಾವುದೆಂಬ ದು ।
ರ್ಮನದೊಳೆ ದಕ್ಷಿಣಾಶೆ ನಿಡುಸುಯ್ದವೊಲಾದುದು ದಕ್ಷಿಣಾನಿಲಂ ॥ ೩೯॥

ಮತ್ತಂ

ಮಲಯಕ್ಷಾಧರಮೇಖಳಾಪರಿಗತಶ್ರೀಖಂಡಷಂಡಂಗಳೊಳ ।
ನಲವಿಂದೊಂದಿ ಬಟಿಲ್ದ ಭೋಗಿಮಿಥುನಂಗಳ ಪೀರ್ದುಪೀರ್ದಾದಮ ॥
ಗ್ಗಲಿಸಿರ್ದಾತ್ಮಕೃತಶ್ವಮಂ ಸುರಭಿನಾತಂ ತೂಳ್ದಿದತ್ತುದ್ಯದು ।
ತ್ಕಲಿಕವ್ಯಾಕುಳಚೋಳಕೇರಳವಧೂನಿಶ್ವಾಸಸಂಪರ್ಕದಿಂ ॥ ॥೪೦॥

ನಿನಗೆ ವಸಂತದೂತಿವೆಸರೊಪ್ಪುವುದೆಂತೆನೆ ಮುಂತೆ ಬಂದು ನೀ ।
ನೆನಗೆ ವಸಂತನಾಗಮನಮಂ ನೆರೆ ಸೂಚಿಸಿ ಕೊಟ್ಟೆಯೆಂದು ನಂ ॥
ದನವನಲಕ್ಷ್ಮಿ ಕೀರರವದಿಂ ಪೊಗಳ್ದಿತ್ತ ಪಸಾಯದಚ್ಚಮು ।
ತ್ತಿನ ಪೊಸಪಚ್ಚಮಂತಳೆದಪೊಲದಿರ್ಮುತ್ತಿ ಮುಗುಳ್ತುದೆತ್ತಲುಂ ॥೪೦॥

ಅದಲ್ಲದೆಯುಂ

ಅವಿರಳಪೂಗ ಮೆಯ್ವಸುರೆ ಪಚ್ಚೆದಿಮಿರ್ ತಳರುಟ್ಟ ಪಟ್ಟಿಯೊ ।
ಪ್ಪುವ ತಿಳಕಂ ಮಧುವ್ರತಮುಲರ್ದಲಗೊಂಚಲೆ ದಂಡೆ ಕೋಕಿಲಾ ॥

ರವಮುದು ಬೀರವುದ್ದಳೆಯ ನಿಸ್ವನವಾಗಿರೆ ಕಟ್ಟಿ ಬಂದ ಕಂ ।
ತುವ ಬಿರುದಂಪದಿಂದೆ ಕರವೊಪ್ಪಿದುಪಂದಿನ ಬಂದ ಮಾವುಗಳ್ ॥೪೦॥

ಅರಲಂಬಿಂದೆಪ್ಪೊಳ್ ಮೆ ।
ಗ್ಗುರೆದಿಸು ವಿರಹಿಗಳನೆಂದು ಕೈಗೊಟ್ಟುವು ಶಂ ॥
ಬರರಿಪ್ರಗೆನ್ನಬೆ ಮಾವಿನ ।
ಮರಗಳೆ ಕೈವಂದುವೆಂಬವಂ ಮರುಳಲ್ತೇ ॥ ॥೪೩॥

ನನೆಯುಂಬಿನ ಪೊದೆಯುಂ ಪೂ ।
ವಿನ ಗೊಂಚಲ್ ನೀಳ್ದ ಕರ್ವುವಿಲ್ಲಂ ಸೆಳೆಗೊಂ ॥
ಬನುಕರಿಸೆ ಬಾಲಚೂತಂ ।
ನೆನೆಯಿಸಿದುದು ಚಿತ್ತಭವನ ಕೀಲ್ಬಾಳವನಂ ॥ ॥೪೪॥

ರತಿಗವತಂಸವಾದ ತಳಿರಾವಮರಕ್ಕೊಳವೆನ್ನ ಬಿಲ್ಗೆ ಸಂ ।
ಗತಶರಮಾದ ಪೂಗುಡಿಗಳಾವಮರಕ್ಕೊಳವನ್ಯೈಪ್ರಷ್ಟಮೂ ॥
ಕತೆಗಗದಂಗಳಾದ ಕೊನರಾವ ಮರಕ್ಕೊಳವೆಂದು ಮನ್ಮಥಂ ।
ಸ್ತುತಿಯಿಸಿ ಮಾಮರಕ್ಕೆ ಕುಜರಾಜಸಮಾಖ್ಯೆಯನಿತ್ತನಲ್ತೆಯಿಂ ॥ ೪೫॥

ಎನಿಸಿ ಸೊಗೆಯಿಸುವ ನೂತನವಿಳಾಸೋಪೇತಚೂತಭೂಜಾತಂಗಳೊಳ್
ಉಂತೆ ಜಗೆಂಗಳಂ ತಿಗುರಿಗಂ ತರುತಿರ್ಪ ಮಾನೋಜನೀವಸಂ ।
ತಂ ತಲೆದೋಱುತಿಂ ಹರನ ಕಣ್ಣುರಿಯುಂ ನದಿಪಲ್ ಸಮರ್ಥನೋ ॥
ವಂತುಟುಗೆಂಡು ಸಂತಮಿರಿಮೊಲ್ದವರಂ ಬಿಡದೆಂದು ಬುದ್ಧಿವೇ ।
ಟ್ವಂತೆವ್ವೊಲಾದುದಧ್ವಗಜನಕ್ಕೆ ಕನತ್ಕಳಕೋಕಿಳಸ್ವನಂ ॥ ॥೪೬॥

ಮತ್ತಂ

ಅಱುತೆರ್ದೆಯಾಱೆ ಪೀರ್ದುಮಿನಿಯಳ್ಗನಿದೆಂದಿರದೀಂಟವೇಟ್ಟುವು ।
ಟ್ಟಿಱ ಮಱುಗೆಳ್ಗೆ ಮುಕ್ಕುಱಿಸಿ ತಂದೆರೆದುಂ ಗೆಳೆವಕ್ಕಿಯೆಲ್ಲವುಂ ॥
ನೆಱೆಬಱಿಯಟ್ಟಿ ನಲ್ಲುಣಿಸನೂಡಿಯುಮಾಮ್ರದ ತೋರವಣ್ಣೊಳಂ ।
ದಱ ರಸದಂತುಗಾಣದೆ ಪಲೊಂದು ಶುಕಂ ಮಧುಸನ್ನುದೋತ್ಸುಕಂ ॥ ೪೭॥

ತಳಿಗರ್ಳಿನೊಮ್ಮೆ ಪೂಗುಡಿಯಿನೊಮ್ಮೆ ಪಸುಮಿರ್ ಡಿಯಿಂದಮೊಮ್ಮೆ ಕಾ ।
ಯ್ಗಳಿನಿರದೊಮ್ಮೆ ಪಣ್ಗಳಿನದೊಮ್ಮೆ ಜನಕ್ಕೆ ಮನಃಪ್ರಮೋದಮಂ ॥
ಬಳೆಯಿಸಿ ಮಾಣ್ದುದಲ್ತು ಸವಿಯಂ ಕಿವಿಗೋಲಗಿಸಿತ್ತು ಮತ್ತೆ ಕೋ ।
ಕಿಳರವದೊಮ್ಮೆ ಭೃಂಗರುತದೊಮ್ಮೆ ಶುಕಸ್ವರದೊಮ್ಮೆ ಮಾಮರಂ॥೪೯॥

ಆಮನೋಜವಿಜಯಸಹಕಾರಿ ಸಹಕಾರಸಮೂಹಮದಲ್ಲದೆಯುಂ ಕು
ಸುಮಿತಾನೇಕಕುಸುಮವಲ್ಲರೀಪ್ರಸರವಿಸರದೊಳ್

ತಾನುಗುಬಿತ್ತು ಮಿರ್ಪ ಪೊಸಗೆಂಪುಮನಿತ್ತಿ ತೆಮಳ್ದಿಕೊಂಡು ಮಂ ।
ದಾನಿಳನುಯ್ಯುತಿರ್ಪ ತನಿಗೆಂಪುಮನಿತ್ತಿ ಮರಳ್ದು ಭೃಂಗಸಂ ॥
ತಾನಮುಣುತ್ತು ಮಿರ್ಪ ನಳಿಗೆಂಪುಮನಿತ್ತಿ ಗಡಂ ಪ್ರಫುಲ್ಲಮು ।
ಲ್ಲೀನವಪುಷ್ಪಮೋಗರದ ಕಂಪುಗಳಾಗರಮಾಯ್ತು ಸುಗ್ಗಿಯೊಳ್ ॥ ॥೫೯॥

ಮಧುಲಕ್ಷ್ಮೀನೃತ್ಯಗೃಹಂ ।
ಮಧುವ್ರತಸ್ತ್ರೀನಿಕಾಯಮಾಧ್ವೀಕಗೃಹಂ ॥
ಮಧುಮಿತ್ರಜಗಜ್ಜೈತ್ರಾ ।
ಯುಧಗೃಹಮೆನೆ ವಿಕಚವಿಚಕಿಳಂ ಸೊಗಯಿಸುಗುಂ ॥ ॥೫೦॥

ಬಳಸಿರ್ದ ವಿಟಪಿವಿಟಸಂ ।
ಕುಳಮಂ ಚೆಲ್ಲದೊಳೆ ನೋಟ್ಪ ಮಲ್ಲೀಲತಿಕಾ ॥
ಲಳನೆಯ ಕಟಾಕ್ಷರುಚಿಯೆನೆ ।
ಮಿಳಿರ್ವೂವು ಬಂಡುಂಡು ಪಾಟಿಸುವಳಿಮಾಳಿಕೆಗಳ್ ॥ ॥೫೧॥

ಅದಲ್ಲದೆಯುಂ

ಬಿರಯಿಗಭಿಚಾರಮಪ್ಪಂ ।
ತಿರೆ ಮುಳಿಸಿಂ ಕಂತುಮಾಂತ್ರಿಕಂ ಬೇಳಲ್ಕೆಂ ॥
ದುರಿಪಿದ ಹೋಮಾಗ್ನಿಯು ಕೇ ।
ಸುರಿಯೆನಿಸಿದುವಸುಗೆಯೆಸೆವ ಪೊಸಪೂಗುಡಿಗಳ್ ॥ ॥೫೨॥

ಬಸವೆಂಬ ಮದನನೃಪನರ ।
ಮನೆಯೊಳ್ ಪೊತ್ತಿಸಿದ ದೀಪನೊಲೆಯ ಮಾಡ ॥

ಕ್ಕನುರೂಪವಾಗಿ ಪಣೆಯಿಂ ।
ಕೊನೆವರೆಗಂ ಪೂಸುವರರೆ ಚಂಪಕನಿಕರಂ ॥ ॥೫೩॥

ಎನಗೆ ಜಗತ್ತ್ರಯೀಜಯಶರಾವಳಿಗೀವಿಟಪೀತ್ರಯೀಪ್ರಸೂ ।
ನನಿಕರವಾದುವೆಂದು ಮದನಂ ಮನದೊಳ್ ಮದಬೇಱೆ ಪೇಱುದ ॥
ತ್ತನುಪಮಸೌರಭಂ ದೆಸೆಯನಾವರಿಪಂತು ಮರಲ್ದರಲ್ದ ಪೂ ।
ವಿನ ಪೊಸಗೊಂಚಲಂ ಕುರವಕಂ ತಿಲಕಂ ವಕುಲಂ ನಿರಾಕುಲಂ ॥೫೪॥

ಅಲರ ಪೊಸಗಂಪಿನಿಂದೆವು ।
ಗಲಂಪನಗ್ಗಲಿಸಿ ನೀನೆ ರಕ್ಷಿಪುದೆನುತುಂ ॥
ಬಲವೆಂದೆಱಗುವ ತೆಱದಿಂ ।
ಬಲವೆಂದೆಱಗಿದುವು ತುಂಬಿಗಳ್ ಪಾದರಿಯೊಳ್ ॥ ॥೫೫॥

ಪಲತೆಱದ ಕನಕಭಾಜನ ।
ಕುಲದಿಂ ಜಲಜಲಿಪ ಭಾಜನಾಂಗಮಹೀಜ ॥
ಕ್ಕಲಗಣಸೆನೆ ಕೊಸಗೆಸೆದುದು ।
ಮಲರ್ಗಲರ್ದುಳ್ಳಲರ್ದ ಮಿಸುಪ ಪೊಸತಲರ್ಗಳಿಂ ॥ ॥೫೬॥

ಬಳಸಿದ ಲತೆಗಳ್ ಶಾಖಾ ।
ವಳಿಯೊಂದಱೊಳೊಂದು ತಾಗೆ ಸುರಿವರಲಿಂ ಕ ॥
ಣ್ಗೊಳಿಸಿದುವು ಚೈತ್ರದೊಳ್ ಗೊಂ ।
ದಳದಿಂ ಕೋಲ್ವೊಯ್ದು ನರ್ತಿಪಬಳಾವಳಿವ್ಯೊಲ್ ॥ ॥೫೭॥

ಮತ್ತಮಾಮಹಾವನಪ್ರದೇಶದೊಳ್
ವಿರಹಿಜನತರುಣಹರಿಣೋ ।
ತ್ಕರನಿರ್ದಾರಣಸಮುತ್ಕರಕಾತ್ತಪರಿ ॥
ಸ್ಫುರದತನುಚಮೂರುನಟಾಂ ।
ಕುರಂಗಳಿನಿಸಿದುವು ಮಿಸುಪ ಮುತ್ತದ ಮುಗುಳ್ಗಳ್ ॥ ॥೫೮॥

ಬಂದ ಬಸಂತಂಗೆಂದರ ।
ವಿಂದಿನಿ ಸೇಸಿಕ್ಕಲೆಂದು ಸೆಗಪಿದ ಹಸ್ತ ॥

ಕ್ಕೇಂ ಬೊರೆವಂದುವ್ರೊ ಜಲಲವ ।
ದಿಂದೆಸೆವುನ್ನಾಳವಿಕಚಕೋಕನದಂಗಳ ॥ ॥೫೯॥

ಕಿಱುಮಡುಗೊಂಡ ಬಂಡಿನೊಳಗೀಸಿ ಪೊದಲ್ದಿಡಸರ್ದ ಕುತ್ತಸ ।
ಳ್ಗಱುವದೊಳೆಯ್ದಿ ಮೆಯ್ಗರೆದು ಕೇಸರದೊಳ್ ನಲವಿಂ ಪೊರಳ್ದು ನೀ ॥
ಳ್ದಱಗಿದ ಕೀಚೆಸಳ್ವಱಿಯನೊಯ್ಯನೆ ಜಾಱಿ ಪರಾಗಪುಂಜದೊಳ್ ।
ಪಱಿವಡಿಸಿತ್ತು ಭೃಂಗಶಿಶು ನೀರಜದೊಳ್ ನಿಜಪಾಂಸುಕೇಳಿಯುಂ ॥೬೦॥

ಮೃದುಕನಕಪದ್ಮಕೋಶಾ ।
ಗ್ರದೊಳಿಱಗಿದ ತುಂಬಿಯೆಸೆದುದಂಗಜರಾಜಾ ॥
ಸ್ಪದಳನಕಪದ್ಮಕೋಶಾ ।
ಗ್ರದ ಲಾಕ್ಷಾಮುದ್ರೆಯೆನೆ ಸರೋಜಾಕರದೊಳ್ ॥ ॥೬೧॥

ಮತ್ತಂ ಮದನನ ವೆದನದೊಡನೆಸಕಳಳತರುವ ಮಕುಳಮುಲರೆಯುಂ, ರತಿಯ ಸೊಬಗಿನೊಡನೆ ಪುನ್ನಾಗಮುಜ್ಜೃಂಭಿಸೆಯುಂ, ಕಾಮುಕಜನದ ಜೀವಿತಾಶೆಯೊಡನೆ ಜಾತಿ ವಿತತಮಾಗೆಯುಂ, ಪಥಿಕನಿಕರಹೃದಯದೊಡನೆ ತಳಿತರ್ ತಮಾಲಲತೆ ಕಟ್ಟಿಲಿಸೆಯುಂ, ವಿಯೋಗಿಗಳ ಮೊಗಂಗಳೊಡನೆ ಬಿಳ್ದಿಂಗಳೆಳವಿಗಳದ ಬೆಳ್ಪನವಳಂಬಿಸೆಯುಂ, ಕರಣಗಣದ ತೇಜಃಪ್ರಸರದೊಡನೆ ಬಿಸಿಲ ಬಿಸುಪಸವಳವಾಗೆಯುಂ, ಮೃದುಳಹಿಂದೋಳರಾಗರವದೊಡನೆ ಲೀಲಾಂದೋಳಚೀತ್ಕಾರರವವೊಗೆಯೆಯುಂ, ಜಿತೇಂದ್ರಿಯತೆಗೆ ಬಱುದೆ ಜಱಿಚುವೆಗ್ಗರ ಜಡಾಶಯಂಗಳೊಡನೆ ಜಡಾಶಯಂಗಳೊಳಗೆಱೆಯಾಗೆಯುಂ, ಕಾದಲರ ಪುರುಡಿನೆಸಕದೊಡನೆ ಇರುಳ ಬಳಗಂ ಬಡಬಡಾಗೆಯುಂ, ಇಂತತಿಮನೋಹರವಾದ ವಸಂತಸಮಯದೊಳ್

ಪುದಿಯೆ ಕವಿಲ್ತ ಕೇಸರದ ದೂಸವುಶೋಕೆಯ ವೀಣೆಯಂ ಪ್ರಿಯಾ ।
ಳದ ಗುಡಿ ನಾಗಚಂಪಕದ ಚಂಪೆಯುಮಾಮ್ರದ ಕೊಂಬೆಯುಂ ತಮಾ ॥
ಳದ ಪರಿವೆತ್ತ ಜೋಳಪರಿ ತಳ್ತದಿರ್ಮೊತ್ತಿಯ ಕುಪ್ಪವೊಪ್ಪಿ ತೋ ।
ಱುದುವು ಮನೋಜರಾಜಶಿಬಿರಂಗಳನೆಂಬಿನೆಗಂ ವನಾಳಿಗಳ್ ॥೬೨॥

ಪೊಸಮುಕರಂದಮೆಂಬ ಬೆಮರುಣ್ಮಿರೆ ತೆಂಬೆಲರೆಂಬ ಸುಯ್ಯೆಲರ್ ।
ಪಸರಿಸೆ ಗುಚ್ಛಮೆಂಬ ಮೊಲೆ ಚಪ್ಪಲದೊಂಪಿ ಸಿತಾಬ್ಜಮೆಂಬ ಕಣ್ ॥
ಮಿಸುಪ ಪರಾಗಮೆಂಬ ನಸುಗೆಂಪಿನೊಳೊಂದಿರೆ ನಾಡೆ ಕಣ್ಣೆ ಕೋ ।
ಳಿಸಿದಳಲಂಪಿನಿಂ ನೆರೆದು ನಂದನಲಕ್ಷ್ಮಿ ವಸಂತಕಾಂತನೊಳ್ ॥ ॥೬೩॥

ಪರಿಕಿಸೆ ಕಂದರದ್ವಯಸಮಾಯ್ತು ವಿಭಾಸುರಕೇಸರಾಳಿಯೊಳ ।
ಕರತರಣೀಯಮಾಯ್ತು ಪೊಸಮುಲ್ಲಿಗೆಯೊಳ್ ಸಲೆ ನಾವ್ಯಮಾಯ್ತು ಚಂ॥
ಚತುರಮುಚಕುಂದಸಂಚಯದೊಳಂತವಕಾರ್ಯಮದಾಯ್ತು ಮುಕ್ತಿಯಂ ।
ಕರುಹದೊಳಾವಗಂ ಮಧುಪಮಾಳಿಗೆ ಮಾಧವದೊಳ್ ಮಧೂತ್ಕರಂ॥೬೪॥

ಅದಲ್ಲದೆಯುಂ

ಓರೆವರಿದೆಸ್ರದು ಗಗನಾಂ ।
ಭೋರಾಶಿಯ ನಾವೆ ತೆಂಕಣೆಲರೊದಿದುದೆಂ ॥
ಬೀರಾವಮೊಡವೆ ನಡೆದುದು ।
ಸೌರಂ ರಥಮುತ್ತರಾಯಣಕ್ರಮದಿಂದಂ ॥೬೫॥

ಪೋದೊಲವೆಯ್ದಿ ಮತ್ತೆ ಪೊಸತಾದುವು ನೀರಸವಾಗಿ ಗತ್ತೆಯಂ ।
ಬೋದ ಮನಂ ಕೊನತ್ತುರ್ವಳಿವಾತುಗಳಿಂ ಮುಳಿದಿರ್ದ ನಲ್ಲರೊಂ ॥
ದಾದರನಂಗಕೇಳಿಗನುರೂಪಮೆನಿಪ್ಪ ವಿಳಾಸದೊಳ್ ಜನ ।
ಕ್ಕಾದರವಾದುದಾದಮೆ ಪಸಾದದೆ ಬಂದ ಬಸಂತಮಾಸದೊಳ್ ॥

ತತ್ಸಮಯದೊಳ್

ಕೃತವೃಕ್ಷಾರೋಹಣಪ್ರಸ್ತುತನನವಿರಳಾನಂಗವಾರಿಪ್ಲವಾಂತ ।
ರ್ಗತನಂ ಸಂಭೋಗಲೀಲಾಕುಳಕರುಣನಿನಾದಾಸ್ಯನಂ ವಲ್ಲಭಾನು ॥
ಸ್ಮೃತಮಿಸ್ಪಷ್ಟಾಪರಿಷ್ವಕ್ತಿಕರವಿಧೃತಸ್ತ್ರೀತ್ವನಂ ಬಿಟ್ಟು ಗವ್ಯೋ ।
ದ್ಧತನಂ ಕೈವ್ರೋಗದೆಚ್ಚಂ ಪಡಲಿಡೆ ಬಹಳಾಕ್ಷೇಪದಿಂದಿಕ್ಷುಚಾಪಂ ॥೬೭॥

ಪಗೆಯಂ ಸಂಪಗೆಯೀಶನೊಳ್ ನೆರಪಳಾದತ್ತೊಳ್ಪನೋರಂತೆ ಮ ।
ಲ್ಲಿಗೆ ನಮ್ಮಲ್ಲಿಗೆ ಸಾರ್ಚಲೆಯ್ದಿದುದು ಮತ್ತಂ ಮುಪ್ಪಿಯಾಚಿತ್ತವ್ಯ ॥
ತ್ತಿಗೆ ಕಂಪಾದರಿಪಂತು ಪಾದರಿಯೊಳಾದತ್ತಣ್ಣ ನಿನ್ನೊಂದು ಪೊ ।
ದ್ದುಗೆಯಿಂದೆಂದುವಸಂತನೊಳ್ ನುಡಿದುತಾನೇಂ ಕಂತುಮುಯ್ಯಾಂತನೋ

ಅಂತು ಕಾಮಕಾಮುದುಳ್ಳೆಯಪ್ಪ ಸುರಭಿಯಂದದೆ ಬಂದ ಸುರಭಿಸಮಯದ ಶ್ರೀಯ ಬರವಂ ವನಮಹತ್ತರನ ಬಿನ್ನಪದಿನಚಿತಸೇನಚಕ್ರವರ್ತಿಯು ಱಿದು ಕೌತುಕಾಯಮಾನಮಾನಸಂ ಮನೋವಲ್ಲಭೆಗೆ ಶಶಿಪ್ರಭಾಮಹಾದೇವಿಗಱಿಪಲೆಂದು ಕರುಮಾಡದಿಂದಿಱಿದು ರಾಣಿವಾಸಕ್ಕೆ ಬಂದು ಪಜ್ಜಳಿಪ ಪಳುಕಿನ ಸಜ್ಜೆವನೆಯ ಮುಂದಣೆತ್ತಿದ ಮುತ್ತಿನ ಮಂಣವಿಗೆಯ ನಡುವೆ ಸುತ್ತಿದ ಚಿತ್ರಾವಳಿಯ ತೆರೆಯ ಸೀರೆಯಂ ಪ್ರಶೀಕಾರನೆತ್ತಬೊಡನೊಳಪುಗ್ಗುವಾಗಳತ್ಯಂತಸಾಧ್ವಸಾಕುಳಿತಚಿತ್ತೆಯಿತ್ತ ಬಿಜಯಂಗೆಯ್ಯೆಮೆನುತ್ತುಂ—

ತೆರೆಗಳಡಂಗಿದಿಂಗಡಲಿನಂದೊಗೆತಂದು ಮರಲ್ದರಲ್ಬ ತಾ ।
ವರೆಯರಲಲ್ಲಿ ನಿಂದ ಸಿರಿಯೊಳ್ ದೊರೆಯಾಗಿ ದುಕೂಲಚೀಲದಿಂ ॥
ತೆರಳದೆ ಕೂಡಿ ಹಬ್ಬವಡಿಸಿರ್ದ ಸಮುಜ್ಜ್ವಳಶುಭ್ರಯಿಂದ ಮೆ ।
ಲ್ದಿದಸಿ ಬಱಿಕ್ಕಳಂಕರಿಸಿದಳ್ ನವಹಾಟಕಪೀಠಿಕಾಗ್ರಮಂ ॥ ॥೬೯॥

ಆಗಳರಸನುಂ ತಳ್ಪತಳವನೊಲ್ಲದೆ ವಲ್ಲಭೋಪವಿಷ್ಟವಿಷ್ಟರಾರ್ಧಮನೌಂಕಿ ಸೋಂಕಿ ಕುಳ್ಳಿರ್ದು

ಸುಳಿಗುರುಳಂ ನೊಸಲೊಳ್ ಮೆ ।
ಯ್ವಳಿಯಿಂ ತಿರ್ದುತ್ತುವೋಲೆಯಂ ಪೆಗಲೊಳ್ ತಂ ॥
ದಿಳಿಪುತ್ತುಮಾರವಂ ಕು ।
ಪ್ಪಳಿಸುತ್ತುಂ ತನ್ನ ತಳದೊಳಂದಿಂತೆಂದಂ ॥ ॥೭೦॥

ಲಲಿತತಮಾಳಕಾಳಕೆ ಕನ್ವದ್ದಿಜಪಜ್ಕ್ತಿ ನಿಕಾಮಕೋಮಳಾಂ ।
ಗೆಲತೆಯೆಕೋಕಕಾಂತಕಳಿಕಾಧರೆ ಮಂಡಿತಕಾದಳೋರುಮಂ ॥
ಡಲೆ ಸುಪುನರ್ನವೋದಯವಿಳಾಸೆ ಬರಲ್ ವನಲಕ್ಷ್ಮಿ ಪೇಳ್ದಿಪಳ್ ।
ಕಲಪಿಕನಾದದಿಂದೆ ನಿಜಲೀಲೆಯನೀಕ್ಷಿಸಲೆಂದು ದೇವಿಯಂ ॥ ॥೭೧॥

ಅದುಕಾರಣದಿಂ

ಮರಗಳಿಡೆಯೆಡೆಯ ನೆಲನಂ ।
ಚರಣಾಂಶುವಿನಿಂ ತಳಿಚರ್ದು ಬಯಲಂ ನಿಜಕೇ ॥
ಕರರುಚಿಯಿನಲಚರ್ಕೆಟ್ಟಿಂ ।
ದರಸಿ ಬನಕ್ಕಂ ಬಱಿಕ್ಕೆ ಸಿರಿ ಪರಿಪೂರ್ಣಂ ॥ ॥೭೨॥

ದೇವಿ ನಿಜಪದನಖೇಂದುಕ ।
ರಾವಳಿಯಿಂ ತೀವಿ ವನಸರೋವರಮಂ ರಾ ।
ಜೀವಕ್ಕೆತ್ತು ವಿಕಾಸಮು ।
ನಾಮಗಮಿಂ ನೆರೆಪು ಪಗೆಯನೀನಗೆಮೊಗದಿಂ ॥ ॥೭೩॥

ಮತ್ತಂ

ದಯೆಗೆಯ್ ಪದಪಾತಮನಸು ॥
ಗೆಯೊಳಂತದು ತಳಗ್ರ್ಗುಮತ್ತಿನಿಪ್ಪನಿತಲ್ತಾ ॥
ರಯೆ ಮತ್ತಮಲಗ್ರ್ಗುಮಿತ್ತೆ ।
ನ್ನಯ ಚಿತ್ತಂ ಸಫಲಮಕ್ಕುಮುತ್ತ ಬಸಂತಂ ॥ ॥೭೪॥

ಭಂಗಮನುಂತುಂ ತಳೆದ ಲ ।
ತಾಂಗಮನಿಂ ನಿನ್ನ ಕೋಮಳಾಂಗದ ಚೆ ॥
ಲ್ವಿಂ ಗೆಲ್ದೆಯಿದ್ದಿಸು ಪೊಸತಂ ।
ಭಂಗಮನೇಟ್ಟಿಂದನಂಗಜಂಗಮಲತೆ ಗೇ ॥ ॥೭೫॥

ಅದಲ್ಲದೆಯುಂ,

ಅಂಬಕೆಗೆ ಮಂದಯಾನನುದವಿಂದೊಳಸೋಗೆನ್ ಮದೋತ್ಕಕೋಕಿಳೆ ।
ಕ್ಕಂ ಚಿರಮಕ್ಕೆ ಕಾಕಳಿಯ ಹೂಂಕೃತಿ ಭೃಂಗಚಯಕ್ಕೆ ಮೇಚಕೋ ॥
ದಂಚಿತದರ್ಪಮುಬ್ಬರಿಸದಿರ್ಕಿನಿಸಂ ಮೆಱೆ ಬಂದು ನೀಂ ಬನ ।
ಕ್ಕಂ ಚಪಳಾಕ್ಷಿ ನಿನ್ನ ನಡೆಯಂ ನುಡಿಯಂ ಮುಡಿಯಂ ವಿನೋದದಿಂ ॥

ಎಂದು ಕರ್ಣಾಮೃತಸ್ಯಂದಿಗಳಪ್ಪ ನುಡಿಗಳಂ ನಲೇಂದ್ರಂ ನುಡಿಯ ಲೊಡಮಾಕೆಯುಮುಚಿತಪರಿಹಾಸವಚನ ಕೇಕರಾಳೋಕನಾಂಕಪಾಳೀಲೀ ಲಾಧ್ವನುಭಾವಂಗಳನೊಡಂಬಡಂ ಪ್ರಕಟಂಮಾಡೆ

ಪಡೆದವತಂಸಮಂ ಕಿವಿಗೆ ನುಣ್ಣುಡಿಯಿಂ ದರಹಾಸರಶ್ಮಿಯಿಂ ।
ಪಡೆದೆನಸುಂ ನಿಜಾಕೃತಿಗೆ ಚಂದನದಣ್ಪನಪಾಂಗರೋಚಿಯಿಂ ॥
ಪಡೆದಳಕುಂತಳಕ್ಕಲರ ಬಾಸಿಗಮಂ ತನಗೆಂದು ಸೋಂಕಿನಿಂ ।
ಪಡೆದನುಡಲ್ ನ್ಪಪಂ ಸತಿಯ ಮೆಯ್ವಿಳಗೆಂಬ ನವೀನಚೀನಮಂ ॥

ಅನಂತರಂ ವಸಂತನನಕೇಳೀಪ್ರಸ್ಥಾನತೂರ್ಯಂಗಳಂ ಪೊಯ್ಸಿದಾಗಳ್

ಶ್ಯಾಮತೆಯಿಂ ವಿರೂಪತೆಯಿನಾರಯಿ ನಿನ್ನ ಸಖಂ ಪುನೋಜನಂ ।
ತಾಮುದನಂಗನಾದುದು ವಸಂತನ ಪೊರ್ದುಗೆಯಿಂದಮುತ್ಸವೋ ।
ದ್ದಾಮತೆಯಂತದಂ ನಿನಗೆ ಸೂಚಿಸಲಾಂ ಪರಿತಂದೆನೆಂಬವೊಲ್ ।
ವ್ಯೋಮಮನೆಯ್ದಿದತ್ತು ಪಟಹಸ್ಫುಟಪಾಟರವಂ ಸಮುತ್ಕಟಂ ॥೭೯॥

ಅನಂತರಮರಮನೆಯ ಬಾಗಿಲೊಳ್ ಪಣ್ಣಿ ಬಂದಿರ್ದ ವಿಜಯಪರ್ವತ ಗಜಮಂ ನರೇಂದ್ರಚೂಡಾಮಣಿಯಿಂದ್ರಾಣಿ ಪೆರಸು ಐರಾವತಮನೇಱುವ ಮರೇಂದ್ರನಂತೆ ಮಾದೇವಿಪೆರಸೇಱಿ

ಆನೆಯ ಮೇಲೆ ಮೇಳವಿಪ ಮುತ್ತಿನ ಸತ್ತಿಗೆಯಿತ್ತ ತಣ್ಣೆಲ್ ।
ಪೀನಕುಚಾಗ್ರದಿಂದಡರೆ ಸೋಂಕುವ ನಲ್ಲಳ ಸೋಂಕಲಂಪಿನು ।
ದ್ವಾನಿಯನೀಯೆ ಸಂತಸದದೊಂದದಗುಂತಿಯೆ ರೂಪುಗೊಂಡುದೆಂ ।
ಬೀನುಡಿಗಿರ್ಕೆಯಾಗೆ ನಡೆದಂ ವನಕೇಳಿಗೆ ರಾಜಕುಂಜರಂ ॥ ॥೭೯॥

ಅಂತು ಪುರಮಂ ಪೊಱಮಟ್ಟು

ಬನದ ಬಿನದಕ್ಕೆ ತಕ್ಕನಿ ।
ತನೆ ಪರಿಜನಮಂ ಬರಲ್ಕೆವೇಱೆನೆಯುಂ ತ ॥
ಜ್ಞನಮಾದುದನೂನಮದೇ ।
ನನನ್ಯಸಾಮಾನ್ಯಮೋ ನರೇಂದ್ರನ ವಿಭವಂ ॥ ೮೦॥

ಎಂಬಿನಮಳುಂಬಮಾಗಿ ಶಿಬಿಕೆಗಳ ತಿಂತಿಣಿಯೊಳ್ ಬರ್ಪಂತಃಪುರಕಾಂತಾಸಂತಾನಮುಂ, ಅಂದಣದ ಗೊಂದಣದೊಳ್ ಬರ್ಪ ವಾರನಾರೀನಿಕರಮುಂ, ಪೇರಾನೆಯ ಪಿಂಡುಗಳೊಳ್ ಬರ್ಪ ಚತುರಪ್ರಧಾನಸ್ವಾಮಿಯುಂ, ಪಿಡಿಯ ಗಡಣಂಗಳೊಳ್ ಬರ್ಪ ಸೇವಕಮಹಿಳಾಮಂಡಳಮುಂ, ಕುದುರೆಯ ಕದಂಬದೊಳ್ ಬರ್ಪ ಪಾರ್ಥಿವಪುತ್ರಸಾರ್ಥಮುಂ, ಪೇಸರಿಯ ನೆರಪಿಗಳೊಳ್ ಬರ್ಪ ದೇಶಿಕಾಂತಪವಿತತಿಯುಂ, ಪಾದಮಾರ್ಗದಿಂ ಪೊಗ್ಗರವಾಗಿ ಬರ್ಪ ಖಡ್ಗವ್ಯಗ್ರಹಸ್ತೋಗ್ರಭಟಪೇಟಕಮುಂ, ಮತ್ತವರ್ಗವರ್ಗೆ ಪಿಡಿದ ಮೇಘಡಂಬರದ ಕುಳ್ಳಿರಿಯ ಪಲ್ಲತೊಂಗಲ ಚಾಕಸತ್ತಿಗೆಯ ಕೊಡೆಯ ಗಡಣಂಗಳುಂ, ಮುಂದೆ ಸರಿವ ಪಡೆವಳಗಟ್ಟಿಯ ಪೀಲಿಯ

ಕರಗೆದುಪ್ಪರಗುಡಿಯೊಜ್ಜ್ವರದ ರಾಜಸಿಂಧದ ಸಂದಣಿಯುಮೆಸೆಯೆ ಕುಸುಮ
ಮಾಕರೋದ್ಯಾನಕ್ಕೆ ನಡೆಯೆ ನಡೆಯೆ

ದೆಸೆಯಂ ಛತ್ರಪ್ರಸರದೆ ।
ಮುಸುಂಕಿ ಕಟ್ಟಿಲೆಯನೊಮ್ಮೆ ಮಣಿಭೂಷಣರು ॥
ಗ್ವಿಸರದೆ ಮುಸುಂಕಿ ಸಂಚೆಯ ।
ಬಿಸಿಲಂ ಮತೆಳ್ತಿಮ್ಮೆ ಮಾಡಿದುದು ತದ್ಯಾನಂ ॥ ॥ ೪೦ ॥

ಅಂತುದ್ಯಾನಪರಿಸರಕ್ಕೆ ಬರ್ಪಾಗಳ್

ಅಮರ್ದ್ನೆಳವಾವಿನೊಳ್ ದಾ ।
ಡಿಮದೊಳ್ ಮಲ್ಲಿಗೆಯೊಳಿರ್ದ ಕೋಗಿಲೆ ಗಿಳಿ ತುಂ ॥
ಬಿ ಮಹೀಶನ ಕಿವಿಗಾಗಳ್ ।
ಕ್ರಮದಿತ್ತುವು ತಾರವಮ್ಯವೆಂದ್ರಸ್ವರದಿಂ ॥ ॥ ೪೧ ॥

ಅದಲ್ಲದೆಯುಂ,

ಇನಿತಿದಿರ್ಂದು ತಂದಲರ್ಗಳೋಳಿಯನೊಯ್ಯನೆ ಕಾಸ್ತೆಗೊಟ್ಟು ತ
ದ್ವನದ ಕೊಳಂಗಳೊಳ್ದೆರೆಯಿನುಣ್ಮುವ ತಣ್ಬನಿಯಿಂದೆ ಪೊಯ್ದುಮಿ ॥
ತ್ತನುಗತಮತ್ತಭೃಂಗರುತದಿಂ ಪ್ರಿಯಮಂ ನುಡಿದಿಂತು ಬಂದ ಬಿ ।
ರ್ದಿನನೆನೆ ಮನ್ನಿಸಿತ್ತು ನೃಪನಂ ತ್ರಿಗುಣೋದ್ಧರಣಂ ಸಮೀರಣಂ ॥

ಅನಂತರಂ ಬಂಧುರಸಿಂಧುರಸ್ಕಂಧದಿನಿಳಿದು ವನಪ್ರತೋಳಿಕಾದ್ವಾರ
ಮಂ ಪೊಕ್ಕು ವನಜಳಕ್ರೀಡೋಪಯೋಗ್ಯೈಕತಿಪಯಪರಿವಾರಸಮೇತ
ನುಂ,ವಾರನಾರೀಪರಿಜನಪರೀತನುಂ, ವಾಮಪಾರ್ಶ್ವಗತಮಹಾದೇವೀಕ
ಟಾಕ್ಷೈಕಲಕ್ಷ್ಯನುಂ, ನರ್ಮಸಚಿವಪ್ರಕೋಷ್ಠನಿವೇಶಿತಸ್ವಾಪಾಣಿಪ
ಲ್ಲವನುಂ, ವಿಲಿಪ್ತಯಕ್ಷಕರ್ದಮಾಮೋದಾಕೃಷ್ಟವನಕುಸುಮಾಲೋಲ
ಲೋಲಂಬಕದಂಬನುಂ, ವೀಜ್ಯಮಾನಧವಳಚಮರರುಹಪವನವಿನಿವಾರಿತಾ
ನೇಕತರುಪ್ರಸೂನವಿಸರತ್ವರಾಗನುಂ, ಮಹಾಪ್ರತೀಹಾರಕೋದ್ಘುಷ್ಟ
ಮಾಣಸರಣಿಧರಣೀಕನುಂ, ಹೇಳಾವಲೋಕನಾಮೃತನಿಷಿಚ್ಯಮಾನತರುಲ
ತಾಪ್ರತಾನನುಂ, ವನಮಹತ್ತರೇಶ್ವರಸ್ವರನುಮಾಗಿ ಬರ್ಪಾಗಳ್

ನೃಪನ ಮನಕ್ಕೆಸೆದುದು ಪನ ।
ಸಪಚ್ಚ್ಯ ಸಾಲಕುಜರಾಜಿಯಾವ್ರಾವಳಿ ಮ ॥
ತ್ತಪರಿಮಿತಂ ವಿಚಕಿಳವೀ ।
ಧಿ ಪಾಟಿಳೀಪಾಳಿ ಮಾಧವೀಮಾಳಿ ಕರಂ ॥ ॥೮೪॥

ಅಲ್ಲಿ

ಎಳೆವಲಸು ನಿಹಸ್ಕಂಧಾ ।
ವಳಂಬಿಯೆನಿಸಿದರ್ ತೋರಮಾಗ್ಗೊನೆಯಿಂ ಕ ॥
ಸ್ಗೊಳಿಸಿತ್ತು ಕಾಮಧಾತ್ರೀ ।
ತಳಪಾಲಕನಡಪವಳನ ದೊರೆಯೆನೆ ಪಿರಿದುಂ ॥ ॥೮೫॥

ಎಂದು ಮದನವೀಣೆಯೆಂಬರಸಿಯ ಪರಿಚಾರಕಿ ನುಡಿದೊಡದಂ ನೋಡುತ್ತುಂ ನಡೆಯೆ ನರ್ಮಸಚಿವಂ ನಂದನನೆಂಬನಿಂತೆಂದಂ:—

ಪಿಡಿ ಪಸೆ ತೋಳ್ ತುದಿ ಮೊಳೆ ಮೊಳೆ ।
ಮಿಡಿಯೆನೆ ತೋಳ್ತುತ್ತು ವಿರಹಿಕೌರವಬಲಮಂ ॥
ಬಡಿವಲ್ಲಿ ಕಾಮಭೀಮಂ ।
ಪಿಡಿದ ಗದಾದಂಡಮೆನಿಸಿ ಮಾಮರನಿದಿರೊಳ್ ॥ ॥೮೬॥

ಅಂತವರಿರ್ವರ ನುಡಿಗಮರ್ಥದ್ರಷ್ಟೃತ್ವಕ್ಕಮನುರೂಪಮಾದುವೆನುತ್ತುಂ ಬರ್ಪನ್ನೆಗಂ

ತನಿವಣ್ಣಿಂ ಮಾರುತಾಂದೋಳದಿನೊಸವರ್ ಪೊಸರಸಾಸಾರವಂ ದೂರದಿಂ ಭೋಂ । ಕನೆ ಕಂಡ್ಯೆತಂದು ಕಂಠಂ ನಿಮಿರ್ದಮರ್ದಿರೆ ಪಕ್ಷದ್ವಯಂ ಜೋಲೆ ಕಣ್ ಮೀ ॥ ಲನದೊಳ್ ಸಮ್ಮೋಳನಂಬೆತ್ತಿರೆ ತಣಿವಿನೆಗಂ ಪೀದರ್ ಮೆಯ್ವೆಚಿರ್ ಕೀಚ್ಗೊಂ । ಬಿನೊಳಡ್ಡಂಮೆಟ್ಟ ತೆಟ್ಟುಂದೆಱೆಯೆಗಳಪಿದತ್ತಾವ್ರುದೊಳ್ ತಾವ್ರುತುಂಡಂ ॥ ॥೮೭॥

ಆಗಳಾಗಿಳಿಯ ಗಿಳಿಗೆಡಪಕ್ಕೆ ಮುಗುಳ್ನಗೆನಗುತ್ತು ಮೀಪದಾನತಾನನೆಯಾದೋಪಳಂ ಭೂಪಾಳಂ ಚಾಳಿಸಿ ವಾಮಕೋಮಳಸೂಚೀಹಸ್ತದಿಂ ತೋಱಿ

ಪ್ರಣವೋತ್ಕೃಶ್ರುತಿಮಧುರ ।
ಕ್ಷಣಿತಂ ದ್ವಿಜಮುಖ್ಯವೈತ್ತಿ ಕೃಷ್ಣರುಚಿತ್ವಂ ॥
ಪೆಣೆದಿರೆ ಪುರೋಹಿತಬ್ರಾ ।
ಹ್ಮಣನೆನಿಸಿದುದತನುನೃಪತಿಗೀಪರಪುಷ್ಟಂ ॥ ॥೮೮॥

ಮತ್ತಂ

ಪ್ರಿಯೆ ನಿನಗೆ ಪುಟ್ಟಿದೀಕಳ ।
ಕೆಯೆ ತಾನೆನಗಂತಱಿಂದೆ ಮೂವಂ ನೀಂ ನಿ ॥
ಶ್ಚಯುವೆಂಬ ತೆಱದೆ ಮೂವಂ ।
ನಯದಿಂ ಸಾರ್ದಳಿಯನಳಿಯನೆನ್ನದರೊಳಲೇ ॥ ॥೮೯॥

ಎನುತ್ತುಂ ನಡೆಯೆ ಮುಂದೊಂದೆಡೆಯೊಳ್

ಇಡಿದಡರೆ ಪೂತು ಮೊದಲಿಂ ।
ಮಡಲ್ತು ಸುತ್ತಿಱಿದ ಮಲ್ಲಿಗೆಯ ಪೊಂಪಱಿರೆ ಪಾ ॥
ಲ್ಗಡಲ ಸೂಱ ಬಳಸಿದಂತಿರೆ ।
ನಡುವಿರ್ದುದು ಪಾರಿಜಾತದಂದದೆ ಚೂತಂ ॥ ॥೯೦॥

ಇದು ಧಾತ್ರೀಪಾರಿಜಾತಂ ಸಕಲಸುಕವಿವೃಂದಪ್ರಣೂತಂ ವಸಂತಾ ।
ಭ್ಯುದಯಪ್ರೀತಂ ಮನೋಭೂನೃಪವಿಜಯರಥಖ್ಯಾತಸೂತಂ ವನಶ್ರೀ ॥
ಸುದತೀಪ್ರೇಮಾತ್ಮಜಾತಂ ಫಲತರುವರವೃಂದಾರಕತ್ವಾಭ್ಯುಪೇತಂ ।
ಮದಭೃಂಗೀಗೀತಗೀತಂ ಕೃತವಿರಹಿವಿಘಾತಂ ದಶೀ ಬಾಲಚೂತಂ ॥ ॥೯೦॥

ಮತ್ತಂ

ತಳಿರ್ವೊಱಿಱ್ವೊತ್ತುದಲ್ಲದಲರಂ ಸಲೆ ತಾಳ್ದುವ ಸೈಪ್ರವೆತ್ತುದೇ ।
ಮಳೆಯಜವೆಯ್ದೆ ಕೆಂದಳಿರ್ಗಳಿಂದಲರಿಂ ಬಳಸಿರ್ದುದಲ್ಲದೇ ॥
ಫಳಯಿಸಲಾರ್ತುದೇ ಅಸುಕೆ ಚೆಂದಳಿರಿಂದಲರಿಂ ಪೊದಟ್ಟಿ ಪ ।
ಣ್ಗಳಿನಳವಟ್ಟ ಚೂತಮಿದು ಭೂತಳಕಲ್ಪಕುಜಾತಮಲ್ಲವೇ ॥ ॥೯೧॥

ಎಂದು ಉದಾತ್ತವಚನಂಗಳಂ ಕಾವ್ಯನಾಕರ್ಣಿಧಾರಂ ನುಡಿದು ಮಾ ಣಲೊಡಮರಸಿ ಮದನವೀಣೆಯ ಕಿವಿಯಂ ಪಳ್ಳುವುದುಮಾಕೆ ದೇವಿಯೆಂ ಡನಳೆಂದಿಂತೆಂದಳ್ :—

ತನುಸೋಂಕಿ ಸೋಂಕಿನೊಳ್ ಬಂ ॥
ದು ನಿಂದ ಸಹಕಾರಕಾಂತನೊಳ್ ಸೊಗೆಯಿಸಿದ ॥
ತ್ತನಸುಂ ನಿಜಸುಮನೋವಿಕ ।
ಸನದಿಂ ಪ್ರಿಯಮಲ್ಲಿಕಾಲತಾವೇಷ್ಟಿತಕಂ ॥ ॥೯೩॥

ಎಂಬುದುಮರಸನದರ್ಕೆ ಮೆಚ್ಚಿ ನಂದನಂ ತಾನುಮೊಸೆಯಿಸುವ ಬಗೆಯಿಂ ಪೊಸತುಮಾತಂ ಪೊಸೆಯಿಸೆ ಕೆಲದೊಳಿಂದು ಮಾಕಂದಾನೋಕಹಮಂ ತೋಱಿ

ನೆಱೆಯೆ ಪಣೆಮುಟ್ಟಿ ಕೈವಂ ।
ಬೆಱಗಿದುದಿದು ದೇವ ನಿನಗೆ ಹೃದಯಂ ತಾನೆ ॥
ತ್ತಱಿದುದೆನಷೇಡ ಧಾರಿಣಿ ।
ಯೆಱೆಯಂಗೆಱಗುವುದು ಚೋದ್ಯಮೋ ಧರಣೀಜಂ ॥ ॥೯೪॥

ಆಗಳರಸನದರ್ಕೆ ಪೆರಕೆಯೆಂದು ಮೆಚ್ಚುಗೊಟ್ಟು ನಡೆವುದುಂ ಮುಂಥೊಂದು ಪಲ್ಲವಿತಕಂಕಲ್ಲವಂ ನೋಡಿ

ಅತಿರಾಗತೆಯಿಂ ಸ್ನಿಗ್ಧಾಹದ ।
ಹತಿಗಂ ದಳವೇಱಿಯುಳರ್ದ ಕೋಕಂ ಫಳಹೀ ॥
ನತಿಗೆಡೆಯಾಡುದು ಈಡೆಯೊಳ್ ।
ಮತಿಗೆಟ್ಟಂಗೀಗುಮತ್ಯಯಂ ವ್ಯತ್ಯಯಮಂ ॥ ॥೯೫॥

ಎಂದಲ್ಲಿಂ ತಳರ್ದು ವನಶ್ರೀವಿಳಾಸನಂ ಭಾವಿಸುತ್ತುಂ ಬಂದೆ ಮುಂದೊಂದೆಡೆಯ ತೆಱಪಿನೊಳ್ ನಳನಳಿಪ ಕೇಸರದ ಸಸಿಯೊಳ್ ಕ್ಷಣಂಗಲಿಸಿ ಬೆಳೆದ ದವನದ ಕಣ್ಗೆವಂದ ವನದ ನಡುವೆ ದಿಟ್ಟಿಗೆವರೆ ಕಟ್ಟಿ, ನೇರ್ವಟ್ಟಿ ಬಾಳೆವೇರ ಕೇರ್ಗಳೊಳಂ, ಅಂದಂಬೆತ್ತಿ ಬಂದುಗೆಯೆಸಳಂ ಕತ್ತರಿಸಿ ಪತ್ತಿಸಿದ ಚಿತ್ರಪತ್ರಂಗಳಳುಂಬುಮಾದ ಪೊಂಬಾಳೆಯ ಕಂಬಂಗಳೊಳಂ, ಅರ್ಲ್ದ ತಾವರೆಯ ತಣ್ಣೆಲೆಯ ಪಲಗೆಗಟ್ಟಿನೋವರಿಗಳೊಳಗಣ ಕಪ್ಪುರವಳಕಿಸಳೆವಟ್ಟ ಜಗಲಿಗಳ ಮೇಲೆ ಪಸರಿಸಿದ ಕುಸುಮದೆಸಳ ಪಸಿಗಳೊಳಂ, ಅಮರೆ ತಾವರೆಯ ನೊಲಿಂ ಕೀಲಿಸಿದೆಳವಾಳೆಯ ಸುಱಿಯೆಲೆಯ ತಳತಳಿಪ

ಮೇಲ್ಕಟ್ಟಿನೊಳಂ, ಅದಜೊಳಲ್ಲಲ್ಲಿಗೊಂದೊಂದುಕೆಂದಾವರೆಯರಲ್ಗಳಂ ಕೊಟ್ಟು ಕೊಸಗಿನೆಸಳಂ ಬಿಗಿಗಟ್ಟಿ ಪೊಸಯಿಸೆ ಮನಕ್ಕೆ ಪೆದೆಪನೀವ ಪದಂಗಳೊಳಂ, ಎಳಬೆಂಗಿನೆಳೆಯೆಲೆಯನಮರ್ಕೆವಡೆಯೆ ಪೆಣೆದು ಸಂಪಗೆಯ ಮುಗುಳನಗೆಗಳಂ ತೆತ್ತಿಸಿ ಬಿತ್ತರಂಬಡೆದ ಜವಳಿವಡಿಗಳೊಳಂ, ಅಸುಗೆಯ ಮಿಸುಪ ಪೊಸದಳರಿಂದೆಸೆಯೆ ಪೊದೆಯಿಸಿ ವಾಸಂತಿಯ ಮುಗುಳ ಸೂಸಕದಿಂ ದೀಸೆವಡೆದ ವಿಳಾಸವಾಸಲಕ್ಷ್ಮಿಯ ಚುಂಬನಿಂತೆ ಚಂಚುರಮಾದ ಚಂಚುಲೋವೆಗಳೊಳಂ, ಓರನ್ನಮಾದ ಚಂದನದ ತಳರ ವ್ಯಂದನಮಾಲೆಯೊಳಂ, ಇವ್ಮಾವಿನೆಳದಳಿಸಿ ಪೊಳೆವ ಪೂಗುಡಿಯ ಗುಡಿಯೊಳಂ, ಅವಿರಳಮಾಗಿ ತಳದ ಕುಂಕುಮಜಳದ ಚಳೆಯದೊಳಂ, ಆವೆಬಗೆಗಂ ಮಾಸರವಾದ ನಾಗಕೇಸರದ ರಜದ ರಂಗವಲ್ಲಿಯೊಳಂ, ಭಂಗಿವೆತ್ತು ಕಂತುರಾಜನ ಮಂತ್ರಶಾಲೆಯುಂ, ಭೈತ್ಯದ ನೃತ್ಯಭವನಮುಂ, ಕಂಪಿನ ಕಾರಾಗಾರಮುಂ, ಚೆಲ್ವಿನ ಕುಲಗೃಹಮುಮಿರ್ಪಂತಿರ್ದ ವಸಂತಗೃಹಮಂ ಪೊಕ್ಕು ನಡುವಣೊಳಗಾಂಗಿನ ಬಾಳ್ಗಂಬದೊಳ್ ತೊಡರ್ಚಿದ ಲತೆಯ ತೊಡರ ತೊಗುಂಮುಂಚದೊಳ್ ಶಶಿಪ್ರಭಾಮಹಾದೇವಿಯುಂ ತಾನುಂ ಕುಳ್ಳಿರ್ದು

ತಾಳಮನಿತ್ತು ಸಮ್ಮನಿಸದೊತ್ತುವ ಪಂಚಮಮನುಣ್ಬರಕ್ಕಣಂ ।
ಮೇಳತೆಯಿಲ್ಲ ಬೀಣೆಯ ಸರಂ ಬಿಡದಿಲ್ಲಿಯೆನಿಪ್ಪ ಠಾಯಿಯಿಂ ॥
ದಾಣತಿಮಾಡಿ ಸೂಳಗದ ದೀಸಿಯ ಗೀತಮನಂದು ಪಾಡುವಿಂ ।
ಪಾಣನನುರ್ವೆರಾಧಿಪತಿ ಲೀಲೆಯಿನೆಕ್ಕಲಗಾಣನೊರ್ವನಂ ॥ ೯೬॥

ಕೇಳುತ್ತುಮಿರ್ಪಂ. ಅನ್ನೆಗಮಿತ್ತ ಕುಸುಮಾಪಚಯದೋಹಳಹೃದ್ಯಯಮಾಗಿ ॥.

ಕಳಹಂಸೀಯಾನನಮುತ್ಕಂಪಿತಕುಚಭರಸಂಯ್ಯಾನಮಾಕೇಕರತ್ವಿ ।
ತ್ವಳತೋದಯ್ಯನಂ ಗಳದ್ವಿಶ್ಲಥಕಬರಿಭರಾಂತಪ್ರಸೂನಂ ಚಳದ್ದೋ ॥
ರ್ವಳಿಯೋದ್ಯದ್ಧ್ವನಮುತ್ಸಾರಿತಸರಣಿಲತಾನ್ಯೋನ್ಯಸಂಧಾನಮಂತಾ ।
ಗಳೆ ವಾರಸ್ತ್ರೀಪ್ರತಾನಂ ತಳೆದರ್ದಳಿವಧೂಗಾನಪತ್ತಾವಧಾನಂ ॥ ೯೭॥

ಅಂತು

ತಳರ್ದ್ದ*ಸುಕೆಯಿನಸುಕೆಗೆ ವಿಚ ।
ಕಿಳದಿಂ ವಿಚಕಿಳಕೆ ಮಾವಿನಿಂ ಮಾವಿಂಗೊ ॥
ಳ್ದಳಿಗರ್ಗಳಗೆರ್ಗ* ಫಲಕೆ ಪರಿದ ।
ತ್ತಿಳವೆಂಡಿರ ನೆರವಿ ನಲಿದು ತಾಳುಂ ಬಳಿಯಂ ॥ ॥೯೮॥

ಅಳಿಗೆ ಕುರುಳ್ ತಳಿಗರ್ಗೆ* ತಳಂ ।
ಕಳಿಕೆಗೆ ಬೆರೆಲಲಗರ್ಗೆ* ಕಣ್ಣಲರ್ ದೊರೆಯೆನೆ ಕೋ ॥
ಮಳಲತೆಗಳೊಳಂ ಸಲೆ ಕೋ ।
ಮಳೆಯರ್ ತಡವಾಯ್ದುರೆಯ್ದು ಪೂಗೊಯ್ವೆಡೆಯೊಳ್ ॥ ॥೯೯॥

ಆಗಳ್ ಮುತ್ತೊರ್ವಳ್
ತೆಗೆದು ನನೆಗೊಯ್ದು ಬಿಸೆ ಮೋ ।
ಲೊಗೆವೆಳೆದಳಗೊಂಬು* ಪೋಲ್ತುದಾಪೂವಿನ ಸೂ ॥
ಱೆಗೆ ತೊವಲಂ ಪಿಡಿದು ಮುದಾ ।
ಳಗಳುಲಿಯಿಂ ಪುಯ್ಯಲಿಡುವಶೋಕೆಯ ಕೈಯಂ ॥ ॥೧೦೦॥

ತತ್ಸಮೀಪದೊಳ್

ನಿಳ್ಕುವರಲ್ಗೊಳಲ್ತಿವಱೊಳಪ್ಪದೆನಿಪ್ಪ ಮರಲ್ದ ಪೂಮರಂ ।
ಗಳ್ಕಲವಿರ್ದೊಡಂ ಕೆಲದೊಳೊಲ್ಲದೆ ನಲ್ಲಳನುಚ್ಚಶಾಖೆಗಾ ॥
ಗಳ್ಕರದುಯ್ದುನೊರ್ವನಲರ್ವಿಲ್ಲನ ಬಾಳ್ಕ್ರಿದಲಾದ ತೋಳ್ಕ್ರಿದಲ್ ।
ತುಳ್ಕುವ ನುಣ್ಪನೀಕ್ಷಿಪಳಿಪಂ ಬಗೆಯೊಳ್ ಮಿಗೆ ಕಾದು ಕಾದಲಂ ॥೧೦೧॥

ಅದಲ್ಲದೆಯುಮೊಂದೊಂದೆಡೆಯೊಳ್ ಮಧುಕರೀಗೀತಶಾಲೆಯಂತಿರ್ದ್ದ
ಮಾವಿನ ಮಾಲಿಕೆಯೊಳಲಗೊಯ್ವಲ್ಲಿ

ನಿನ್ನಯ ಸುಱಿಗುರುಳೆಲ್ಲವಿ ।
ಬೆನ್ನಯ ಮುಱಿಯೆಂದು ಬಂದು ತಲೆವಿಡಿದವ್ರೊಲಾ ॥
ಚೆನ್ನೆಯ ತಲೆವಿಡಿದಿರ್ದುದು ।
ತಾಂ ನಱುಗೆಂಪಿಂಗೆ ತುಂಬಿ ದುಱುದುಂಬಿ ಕರಂ ॥ ॥೧೦೨॥

ದಾಳಂಬದ ಬಿಟ್ಟಿಂ ಕೊ ।
ಳ್ವಾಳೋಚದೆ ನೋಟ್ಪ ಧವಳಲೋಚನೆಯು ಕಟಾ ॥
ಕ್ಷಾಳೋಕಂ ಮುತ್ತಿನ ರುಂ ।
ಪಾಳಂ ಕವಿದಂತೆ ಬಳಸಿದುದು ತತ್ಕುಚಮಂ ॥ ॥೧೦೩॥

ಪೊಳೆವೆಲೆಮುಱಿಯೊಳ್ ತಲೆಯಂ ।
ಗಿಳ ತೋಱುತ್ತಿರ್ದೊಡದಱ ಚಂಚೂಪುಟಮಂ ॥
ಕಳಕೆಯೆಗೆತ್ತು ಕೊಳಲ್ಕೊ ।
ರ್ವಳಬಲೆ ಕೈನೀಡಿ ನಗಿಸಿದಳ್ ಕೆಳದಿಯರಂ ॥ ॥೧೦೪॥

ನುಣ್ಬುಟಿಲೊಳಗದಿ*ರ್ಮುತ್ತಿ ಪ ।
ವಣ್ಬಡೆ ಕಟ್ಟಿಲಿಸಿ ಬೆಳೆದು ಬಳಸಿರ್ದೊಡದಂ ॥
ತಣ್ಬೆಳಗೆನೀಯೆ ಬೆಳತಿಗೆ ।
ಗಣ್ಬೆಳಗೊಳಪೊಕ್ಕು ಚಪಳೆ ಕಳಕೆಯನಾಯ್ದಳ್ ॥ ॥೧೦೫॥

ಮತ್ತೊಂದೆಡೆಯೊಳ್

ಮಿಳವೆ*ಳಮಾವಿನೊಳ್ದಳಿಗರ್*ಳೊಳ್ ನಿಮಿರ್ದ*ಲ್ಲಿ ಬೃಹತ್ಪಯೋಧರಂ ।
ಗಳ ಕಡುಬಿಣ್ಪು ಬಳ್ಕಸೆ ಲತಾಂಗವನಾಪದದಲ್ಲಿ ತೂಳ್ದಿ ಕೈ ॥
ಯಳವಿಗೆಗೊಂಬು ತೆಂಬೆಲರ ತೀಟದಿನೊಯ್ಯನೆ ಸಾರೆ ನಾರಿಯೇಂ ।
ತಳೆದಳೊ ತನ್ನ ಪೆರ್ಮೊಲೆಗವಾಅಲಗರ್*ಂ ಮುಳಿಸಂ ಪ್ರಸಾದಮಂ ॥

ಅವಿಳಾಸವತಿಯಲ್ಲದೆಯುಂ ಮತ್ತೊರ್ವಳ್

ಮೃದುತಳಕಾಂತಿಯಿಂ ಮಿಳವ*ರ್ ಪೂಗುಡಿ ಕೆಂದಳಿರ್ದೊ*ಂಗಲಂತೆ ತೋ
ಱಿದೊಡದನೊಲ್ಲದೊಳ್ದಳಿಗರ್* ನಿಳ್ಕಿದೊಡಂತಲಗೊ*ಂಚಲಂತೆ ತೋ ॥
ಱಿದೊಡೆ ನಖಾಂಶುವಿಂದದುಮನೊಲ್ಲದೆ ಮಾಮರನಲ್ಲಿದೊಂದು ಮಾ ।
ಯದ ಮರನೆಂದು ಸಾರ್ದಳತಿಮುಗ್ಧೆ ಕುಚಾಂತರಮಂ ವನಾಂತದೊಳ್ ॥

ತಳಿರ್ದೊ*ಂಗಲನುಡಿದೆಳಮಿಡಿ ।
ಗೆಳೆನಱಿಸುವ ಪದದೊಳಲ್ಲಿ ಮೆಯ್ಗರೆದಿರ್ದ ॥
ವ್ವಳಿಸೆ ಕಪಿ ಬೆದರಿ ಕೆಳೆಯನ ।
ನೆಳೆಯಳ್ ಬಂದಪ್ಪಿ ಬಿಡದೆ ನಡುಗುತ್ತಿರ್ದಳ್ ॥ ॥೧೦೮॥

ಎತ್ತಣನಳಿವಮಾಳಿಕೆ ನೆಲ ।
ಸಿತ್ತಿವಜೊಳೆನಿಪ್ಪ ತೆಱದೆ ಪೂಗೊಯ್ವೊಡೆಯೊಳ್ ॥
ಮುತ್ತಿದುದು ಕುವಲಯಾಕ್ಷಿಯ ।
ಬಿತ್ತರದ ಕಟಾಕ್ಷಮಾಳಿ ಮಿಗೆ ಸಂಪಗೆಯಂ ॥ ॥೧೦೯॥

ಮತ್ತೊ ಮಳಲಗೊಳ್ಳಲ್ ನಡೆವಲ್ಲಿ
ಮುಡಿಗಿಕ್ಕಿದೆನಾಂ ನಿನ್ನಯ ।
ಬೆಡಂಗುವಡೆದೆಸೆನ ಕರ್ಪನೆಂದು ತಮಾಳಂ ॥
ಮುಡಿಗಿಕ್ಕಿದವೋಲೆಲರಿಂ ।
ದುಡಿದಲಗುಂಡಿ ಬಿಟ್ಟಿದೊಂದವಳ ಮುನ್ನಡಿಯೊಳ್ ॥ ॥೧೧೦॥

ಆಗಳ್

ಬಿದೆದೊಡೆ ದುಷ್ಟನಂತಸುಗೆ ಪಲ್ಲವಿಸಿತ್ತು ಮುಗುಳ್ತು ದಾಸ್ಯೆಪ ।
ಪ್ಪದ ಮಧುವಿಂದೆ ಸುಯ್ಯೆಲಗೆ ತಾಂ ಬಕುಳಂ ಶಠನಂತರಲ್ದುವ ॥
ಪ್ಪಿದೊಡೆ ಲತಾಂಗಿಯರ್ ಕುರವಕಂ ನೆರೆ ದಕ್ಷಿಣನಂತೆ ನೋಡೆ ಮಾ ।
ಡಿದುದಸುಕೂಲನಂತೆ ತಿಳಕಂ ಬಹಳೋತ್ಕಳಿಕಾವಿಳಾಸವಂ ॥೧೧೧॥

ಅಂತು ಕಾಂತಾಪ್ರಚಯಂ ಲತಾಂತಾಪಚಯವುಂ ತೀರ್ಚಿ

ಗಿಳಿಗೆ ಕುದುರ್ಂಕಲ್ಲಿ ಮುಱಿದುಂ ಫಲಮೊಂದು ಪಿಕಕ್ಕೆ ಚುಂಬಿಸಲ್ ।
ಕಳಿಕೆಯುದೊಂದು ತುಂಬಿಗೆ ಮುಸುಂಬಿಬಿಪಲ್ಕರಲೊಂದು ತಳ್ತುಗೊಂ ॥
ದಳಿಸದಿನಿತ್ತು ವೃಕ್ಷಲತಿಕಾಕ್ಷಸುಪಜಾಳದೊಳೆಂದು ನೋಟ್ಟೊಡೇ ।
ನಳವಿಗಳುಂಬವಾಯ್ತೊ ಪೊಸದೇಸೆಯನಾಂತ ವಿಳಾಸಿನೀಜನಂ ॥ ೧೧೨॥

ತದನಂತರಂ

ಕನಕಮಣಿಭೂಷಣಂ ಕ ।
ಣ್ಗಿನಿಪಕ್ಕುಮುಲರ್ವ್ವಚ್ಚದಂದದಿಂ ಲೋಚನಕಂ ॥
ಮನಕಂ ಮೆಯ್ಗಂ ಸುಯ್ಗಂ ।
ಜನುಂಗುವಳಿಯಿಂದೆ ಕಿವಿಗವಿಂಗುಮೆ ಸವಿಯಂ ॥ ॥೧೧೩॥

ಎಂದು ತನ್ನ ತನುಲತೆಗಳಂ ಕಿಸಲಯಾಭರಣಂಗಳಿನಲಂಕರಿಪಲಂಪ ನಾಂತು

ನನೆಯಲರೆಂಬಿವಂ ಬನದ ದೇವಿಯದಾವಗೆಮಾಯಿಸ್ದು ಕೊಯ್ದು ನ ।
ಚ್ಚಿನ ಪದವಿಲ್ಗಮಗ್ಗದ ಸರಲ್ಗಮವಂ ಪಡೆದೀವೆನೆಂದು ಚಂ ।
ದನಗೃಹನುಂ ಲತಾನಿಳಯಮುಂ ಕದಳೀಕುಳಮುಂ ಪೊಳಲ್ದು ಕಾ ।
ಮನನಲಸಲ್ಕೆ ಪೊಕ್ಕಪುದೊ ಪೇಳೆನೆ ಪೊಕ್ಕುದು ಕಾಮಿನೀಜನಂ ॥೧೧೮॥

ಅಂತು ಪೊಕ್ಕು ಶತಪತ್ರಸೂತ್ರಂಗಳೊಳಂ ರಂಭಾವಲ್ಕಲಶಲ್ಕಂಗಳೊಳಂ ಶೀರ್ಣನಾಳಕೇರಪರ್ಣಂಗಳೊಳಂ ಅಮುಕೆಗಯುಂ ಪೋಲ್ಕೆಯುಂ ಒಲ್ವುಂ ಚೆಲ್ವುಮಾಗೆ ಗೊಜ್ಜಗೆಯ ಮುಗುಳ ಗೆಜ್ಜೆಯುಮುಂ, ಬಂದುಗೆಯಂದುಗೆಯುಮುಂ, ನಂದಿವಟ್ಟದ ಪೊಯವಟ್ಟಮುಮುಂ, ಕಾಂಚವಾರದ ಕಾಂಚಿಯುಮುಂ, ಪಸುಮಿರ್ಡಿಯ ಪಚ್ಚೆಸಾರಮುಮುಂ, ಚಂಪಕದ ಚಂಪಕಮಾಲೆಯುಮುಂ, ಸುರಯಿಯ ಶುದ್ಧಸರಮುಮುಂ, ವನಮಾಳಕೆಯ ಲಂಬಿಮಾಳಕೆಯುಮುಂ, ಕಂಕೆಲ್ಲಿಯ ಕಂಕಣಮುಮುಂ, ವಿಜಕಿಳದ ಚಳಕಿಗೆಯುಮುಂ, ಕುವಳಯದ ಕರವಳಯಮುಮುಂ, ದಾಡಿಮೀದಳದಸ್ಯೆಗಳೆಮುಮುಂ, ಕೇಸರದ ಕೇಯೂರಮುಮುಂ, ಕರ್ಣಿಕಾರದ ಕರ್ಣಪೂರಮುಮುಂ, ಅದಿನರ್ತ್ತಿಯ ಮುಗುಳ ಮುಗುಳುಮುಂ, ತಮಾಳಪತ್ರದ ತಮಾಳಪತ್ರಮುಮುಂ, ಹೊನ್ನೆಯ ಚಿನ್ನಪೂವುಮುಂ, ತಿಳಕದ ಹಂಸತಿಳಕಮುಮುಂ, ಕುರವಕದ ಕುತ್ತುಂಗಜಿಯುಮುಂ, ಮಾಂದಳಿರ ಪೊಂದಳಿರುಮುಂ, ವಿವಿಧಕಿಸಲಯದ ಕಿಸಲಯಮುಮುಂ, ಮನೋಹರಮೆನೆ ಸಮಿದು ತಮತಮಗೆ ಪಸದನಂಗೊಂಡು

ವಿವಿಧಪ್ರವಾಳಫಳಕುಸು ।
ಮವಿಭೂಷಣಗಣಮನಾಂತು ಕಾಂತಾವಳಿ ಕಂ ॥
ತುವ ಜಂಗಮಕಲ್ಪಲತಾ ।
ನಿವಹದವೊಲ್ ಬಂದುದೋಲಗಕ್ಕವನಿಪನಾ ॥ ॥೧೧೫॥

ತತ್ಸಮಯದೊಳ್

ಕುಸುಮವಿಭೂಷಣಂಗಳ ಭರಕ್ಕಿನಿತಳ್ಕಿ ಬಳಲ್ದುದೀಗಳೀ ।
ಬಿಸಸುಕುಮಾರವಾರವನಿತಾಜನಮೆಂದು ಧರಾಧಿಪಂಗೆ ಸೂ ॥

ಚಿಸುವವೊಲೊಂದೆರಚ್ಚೆಮರ ಬಿಂದುಗಳಾಂತುವು ಪೊಣ್ಮಿ ಕಾಂತಿಯಂ ।
ಮಿಸುಪ ಕವಂಪಿನೊಳ್ ತಿನಳಿಯೊಳ್ ಕುಚಮೂಲದೊಳಗ್ರಭಾಗದೊಳ್ ॥

ಅನಂತರಮುರಸನಾಕೆಯರ ವನವಿಹರಣಶ್ರಮಮಂ ವನಜವನವಿಹರಣ ಶ್ರಮದಿಂ ಕಳೆಯಲೆಂದುಮಲ್ಲಿಂ ಪೊಱಮಟ್ಟು ನಡೆವಲ್ಲಿ

ಸುಱಿವ ಮರಾಳಯಾನೆಯರಪಾಂಗಮರೀಚಿಚಯಂ ತ್ರಿವರ್ಣಮಂ।
ಗೆಱಯಿಸೆ ಪೆರ್ಮೆ ಮುಂ ನೆರೆಯೆ ಬೀತವೊಲಿರ್ದ ಲತಾಳಿ ಮತ್ತೆ ಬೆಂ ॥
ಬಱಿಯೊಳೆ ಪಲ್ಲವಪ್ರಸವಭೃಂಗಕುಳಂಗಳನಾಂತು ಸೊಂಪು ಪೊಂ ।
ಪ್ರಱಿಯೆನಿಪಂತೆ ತೋಱುದುದು ಪುಟ್ಟೆ ಮಹೀಶನ ಕಣ್ಗೆ ಕೌತುಕಂ ॥

ಅದಲ್ಲದೆಯುಂ

ಸೊಗೆಯಿಪ ರಾಜಹಂಸಮಿಥುನಂ ಬೆರಸಬ್ಜಲತಾವಿತಾನದೊ ।
ಳ್ಪಗಲದೆ ಪಾಳಿವಂದಪುದೊ ತದ್ವನಪದ್ಮಿನಿಗೆಂಬ ರೇಖೆ ಕೈ ॥
ಮಿಗೆ ವೃದುಯಾನದಿಂ ಪತಿಯುಮಾಸತಿಯುಂ ಬರೆ ಬಂದುದಾವೃತಾ ।
ಳಗಣಮಲಂಕೃತಪ್ರಗುಣಕೌಸುಮಲಕ್ಷಿತ ವಿಳಾಸನೀಜನಂ ॥೧೧೯॥

ಅಂತೈದೆ ವರ್ಣಗಳ್

ಉರರೀಕೃತಪುಳನನಿತಂ ।
ಬರವ್ಯಾಮಾಪರಿಗತಾಳಕುಳಗಂಭೀರ ॥
ಸ್ಫುರದಾವರ್ತಂ ಮೆಱೆದುದು ।
ಸರಸಿ ವನಶ್ರೀಗೆ ಮಧ್ಯದೊಳ್ ನಾಭಿಯವೊಲ್ ॥ ॥೧೧೯॥

ಮತ್ತಂ ನಿಜಪರಿಸರದೊಳುಪಸರೋವರಂಗಳಂತಿರ್ದ ರಜತರತ್ನಕನಕ ಘಟಿತಸುಪಾಕಟಾಹಪಟಳದೊಳಮಲ್ಲಲ್ಲಿ ಬೇಱೆಬೇಱೆ ತೀವಿದ ಕಾಶ್ಮೀರಕರ್ಪೂರಕಸ್ತೂರಿಕಾಮಳೆಯಜಜಳಂಗಳೊಳಂ ಬಹುಪ್ರಕಾರಭಂಗುರ ಶೃಂಗಜಳಯಂತ್ರೋದಿಜಳಕೇಳೀವಿಳಾಸೋಪಯೋಗ್ಯಾತ್ಯುಚ್ಚ ಪರಿಚ್ಛದಂಗಳೊಳಂ ಅಬಳಾಜನಸುಖಾವರೋಹಣಾರೋಹಣಸಮರ್ಥಮಣಿಮಯ ಸೋಪಾನಪಚ್ಛ್ರೇಣಿಗಳೊಳಂ ಕಮಳಕುಮುದಕುವಳಯಕಲ್ಹಾರಶೋಭಿ

ತನಾಭಿದ್ವಯಸಪಯಸದೊಳಂ ಆಬಿವಟ್ಟು ದಿಟ್ಟಗೊಲವನೋಲಗಿಪ
ಲೀಲಾಸರೋವರಮಂ ರಾಜಹಂಸಂ ಲೀಲಾವತೀಜನಸಮೇತಂ ಪುಗೆ

ಆಸರಸಿಯರಸನಂ ಹಂ ।
ಸೀಸೂರಸರಸಿತದಿಂದೆ ಪರಸಿ ತರಂಗಂ॥
ಸೂಸುವ ಶೀಕರವಿಸರದೆ ।
ಸೇಸಿಕ್ಕುವ ತೆಱದಿನೆಸೆದುದಸದಳಮುದಱೊಳ್ ॥ ॥೧೬೦॥

ದೊರೆಕೊಳ್ಗಂ ಕುಶಲವದಿಂ ।
ಪಿರಿದುಂ ಕುಶಲವದಿನೆಂದು ತದ್ವನಜವನ ॥
ಸ್ಥಿರಕುರವಕಾಕುರವದಿಂ ।
ಸಿರಿ ಪೇಟ್ವಿಂತಾಯ್ತು ಯೌವತಕ್ಕವತರಿಪಂ ॥ ॥೧೬೧॥

ಭ್ರಮರಚಿತಮನವರತವಿ ।
ಭ್ರಮರಚಿತಪ್ಲವನನಾರಸಂ ಮದಲೀಲಾ ॥
ಕ್ರಮಸಕಳಹಂಸಮುಧುಚ ।
ಕ್ರಮಸಕಳಹಂಸರೋವರಂ ಸೊಗಯಿಸುಗುಂ ॥ ॥೧೬೨॥

ಈಕೆಯರ ಪಾದಪಾತದಿ ।
ನೇಕೇಂದ್ರಿಯಮುಸುಕೆ ತಳಿರ್ವ್ರ*ದಱಿದೆ ತಳಿರ್ದ*ತ್ತ ॥
ಲ್ಲೀಕಲ್ಲ್ದೆ*ಯನೆ ಸೊಗಯಿಸಿ ।
ತಾಕಳಿತಪದಾಂಶು ಹರಿತಮಣಿಸೋಪಾನಂ ॥ ॥೧೬೩॥

ಅದಲ್ಲದೆಯುಂ

ಕೊಳದೊಳ್ ತಂತಮ್ಮ ನೆಱ ।
ಲ್ಗಳೊಳಬಳೆಯರುತ್ತುಚಾಂತರಿತಮಂ ರೋಮಾ ॥
ವಳಿಯಂ ವಳಿಯಂ ನಾಭೀ ।
ಸ್ಥಳಿಯಂ ನೆರೆ ಕಣ್ಣಿರಂದು ಮುಂ ಕಾಣದುದಂ ॥ ॥೧೬೪॥

ಆಗಳ್

ಜಳಕೇಳಿಗೆ ಪುಗುತುಂ ನಿಱಿ ।
ಗೆಳನೋಸರಿಸುವ ಕಟಿಪ್ರಮಾಣಜಳಂ ಪೂ ॥
ಗೊಳನೆಂದಱಿದುಂ ಮೆಲ್ಲನೆ ।
ತಳರ್ದಡಿಯಿಡುವಬಲೆಯರ್ ಕರಂ ಸೊಗೆಯಿಸುವರ್ ॥ ॥೧೦೫॥

ಅಂತು ಪುಗಲೊಡಂ

ತೆರೆಗೈಯಿಂ ತುಡುಕುತ್ತುಮೊಳ್ಳೊಡೆಯನಾದಂ ನೀವಿಯಂ ನೀವಿ ಬಿ ।
ತ್ತರಿಸುತ್ತುಂ ವಳಯಂ ಪಳಂಚಲೆಯುತುಂ ವಕ್ಷೋಜಮಂ ನಿಚ್ಚಿ ನೇ ॥
ವರಿಸುತ್ತುಂ ನೆಲೆವೆಚ್ಚಿ ಕಾಮುಕನವೊಲ್ ನೀರೇಱುತಿರ್ತ್ತು ತ ।
ತ್ತರುಣೀಸಂಕುಳವೆಲ್ಲವೀಗಳೊಳಗಾಯ್ತೆಂಬಂತೆ ಪದ್ಮಾಕರಂ ॥೧೦೬॥

ಮತ್ತಂ

ಇದು ಪಿರಿದುಂ ವಸಂತಸಖಯೌವತರತ್ನನಿಧಾನವಂತದ ।
ಲ್ಲಿದು ಕುಸುಮಾಸ್ತ್ರಶಸ್ತ್ರಚಯಕೋಶಮಹೀಗೃಹವಂತದಲ್ತುಮ ॥
ತ್ತಿದು ರತಿನಾಥಕಲ್ಪಲತಿಕಾಪ್ರಕರೈಕಕೃತಾಳವಾಳಮೆಂ ।
ಬುದನೆನಿಸಿತ್ತು ಸಂದಣಿಸಿ ನಿಂದಬಳಾವಳಿಯಿಂದೆ ಪೂಗೊಳಂ ॥೧೦೭॥

ಕೀರದ ಹಂಸದ ಪಿಕದ ಚ ।
ಕೋರದ ಚಕ್ರಾಹ್ವದಂತೆ ಮಾಡಿದ ಗರುಡೋ ॥
ದ್ಗಾರದ ಮುತ್ತಿನ ನೀಲದ ।
ಹೀರದ ಮಾಣಿಕದ ಪೊಳೆವ ಜೇಕೊಟಿವೆಗಳಂ ॥ ॥೧೦೮॥

ತಮತಮಗೆ ತಳೆದುಕೊಂಡು ವಿವಿಧಗಂಧಜಲಂಗಳಿಂದೊಳೊರ್ವರಂ ಸಿಂಪಿಸುವಾಗಳ್

ಸುರದೀರ್ಘಿಕೆಯೊಳ್ ಕರಪು ।
ಷ್ಕರದಿಂದಭ್ರಮುವನಭ್ರಮೂಪತಿ ತಳಿವಂ ॥
ತಿರೆ ಜಳಯಂತ್ರದೆ ತಳಿದಂ ।
ಸರಸಿಯೊಳರಸಂ ಶಶಿಪ್ರಭಾವಲ್ಲಭೆಯಂ ॥ ॥೧೦೯॥

ಜಳಯಂತ್ರದಿನೊತ್ತೆ ನೃಪಂ ।
ಲಳನೆಯ ಕುಚಯುಗಳಮಧ್ಯದಿಂದಿಳಿಯಲ್ ತ ॥

ಜ್ಜ್ವಳಿಕೆ ತೆಱಪೀಯೆದಿರ್ದ ।
ತ್ತೊಳಕೊಂಡ ಪಯೋಧರಾಖ್ಯೆಯಂ ಪ್ರಕಟಿಸಪ್ಪೋಲ್ ॥ ॥೧೩೦॥

ನಾಂದಮರೆ ಪತ್ತಿದಂಬರ ।
ದಿಂಡೆಸೆವರಸಿಯ ನಿತಂಬಬಿಂಬಮನೆಬಳಾ ॥
ವೃಂದಮದೀಕ್ಷಿಸಿ ಹೃದಯದೊ ।
ಳಂಬೇಂ ಪ್ರಂಭಾವನಂ ಪ್ರದುಂಗೊಳಿಸಿದುದೋ ॥ ॥೧೩೧॥

ತತ್ಸಮಯದೊಳ್

ತರಳಾಪಾಂಗಲಸದ್ವಿಲಾಸರಸದಿಂದೋರೊರ್ಮೆ ಲೀಲಾಪ್ರತಿ ।
ಸ್ಫುರಿತಭ್ರೂಯುಗವಿಭ್ರಮೈಕರಸದಿಂದೋರೊರ್ಮೆ ಸಸ್ನೇಹಭಾ ॥
ಸುರಚಿತ್ತಪ್ರಸಭೋತ್ಥಭಾವರಸದಿಂದೋರೊರ್ಮೆ ಮಾದೇವಿ ಭೂ ।
ವರನಂ ಸಿಂಪಿಸಿದಳ್ ಸುಗಂಧರಸದಿಂದೋರೊರ್ಮೆ ತತ್ಕ್ರೀಳಯೊಳ್ ॥

ಪ್ರಮದೆಯರಂ ಮನೋಭವನೆ ಸೂಱಿಸಿದೆಚ್ಚಪನಗ್ನಿಬಾಣದಿಂ ।
ಹಿಮಕರಬಾಣದಿಂ ತಿಮಿರಬಾಣದಿನೆಂಬಿನಮಿಂಬುವೆತ್ತದೇಂ ।
ನಿಮಿರ್ದುವ್ವೊ ಲೀಲೆಯಿಂದೆ ಜಳಯಂತ್ರಮನಂದು ಮಹೀಶನೊತ್ತಿ ಕುಂ ।
ಕುಮಜಳಚಂದನೋದಕಮೃಗೋದ್ಭವವಾರಿನಿಯುಕ್ತಧಾರೆಗಳ್ ॥೧೩೩॥

ಆಗಳ್

ಕತ್ತುರಿನೀರಿಂ ಕರ್ಪೂಂ ।
ದೆತ್ತಗಂ ಕುಂಕುಮಾಂಬುವಿಂ ಕಡುಗೆಂಪಂ ॥
ಪೊತ್ತ ನಿಱಿ ಮೆಱೆಯೆ ತಳಿರಂ ।
ಸುತ್ತಿದ ವನಚರಿಯನೊರ್ವಳನುಕರಿಸಿರ್ದಳ್ ॥ ॥೧೩೪॥

ಮತ್ತಮೊರ್ವಳ್

ಘುಸೃಣರಸಂ ಮೊಲೆಯೆಡೆಯಿಂ ।
ದಸಿಯಳ ಬಾಸೆವಿಡಿದಿಱಿದು ಸೊಗಯಿಸುದುದು ತೆ ॥
ಳ್ವಸಿರ ಪೊಱಗಣ್ಗೆ ಮಿಸುಗುವ ।
ವಿಸರತ್ತಾಂಬೂಲರಾಗರಸರೇಖೆಯುಮೊಳ್ ॥ ॥೧೩೫॥

ಧರಣೀಶನ ಯಂತ್ರದ ಕ ।
ತ್ತುರಿನೀರೆಸೆವಸಿಯ ಧಾರೆಯಗ್ರದೊಳೊರ್ವಳ್ ॥
ಸ್ಮರನಸಿಯ ಧಾರೆಯಗ್ರದೊ ।
ಳಿರವಿಂತುಟು ವಿಜಯಲಕ್ಷ್ಮಿಗೆಂಬತ್ರೈಲಿರ್ದಳ್ ॥ ॥೧೩೬॥

ಆಮನೋಜವಿಜಯಲಕ್ಷ್ಮಿಯಲ್ಲದೆ
ಸರಸಿಜದ ಸಿರಿಯನಾನಪ ।
ಹರಿಸೆಂ ಮನ್ಮುಖದಿನವುವೆ ನಿಜಮೆಂದು ತನೂ ॥
ದರಿ ತಂಡಗುಂಡಿವ್ರಗುವವ್ರೊ ।
ಲರಸನ ಕೆಲದಲ್ಲಿ ಮುಬ್ಬುಗಿದಳ್ ನಲಿದೊರ್ವಳ್ ॥ ॥೧೩೭॥

ತೊಳಗುವ ಪೊನ್ನ ಜೇಕೊಟಿವಿಯಗ್ರಮನೊಂದಿನಿತಬ್ದಿ ಭಂಗಿ ಸಂ ।
ಗಳಿಸಿರೆ ಮೇಲೆ ನೀರ್ದೆಗೆವ ಕೋಮಳೆ ಕಾಮನ ಕಲ್ವಿಯಿಂದಮೇ ॥
ನಳವಡೆ ಪತ್ರಕೂಟಿನುನೆ ಸುತ್ತುವಳೋ ರತಿಯೆಂಬ ಡಂಬರಂ ।
ಬಳಿವಿನಮೊಪ್ಪಿದಳ್ ನೃಪನ ಪಕ್ಕದೊಳಾ ಜಳಕೇಳಿ ಲೀಳೆಯೊಳ್ ॥೧೩೮

ತಳತಳಿಪ ಚಂದ್ರಕಾಂತದ ।
ಜಳೆಯಂತ್ರಂ ತೀವದಿರ್ದೊಡಂ ಮುಗುಬ್ದಿಂ ನಿ ।
ರ್ಮಳಜಳಮನುಗುಬ್ದಿದೋರಂ ।
ತೆಳೆಯಳ ದರಹಸಿತವದನವಿಧುಸನ್ನಿಧಿಯಿಂ ॥ ॥೧೩೯॥

ಆದಲ್ಲದೆಯುಂ ಮತ್ತೊರ್ವಳ್ ಲೀಲಾವತಿ
ಅರೆಮುಗಿದ ಮುಗಿದರಲ್ದಂ ।
ಬುರುಹಂಗಳನೆಸೆವ ಬಿಸಲತೆಗೆ ದೊರೆಯಾದಳ್ ॥
ಮರಳೀಗವೆನಿಸಿ(?) ತೊಂದಿದ ।
ಚರಣದಿನಾನುಗಿದ ಕರದಿನಲದಾನನದಿಂ ॥ ॥೧೪೦॥

ಕೆಳದಿಯನಡಂಗಿ ಕಾಡಲ್ ।
ಮುಳುಂಕೆ ಮತ್ತೊರ್ವಳೀಂ ಪಿಸುಣ್ಬೇಳ್ಬುವ್ರೊ ಕೋ ॥
ಮುಳಿಯಿರ್ಪೆಡೆಯಂ ತತ್ಪರಿ ।
ಮುಳಕ್ಕೆ ಮೇಗೆಳಸಿ ಸುಳಿವ ಮಧುಕರನಿಕರಂ ॥ ॥೧೪೧॥

ಮತ್ತೊರ್ವಳ್

ನೆಗಪೆ ಮುಡಿಯಿಂದೆ ಮೇಗ ।
ಸ್ಗೊಗೆದ ಕನತ್ಕನಕಕ್ಷ್ಯಂಗವುದು ಪೆಡೆವೊಲ್ ದಿ ॥
ಟ್ಟಿಗೆವರೆ ಕೊಳದೊಳ್ ರಸೆಯಿಂ ।
ದೊಗೆವುರಗಿಯ ದೊರೆಗೆ ತರಳಲೋಚನೆ ಬಂದಳ್ ॥ ॥೧೪೦॥

ಅನಂತರಂ ತುಮುಲಕೇಳಿಯಿಂದೋರೊರ್ವರಂ ತುಳುಂಕಾಡುವಾಗಳ್

ಘುಸೃಣರಸಂಗಳಿಂ ಮಳಯಜಾಂಬುಗಳಿಂ ಮೃಗಭೂದಕಂಗಳಿಂ ।
ಮಿಸಿಸಿದೊಡೊರ್ಮೆಗೊರ್ಮೆ ಸೆವ ಮೂಣಿಕದಿಂ ಪೊಸ ಚಂದ್ರಕಾಂತದಿಂ ॥
ಮಿಸುಗುವ ನೀಲದಿಂ ಸಮೆದ ಪ್ರತ್ನಳಿಗಳ್ಗೆ ಸೆಯಾಗಿ ಕಾಂತೆಯರ್ ।
ಪೊಸಯಿಸಿದರ್ ಮಹೀಶನ ಮನಕ್ಕೆ ಮನೋಜಮಹೇಂದ್ರಜಾಲಮಂ ॥

ಆಗಳ್

ಚಿತ್ತರದಿಂ ಜಳಯಂತ್ರಮು ।
ನೊತ್ತುವ ಕಾಂತಾಳಿ ಪ್ರತ್ರಿಕಾಸಂತತಿಯುಂ ॥
ತೆತ್ತಮಿರೆ ಸರಸಿ ಪೋಲ್ತುದು ।
ಚಿತ್ತಜನನಿಯಂತ್ರಯಂತ್ರಧಾರಾಗೃಹನುಂ ॥ ॥೧೪೧॥

ತತ್ಸಮಯದೊಳ್

ದಂತಚ್ಛದಾತಿರಾಗತೆ ।
ಕುಂತಳಕಾಟಿಲ್ಯವೃತ್ತಿ ಪಿಂಗಿದುದಬಳಾ ॥
ಸಂತತಿಗೆ ಪಯಃಕೇಳಿಯೊ ।
ಳಂತುಂ ನಿರ್ಮಲರ ಸಂಗದಿಂದಾಗದುದೇಂ ॥ ॥೧೪೨॥

ಜಳಕೇಳಿಗೆ ಮುನಿದುವು ಕ ।
ಣ್ಗಳಿನಿಸೆ ನಸುಗೆಂಪನಾಳ್ದುವಾಕ್ರೀಡೆಯೊಳಾ ॥
ಯೆಳವೆಂಡಿರ ರಾಗಮೆ ಸಂ ।
ಗಳಸದೆ ಪೋಪಂತೆ ಪೋದುದಧರದ ರಾಗಂ ॥ ॥೧೪೩॥

ಆಸಮಯದೊಳ್ ರಾಜರತ್ನಾಪೀಡಂ ನಿರ್ವರ್ತಿತಜಳಕ್ರೀಡನಾಗಿ

ಬಲಿಯನೆ ಬರೆ ಹಂಸೀಕುಳ ।
ಮುಲಿದು ಸರೋವರಮನದಲಿ ಪ್ರಳಲೊಳ್ ನಲವಿಂ ॥
ಸುಲಿಯಲ್ಕೆ ತಳರ್ದ ಹಂಸನ ।
ನಿಲಿಪಿದನಾರಾಜಹಂಸನಬಳಾಳಿಯುತಂ ॥ ॥೧೪೩॥

ಉಲಿದು ವಧೂಸಂಕುಳವೋ ।
ಕುಲಿಯಂ ಪೊಲಿಮಟ್ಟು ಪೋಪುದುಂ ಬೆಜಗೆ ಕರಂ ॥
ಗಿಲಿದಾಗಿ ನಿಧನವೆತ್ತಿದ ।
ಕುಲಿಯಂತಿರ್ದತ್ತು ಕಣ್ಗೆ ಪೊಗೊಳನಾಗಳ್ ॥ ॥೧೪೪॥

ಅನಂತರಂ ತದಂತಿಕಪ್ರಳನಸ್ಥಳದೊಳ್ ನಿಂದು

ವಿತರತ್ಸೀತ್ಕಾರವಕ್ತ್ರಂ ಜಳನಿಬಿಡಿತವಾಸಸ್ಸ್ಫುಟೀಭೂತನಿಮ್ನೋ ।
ನ್ನತಮುದ್ಯದ್ರೋಮಹರ್ಷಸ್ತನವಿನಿಹಿತದೋಃಸ್ವಸ್ತಿಕಂಲೋಚನೋಪ್ಯ
ದ್ವಿತಯವ್ಯತ್ಯಸ್ತವರ್ಣಸ್ಥಿತಿ ತಿಮಿತಕಪೋಳಾವಳಗ್ನಾಳಕಂ ಯಾ ।
ವತಮಾದಂ ಕಣ್ಗೆ ವಂದಿರ್ದುದು ಕೃತಸಲಿಲಕ್ರೀಡಮಸ್ತ್ರೀಪ್ರಣಿಪಾತಂ ॥

ಆಗಳ್ ಭಂಡಾರಿಗರ್ ವಿವಿಧಪಟಳಕಂಗಳೊಳ್ ತಂದು ಮುಂದಿಟ್ಟಿಪಿಪ ಸುಗಂಧಾನುಲೇಪನಕುಸುಮವಸನಭೂಷಣಂಗಳನರಸಿಯುಂ ತಾನುಂ ಶೃಂಗಾರಂಗೆಯ್ದು ವಿಳಾಸಿನೀಜನಕ್ಕಮೀಯಲೊಡಮನಳ್ದರುಂ ಕೈಗೈಯೊಳ್ ಕೈಗೈದು ಬಂದಿರೆ

ಸೊಗಯಿಪ ಕಾರಕೋತ್ಕರದ ಮಧ್ಯದ ಶೀತಮರೀಚಿರೋಹಿಣೀ ॥
ಯುಗಮೆನೆ ಚೆಲ್ವುವೆತ್ತ ಲತಿಕಾಳಿಯ ಮಧ್ಯದ ಚೂತಮಲ್ಲಿಕಾ ॥
ಯುಗಮೆನೆ ಶೋಭಿಸಿರ್ದ ವನಿತಾಳಿಯ ಮಧ್ಯದೊಳಂದು ನಾಡೆಯುಂ ।
ಬಗೆಗೊಳಿಸಿತ್ತು ಮತ್ತ ಜಿತಸೇನಮಹೀಶಶಶಿಪ್ರಭಾಯುಗಂ ॥ ॥೧೪೫॥

ತದನಂತರಂ ವನಸುಹತ್ತರನಂ ಬರಿಸಿ

ಮಾವಿಂಗಿದು ಮಲ್ಲಿಗೆಗಿದು ।
ತಾವರೆಗೊಳಕಿದು ದಲೆಂದು ಪೆಸರ್ವೆಸರಿಂ ಭೂ ॥
ಸಾವಸನಕನಕಚಯಮನಿ ।
ಳಾವಲ್ಲಭನಿತ್ತನಾತನೆಡೆಯೊಳ್ಡುವಿನಂ ॥ ॥೧೪೬॥

ವನಮುಮ ಸುರಕುಜದಾರವೆ ।
ವನಜಾಕರಮುಮುವೆ ಸಿದ್ಧರಸಕೂಪಂ ತಾ ॥
ಸಿನಿಸೆ ನೃಪಂ ವನಜಳಕ್ಕೇ ।
ಳಸಿಮಿತ್ತ ದಿನರ್ಥಿಗೀಪ್ಸಿತಾರ್ಥಮನಿತ್ತಂ ॥ ॥೧೪೭॥

ಅಂತು ಸಕಲಜನಪ್ರೀಣನಪ್ರದಮಂ ವಿಶ್ರಾಣನವಿನೋದಮಂ ತೀರ್ಚಿ ಬಳಿಯಮುದ್ಯಾನದಿಂ ಪೊಱಮಟ್ಟರಸಿವೆರಸು ಕರಿವರಸ್ಕಂಧಾಧಿರೂಢನುಂ ಪರಿವಾರಪರಿವೃತನುಮಾಗಿ ನಡೆದು ಪುರಮಂ ಪೂಗುವಲ್ಲಿ

ವಿಭವಂ ಕಾಮುಂಗಿನಿತ್ತೆತ್ತಣದಿವನನುರೇಂದ್ರಂ ಸುರೇಂದ್ರಂಗಮಿಂತೀ॥
ಸುಭಗತ್ವಂ ಮತ್ತಿನಿತ್ತೆತ್ತಣದುಭಯಗುಣಕ್ಕಂ ದಿಟಕ್ಕೊರ್ವನಾವ್ರೊಂ ॥
ಪ್ರಭುವಿಂ ಪುತ್ರಾಸ್ವಮಿತಾನಲ್ಲದೆಪೆಜರೆನುತುಂನೋಡೆ ತತ್ಪ್ರೇರಲೋಕಂ ।
ವಿಭು ಸದ್ಮಂಗೊಂಡು ಬಂದಂ ಜಿನಸಮಯಸರಸ್ಸಾರಕೇಳೀಮರಾಳಂ ॥

॥ ಸದ್ಯಂ ॥

ಇದು ಪರಮಪುರುಷಾರ್ಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿತ್ರೈವಿದ್ಯಾಚಕ್ರವರ್ತಿಪದಪದ್ಮವಿಧಾನವೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಅಜಿತಸೇನಚಕ್ರಧರವಸಂತೋತ್ಸವಂ

ಸಪ್ತಮಾಶ್ವಾಸಂ.

ಶ್ರೀಪತಿಪ್ರಸನ್ನಮುಂ ಚಂ ।
ಡಾಪೀಡಮೆನಿಪ್ಪ ಮಾಡಮುಂ ಪೊಕ್ಕು ಸುಸಂ ॥
ಖ್ಯೋಪಚಯನಿರ್ದನುಚಿತ ।
ವ್ಯಾಪೃತಿಯಿಂ ಜೈನಹನಮನೋಹರಚರಿತಂ ॥ ॥೧॥

ಅಂತು ಸುಖದಿನಿರ್ದನನ್ನೆಗಂ

ಎನಗಂ ಭೂಪತಿಗಂ ಸಮಾನಮೆ ಕರವ್ಯಾಪ್ತಾಖಿಲಾಶತ್ವಮು ।
ತ್ಪನುರಕ್ತಪ್ರಕೃತಿತ್ವಮಭ್ಯುದಯವತ್ವಂ ಚಕ್ರಭೃತ್ತ್ವಂ ದಲಿಂ ॥
ದಿನನುದ್ಯಾನಪಯೋಪಿನೋದಸದೃಶತ್ವಕ್ಕಂ ಮನಂದಂದವೋಲ್ ।
ವನಮಾಲಾಕುಲತೀರಮಪ್ಪಪರಪಾರಾವಾರಮಂ ಪೊರ್ದಿದಂ ॥ ॥೨॥

ಆಗಳ್

ಪ್ರತ್ಯಗ್ರಾಧರವಾತ್ಮಾ ।
ಧಿತ್ಯಕದೊಳ್ ತಳೆದುದಸ್ತಗತಿಯಿಂ ಬಿಟ್ಟಾ ॥
ದಿತ್ಯನನೆಂದುಮುದಾರ್ಗಂ ।
ನಿತ್ಯಪರಾಧ್ಯೈಕವೃತ್ತನಕ್ಕುಂ ಗ್ರಾಹ್ಯಂ ॥

ಬಳಸಿದುದರ್ಕವಾಜಿಖುರಘಟ್ಟಿತಮಾದಪರಾದ್ರಿಯಿಂದಮು ।
ಚ್ಚಳಿಸಿದ ಧಾತುರೇಣುವೆನೆ ಚಕ್ರಯುಗಂಗಳಗಲ್ಕೆಗಿಚ್ಚಿ ಪಾಂ ॥
ಸುಳಿಯರ ರಾಗದೇಚ್ಛೆ ದೆಸೆವೆಣ್ಗಳ ರತ್ನವಿಭೂಷಣಾಂಶುವು ।
ತ್ಪಳನಿಸಿ ಕುಂಕುಮೋದಕದ ಸಿಂಪಿಣಿ ಸಂಜೆಯ ಕೆಂಪು ಲೋಕಮಂ ॥ ೪॥

ಅಸಮಯದೊಳ್ ದೂಳಿಸೆಜ್ಜರಕ್ಕುಜ್ಜಗಿಸಿ ಕಾಡಾನೆಗಳ ಕೋಡ ಮೊ ನೆಯಿನೀಡಿಱಿವ ಗಿರಿಯ ದರಿಯ ಗೈರಿಕಪರಾಗಮಂ ಸಂಧ್ಯಾರಾಗಮಿಷದಿನಾ ಗೆಸಕ್ಕೆ ಪಸರಿಸಿಯುಂ, ಪೊಗಸಿನೊಳ್ ಮೊಗಸಿ ಬೈಗುವರೆಗಂ ಬೇಟೆವೆಸದಿನ ಸುವರೆಯಾಗಿ ತಮ್ಮಿಕ್ಕೆವೆಟ್ಟುಗಳ ಗುಹಾಶಯ್ಯೆಯಿಂದುಱಿಸನ್ನೆಗೆಯ್ದು

ಪೊಱಗೆಣ ಪೊಸಱಿಗೆಗಳೊಳ್ ಪಾಸುವೆಸುಕೆದಳರಂ ಸೂಸಿ ಬೀಸಱಿಸಿದ ಪುಳಿಂದಿನಿಯರ ಮನದೊಳೊಂದಿನಿಸು ಸಂದಿಸಿಯುಂ, ತೊಱೆಯ ಪೊಱದಡಿಯ ಕರಂಜಕುಂಜದೊಳ್ ಸಂದಣಿಸಿ ನಿಂದು ರೋಮಂಥಲೀಲಾತತ್ಪರತೆಯಿಂದ ರನಿಮೀಲಿತಾಕ್ಷಂಗಳಾದ ಕಾಡೆರ್ಮೆಯ ಮೊಗದಿನುಗುವ ನೊರೆಯನುರುಳಿಗೊಂಡು ತಂದಡವಿಯ ಗಿಡುಗೆಳೊಳ್ ಗುಡಿಗಟ್ಟಿದಂತೆ ತೊಡಚಿರ್ಯುಂ, ಮೇಸ್ರಗಾಡಿಂ ಹಕ್ಕಿದಲೆಗೆ ಹರಿಯಿಡುವ ಹರಿಣೀಗಣದ ಕಡೆವಾಯೊಳರೆ ಮೆಲ್ದುಬಿದೆಳೆಗಱುಂಕೆಯೆಸಳ್ಗಳಂ ಸೆಳೆದು ತಂದಾಬಯಲೊಳ್ ಬಳ್ಳಿವಸಲೆಯಂ ಪೊಸಯಿಸಿಯುಂ, ಪೆರ್ಮರದ ನಟ್ಟೆಗೊಂಬಿನ ಕವಲ್ದಲೆಯೊಳಟ್ಟಿ ಗೂಡುಗಳೊಳ್ ಗೂಡುಗೊಂಡಿರ್ದ ಕುಱುಳಿವಱುಗಳ್ಗೆ ಕುಟುಂಕನಿಕ್ಕಿ ಕಡುಗಂದಿತನದಿಂ ಕೋಡಗಱಿಯ ತುಱುಗಲೊಳ್ ಪೊದೆಯಿಸಿ ಪದೆದಿರ್ದ ವನವಿಹಂಗಂಗಳಂ ಕೊಂಬುವೆರಸಿ ತೂಗಿ ತೂಂಕಡನೊಡಚಿರ್ಯುಂ, ನಿದ್ರಾಭಾರಮುದ್ರಿತಂಗಳುಂ ಕಿಂಚಿದಾಕುಂಚಿತಪರ್ಣಂಗಳುಮಾದುಪವನದ ತರುಲತಾಗುಲ್ಮಜಾಲಮಂ ಸೋಂಕಿ ಬಂದು ತಿಳಿಗಳೊಳಂಗಳೊಳ್ ತೆರೆಯ ನೆರವಿಯಂ ತೆರಳ್ಚಿ ಸಂಜೆಯ ಕಡುವೆಳಗಿನಿಂ ತಡಿಯೊಳ್ ಪೊಳೆವ ತನ್ನ ನೆಱಲನಱಲ್ವೋದ ನಲ್ಲಳೆಂದು ಲಲ್ಲೈಸಿ ನೋಟ್ಪಿ ಜಕ್ಕವಕ್ಕಿಗಳಾಸೆಯಂ ಬೀಸರಂಮಾಡಿಯುಂ, ಸೇಡುಗೂಡಿದಂತೆ ಪ್ರರಮಂ ಪೊಕ್ಕು ವಿಪಣಿವೀಥಿಯೊಳ್ ಮಾಲೆಗಾರ್ತಿಯರೆತ್ತಿದ ಬೆಲೆವೂವಿನ ಸರಂಗಳನಲರಂಬಂಗೆ ಪೊದೆಗೆದಱುನಂತೆ ಕೆದಱು ಪರಿಮಳಭಂಗಭಯಮನವಳ್ದಿರೊಳ್ ತಗುಳ್ಚಿ ಪಡಲಗೆಯಂ ಮಗುಳೆ ಪ್ರಗಿಯಿಸಿಯುಂ, ಲೀಲೆಯಿಂ ಸುಱಿವ ಬೊಜಂಗರ ತುಱುಂಬುದಿಂಬಿದ ಕದಂಬದೂವಿನಿಡುಕುಱೊಳ್ ಮಡಂಗಿದ ಧೂಪವರ್ತಿಯ ಕರಂಡಕಂಗಳಿಂ ಸೌರಭದ ಸಸಿಯಂತಸಿದನೆ ನೆಗೆವಗುರುವಿನ ಪೊಗೆಯನಗೆಯೊತ್ತುಗೊಂಡು ವೇಶ್ಯಾಸೌಧವೇಶ್ಮಂಗಳನರ್ಥಶ್ಯಾಮಳಂ ಮಾಡಿಯುಂ, ಮೆಲ್ಲಮೆಲ್ಲಗೆ ಸೂಚೆಗೇರಿಯುಂ ಪೊಕ್ಕು ಪೊಱಗಣಮತ್ತವಾರಣಮಂ ಮಲಂಗಿ ನಿಂದು ಯೌವನೋನ್ಮತ್ತೆಯರುಟ್ಟ ಪಟ್ಟಣಿಗೆಯ ನಿಱಿಯ ತುಱುಂಗಲಂ ನೆಗಪಿ ನುಣ್ಪೊಡೆಯ ಚೆಲ್ವಂ ನೋಡಲೆಂದು ಸಿಣಿಮಿಡಿನರ್ಪ ಕಾತರವಿಟರ ಕಣ್ಗೆ ಪಾರಣೆಯಂ ಮಾಡಿಸಿಯುಂ, ನಿಮ್ನನಾಭಿಮಂಡಳಮನೊಳಪೊಕ್ಕು ಬಳಗೆ ತೀವಿದ ಪ್ರಣಿಗತ್ತುರಿಯ ಸುಟ್ಟುಱ

ಹುನೆಸಿದನೆ ಬೇಱೊಂದು ಬಾಸೆಯೆಂಬಂತೆ ನೆಗೆಪಿ ಮೇಗೊಗೆದು ಬಟ್ಟೆ ಮೊಲೆಯಿಟ್ಟೆಡೆಯೊಳ್ ಬಟ್ಟೆಗಾಣದೆ ಬಳಸಿ ಸುಖಿದಾಡಿಯುಂ, ಸಾಯಂತನನಮಯಸಮೀರಣಂ ಸೌಖ್ಯಸಾರಸರ್ವಸ್ವಮೆನಿಸಿದಾಗಳ್

॥ ಮಾಳಿನೀವೃತ್ತ ॥

ಅರಮೆ ಮುಱಿ ಪತಂಗೆಂಗಾಗೆ ತಚ್ಛೈಲಶೃಂಗಂ ।
ವಿರಹವರವಶಾಂಗಂ ತ್ಯಕ್ತಜೀವಾನುಷಂಗಂ ॥
ಸ್ಮರವಿಶಿಖನಿಷಂಗಂ ಸಾಶ್ರುಪಾತಾಂತರಂಗಂ ।
ಪರವಿಚಳದಪಾಂಗಂ ಮ್ಲಾನಮಾಯತ್ತು ರಥಾಂಗಂ ॥ ೫॥

ಬಱೆದುಗುವ ಬಾಷ್ಪವಾರಿಯಿ ।
ನೆಱಂಕೆಗಳ್ ನಾಂದು ಮುಗುಳಿ ವಿರಹಾನಳನಿಂ ॥
ನೆಱೆ ಬಱವಾಗಿರೆ ಪಡುನೇ ।
ಸಱೊಳಿರ್ದುವಗಲ್ದು ಚಕ್ರವಾಕದ್ವಂದ್ವಂ ॥ ೬॥

ನೆಲ್ಲರಗಲ್ಕೆಯಿಲ್ಲದೆಡೆಯಸ್ತಮಯಕ್ಕೆ ದಿನಾಧಿನಾಯಕಂ ।
ಸಲ್ಲದ ಕಾಣಮಂಗಜಶರಾಹತಿ ಪೊದರ್ದ ದೇಶಮುಳ್ಕೊಡಂ ॥
ತಲ್ಲಿಯೆ ಮಾಳ್ಕೆ ಮಜ್ಜನನಮಂ ಬಿಡಿಯೆಂದು ರಥಾಂಗಕಾಂತೆ ಹೃ ।
ದ್ವಲ್ಲಭವಿಪ್ರಯುಕ್ತೆ ಬಗೆಗೆಟ್ಟು ನೆಱಲ್ದುಡು ಪದ್ಮಪತ್ರದೊಳ್ ॥ ೭॥

ತೆರೆಯ ಸೆಳೆವುಂಬತದೊಳ್ ಬಿ ।
ತ್ತರಿಸಿದ ಗಳಿತಾಬ್ಜದಳದ ನುಣ್ಪಸೆಯೊಳ್ ಟೆ ॥
ಳ್ಕೊರೆಯ ತೆರೆಸುತ್ತಿನೊಳ್ ಪ್ರಿಯೆ ।
ಗಿರದೊಳ್ಪನೆ ಬಯಸಿ ಕೋಕನಾಯ್ತು ಸಕೋಕಂ ॥ ೮॥

ಜಳಜದಳಪೀಠದೊಳ್ ನ ।
ಲ್ಲಳ ನುಣ್ಗಱಿ ಸೋಂಕೆ ಸೋಂಕಿ ಕುಳ್ಳಿರ್ದಳಿನೀ ॥
ಕಳಗೀತರವಮನಾಲಿಪ ।
ವಿಳಾಸಮಂ ನೆನೆದೊನಲ್ದುಬೊಂದು ರಥಾಂಗಂ ॥ ೯॥

ಇದು ಮತ್ಪ್ರಾಣೇಶನೆನ್ನೊಳ್ ನೆರೆದ ಪುಳಿನಮೀಯಿರ್ದುದಾಕಾಂತೆ ಮೆಲ್ದೊ । ಲ್ಲದ ಮಾರ್ಗಾಳಾರ್ಥಮೀತೋರ್ಪುದು ನಸೆಮುಳಿಸಿಂ ಕಾಡ ಲೆಂದಾಕೆ ಪೊಕ್ಕಿ ॥ ದುರ್ದಿದಾನೀರೇಜಪಣೋರ್ತ್ಕರಮೆನುತೆ ಮೊದಲ್ಗೊಂ ಡುದಂಭೋಜಸದ್ಮಾಂ । ತದೊಳುದ್ಯತ್ಕಂತುಕೇತಂ ತೊಟಿಲಲವಿರತಂ ಚಕ್ರವಾಕಂ ವರಾಕಂ ॥ ॥೧೦॥

ಆಗಳ್

ಇನನಸ್ತಪ್ರಿಯನಾತನೊಳ್ ತವದ ಪೆಚ್ಚಂ ನಿಚ್ಚಲುಂ ಗೈವ ಕೋ । ಕನಿಕಾಯಕ್ಕಿನಿತಾಯ್ತು ಕೋಕಮುವನಸ್ತಪ್ರಾಪ್ತಿಯಂ ಸಾರ್ವುದುಂ ॥
ಇನಿತಾಯ್ತುತ್ಸವಮುತ್ಪಲಕ್ಕೆನುತವಂ ನೋಡಲ್ಕೆ ತಾನಾರದ । ಬ್ಜಿನಿ ಕಣ್ಮುಚ್ಚುವ ಮಾಚ್ಕೆಯಿಂ ಮುಗಿದುದೆತ್ತಂ ಪದ್ಮಪತ್ರೋತ್ಕರಂ ॥

ಅಸನೆಸೆಮೆವೃತ್ತಿಯಂ ಭಾ ।
ವಿಸುವಂದಲ್ಪತೆಯೆ ನಾಡೆ ಲೇಸೆಂಬವೊಲು ॥
ಲ್ಲಸಿತೋತ್ಪಲಂಗಳೊಳ್ ಮುಗಿ ।
ದು ಸರೋಜಂ ನೆನೆಯಿಸಿತ್ತು ಚತುರಕ್ರಮಮಂ ॥ ॥೧೨॥

ಪೊರೆಯುದು ಜಾಡ್ಯದೊಳೆನಸುಂ ।
ಪಿರಿದು ಗುಣಂ ಸಿರಿಯುಮುಂಟು ತನಗೆನಿಪಾತಾ ॥
ವರೆಗಮರೆಯಾಯ್ತು ನಲವೆನೆ ।
ಧರೆಯೊಳ್ ಕಾಲಮನದಾರೊ ಕಳೆಯಲ್ ಬಲ್ಲರ್ ॥ ॥೧೩॥

ಪಿರಿದುಂ ಬಿದಿ ನಿಜಜನ್ಮ ।
ಕರಮೆನಿಸಿದ ಪದ್ಮಜಾತಿಗಂ ಮ್ಲಾನತೆಯಂ ॥
ದೊರೆಕೊಳಿಸಿದನೆನೆ ಮತ್ತಿತ ।
ರರೊಳಾದಂ ಮಾಲ್ಪಿ ಕೃಪೆ ಒಪುಷ್ಪಮದಲ್ತೇ ॥ ॥೧೪॥

ಇನನಸ್ತಂಗತನಾಗೆಯುತ್ಪಲಿನಿ ಪೇಟ್ಟುಂ ಲಕ್ಷ್ಮಿಯುಂಟೆಂಬುದ । ಕ್ಕೆನಗಂ ತಪ್ಪದು ರಾಜಬಾಧೆ ಬಲಿಯಂ ಲೇಸಲ್ತು ತಾನೆನ್ನ ಜೇ ॥
ವನವೆಂಬುಚ್ಚೈಗದಿಂದೆ ನಂಜುರುಳಿಯಂ ಪೋ ನುಂಗಿದಳ್ ಪೇಟಿದ । ಬ್ಜಿನಿಯೆಂಬಂತೆವೊಲಾಯ್ತು ಕುಟ್ಮಳತಕಂಜಾಕೋದರೇಂದಿಂದಿರಂ ॥೧೫॥

ಮಳನಾತ್ಮನಾಶೆಯಿಂದಿಂ ।
ತೆಳಸಿದಪಂ ಜಾರನಂಧಕಾರವೆನುತ್ತಾ ॥
ಗಳಿ ಸಂಧ್ಯೆಯಿನನ ಬಲಿಯನೆ ।
ತಳದರ್ನುರಕ್ತತೆಗೆ ಮಾಡಿದಳ್ ಸಫಲತೆಯಂ ॥ ॥೧೬॥

ಆಸವಮಯಬೊಳ್
ಭೋರೆಂದಸ್ತಾಚಲದಿಂ ।
ವಾರಿಧಿಗಿಳಿದಾಳ್ವಿ ರವಿರಥಪ್ರಧ್ವಾನ ॥
ಕ್ರೋರನ್ನವಾಗಿ ಘಟಿತಾ ।
ಭೇರೀಭೂರಿಪ್ರಣಾದನೊಗೆದತ್ತಾದಂ ॥ ॥೧೭॥

ಅನಿತುಗ್ರಂ ತನ್ನತೇಜಂ ಪಸು*ದ್ಧಮತಮಂ ತತ್ತಮಂ ಪತ್ತಿಜಿನ್ನಂ
ದಿನನಾಥಂ ಚಿತ್ರ! ಪ್ರತೀಚೀಶರಧಿಗಿಳಿದನಾವ್ರೊಂ ವಿಶಾತವ್ಯಪೆ ತಂ ॥
ಜಿನನಾಥಂ ತಪ್ಪೆ ದೇವಂ ಸಲೆ ಪೆಜಿನೆನುತುಂ ಡಂಗುರಂಬೊಯ್ದುತಿರ್ಪಂ ।
ತೆನಸುಂ ಚೆಲ್ವಾಯ್ತು ಸಂಧ್ಯಾಪ್ರಭ-ದಭವಗೇಯಾನಕಧ್ವಾನಮೆತ್ತಂ ॥

ಆಗಳ್

ಇದು ತಿಮಿರಾಪಹಾಂಜನಮುಲೂಕಕುಲಕ್ಕಿದು ಪುಂಶ್ಚಲೀರತ ।
ಕ್ಕುದಿತತಮಾಲಮಂಡಪಮಿದುತ್ಪಲಲಕ್ಷ್ಮಿಯ ಮಂಡನಕ್ಕೆ ಸು ॥
ತ್ತಿದ ನವನೀಲಕಾಂಡ ಟಮಿಂತಿದು ಚಕ್ರಯುಗಕ್ಕಗಲ್ಬಲಿ ।
ಕ್ಕಿದ ಕೆಸ*ರ್ವಕ್ಕೆಕರ್ವೆಗೆಯೆನಿಪ್ಪಿನಪಾಯ್ತು ಮಹತ್ತಮಂ ತಮಂ ॥

ಇದು ಚೋರರವೃಕ್ಷಾಂಜನ ।
ಮಿದು ವೃದ್ಧಾಂಗನೆಯರಸವ ಪಲಿತೌಷಧಮಿಂ ॥
ತಿದು ಕಾಮನ ಕಾರಲಗೆನಿ ।
ಸಿದುದರ್ದೃಕ್ಸಾರಮಂಧಕಾರಮಪಾರಂ ॥ ॥೧೦॥

ಸರಳಂ ವಕ್ರಂ ತರಳಂ ।
ಸ್ಥಿರಮುಚ್ಚಂ ನೀಚಮಿಂತಾಕ್ಷಣಕ್ಕೊದವೆ ತಮಂ ॥
ಸರಿಯಾದುವಂತೆ ವಿಗತಾಂ ।
ತರವೆನಿಪನ ಮೆಚ್ಚ ಬಲ್ಲರಂ ಮೆಚ್ಚಿಕುಮೇ ॥ ॥೧೧॥

ಅನಂತರಂ

ಇರವುದಯಗಿರಿಯ ದರಿಯೊಳ್ ।
ಸುರಕರಿ ಸೆಳ್ಳರಕೆ ಸಾರ್ದು ಸುಯ್ಯಲೊಡಂ ಪ್ರ ॥
ಪ್ಪರದಿನೊಗೆದತಿವಿಶದಜಲಶೀ ।
ಕರವೆನಿಸಿದುದಯಿಸಮಳತಾರಕನಿಕರಂ ॥ ॥೨೦॥

ಗಗನಂ ಮಿತ್ರವಿಯೋಗದಿ ।
ನೊಗೆವಂತಶ್ಯೂನ್ಯಭಾವದಿಂದಜೆ ಮೆಯ್ಯೊಳ್ ॥
ಮಿಗೆ ಪನಿತ ಕಣ್ಣ್ಬನಿಯಿದೆನೆ ।
ಸೊಗಯಿಸಿದುವು ತರದಿನೊಗೆದು ತಾರಗೆ ಪಲವುಂ ॥ ॥೨೩॥

ಇವದಿಂ ಪೋದಿನನ ವರೂ ।
ಥವಾಜಿಗಳ ಮೊಗದೊಳೊಗೆದ ಫೇನಂಗಳ್ ವಾ ॥
ಯುವಕದೆ ಪಕ್ಷಿವಳಿಯಾಗಿ ।
ದುರ್ವು ಗಗನಾಂಗಣದೊಳನಿಸಿದುವು ಭಗಣಂಗಳ್ ॥ ॥೨೪॥

ತತ್ಸಮಯದೊಳ್ ನಿವರ್ತಿತಾಪರಾಹ್ಣಿಕಕ್ರಿಯನಾಗಿ ಬಂದು ಕರುಮಾಡದ ಮುಂದಣ ಮಣಿಮಯರಕ್ಷಣದೊಳ್ ಕತಿಪಯಪ್ರಸಾದಿತಪರಿವಾರಪರಿವೃತಪಾದಪೀಠನುಂ, ಲಲನ ನಿಕಾಯನಿವಳಿತಸೀರಾಜನದೀಪಕಳಿಕಾಪ್ರತಿಫಳಿತಮೌಳಿಮಾಣಿಕ್ಯನುಂ, ಅಪರಸಂಧ್ಯಾಸರಪತನತತ್ಪರಪುಣ್ಯಪಾತಕನಿಕರಸಯಜೇಯನಂದುವರ್ಧನವರ್ಧಸ್ವ ನಿನವನಿನೀಕ್ಷಿತಕರ್ಣವಿವರನುಮಾಗಿ,

ಹರಿನೀಲೋಪ್ಪಲಕುಟ್ಟಿಮಸ್ಥಳಿ ನಭೋಭಾಗಂಬೊಲಿಂಬಾಗೆ ಸು ।
ತ್ತಿರೆ ಚಂಚತ್ಕರದಿ ಪಿಕಾವಳಿ ಲಸತ್ತಾರಾಳಿಯಂತುತ್ಪಲಾ ॥
ಭರಣಂ ರಾಗದೆ ಲೀಲೆಯೋಲಗದೊಳರ್ದಂ ರಾಜರಾಜಂ ಕಳಾ ।
ಧರನಾನಂದಿತಲೋಚನೋತ್ಪಲನಪೂರ್ವಂ ಚಂದ್ರನಿರ್ದಂದದಿಂ ॥ ॥೨೫॥

ಆಪ್ರಸ್ತಾವದೊಳ್

ಇದು ಘುಸೃಣಾರುಣಂ ಸುರಹರಿದ್ವನಿತಾನಿಟಿಲಂ ದಿಟಕ್ಕೆ ತಾ ।
ವಿದು ಬರೆದಿರ್ದ ಸಿಂಧುರದ ಕೆಂಪಡರಿರ್ಂದ್ರಕರೀಂದ್ರಕುಂಭವು ॥

ಲ್ತಿದು ಜನಿತೇರ್ಷ್ಯೆಯಿಂ ಮುಳಿಯೆ ತಾರಗೆ ಪೊಟಲನೂವ ಯೂಮಿನೀ ।
ವದನಮೆನಿಪ್ಪಿನಂ ಕ್ರಮದಿನುಗ್ಮಿದುದಿಂದುವ ರಕ್ತಮಂಡಲಂ ॥೦೬॥

ಬಿರಯಿಯ ಮನವೆಂಬಂಕದೊ ।
ಳರಲಂಬನಡುತ್ತುರ್ ಕಾದೆ ಸೂಸಿದ ನೆತ್ತರ ॥
ಪೊರೆದೆಳೆವಳಕಿನ ವಿದ್ಯಾ ।
ಧರಗಳವೆನಿಸಿತ್ತು ರಕ್ತಬಿಂಬಂ ಶಶಿಯೂ ॥ ॥೦೭॥

ಪುದಿದಿರೆ ಪಣ್ತಿಂದುವ ಬಿಂ ।
ಬದಾಲದಿಂ ಪಣ್ಗಳುದಿರ್ದುವೆನೆ ಸೊಗಯಿಸಿದ ॥
ತ್ತುದಯದೊಳೊದವಿದ ಕೆಂಪಿಂ ।
ಪುದಿದೊಪ್ಪುವ ತಾರಕೋತ್ಕರಂ ಕೆಲಗೆಲದೊಳ್ ॥ ॥೦೮॥

ನೆರೆದ ತಿಮಿರಂ ನಿಶಾಕರ ।
ಕರಕುಂತಾಹತಿಗೆ ಬೆಚ್ಚಿ ಮೂರ್ಛೆಯ ನೆವದಿಂ ॥
ಪರೆಬೋಡಿ ಪೊಕ್ಕು ಸಲೆ ಮೈ ।
ಗರೆದುದು ಬಿರಯಿಸುವ ಬಿಕ್ಕವಕ್ಕಿಗಳೆರ್ದೆಯೊಳ್ ॥ ॥೦೯॥

ನಿನದತ್ಸಂಧ್ಯಾನಕಂ ನಿಗ್ಗವಣೆಯ ಪಱಿ ಪೂರ್ವಾಚಲಂ ತುಂಗರಂಗಂ।
ತನಗಾದತ್ತೆಂಬಿನಂ ನೀಲಿಯ ಜವನಿಕೆವೋಲ್ ಪಿಂಗೆ ಸಂಧ್ಯಾತಮಂ ಮೆ ॥
ಲ್ಲನೆ ತಾರಾನೀಕಪುಷ್ಪಾಂಜಳಿಯನೆಸೆವಿನಂ ಸೂಸಿ ತತ್ಪೂರ್ವರಂಗ ।
ಕ್ಕನುಗೈವುದ್ಯನ್ನಿಶಾನರ್ತಕಿಯ ವದನದಂತಿಂದು ಕಣ್ಗೆಡ್ಡವಾದಂ ॥

ತಿಮಿರಾಧವುವರ್ಣಸ್ಪ ।
ರ್ಶಮಾಪ್ರದೋಷದೊಳೊಡರ್ಚಿ ರಜನೀಸತಿ ಚಂ ॥
ದ್ರಮಯೂಖಮಹಾಪ್ರದದೊಳ ।
ಗೆ ಮುಟಿಂಕಿದಳಾದವಂಬರಂಬೆರಸಾಗಳ್ ॥ ॥೩೦॥

ಪರೆದಿರೆ ತಿಮಿರಕಚಂ ನೆರೆ ।
ಧಿರೆ ಭಗಣಸ್ವೇದಜಲಕಣಾಘಂ ರಾಗಂ ॥
ಬೊರೆದಿರೆ ಚಕೋರನಯನಂ ।
ಕರವೆಸೆದಳ್ ನೆರೆದು ರಜನಿ ರಜನೀಪತಿಯೊಳ್ ॥ ॥೩೧॥

ನೆರೆದೆತ್ತಂ ಭಗಣಂ ನಿರೀಕ್ಷಿಸೆ ಬೆಸಂಬೆತ್ತೇಱು ಚೆತ್ತೋದ್ಭವಂ ।
ಬರೆ ಲಕ್ಷ್ಮಚ್ಛಲದಿಂದವುಬ್ದಪಥವೀಥೀಭಾಗದೊಳ್ ಬೇಗಮೊ ॥
ತ್ತರಿಸುತ್ತುಂ ಪರಿಕಾಱನಂ ತಿಮಿರಮಂ ಬೆನ್ನಟ್ಟಿ ಪಾದಂಗಳಂ ।
ದೊರಸಿತ್ತೇನತಿಚೋದ್ಯವೋ ವಿಧುವುದೋನ್ಮತ್ತೇಭವಿಕ್ರೀಡಿತಂ ॥೩೩॥

ರಜನೀಕಾಂತಾಸಯೋಭ್ಯತ್ತಟಮಲಯಜಪತ್ರಂ ಮನೋಜಾಂಗನಾಶು
ಕ್ತಿ ಜಚಂಚತ್ಕರ್ಣಪತ್ರಂ ಸ್ಮರನೃಪವರಶುಭ್ರಾತಪತ್ರಂ ವಿಯನ್ನೀ ॥
ರಜನಿಮಧ್ಯೋಲ್ಲಸತ್ಪಾಂಡುರತರಶತಪತ್ರಂ ಬೆಡಂಗಾಯ್ತುಯುಕ್ತ ।
ವ್ರಜಗವ್ರೋರ್ವೀಧ್ರಶಂಬಂ ನಯನಸುಖಲತಾಸ್ತಂಬಮಾತ್ರೇಯಬಿಂಬಂ

ಕುಮುದವಿಲಾಸಹಾಸಪರಿಹಾಸಕನಬ್ಧಿಜಲಪ್ರವರ್ಧನೋ ।
ದ್ಯಮಿ ನಳಿನೀಪ್ರಮೋದಪರಿಹಾರವಿಹಾರದನುತ್ಕಕೋಕದು ॥
ರ್ಗಮವಿರಹಕ್ರಿಯಾವ್ಯಸನಿ ಚಾರುಚಕೋರವಿದೂರಪಾರಣ ।
ಕ್ಷಮನನವಲ್ಲಭಂ ಬೆಳಗಿದಂ ಪುರವೊಂಬೆನೆ ಲೋಕಮೆಲ್ಲಮಂ ॥೩೫॥

ಅತನುಗ್ರಹಚಂದ್ರಶಿಲಾ ।
ಪ್ರತಿನಿಧಿಯೆನಿಸಿರ್ದ ಚಂದ್ರಮಂಡಲದೊಳ್ ಕೋ ॥
ಭಿತಮಾಯ್ತು ತೋರ್ಪ ತಾರಾ ।
ಪಥದೊಪ್ಪಮನಪ್ಪುಕೆಯ್ದು ತೊಳಪ ಕಳಂಕಂ ॥ ॥೩೬॥

ವಾಸಿಸಲೆಂದು ಚಕೋರವಿ ।
ಲಾಸಿನಿ ಶಶಿಚಷಕದೊಳೆ ನವ್ರೋತ್ಪಳದಳವುಂ ॥
ಸೂಸಿದಳೊ ವಿನಿಹಿತಜ್ಯೋ ।
ತ್ಸ್ನಾಸವದೊಳೆನಿಪ್ಪ ಲಕ್ಷ್ಮಿವೆತ್ತುದು ಲಕ್ಷ್ಮಂ ॥ ॥೩೭॥

ಜನನಯನಹಂಸವಿಸರ ।
ಕ್ಕೆ ನಿಶಾವಧು ಸಾಂದ್ರಚಂದ್ರಿಕಾದುಗ್ಧಮನಿಂ ॥
ಬಿನೊಳಿಱಿವ ಗಗನಸ್ಫಟಿದಾ ।
ನನವಿವರದ ದೊರೆಗೆ ವಂದುದಿಂದುವ ಬಿಂಬಂ ॥ ॥೩೮॥

ಪಾರಪದಿಂದೆ ಲೇಪಿಸಿದುದೋ ದೆಸೆ ನೀರದಮೂರ್ಗಮೆಯ್ದಿ ಕ ।
ರ್ಪೂರಪರಾಗದಿಂದಿಡಿಯೆ ತುಂಬಿದುದೋ ಸ್ಫಟಿಕೋಪಲಂಗಳಿಂ ॥

ಧಾರಿಣಿ ಕೂಡೆ ಹಪ್ಪಳಿಗೆಯೊತ್ತಿದುದೋ ಸಲಿಲಾಶಯಂ ಪಯಃ ।
ಸ್ಫುರಮನಾಂತುದೋ ದಿಟಿಕ ತಾಸಿಸಿತ್ತಮೃತಾಂಶುರಶ್ಮಿಯಿಂ ॥೩೯॥

ಇದು ವಿರಹಕ್ಕಲ್ಲದೆ ಕಾ ।
ಯದ ಬಿಸಿಲಿದು ಕಿಟ್ಟಗೆಲ್ಲದೀಂಟಿಲ್ಕಂ ಬಾ ॥
ರದ ಸೊದೆಯಿದು ತಾಂ ಮನಕ ।
ಲ್ಲದುಡಲೆ ಸಮನಿಸದ ಮಗುಳೆಮೆಳೆವೆಳ್ದಿಂಗಳ್ ॥ ॥೪೦॥

ದ್ಯುನದೀಸವ್ಮೋಹದಿಂದಂ ಬಡೆಗೆದ ಕಲುಷಾವಲ್ಲಭಂ ನಾಪಾಯಂ ಸಾ।
ರ್ವಿನಗಂ ಪೀಯೂಷವಾರ್ಧಿಪ್ಲವಪರಿಣತಿಯಿಂ ಸಜ್ಜಿಗಬ್ಬೋದರಂ ಪಾ॥
ರ್ವಿನಗಂ ಹಂಸಂ ಮೆಲಲ್ಕೆಂಬೆಳಸಿ ಬಿಸಲತಾಶಂಕೆಯಿಂ ಚಂಚುವಿಂ ನೇ ।
ರ್ವಿನಗಂ ಪ್ರೋನ್ಮುದ್ರಿತಂ ಮುದ್ರಿಸಿದುದು ಜಗಮಂ ಚಾರುಚಂದ್ರಾಂಶು
ಜಾಲಂ ॥ ॥೪೧॥

ಆಂ ಬೇಱೆ ಪೂಗಱ್ಬುದೇಂ ಬೆ ।
ಳ್ಪಂ ಬೆಳಗುಮನಾಗಸಕ್ಕೆ ನಿಜಮಲಿನತೆಯಂ ॥
ಮುಂ ಬಿಡಿಸಿ ಮತ್ತನಂಗನು ।
ಮಂ ಬೇಱೆ ಜನಕ್ಕೆ ತೋಱಿದುದು ಬೆಳ್ದಿಂಗಳ್ ॥ ॥೪೨॥

ಇದು ದಲ್ ಸ್ವಚ್ಛಂದಮಂದಾಕಿನಿ ಮಹಿತ ಮಂ ಕೂಡೆ ಪರ್ವಿತ್ತು ನೋಡೆಂ । ಬುದನಂದಲ್ಲಲ್ಲಿಗೆಲ್ಲಂ ಜನಮನಿತುವಲಂಪಿಂ ತುಳುಂಕಾಡಲುಂ ರಾ ॥ ಗದಿನಿತ್ತಂ ನೀಡುವೋಲಾಡಲುಮೆದೆಗೆಯೊಲವಿಂ ಪ್ರೊಕ್ಕು ಮಿಕ್ಕೀಸಲುಂ ಬೆ । ತ್ತದ ಮೆಚ್ಚಿಂ ದ್ರೋಣಿಯಿಟ್ಟೇಱಲುಮೆಳಸುವಿನಂ ಪೆರ್ಚಿದತ್ತಚ್ಛಜೋನ್ನಂ ॥ ॥೪೩॥

ಕೆಂಪಿಲ್ಲದ ಬಿಸಿಲುಣ್ಮುವ ।
ಕಂಪಿಲ್ಲದ ಸಾಂದ್ರಚಂದನಕ್ಷೋದಂ ಪು ॥
ತ್ತಿಂಪಿಲ್ಲದ ಪಾಲ್ಗಡಲಂ ।
ಬೆಂ ಪೊಸಬೆಳ್ದಿಂಗಳಂ ಬಲಿಕ್ಕೇನೆಂಬೆಂ ॥ ॥೪೪॥

ಅದಲ್ಲದೆಯುಮಾಕಾಶಗಂಗಾಪ್ರವಾಹಮನಾಧಾರತೆಯಿಂದವನಿಗಲ್ಲೊಕ್ಕಿ ತೆಂಬಂತೆ ಓರೊಂದೆಡೆಯ ಒಯಲೊಳ್ ಬೆಳ್ಳಂಗೆಡೆದು ಬಳ್ಳಮೆರ್ಚಿಯುಂ,

ಉಪಾಸನದ ತರುಳತಾನಿಕರದೆಲೆದುಱುಂಗಲೆಡೆಗಳಂ ಬಿಳಿಯ ಬಿಲಿಲಿಂತಿಱಿವಾ
ಳೆವಾಳನಳೆಯುಂಗಳನಾವಗಂ ತೀವಿ ತೇಂಕಾಡಿಯುಂ, ಚಂದ್ರಕಾಂತದ ನೆ
ಗೆದ ಮುಗಿಲುಟ್ಟುಸಾಗಳಂ ಮೆಟ್ಟಿ ಬಹಹಮನೊಡಚಿ ಬಳಸಿವಗಲಿನೊಗುಮಿ
ಗೆ ತಿಂಬಿ ತುಂಬುವರಿಯೆಸಿಯುಂ, ಸಸಿಯ ಜೆಸದಿಸಿಯೇಱುಂಗೆ ಬಂದ ಸು
ಟ್ಟುಂಬೆಸಕಾಸನಂತಸಿವನೆ ಸುಸಿರದಿಂ ಪೊಕ್ಕು ದೇವಕುಲಂಗಳಾದಲೆಯೊ
ಳೊತ್ತುಂಗೊಂಡಿದ ಕಲ್ತಿಲಗೆ ಮಿಱ್ತುವಾಗಿಯುಂ, ಸಂಕೇತಕ್ಕೆ ಪೊ
ಉಮಡಲ ಪಡೆಯುವೆ ಪೊಉಗಣ ಬೆಳಗಿಂಗೆ ಕಾಯ್ದು ಕಿಸುಗಣ್ಣಿಂ ನೋ
ಡುವ ಜೋಡೆಯರ ಕಡೆಗಣ್ಣ ಕೆಂಬೆಳಗಿಂ ಪ್ರದಿಮುವಯದೊಳೊಳಕೆಯ
ರಾಗವುಂ ಮಗುಳುಗುಱ್ಱಿ ಪರಿಯುನಿನಿತನುಕರಿಸಿಯುಂ, ಸೂಱೆಗೇರಿವೋ
ವರಿಯ ಬಾದಣದಿನೊಗೆವ ಅಗುರುವಿನ ಕರ್ಪೂರಗೆಯ ಸುಱಿನೊಳ್
ತಳ್ಪೊಯ್ದು ವಿಧುವ ಪಗೆಯ್ಪ ರಾಹುವಿನೊಳ್ ಕಡುಪಿನಿಂ ತೊಡರ್ದ
ಮೆಯ್ಯೊಣವನಪ್ಪುದೆಂಬ ನುಡಿಗಡನಾಗಿಯುಂ, ಆನಂದದಿಂ ಮಂದಿರಾಂ
ಗಣದೊಳ್ ಸುಱುವ ಪುರಂಧ್ರಿಯರ ಸಂದಣಿಸಿ ಬಳೆದ ಮೊಲೆಯೆಣೆಯಿ
ನಿಱಿವೆಂದುಮಿಲ್ಲದ ಮುತ್ತಿನಾರಮಿಂದೆ ಸಂದುದೆಂಬ ಸಂಬೆಗದ ದಂದುಗೆ
ಮನವರೊಡನಾಡಿಗಳ ಚಿತ್ತದೊಳ್ ಬಿತ್ತಿಯುಂ, ರಾಜಾಂಗಣದ ಬಯಲ
ಬಾಳ್ಗಂಬಂಗಳೊಳ್ ಸೆಱಗೆಯ್ದಿದ ಜಾವದಾನೆಗಳ ಮೇಲೆಡೆಗೆಡೆದು
ಮುಂದ ಸಾಗಿ ಮುಸುಂಕಿ ತನ್ನಂಗಳ್ಗೆ ಪಾಲ್ಗಡಲ ನಡುವಣೈರಾವತದ
ಲೀಲೆಯನೆಳಲಗಿಸಿಯುಂ, ಶಕುಂತಪಾಳಿಕೆಯರ ಪೊಉಗೆ ವಾಸಯುಷ್ಟಿ
ಗಳೊಳ್ ಸಿಱಿವ ಪೊನ್ನ ಪಂಜರದ ಪ್ರಗಿಲ್ಗಳಿಂ ಜಾಳಿಸಿ ಪೊಕ್ಕು ದೀಹದ
ಚಕೋರಿಕೆಗಳಟ್ಟಿಱಿಂ ಮುಕ್ಕುಱಿಪ ಮುಂಡಾಡುವ ಕಮಲಂಕುವೈ ದೆವ
ಚೆಲ್ಲಕೆ ಮೈಸಾಚಿಯುಂ, ಇಂತನೂನಮುಮತಿಸಾಂದ್ರಮು ಮತ್ಯುಜ್ಜ್ವಲ
ಮುಮಾದ ಚಂದ್ರಾತಪದೊಳ್ ನರೇಂದ್ರಚಂದ್ರಂ ಚಕೋರನಂತೆ ಚಂದ್ರಿ
ಕಾವಿಪರಣವಿನೋದಕ್ಕೆ ಬಗೆದಂದು ದಕ್ಷಿಣಾನುಕೂಲಶಕ್ಯಷ್ಟರೆಂಬ ನಾ
ಯಕರುಂನಾಗರಿಕವಿಯವಿಷಕಪಟಿತಮುದಕರೆಂಬನಾಯಕರುಂಬೆರಸು,

ಮಳಯಸಣ್ಣ ಮಲ್ಲಿಗೆಯ ಚೆನ್ನತುಱುಂಬು ನವೀನಚೀನದ ।
ಜ್ಜ್ವಳೆಯ ದಳಂಬುವಾನರಿಸಿವಂಚಲಗಪ್ಪುರದೊಪ್ಪುವಾರಮಾ ॥

ಶಳವಿಯ ಮುತ್ತಿನೆಕ್ಕಸರದೋಲೆ ವಿಲಾಸಮನೀಯೆ ಲೀಲೆಯಿಂ ।
ತಳೆದರ್ನಿಳಾಧಿಪಂ ಸಫಲಮಾಗೆ ವಸಂತದ ಚಂದ್ರಿಕೋತ್ಸವಂ ॥ ॥೪೪॥

ಅಂತು ರಾಜವೀಥೀಲತಿಕೆಯಂ ಪವನಮಯೂಖಮಂಜರಿಯಿಂ ಮಂಜರಿತಂ ಮಾಡುತುಂ ಸೂಚೆಗೇರಿಯನೆಯ್ದುವರ್ಗಳ್

ಕಳಕೇಳೀಕೀರಪಾರಾವತಕುಹರಣವಾಚಾಲಮುಜ್ಜೃಂಭಮಾಣೋ ।
ತ್ಪಳರಾಜಂ ನಿಷ್ಕುಟಾಂಭೋರುಹನಿಲಯಜಲಾರ್ದ್ರಂ ರತಿಕ್ರಾಂತಿನಿರ್ಭ ॥
ಲ್ಲಳನಾನಿಶ್ವಾಸಪ್ರಷ್ಟಪ್ರಸರದಗುರುಸೌರಭ್ಯಸಂದೋಹಭಾರಾ ।
ಕಳಿತಂ ಬಂದೊಯ್ಯನೇನೂದಿದುದೊ ಪಣವಧೂಗೇಹದಿಂ ಗಂಧವಾಹಂ ॥

ಅಂತು ವಿನೋದಸುಖಸ್ಯಾಸವುದಯಕ್ಷೇತ್ರಾಭೋಟಿಮೆನಿಪ ಗಣಿಕಾವಾಟಿಮಂ ಪುಗುವಾಗಳೊಂದು ಸೌಧಾಂಗಣದೊಳ್ ವಿಚಿತ್ರವರ್ಣಾವಸನವಿರಚಿತೋತ್ತುಂಗಶ್ರೀಖಂಡಶಾಖಾಸ್ತಂಭಂಗಳೊಳಂ, ಯಥಾಪ್ರದೇಶೋಚಿತವರ್ಣಕ್ರಮೋಪರಚಿತರತ್ನಮಯಮಯೂರಮಂಡಿತಾತುಳತುಳಾದಂಡಂಗಳೊಳಂ, ಅಂತರಾಂತಸ್ಥಿತಕಮನೀಯಕನಕಕಲಶಮಂಡಿತಪರ್ಣಂಗಳೊಳಂ, ಆಲಂಬಿತಘಂಟಿಕಾಜಾಲಕುಸುಮದಾಮ ಚಾಮರೋದ್ದಾಮಚೀನಾಂಬರಾಚ್ಛಾದ್ಯಂಗಳೊಳಂ, ನಿಷ್ಕಶೃಂಖಲಾಚತುಷ್ಕಘಟಿತನಿರ್ಯೂಹದಂತಪರ್ಯಂಕಿಕಾಪಟ್ಟದೊಳಮಳವಟ್ಟು ಮದನಮಂಗಳಾಗಾರದ್ವಾರಮಕರತೋರಣದಂತಿರ್ ನವಿಲುಯ್ಯಲ ಕೆಲಕ್ಕೆ ವಂದು

ನಲಿದು ಸಖೀಸಮವ್ರಜಕೆ ತಳ್ಕೆಗೆ ಮೊಕ್ಕಳಮೀವ ಮಾಲೆವೊ ।
ಬೆಲಗೆಸೆಯಿಂದಮೀವ ಘನಸಾರದ ಬಾಯಿನಮೆತ್ತಿ ಪೊನ್ನಬ ॥
ಟ್ಟಲೊಳಿಟ್ಟೆದೀವ ಕುಂಕುಮರಸಂ ಹಿಡಿಪಾರದಿನೀವ ಚೊಕ್ಕದಂ ।
ಬುಲಮೆಸೆವನ್ನೆಗಂ ಮೆಚ್ಚಿದಳಂದು ವಿಲಾಸಿನಿ ತದ್ವಿಲಾಸಮಂ ॥ ೪೬॥

ಅನಂತರಮಾಂದೋಳಪಟ್ಟಮಧ್ಯದ ಮರಾಳತೂಳಮಯಮಸೊಳಿಕಾಗೃಹಮನಲಂಕರಿಸಿ

ಸುಯ್ಯಲರುಯ್ಯಲಾಡಿಸೆ ಮದಾಳಯನುಯ್ಯಲ ನುಣ್ಬರಂ ಸ್ಮರಂ ।
ಗುಯ್ಯಲವಿಲ್ಗೆ ಕೈಯನಿರದೆಂಬವೊಲುಸ್ಮ ಮರಲ್ದು ನೋಟಿಕೆ ॥
ಪುಯ್ಯಲನೊಯ್ಯನಾಕೆಯೊಡನಾಡಿಗಳೊಳ ಕುಹೆ ಮುತ್ತಿನೈಸರಂ ।
ಮೆಯ್ಯೊಲೆವಕ್ಕೆ ರಯ್ಯಮೆನೆ ತೂಗೆ ವಿಲಾಸದಿನುಯ್ಯಲಾಡಿದಳ್ ॥ ೪೭॥

ಆವಿಲಾಸವತಿಯು ಲೀಲಾವಿಲಾಸಮಂ ನೋಡುತ್ತುಂ ಪೋಗೆ ಮುಂದೊಂದೆಡೆ ಪಳುಕಿನ ಸಜ್ಜೆಮಾಡದ ಮುಂದಣಸುಕೆಯು ತಳರುಲಯ್ಯಲನೊರ್ವಳ್ ಪೂರ್ವಯೌವನೋನ್ಮತ್ತೆ ಎನಗೆ ಮನೋಭವನೆ ಬೇವಂ, ಬಸನವೆ ಬವಸೆ, ಬಲವೆ ಕುಲಧನವೆಂದು ಕೆಳದಿಯುಗೆ ಪೂಣ್ದಟನೇಱುವಂತೇಱು

ಮೂಡಿದುದಿತ್ತಲೊಂದಭಿನವಂ ಶಶಿಬಿಂಬವೆನಿಸ್ಪ ಶಂಕೆಯುಂ ।
ಮಾಡೆ ಮನಕ್ಕೆ ಮುದ್ದುಮೊಗಮುಜ್ಜ್ವಲಚಂದ್ರಿಕೆಯಲ್ಲಿ ನೀಡುಮೋ ॥
ಲಾಡುವ ಲೀಲೆಯಿಂದೊಲೆಯಲೀವ್ಯುಗಲಕ್ಷ್ಮಮೃಗಕ್ಕೆ ಗೋರಿಯುಂ ।
ಪಾಡುವ ಮಾಟ್ಕೆಯಿಂ ಬಳೆಯೆ ಗೀತರವಂ ತಳರುಯ್ಯಲಾಡಿದಳ್ ॥೪೯॥

ಆಗಳ್ ವಿದೂಷಕನಿವಳ್ಗಿರ್ ನೋಟಕರನುತ್ಕಂಠಾವಸ್ಥೆಗುಯ್ಯಲಾಡುವಂದನುಲ್ಲದುಯ್ಯಲಾಡುವಂದನುಲ್ಲವೆಂದು ನುಡಿದು ನಡೆಯೆ ಮತ್ತೊಂದು ನೃತ್ಯಾಭ್ಯಾಸನಿವಾಸಪುರಃಪ್ರದೇಶದೊಳ್ ಮನೋಜರಾಜಚ್ಛತ್ರಚಾಮರಂಗಳಂತೆ ಸೊಗಯಿಸುವ ಸೋಗೆಯುಂ ಪೊಂಬಾಳೆಯುಂ ಬೆರಸು ಕಟ್ಟಿದೆಳಗೊಂಗಿನುಯ್ಯಲಂ ತೂಗಾಡುವ ಲಾವಣ್ಯಲಕ್ಷ್ಮೀಲತೆಯ ಕಳಕೆಗಳನ್ನೆಯರಪ್ಪ ಕನ್ನೆಯರಂ ಚೆನ್ನೆಯರಂ ವೀಕ್ಷಿಸಿ ನಾಗರಿಕನಿಂತೆಂದಂ:—

ಮೀಸಲ್ವಾಯ್ದೆಱೆ ನಗೆ ಪೊಱ ।
ಸೂಸದ ಕಣ್ಣ ಬಳಸಲೆಳಸದೊಳ್ಗೊಡೆ ಲಜ್ಜೆ ॥
ಭಾಸನಮನೋಸರಿಸದ ಬಗೆ ।
ಮಾಸರಮಾಯ್ತಿವರೊಳಡರ್ದ* ಕೊಡಗೊಸುತನಂ ॥ ॥೪೯॥

ಎಂಬುದಮರಸನವಳಂ ತೂಗುವೆರಡನೆಯ ಕನ್ನೆಯಂ ನೋಡಿ,

ಪ್ಪೀರ್ದಪುದು ಲಜ್ಜೆಯುಂ ಬಗೆ ।
ಸೋರ್ದಪುದುರವುಗುಟಿಲುರುಕುಚಂಗಳನೀಗಳ್ ॥
ಮೀರ್ದಪುದು ಕಣ್ಣ ಸರಲತೆ ।
ಸಾರ್ದಪುದು ನವೀನಯೌವನೋದಯಮಿವಳಂ ॥ ॥೫೦॥

ಎಂದವಳ್ದೆಳೆವೆಯ ಬಳ್ವಳಕೆಯುಂ ಮೆಚ್ಚುತುಂ ಪೋಗೆ ಮುಂದೊಂದು ಮತ್ತವಾರಣದ ಕೆಲದೊಳೊತ್ತೆಗೆಂದು ನಿಂದಿರ್ದಳಂ ನಾಗರಿಕಂ ನೋಡಿ

ನಸುದೊಡೆದೋರ್ಪ ಪಟ್ಟಣಿಗೆಯೊಳ್ನಿಱಿ ಕತ್ತುರಿಬೊಟ್ಟು ಕಟ್ಟಿ ಬಿ।
ಟ್ಟಿಸೆವ ಕುರುಳ್ ಮೊಗಕ್ಕೆ ಪಿರಿದೊಪ್ಪುವ ಬಿಂಕದ ಸಂಕದೋಲೆ ಕ ॥
ರ್ಪಸದಳವಾದ ಸಣ್ಣವಳಿ ಕತ್ತರಿಪೀಲಿಯನಾಂತ ಚೆಲ್ಲೆಯುಂ ।
ಮಿಸುಗುವ ದೋರೆವಲ್ ಕರಮೆ ಮಾಸರವಾದುದು ದೇಸೆಕಾರ್ತಿಯೊಳ್ ॥

ಎಂದು ಮಾಣದಿವಳ ದೇಸೆವೆತ್ತ ಶೃಂಗಾರಂ ವಿಟಜನಕ್ಕೆ ಹೃದಯಾಂಗಾ ರಮಾಯ್ತೆಂಬಿನಂ ವಿಟನಿವಳಂತರಂಗಶೃಂಗಾರಮುಂ ವಿಚಾರಿಪೆನೆಂದು ಪೋ ಗಿ ನೋಡಿ ಬಂದು

ನೋಟದೆ ಬೇಟವುಂಕುರಿಸಿದಪ್ಪುದು ಮೇಳದೊಳಿಂಪುವೆತ್ತ ಮಾ ।
ತಾಟದೆ ಮತ್ತೆ ಪಲ್ಲವಿಸಿದಪ್ಪುದು ಲಲ್ಲೆಯನಪ್ಪಕೆಯ್ವ್ ಕೊಂ ॥
ಡಾಟದ ಮುದ್ದುಗೆಯ್ತ್ ದಲದರ್ಪ್ಪುದಿವಳ್ ಬಗೆ ಮೆಚ್ಚಿ ಬಿಚ್ಚ್ ತಂ ।
ಕೊಟವುನೊಲ್ದೊಡರ್ಕೆ ಫಲವುಪ್ಪುದು ತಪ್ಪುದು ಸೂಳೆ ಕೇಳ ಗೇ ॥೫೦॥

ಎನೆ ಪೆಱತೊಂದೆಡೆಯೊಳುಲ್ಲಸಿತಮಲ್ಲಿಕಾಮಂಡಪದ ನಡುವಣೆಸಳ ಪಸೆ ಯೊಳೊರ್ವನಳವಿದಪ್ಪಿ ಕೂರ್ತೆಳೆಯುಳಂ ಪಱಿಕೆಯ್ದೆಯೆಂದು ಪುಸಿಮು ಳಿಸಂ ತಳೆವುದುಮವಳ್ ಬೆಚ್ಚಿ ಪೆರ್ಚಿದ ಭಯದ ಭಾರದಿನೆಱಗುವಂತೆ ಕಾಲ್ಗೆಱಗುವುದುಂ, ಪ್ರಣಯಸಾರಸರ್ವಸ್ವನಿಧಾನಮನೆತ್ತುವಂತೆತ್ತಿ,

ನಲವಿಂದಂಕದೊಳಿಟ್ಟು ಕಚರ್ಕಿ ಕದಪಂ ಬಾಯ್ವಾಯೊಳೊಲ್ದಿಕ್ಕಿ ತಂ।
ಬುಲವುಂ ಕಣ್ಣೊಣರಿರ್ಪನೊತ್ತಿ ತಳದಿಂ ಪಾದಾನತಿವ್ಯಸ್ತಕುಂ ॥
ತಲವುಂ ತಿರ್ದಿ ವಿನೋದದಿಂ ಮುಳಿದೆನಾಂ ನೀನಂಜಲೇಕೆಂದು ಕೋ ।
ಮಲೆಯುಂ ಕೋಟಿಚಟೂಕ್ತಿಯಿಂದೊಸೆಯಿಸುತ್ತಿರ್ದಂರತೋತ್ಕಂಠೆಯುಂ ॥

ಆಗಳರಸನಾಧ್ಯಷ್ಟನ ಖಾತ್ವಾಸಮೀಕರಣನ್ಯಾಯವಾದ ಮುಳಿಸುಂ ತಿಳಿಪುಮಿರ್ವರ್ಗರ್ಮುಬ್ಬೆಗವುಂ ಪಡೆದುದೆಂದಿಂತೆಂದಂ:—

ಪ್ರಣಯದಿನಾದ ಹೋರಟೆಯೆ ಹೋರಟೆ ಮಾಣ್ದೊಡೆಕೂಟದೊಳ್ ಮನಂ।
ತಣಿಯದದೊಂದುಕೋಟಿಲೆಯೆ ಕೋಟಿಲೆ ಮಾಣ್ದೊಡಗಲ್ದ ಪೊಟ್ಟ್ ನೊಳ್
ರಣರಣಕೋತ್ಥವೇದನೆಯೆ ವೇದನೆ ಮಾಣ್ದೊಡೆ ಮತ್ತಮಿನ್ನವ ।
ಪ್ಪಣಕಮೆ ಪುಟ್ಟುಗೆಂದೊಡಕಟೇನಪಸೌಖ್ಯರೊ ಕೂರ್ತ ಮಾನಸರ್ ॥

ಎಂಬುದುಮನುಕೂಲನೆಂದಂ—ದೇವರ್ ಬೆಸಸಿದಂದನಪ್ಪುದಾದೊಡಂ

ನುಡಿ ಸವಿ ನೋಟಿಮೊಂದು ಸವಿ ಸೋಂಕು ದಿಟಂ ಸವಿ ತೋಟಿಯೊ ವಗಂ । ಕಡುಸವಿ ಪೊಯ್ಯೆ ಮುನ್ನ ಸವಿ ಬಯ್ಯೆ ಕಲಂ ಸವಿಯಪ್ಪ ಚುಂ ಬನಂ॥ ಗಡಣಮುಮೆಂತುಮೆಯ್ದೆ ಸವಿಯಪ್ಪುವು ತನ್ನ ಪಸಾದದಿಂದಮೆಂ । ದೊಡೆ ಸವಿ ಬೇಟದಿಂದೆ ಪೆಱತಾವುದೊ ಭಾವಿಸಿ ನೋಡೆ ನಾಡೆಯುಂ॥೫೫॥

ಎನೆ ಸೂರ್ವಭೌಮಸರ್ವಜ್ಞಂ ಧುತ್ತೂರಮತ್ತರೊಳ್ ಸ್ತಂಭಕುಂಭಾ ದಿಗಳೆಲ್ಲಂ ಶಾತಕುಂಭಾಭಾಸಂಗಳಾಗಿ ತೋರ್ಪಂತೆ ಕಾನುಕಾತರೆಯೊಳಂ ಬಸನದೊಳ್ ಬೆರಸಿದಾಯಾಸಂಗಳುಂ ಪ್ರಿಯಾಪ್ರಿಯಂಗಳೆ ಅಕ್ಕುಮೆನೆ ತ ತ್ವಮೀಕ್ಷದ ಸೌಧದೊಳ್ ಸನ್ನಿದಮಾದ ಕನ್ನೆವೇಟಕ್ಕೆ ತನ್ನಂ ಮಾಱುಗೊ ಟ್ಟು ಪಾಱುಗೆಯುತ್ತಿದ ಜುವ್ವನಿಗಿನಿಯನಿತ್ತ ನಖರದಕ್ಷತಂಗಳನೆ ತೊಡವುಮಾ ಡಿ ಮೆಱೆವುದನವಳೊಡನಾಡಿ ನೋಡಿ ಕಂಡು,

ಕೊರಲಿಂ ಬರಿಯಿಂದಗ್ರಂ ।
ಬರೆಗಂ ಕೆಂಪೆಸೆಯೆ ನೀಳ್ದ ನಖರೇಖೆಯೆಸ ॥
ಳ್ಗೊರೆಯೆನಿಸೆ ಪದ್ಮಕುಟ್ಮಲ ।
ದಿರವಂ ಪರಿಭವಿಸಿತೀಕೆಯುತ್ತುಚಯುಗಳಂ ॥ ॥೫೬॥

ಎಂಬುದುಮದರ್ಕೆ ಸೈರಿಸದವರಕ್ಕನಿಂತೆಂದಳ್:—

ಮಿಱುಗುವ ವಿದ್ರುಮಾಧರದ ಮಧ್ಯದೊಳಾಯತವೃತ್ತಮಾದ ನು । ಣ್ಣಱೆಯಿದು ಮನ್ಮನಕ್ಕೆ ಪಡೆದಪ್ಪುದು ಮನ್ಮಥವಹ್ನಿತಾಪದಿಂ ॥
ಮುಱುಕಮುನಪ್ಪಕೆಯ್ದೆರ್ಬೆಯೊಳಿರ್ಪುದನೊಲ್ಲದೆ ಬಾಯ ಬಾಗಿಲಿಂ ।
ನೆಱೆ ಪೊಱಮಟ್ಟು ಪೋದಿವಳ ಲಜ್ಜೆಯ ಪಜ್ಜೆಯಿದೆಂಬ ಪೋಲ್ವೆಯಂ ॥

ಎನೆ ಧೃಷ್ಟನನಳ ಚುಂಬನಂ ಚೆನ್ನನೊಳಕೈದುದೆನಲೊಡಂ ಅಲ್ಲಿಂ ತಳರ್ವುದುಮೊರ್ವಂ ಕಣ್ಣಿಟ್ಟು ಪಲದೆವಸವಟ್ಟಿಟ್ಟಿಯುಮಟ್ಟುತ್ತುಮಿರ್ದ ವಳ ಬೇಂಟದ ಬೊಜಂಗನುಱುವುದುಮೆಡೆವಡೆದೊತ್ತೆಯಿಟ್ಟು ಪುಗಲೊಡ ಮವನಂ ಕಂಡು,

ಮನದಿನಿತೊಂದನೆವ್ವಳಪ ದಿಟ್ಟಿಯನೊಯ್ಯನೆ ಸುತ್ತುವಾಸೆಯಂ ।
ಘನತರಭೋಗಮಂ ಗತಿಯ ವಕ್ರತೆಯಂ ತೆಱಪಾಗೆ ಸಾರ್ದುಮೆ ॥
ಲ್ಲನೆ ಪುಗುವಂದನಂ ನೆಱೆಯೆ ಭಾವಿಸಿ ಬಂದ ಭುಜಂಗನಂ ಭುಜಂ ।
ಗನೆ ದಿಟವೆಂದು ದಾರಿಕೆ ಮಯೂರಿಕೆಯಂದದಿನೇಂ ಕನಲ್ದಳೋ ॥ ೫೪॥

ಅದಂ ವಿವೇಕವಿದ್ಯಾಧರಂ ಕಂಡು
ಮನಮದು ಮನದನ್ನನ ಬೆ ।
ನ್ನನೆ ಪೋಗಿರೆ ತನ್ನ ಬಸನದಿಂದವಳೊಳ್ಪಂ ॥
ಮನವುಂ ಬಿಡೆ ಬಳೆಯಿಪ ಬೆ ।
ಳ್ತನವಿದು ಪಾಟ್ಕಿನೆಗೆ ಬಾಯಿನಂ ಗುಡುವಂದಂ ॥ ॥೫೯॥

ಎಂದು ನುಡಿಯೆ; ಮತ್ತೊರ್ವಂ ತನ್ನೊಳಾದೊಲವಿನೆಸಕಂ ಮಸಮಸ ನಾಗೆ ಮತ್ತೊರ್ವನೊಳ್ ಮನಕ್ಕೆಡೆಮಾಡುವಳ್ಗೆ ತನ್ನ ಮೋಹದವನ ನ ಣ್ಪಂ ಬಿಟ್ಟೆನೆಂದು ಸೂರುಳ್ತೊಡಲ್ಲದೊಲ್ಗೆನೆಂದು ರೋಸದಿಂ ಪುಸಿಮಾಟ್ಪು ದುಂ, ಬಜ್ಜೆಗುಂಟಣಿ ಸಜ್ಜೆವನೆಯ ಬಾಗಿಲಂ ಪತ್ತಿ ಮಱೆಗೇಳುತ್ತಿರ್ದೊ ಳಗಂ ಪೊಕ್ಕು

ಕುಡಿದೊಡೆ ಪೊಟ್ಟೆಯಿಂದೆ ಬಱನೀರ ಸ್ರೋಅಪಾಯ್ವುವೆ ಸುತ್ತಿ ಕಾಲನೇಂ।
ತೊಡರ್ವುವೆ ದಾಂಟುವಲ್ಲಿ ನಿಱಿ ಪುತ್ತುರಿಯೂದಿದೊಡಂತೆ ಬಾಯನೇಂ ॥
ಸುಡುವುದೆ ಮುಟ್ಟೆ ದೇವರೊಳೆ ಕೀಲಿಪುದೇ ಕರಮೇಕೆ ಸೂರುಳಂ ।
ದೊಡರಿಸಲಣ್ಣ ಪೆಣ್ಣ ಪುಸಿನುನ್ನಣೆಯುಳ್ಳೊಡವುಂತದೆಯ್ದುದೇ ॥ ೬೦॥

ಎನೆ ಶತಂ ಹತವೃತ್ತಿಯಿನವಳರ್ಕರಾಗ್ರಹಕ್ಕಂ ನಿಗ್ರಹಮಂ ಪಡೆದ ಳೆಂಬುದುಂ, ಅನತಿದೂರದೊಳೊರ್ವಳ್ ಕೂರಿಸಿದ ಬರವಿಗನ ಬರವಿಂಗೆ ಕಯ್ಯಾಸನಮಂ ರಯ್ಯಂ ಮಾಡಿರಿಸೆ ಪೀಠಮುರ್ಕಂ ಸಾರ್ದು ನೋಡಿ

ಪಗಲನುದಂಶುವಿಂದುಗುಟ್ಟಿ ದೀವಿಗೆ ತೆಳ್ವಳಿಕಿಂದಮಾದ ನು ।
ಣ್ಣಗೆಲಿಯೊಳಾಯ್ತು ಮೆಲ್ಪೆನಿಪ ಪಾಸಲರ್ಕ್ಕೆಯ ತಾಣಮೆಂಬ ಚೆ ॥
ಲ್ವಗೆಲದ ಪೀಲಿವಿಜ್ಜಣಿಗೆ ತಣ್ಪಿನ ನೀರ್ ಸೆಱೆಯಾದ ಪೊಂಗಳಂ ।
ತಿಗೆಯಿರೆ ಸಜ್ಜೆಯೋವರಿಯಿದೋವರಿಮಾಡಿತು ಕಂತುಗೆಮ್ಮುಮಂ ॥ ೬೧॥

ಎಂಬನ್ನೆಗಂ ತತ್ಪಾರ್ಶ್ವಕ್ರೀಡಾವೇಶ್ಮದಿಂದಸಮಸದಿನಾದ ಕಿಸುರ ಮು ಸಕದಿನೊರ್ವಂ ಪೊಲಮಟ್ಟು ಪೋಗೆ

ಇನಿಯನ ಕಾಲ್ಗೆ ಕಾಮಿನಿಯ ಕಾಲ್ ನಿಲವೇಟ್ಟುವೆಲುಣ್ಮೆ ನೂಪುರ ।
ಧ್ವನಿ ನೆಱೆ ಕಣ್ಗೆ ಕಣ್ಣಿಮಿರೆ ಕಣ್ಬನಿಯುಂ ಬಿಡಲಾಗೆನುತ್ತೆ ಬೆ ॥
ನ್ನನೆ ಪರಿವಂದದಿಂ ಪರಿಯೆ ಬಂದು ಪದಾನತೆಯಾಗೆ ಪೋದುದಾ ।
ತನ ಮುನಿಸಂತೆ ಕಾದಲನ ಕಾಲ್ವಿಡಿಪಿಂ ಕಳೆದಳ್ ಕನಲ್ಕೆಯಂ ॥ ॥೬೦॥

ಅದಲ್ಲದೆ ಮತ್ತೊರ್ವಳ್ ತಾನೊಲ್ದುವೊಲ್ಲದಂತವನೊಳ್ ನೆಗಟ್ಟುವ ಮುಗಳಣಕಕ್ಕೆ ತಲೆ ಕಣಕಣಿಸೆ,

ಸಲೆ ಮುಂಗೈಯಿಂದಮೀ ಕುಂದದ ಬಳೆ ಮುಡಿಪಿಂ ಪೋಗದೀ ಕಂ ಚುಕಂ ಮುಂ । ದಲೆಯಿಂದಂ ಪಿಂಗದಿರ್ಕ್ಕಿ ತಲೆದೊಡವಿದು ನೀನೊಲ್ಲದಿ ರ್ಪಂದಮುಂ ಕಾ ॥ ದಲನೊಲ್ದೊಂದಂದಮುಂ ಪೇಳುವೆ ದಿಟದಿನವಂ ಮುನ್ನ ತಾನೊಲ್ಲದಿರ್ದಂ । ದೆಲೆಗೇ ನೀನೆಲ್ಲರೊಂದಂದದಿನಿರೆ ಬಱುಮೆಯ್ಯೊಂದಮಿ ರ್ಪಂತುಟಕ್ಕುಂ ॥ ॥೬೩॥

ಎನೆ ನಾಗರಿಕನೀಕುಂಟಣಿಯ ವಕ್ರಭಣಿತೆಯಾಕೆಗೆ ಶಿರಃಪ್ರಣಯಿಯಂ ಮಾಡಿತ್ತೆನುತ್ತುಂ ಬರೆ ಮುಂದೊಂದು ಕೆಂದಳಿರ ಪಂದರೊಳಗಣ ಬಾಳ ವೇರ ಕೇರ್ಗಟ್ಟಿನೋವರಿಯೊಳಗೆ

ದೂರಿಸಿ ಸುಯ್ದು ಕೈಯ ತಳವುಂ ಕದಪಿಂಗಿರದುಯ್ದುದಾತ್ತನಂ ।
ಪಾರದೆ ಬಯ್ದು ಕಣ್ಬನಿಯಿನಂಶುಕವುಂ ನೆರೆ ತೊಯ್ದು ತಾಯ್ಗಿದಂ ॥
ಸೈರಿಪಳೆಂದೆ ಕಾಯ್ದು ನೆಱಗೊಂಡಿರೆ ಪೂಗಣೆಯೈದುವೊರ್ವಳ್ ।
ನ್ನಾರಿದನಿಂಬುಕೆಯ್ದು ಕುಡುವನ್ನೆರೆನುತ್ತೆನಸುಂ ಪಲುಂಬಿದಳ್ ॥ ೬೪॥

ಆಗಳಾಕೆಯರ ಕೆಳದಿಯರೈದಿ ವಂದು ಶಿಶಿರೋಪಚಾರಂಗಳಿಂದಂ ಸಂ ತೈಸಲೊಡಚರ್ಕುವಚ್ಚಿಗೆವುಂ ಕಂಡು

ಇನಿಯನ ತೋಳ ತಳ್ಪವನ ಕೂಟದೊಳುಣ್ಮುವ ಘರ್ಮಬಿಂದುವಾ ॥
ತನ ನಱುಸುಯ್ಯ ಪೊಯ್ಲವನ ಸಾರ್ಪ್ರವಿಲೋಕನವಾತನೊಂದುಸೋಂ

ಕಿನಿತಿರದಾಱಿಪಂತೆನಗೆ ತಾಪಮನಾಱಿಸಲಾರನೀಮೃಣಾ ।
ಳನಿಕರವೀಚಿಮಾಂಬುಲವ ಮೀಯೆಲರೀಶಶಿಯೀವಿಲೇಪನಂ ॥ ॥೬೫॥

ಅಂತು ಮನದೊಳಿರ್ದವನೆ ಮದಾರ್ದವಳ ವಿರಹಜ್ವರಾವಸ್ಥೆಯಂ ಕಂಡು ಅನುಕೂಲನಿಂತೆಂದಂ:—

ನೆಟ್ಟನೆ ಕೂರ್ತ ನಲ್ಲರನಗಲ್ದಟಲಂ ತಳೆದಿರ್ಪ ಮೂರ್ಕ್ಕೆಯಿಂ ।
ಪುಟ್ಟದೆ ಪೋಪ್ರದೊಳ್ಳಿತು ಮನುಷ್ಯಭವಾಂತರದಲ್ಲಿ ಬೈವದಿಂ ॥
ಪುಟ್ಟಿದೊಡೇನೊ ಕೂರದಿರವೈಂಳ್ಳಿತು ಕೂರ್ತೊಡಮೇನಗಲ್ವುದುಂ ।
ತೊಟ್ಟನೆ ಸಾವುದೊಳ್ಳಿತು ತೊಡಂಕದೆ ಕಾಮನ ಡಾಮರಂಗಳೊಳ್॥೬೬॥

ಎನೆ ವಿದೂಷಕನಿದು ಸತ್ತೊಡಲ್ಲದೆ ಪರಿವ ಕುತ್ತವಲ್ಲವೆಂದು ನಗಿಸುತ್ತುಂ ಪೋಗೆ, ಮತ್ತೊಂದು ಸುರತಕರಣಚಿತ್ರಸಂದರ್ಭವಪ್ಪ ಗರ್ಭಗೃಹದೊಳಗ ನಿರ್ಭರಪ್ರಣಯಪರನಕತೆಯಿಂ ನೆರೆವ ಕಾದಲರ ಕಾಮಕೇಳೀ ಕೂಜಿತದೊಳ್ ಕೂಡಿ ಕಿವಿಯಂ ಪಳಂಚಲೆವ ಮಂಚವ ಕಕುನಿಯಂಚೆಯುಗಿಳಿಯ ಪುರುಳಿಯ ಪಾರಿವದ ಕೊರಲುಲಿಯ ದಳೆವುಳವನಾಲಿಸಿ ಪೆಣ್ಬಯ್ಯ್ಯಲನಾರಯ್ಯದೋಸರಿಸ್ರದೆನ್ನ ಗಂಡುಗೂಸುತನಕ್ಕೆ ಪಸುಗೆಯುಲ್ತೆಂದು ಪೀತಮುರ್ದಕಂಬೆರಸು ಪರಿದು ಗವಾಕ್ಷನಿಕ್ಷಿಪ್ತಾಕ್ಷನಾಗಿ ನೋಪ್ಪನ್ನೆಗಂ

ಕೆಂದೊಡೆ ಸಾಯಲುಜ್ಜುಗಿಸುವಾಸನಪಲ್ಲಟದಲ್ಲಿ ಬಾಯ್ಗೆ ವಂ ।
ದಂದದೊಳೆಂದೊಡೆಂದುದನೊಡಂಬಡಿಪಿಚ್ಚೆಯ ಬಿಚ್ಚತ್ತಿಕ್ಕೆ ನಾ ॥
ಣಿಂದಮಗಲ್ದು ಗಂಡುವೆಸದೊಳ್ ಬಸದಪ್ಪ ಪೊಡರ್ಪ್ ರೂಪು ಮೈ ।
ಗುಂದದ ಚೆಂದವಿಂಗೊರಲ ಮೆಲ್ಲುಲಿಯೊಪ್ಪಿದುದೊಲ್ವ ಕೂಟದೊಳ್ ॥೬೭॥

ಮೊಱೆಯಂ ಮೀಱುವ ಮಾತು ಕೆಂದೆಸಪ ನಾಣ್ಣಾಣಂ ತನಿತ್ತಿಂಬುಮೈ।
ಮಱೆಸಂ ಪುಟ್ಟುವ ಸೊರ್ಕ್ಕು ಸೂಟ್ವಿಡೆದ ಕೂಟಂ ಪಲ್ಲಟಂಬಾಯ್ವುಬಾ ॥
ಯ್ಮಱುಕಂ ತಾಂಗಿಗೆಬಿಲ್ವ ನಾಣಿಲಿತನಂ ಬೆಂಡೇಟ್ವಿ ಕಣ ಬೀಯದ ।
ಳ್ಕಱೊಳಂ ಪಾಸಿಗೆ ನಾಂಬ ಮುಂಬದನುಳುಂಬಂ ಕೂಟದೊಳ್ ನಲ್ಲರಾ ॥

ನಾಣ್ಣಣ್ಣ್ಣ ಸೋಲಬೊದವಿಂ ।
ಕಣ್ಣಸು ಮುಗುಳ್ದಿಸೆಯೆ ನಸೆಯನೆಸಗುವ ಪಲವುಂ ॥
ನುಣ್ಣುಡಿ ಪಸರಿಸೆ ಮನದಿಂ ।
ಜಾಣ್ಣಡೆಗೊಳೆ ತೊಡರ್ದರಿನಿಯ ಕೂಟದೊಳಿನಿಯರ್ ॥ ॥೬೯॥

ಅನಂತರವೊಡಚಿರ್ದ ವಸಂತಸಖಸುಖಪರಮಕೋಟಿಯೆನಿಸಿದ ರತಾಂತಸುಖದೊಳಿನಿತಾನುಂ ಬೇಗಮಿರೆ,

ಹರವಸವೊಯ್ಯನಾಱೆ ಮುಗುಳ್ದಕ್ಷಿಗಳೆಬ್ಬಿಱೆ ಕೂಡೆ ಮೆಯ್ಯೊಳು ।
ಬ್ಬರಿಸಿದ ರೋಮರಾಜೆ ನಸುವಕ್ಕೆಗೆ ಸಾಱೆ ಬಟಿಲ್ದ ಮೆಯ್ಗೆ ಚೇ ॥
ತರೆಣೆಯಲಱರ್ಚ ಬಾಯ್ಗೆ ಬಱಪಂ ಬರಿಸುತ್ತಿರೆ ಪೋದ ಕೂಟಮಂ ।
ಪರಿವಿಡಿಗೆಯ್ಯೆ ಚಿತ್ತಮೆಳಸಿತ್ತು ರತಾಂತಸುಖಾಂತಮೋಪರಾ ॥೭೦॥

ಆಗಳಲ್ಲಿಂ ತಳೆದುಂ ಬರೆ ವಿಟನಿದೇಕೆ ತಡೆದಿರೆನೆ, ಪೀಠಮರ್ದಕನುಜ್ಜಗಿಸಿದ ಕಜ್ಜಮಂ ಕಡೆಯೆಯ್ದಿಸಲೆಂಬುದುಂ, ವಿದೂಷಕನಿವಂದಿರ ಕೂಟಕ್ಕೆ ಬೇಟಮೆ ಕಡೆಯೆನೆ, ರಾಜಮನೋಜಂ ಮುಗುಳ್ನಗೆವೆರಸು

ಎಂತೆಳಸಿರ್ದರಿರ್ದ ಪರಿಯಿಂದಮೆ ಕೂಟಮದಿಂಬುಕೆಯುದ್ದೋ ।
ರಂತಿರೆ ಮೆಯ್ಯೊಳೆಲ್ಲಿ ದೊರೆಕೊಂಡೊಡಮಲ್ಲಿಯೆ ಚುಂಬನಂ ಕರಂ ॥
ಸಂತಸಮೀವ್ರದಾವೆಡೆಯುಗುರ್ ತೊಡರ್ದಾಯೆಡೆ ರೇಖೆ ಪತ್ತಿ ಚೆ ।
ಲ್ವಂ ತಳೆದಿಪ್ರುದೆಂಬೊಡದನೇವೆಸಗೊಂಡಬೆ ಬೇಟದಾಟಮಂ ॥ ॥೭೧॥

ಎಂದು ನುಡಿಯುತ್ತುಂ ಬರ್ಪನ್ನೆಗಂ, ಮನೋಹರಕ್ರೀಡಾಗಾರದ್ವಾರಬೀಶದೊಳ್ ತಾರುಣ್ಯವತಿ ಅತಿಮಧುರಪುರುಷಾಯತನಿಧುವನಪರಂಪರಾಪರಿಮಳತಮಾದ ಶರೀರದ ಸಹಜಸುರಭಿಗಂಧಮಂ ಗಂಧಮಹಂಗೊಳ್ಳತಂಗುಡುವಂತಿರೆ ಲಜ್ಜೆಯಿಂದಿರೆ ಕಂಡು

ಚುಂಬಿಸಿ ಬೀಗಿ ಬೆಳ್ಪಡರ್ದ ಬಾಯ್ದೆಱೆಯಾಳಿಸಿದಪ್ಪಿನೊತ್ತಿನಿಂ ।
ದಂ ಬಿಡೆ ಗುಜ್ಜಗೊಂಡ ಮೊಲೆ ಪೊಕ್ಕುಱಯಂದಮೆ ಹಂತಿದಪ್ಪಿ ತಾ ॥
ಉಂಬಱಿಯುಂ ತೆರಳ್ದ ಕುರುಳುಣ್ಮೆ ಬೆಮರ್ ನಸುಬಾಲನಾದ ಬೊ ।
ಟ್ಟೆಂಬಿವು ಕೂಟದೊಂದು ಸವಿಯಂ ಪಿಸುಣಾಡುವುವೀಲತಾಂಗಿಯಾ ॥೭೨॥

ಎಂಬ ನಾಗರಿಕನುಕ್ತಿಗೆ ಚತುರೋಕ್ತಿ ಚತುರ್ಮುಖಂ ಮೆಚ್ಚುತ್ತುಂ ಪೋಗೆ ಮುಂದೊಂದು ವಿಶಾಲಶಾಲಾಂಗಣದ ಬಳ್ಳಿನೂವಿನ ಕಾವಣದೊಳಗಣ ಅಗಲ್ದ ಸಿಂದುರದ ಜಗಲಿಯೊಳ್ಗೊಟ್ಟಿಯಿಂದಿರ್ದ ವಿವಿಧನಾಯಿಕಾನಾಯಕಭೇದದ ಮಿಂಡರೆಳವೆಂಡಿರ ತಂಡಮಂ ಮೈಗರೆದು ನೋಟ್ಪನ್ನೆಗ ಮೊರ್ವಳ್ ಕುಚಕಲಶಕ್ಕೆ ತನ್ನ ತಳಮಂ ಕೆಂದಳಿರ್ಪಾಡಿ

ಉನ್ನತಿಯೆಂದುತ್ಕಂಠತೆ ।
ಯನ್ನೆರೆ ನಿನಗೀವುದಿವರ್ಗೆ* ಮಾಡವೆ ಕೊವಿಂ ॥
ನಿನ್ನನೆರ್ದೆ*ಗಿಡಿಪುವುಲ್ಲಿದರ ।
ನಿನ್ನೆರ್ದೆ*ಗಿಡಿಸವೆ ಲತಾಂಗಿ ಕಠಿನಕುಚಂಗಳ್ ॥ ॥೭೩॥

ಎಂದು ರೂಪಸೌಭಾಗ್ಯಂಗಳಂ ಪೊಗಳೆ ಮತ್ತೊರ್ವಳ್ ಪಲವುಂದೆವಸ ಮುಗಲ್ದಿರ್ದು ಬಂದು ತನ್ನ ಕೆಳದಿಯಂ ತಿಳಿಪಿದೆಳೆಯನಂ ನೋಡಿ,

ಕಂದಿದಳುಲ್ಲಿದೊಡೆ ಬೆಳ್ಪನೊ ।
ಳೊಂದಿದಳೊಂದದೊಡೆ ಬಂದೊಡತಿರಾಗಕ್ಕಂ ॥
ಸಂದಳಿವಳ್ ಮೂವಣ್ಣಂ ।
ಬಂದಳ್ ನಿಷ್ಕರುಣ ತರುಣಿ ನಿಷ್ಕಾರಣದಿಂ ॥ ॥೭೪॥

ಎನೆ ಮತ್ತೊರ್ವಂ ಪೂರ್ವಾನುಭವಮಂ ನೆನೆದು

ಒಸೆದಪ್ಪುವ ಪದದೊಳ್ ಮೆಯ್ ।
ನಸುಸೋಂಕದ ಮುನ್ನ ಮೆಚೆಯೊಳೆಡೆಗುಡದವ್ವೊಲು ॥
ರ್ವಿಸುವ ಪುಳಕಕ್ಕೆ ಕಂಟಕ ।
ವೆಸರಂ ಕೊಟ್ಟಿಜನ ಸುಜನತೆಗೆ ಬೆಱಗಪ್ಪೆಂ ॥ ॥೭೫॥

ಎಂದು ಕೆಳದಿಯೊಳ್ ನುಡಿದಂ. ಪೆಱತೊರ್ವಳ್

ಮೊಳೆಯುಜರೇಣುಜಾಲಪರಿಪಾಂಡುರಮಾಯ್ತು ಕುಚದ್ವಯಂ ವಿಕ ।
ಚ್ಚಳಕೃತರೇಖಿಕಾರಚನಮಾದುದು ಲೋಚನಯುಗ್ಮಮೈದೆ ನಿ ॥
ರ್ಗಳಿತಸರಾಗಭಾಸಮೆನಿಸಿತ್ತು ರದಚ್ಛದಮಿಂಗಳಿಂದುಮಂ ।
ಡಳಲಲಿತಾಸ್ಯೆ ಪೇಚ್ ನಿಜಮನಃಪ್ರಿಯನಪ್ಪುದನೋ ಅಗಲ್ದನೋ ॥೭೬॥

ಎಂದು ಮೇಳೆದಾಳಯೊಳ್ ಆಳಯೊರ್ವಳ್ ನುಡಿದಳನ್ನೆಗವೊರ್ವಂ ನಿ
ಜಮನೋಹರಿಯ ಸುರತಭಾವಂಗಳಂ ಭಾವಿಸಿ

ಸುಸಿಲ ಸೊಕಕ್ಕೆ ಸೊಕರ್ಗಡರೆ ಮೊಯ್ಯೊಳೆವಾರಿದ ತೋಳ ತಳ್ಪನಾ ।
ಳಸುವಿರದೊಟ್ಟಮಂ ನವಿವ ಬಾಯ್ಬಿಡುತಂದೊಡೆ ಮೆಚ್ಚಿದಂತೆ ಚುಂ ॥
ಬಿಸುವೆಲರ್ದಿರ್ದರ್ ಕಣ್ಮುಗುಳೊಡೆಚ್ಚ ಉಸುತ್ತುಮಲಂಪಿನಿಂ ನಿರೀ ।
ಕ್ಷಿಸುವವಳೊಂದು ಗೆಯ್ತುಮದು ಬೈತವ್ರೊಲಿರ್ದಪುದೆನ್ನ ಚಿತ್ತದೊಳ್ ॥

ಎಂದು ಮನದನ್ನಳಪ್ಪ ಕೆಳದಿಗುಸಿರ್ದಂದು ಸಿಪ್ಪಡಂಬಡೆದನನ್ನೆಗಂ ಬಿ
ನ್ನನಿರ್ದ ವಯಸ್ಯೆಯಾಸ್ಯಮಂ ಅವನೊಡನಾಡಿ ಕಂಡಿದೇನೆನೆ,

ಅವನೆಕ್ತಾನೆತ್ತ ಕಣ್ಬೇಟದ ಸಮನಿಪುದೆತ್ತೇಸುವಾರ್ದರ್ ಚಿತ್ತೋ ।
ದ್ಭವನೆತ್ತೀಚೈತ್ರಮೆತ್ತೊಯ್ಯನೆ ತಳರ್ವೆಲರೆತ್ತುದ್ಯದುದ್ಯಾನಮೆತ್ತು ॥
ಣ್ಮುವ ಗೀತಾರಾವಮೆತ್ತುಜ್ಜ್ವಳಿಸುವ ಪೊಸವೆಳ್ದಿಂಗಳೆತ್ತೆನ್ನ ತಾರು ।
ಣ್ಯವಿಡಂಬಂ ತಾನಿದೆತ್ತೊತ್ತರಿಪ ವಿಧಿಯುಮೆತ್ತೇನನೇನೆಂಬೆನೀಗಳ್॥೭೯॥

ಎಂದಾಸಲುಂದ ಬೇಸಲುಂ ತೋಳುಂ ಮತ್ತೊರ್ವಳ್ ಪುರುಡಿನಿಂ ಪುಟ್ಟಿದ
ಮುಳಿಸಂ ತಿಳಿಪಲೊಡರಿಸಿದ ವಲ್ಲಭಂಗೆಡೆಗುಡದೆ ಬಿಡುನುಡಿಯಂ ನುಡಿದು
ಕಳೆದು ಬಳಿಯಂ ಕಳವಳಿಸಿ ಕೆಳದಿಗೇವೆನೆಂಬುದುಮನಳೀಕೆದಪ್ಪಿದಂದ
ಕ್ಕೆ ತಕ್ಕುದನಿಂತೆಂದಳ್:—

ಪತ್ತುಗೆಗೆಟ್ಟುವೊಂದು ನುಡಿಗೊಂಬತನೆಂದೆರಡೆಂಟನೀಗಳಾ ।
ನೆತ್ತಳುವಂದಮೆಂಬ ತೆಱದಿರ್ದಪೆ ನಲ್ಲನ ತಾಯ ತಂದೆಯ ॥
ಚ್ಚೊತ್ತಿದ ಮೂಱು ಮೋಹಮುಮನೇಱೆಲೆವ್ರೋಗದೆ ಕಲ್ತ ನಾಲ್ಕುಸೂಚ್
ಸತ್ತೊಡದಾರೆಯೆಂದಱಿಪಲೈದೊಲವೆಯ್ದುಗುಮಿನ್ನೆಗಂ ಪ್ರಿಯಂ ॥ ೭೯॥

ಅವಳುಕ್ತಿವಕ್ರಿಮಕ್ಕೆ ಸೂಕ್ತಿರತ್ನಾಕರಂ ಮನದೊಳ್ ಮೆಚ್ಚಿ ಮ
ತ್ತೊರ್ವನಾಪ್ರಸ್ತುತಕ್ಕಿಂತೆಂದಂ:—

ಬಲವ್ರೊಳಗಾಗೆ ದೈವದಿನದಂ ಬಡವಂ ನಿಧಿಗಂಡಮಾಱ್ಕೆಯಿಂ ।
ಸಲಪಲುಮೋವಲುಂ ಸುಖಮನಾರ್ಜಿಸಲುಂ ಬಗೆದಾರದೊಳ್ಪನೊ ॥
ಕ್ಕಲಿಸಿಕೆಯಂ ನಿಮಿರ್ಚಿ ಪುರುಡಂ ಪೊಸೆದೆಯ್ದೆ ಪೊಲಂಬುದಪ್ಪಿ ಕೋ ।
ಟಲೆಗೊಳಗಪ್ಪ ಪಾಳ್ಮನದ ಮಾನಸರಂ ಸುಡು ಸಂದ ಗೊಡ್ಡರಂ ॥ ೮೦॥

ಅದಲ್ಲದೆಯುಂ,

ಸವಿ ತವದನ್ನೆಗಂ ಮನದ ಪತ್ತುಗೆಗಳ್ ಕಿಡವನ್ನೆಗಂ ಪೆಱಂ ।
ಗವಳೆಡೆಯಾಗದನ್ನೆಗವೊಡಂಬಡುವೋವವುಮಿಲ್ಲದನ್ನೆಗಂ ॥
ತವಿಪುದು ತನ್ನನೊಪ್ಪಿಸುವುದೆಂದುದನೆಂಬುದು ಕೂರೆ ಕೂಪ್ರ್ದೋ ।
ಱುವುದು ಪಲುಂಬಿ ಪೋದ ಬಟೀಕಂ ಪರೆಪ್ರತ್ತರೆಯಾಗೆಯುಂಗಳಂ ॥ ೯೦॥

ಅದಲ್ಲದೆಯುಮೊರ್ವಳೆರಡಱಿಯಲೀಯದೆ ಕಡುಗೂರ್ತ ತನ್ನ ಕೆಳದಿಯ ಸಂಭೋಗಸುಖಾನುಭವಸಮುದಯಮಂ ಬೆಸಗೊಳ್ವುದುಮಿಂತೆಂದಳ್—

ಇನಿಯನ ಚೆಲ್ವನೀಕ್ಷಿಪ ಸೊಕಂ ನುಡಿಗೇಳ್ವಳಿಪಂ ನಿಮಿಚರ್ದಾ ।
ತನ ನುಡಿಯೊಳ್ಪದಪ್ಪನಪವರ್ತಿಪುದಪ್ಪಿನದೊಂದು ನೇರ್ಪ್ ಚುಂ ॥
ಬನಮನವಜ್ಞೆಮಾಡುವುದು ಚುಂಬನದಿಂಪ್ರ ರತಕ್ಕಿನಿತ್ತು ಸ ।
ಮ್ಮನಿಸದು ತದ್ರತಂ ಮುಱಿಪ್ರದೇನುಮನೊರ್ವೊದಲಾಗಳೇಗುವೆಂ ॥ ೯೨॥

ಎಂದು ತನ್ನ ಮನದಿಚ್ಛೆಗಳಂ ನುಡಿವುದುಂ, ಕೇಳ್ದರಸನಿದು ಕಾಮ ಮೀಮಾಂಸೋಪನ್ಯಾಸಪ್ರಾಸಾದನಮಾಗುದೆಂದಾಮಂಡಪದಿಂ ಮಗುಳ್ದು ಬರ್ಪಾಗಳೊರ್ವಂ ಸರ್ವಾಂಗೀಣನುಲಯರುಹಮೃಗಮದಕದಂಬಪರಿಮಳಾಧಿವಾಸಿತವಿಲಾಸಿನೀಸೌಧಮಂ ನಿರತಿಶಯದೇಶೀಶೃಂಗಾರಸಂಗತಿದ್ವಿಗುಣೀಭೂತಪಂಚವಿಂಶತಿವರ್ಷದೇಶೀಯಕಾಯಸೌಂದರ್ಯನುಂ, ಕತಿಪಯಲಾಟಭಟಗಮನಖೇಟಕಫಲಕಕೀಲಿತಗರ್ಭಶರೀರುತಾಡೂತಯುವತೀನಿಕರ ಚಿಕುರಕಾಂತಿಕುವಲಯಿತವೀಥೀಭಾಗನುಂ, ತಾಂಬೂಲಕರಂಕವಾಹಕಪ್ರದೀಯಮಾನವೀಟಿಕಾಗ್ರಹಣಲೀಲಾಸಕೃತ್ಪ್ರಾವಿತವಾಮಪಾಣಿಪಲ್ಲವನುಂ, ಏಕೈಕವಾರವಿತಸ್ತಿಮಾತ್ರಾಸಿಧೇನುಚಾಲನೋಚ್ಚಲಿತ ದಕ್ಷಿಣಕರಕಲಿತಕನಕಕಂಕಣರಣಣತ್ಕಾರನುಂ, ವಾಮಚರಣನಿಕ್ಷಿಪ್ತ ಚಂಪಕದಾಮಾನುಕಾರಿ ಹೇಮಮಯದಾಮನುಂ, ವಿಷಮಬಿರುದನಿಗಡಪ್ರಕಟಿತಪರಾಕ್ರಮನುಮೆನಿಸಿದ ಸೇವಕರಾಜಪುತ್ರಂ ಬಂದೊಂದು ಮತ್ತವಾರಣದೊಳ್ ಕುಳ್ಳಿರ್ದೊಡವೆಂದವೈಣಿಕವೀಣಾನಿನಾದಮಂ ಕೇಳುತ್ತುಮಿರ್ಪನೊರ್ವಳವನ ಕಾದಲಳೆದೂದವಿ ಬಂದು ಪೊಡೆಮಟ್ಟು ಪೊರ್ದಿ ಕುಳ್ಳಿರ್ದುರ್

ಘನಶಿಶಿರೋಪಚಾರಮಿಷದಿಂ ಹೃದಯಸ್ಥಿತನಪ್ಪ ದೇವ ನಿ ।
ನ್ನನೆ ಕನದಬ್ಜಚಂದನದಳಂಗಳನರ್ಚಿಸಿ ನಿನ್ನ ರೂಪಭಾ ॥
ವನೆಯೊಳೆ ಕೂಡಿ ನಿನ್ನ ತುಳನಾಮಜಪಕ್ರಿಯೆಯಲ್ಲಿ ನಿಟ್ಟೈವ ।
ಟ್ಟನತಿಶಯೊಂಗಿ ಸಾಧಿಸಿದಪಳ್ ನಿಜದೇಹವಿದಾಹನುಕ್ತಿಯಂ ॥ ೪೩॥

ಎಲೆ ನಿರ್ದಯ ನಿಜವಿರಹಾ ।
ನಲಮುಖದೊಳ್ ಬಾಷ್ಪಜಲಕಣಾಭ್ಯುಕ್ಷಿತನುಂ ॥
ಲಲನಾಂಗಾಹುತಿಯಂ ಕೋ ।
ಕಿಲರವಮಂತ್ರಸ್ವರಂ ಸ್ಮರಂ ನಿರವಿಸಿದಂ ॥ ೪೪॥

ಅದಲ್ಲದೆಯುಂ,

ಘನಬಾಷ್ಪಾಂಬುಕಣಾರ್ದ್ರಯುಕ್ತನಳಿನೀಪತ್ರಾಂಶುಕಾಶ್ಲೇಷಿ ಮು ।
ಕ್ತನಿಜಾಳೀಸಹಭೂಷಣೋತ್ತರೆ ಕಪೋಲನ್ಯಸ್ತಹಸ್ತಪ್ರವ ॥
ರ್ತನೆ ಚಿತ್ರಾರ್ಪಿತಕಾಂತೆಯಂತೆ ತಳೆದಳ್ ಸ್ವಾತೀವಚಿಂತಾವಿಚೇ ।
ತನೆಯಂ ನಿನ್ನ ವಿಯೋಗದುಃಖದಿನವಳ್ ನಿಷ್ಪಂದಕಾರಿತ್ವಮಂ ॥ ೪೫॥

ತೆಕ್ಕನೆ ತೀವಿರೆ ತಾಪ ।
ಕ್ಕಿಕ್ಕಿದ ಸಿರಿಗಂಪು ಪಣೆಯೊಳೆಸೆದುದು ಕೋಪಂ ॥
ಮಿಕ್ಕತನು ಬೆಸಸಿದೊಡೆ ನೊಸ ।
ಲಕ್ಕರನುಂ ತೊಡೆಯಲೆಂದು ಬಂದಿಂದುವವ್ವೋಲ್ ॥ ೪೬॥

॥ ಮಾಳಿನೀವೃತ್ತ ॥

ಬಳೆದ ವಿರಹತಾಪವ್ಯೂಹದೊಳ್ ನೇಹಮಾದಂ ।
ಮುಳುಗೆ ಕಳವಳಂಗೊಂಡಿರ್ದವಳ್ಗೊರ್ವಳ್ಳೇವಂ ॥
ದಳೆದು ಬಿಡುಗುವೆಂದಾತಂ ಪಿಱಳ್ಗೊತನೆಂದಾಂ ।
ತಿಳಿದೆನೆನೆ ಕನಲ್ದಿರ್ದಿಲಂತಿರ್ಮೆ ಬೆಂದಳ್ ॥ ೪೭॥

ಅಂತುಮಲ್ಲದೆಯುಂ,

ಎನಗೆಂತಾಂ ಪ್ರತಿಪನ್ನವೆಂಬ ಬಗೆಯುಂ ತಾನಂತುಪಾಬೇಯುಮೇ ।
ವನಿತಾಕ್ರೀಡಿತವೆಂತುಮೀಡಿತವೆ ಪೇಳ್ಬೇಜೇವನಂ ಮತ್ತೆ ಪಾ ॥
ವನವೇ ಬಂಧುಜನೋಪಜಾಪ್ಯಮದು ಕರ್ಣಪ್ರಾಪ್ಯವೇ ನಲ್ಲನೊ ।
ಲ್ಲನೆ ಪೋದೀವಿರಹಪ್ರಸಟ್ಟಕದೊಳೀನೈಪಥ್ಯಮುಂ ಪಥ್ಯವೇ ॥ ೪೪॥

ಎಂದು ಮಾಣದೆ ಮತ್ತಮೆಮ್ಮ ಬಿತ್ತರಿಪ ಶಿಶಿರಕ್ರಿಯೆಯಂ ತನ್ನ ಮನೋರುಚಿಗವಕ್ರಿಯೆಯಾಗೆ ಕಂಡು,

ನೀರರುಹಂ ಮಲಯರುಹಂ ।
ಸಾರಂ ಕಲ್ಹಾರಮಮಲವಾಃಪೂರಂ ಕ ॥
ಪೂರಂ ತಾಪಮನುಡುಗಿಪೊ ।
ಡಾರಾಧಿಸುಗವನ ತೋಳ ತಳ್ಪನ ತಣ್ಪಂ ॥ ॥೪೯॥

ಈಯಲರ್ವಿಜ್ಜಣಿಗೆಯನಿನಿ ।
ತಾಯಾಸದೆ ಬೀಸಲೇಕೆ ಸಖಿ ಮತ್ಪ್ರಿಯನಾ ॥
ಬಾಯೆಲರಿಂದಲ್ಲದೆ ಪೇ ।
ಬೀಯೆಲರಿಂ ಬರ್ದುಕಲೆಂತುಮಾನಾರ್ತಪೆನೇ ॥ ॥೯೦॥

ಎನಲೊಡಮುವಳ ಮನವನಱಿದು,

ಒಂದಿನಿತು ಧೈರ್ಯಮಂ ದಳಿ ।
ತೇಂಧೀವರನಯನೆ ತಾಳ್ದು ಕಯ್ಯಂ ಪಿಡಿದಾಂ ॥
ತಂದಿನಿಯನನೀಪಾಸೊಳ್ ।
ತಂದೆಳೆದಳರಿಂದೆ ತೋರಣಂಗಟ್ಟಿಸುವೆಂ ॥ ॥೯೧॥

ಎಂದು ಶಿವಿವುಗೆ ನುಡಿದೊಡಂಗೊಂಡು ಪೋಪುದುಂ ದಕ್ಷಿಣನವಳ ದೂತೀಜಲ್ಪಂ ವಿಸೃಷ್ಟಾರ್ಥನಾದುದೆಂದುಮಲ್ಲಿಂ ತಳೆದರ್ ರಾಜಭವನಾಭಿಮುಖನಾಗಿ

ಅಂಗಜನೆ ಸೂತ್ರಧಾರಂ ।
ಶೃಂಗಾರಮೆ ನಾಟಕಂ ತದಂಕಂಗಳ್ ನಾ ॥
ಲ್ಕಂಗಂಗಳಾಗೆ ಕಾಮಿಜ ।
ನಂಗಳ್ ವರ್ಗಿಗರ ತೆಱದೆ ನಟಿಯಿಸುತಿರ್ದರ್ ॥ ॥೯೨॥

ಎಂದು ಕಾಮವ್ಯಾವೋಹದುದ್ದಾಮತೆಯನನುಕೂಲಾದಿಗಳೊಳ್ ನುಡಿಯುತ್ತುಂ ಬಂದು

ಜಗದಧಿಪತಿಯರಮನೆಯಂ ।
ಪುಗುವಲ್ಲಿ ಗೃಹಪ್ರವೇಶಮಂಗಳತೂರ್ಯಂ ॥
ಮಿಗೆ ಮೊಳಗಿತ್ತೆನೆ ಪೊಣ್ಮಿದು ।
ದು ಗಭೀರಂ ತತ್ತ್ರಿಯಾಮತೂರ್ಯಾರಾವಂ ॥ ॥೯೩॥

ಅಂತು ಪೊಕ್ಕು ಅವರಂ ವಿಸರ್ಜಿಸಿ ಸಜ್ಜೆವನೆಗೆ ವರ್ಪುದುಂ ಮುನ್ನಮೆ ಸೂಳ್ಗೆವಂದು ತನ್ನ ಬರವಂ ಪಾರುತ್ತುಂ ತಳ್ಪತಳೆದೊಳರ್ದಿರೆಱ್ದೀಷ್ಯಾರ್ಯರೋಷದಿಂ ಶಶಿಪ್ರಭೆ ನವ್ರೋದಯಶಶಿಪ್ರಭೆಯಂತೆ ಪಾಟಳಿತಮುಖಿಯಾಗಿ,

ಮುನಿದು ಕಟಾಕ್ಷದಿಂದಡರೆ ನೋಡೆ ಭಯಾದ್ಯತನಂತೆ ತೋಱಿ ಸ ।
ಮ್ಮನಿಸದೆ ಮತ್ತೆ ಕಾಯ್ದೊದೆಯೆ ಕಾಲ್ವಿಡಿದೋವದೆ ಬಯ್ಯೆ ತಳ್ತ ಚುಂ
ಬನಮನೊಡರ್ಚಿ ತತ್ತದುಚಿತಕ್ರಿಯೆಯಿಂದಮೆ ನಂದೆವ್ರೊಯ್ದು ತ ।
ನ್ಮನನುಮನಂತೆ ಸಂತಸಮನೆಯ್ದಿಸಿದಂ ರತಸೌಖ್ಯದಿಂ ನೃಪಂ ॥ ॥೯೪॥

ಅನಂತರಂ,

ಸುದತಿ ರತಾಂತಸೌಖ್ಯಮನಧೀಶನ ದೇಹದಿನಂದು ಪೋಗಲೀ ।
ಯದೆ ಪಿಡಿವಂದದಿಂ ತೊಡೆಯ ತೋಳ ತಗುಳ್ಪಮುರ್ದೊಪ್ಪೆ ನಾಡೆಯುಂ ॥
ಪದೆದಮುರ್ದಪ್ಪಿದಂತಿರಮುರ್ದಪ್ಪಿರೆ ಬಂದ ಸುಷುಪ್ತಿ ಚಿತ್ತಮುಂ ।
ಪುದಿಯೆ ಮಹೀಶನಿರ್ದನಿನಿಸಂ ನಿಜಯೋಗದೆ ಯೋಗಿಯಿರ್ಪವೋಲ್ ॥

ಅಂತನಲ್ಪತಲ್ಪತಳದೊಳ್ ನಿದ್ರಾಸುಖಾಭಿಮುಖಂ ತೀರೆ ಮನೋಹರೀ ನಾವುಯಾಮಂ ಮುಹೂರ್ತಮಾತ್ರಾವಶಿಷ್ಟಮಾಗೆ,

ನೊರೆಯೊಡನೆ ತಡಿಗೆ ಬೆಳ್ದಾ ।
ವರೆಯ ಕಟಿಲ್ದಿಸಳ್ಗಳ್ಳೈದೆ ಕೊಳನೊಳ್ ಸಾವರ್ಂ ॥
ತಿರೆ ಪಡುವಣ ದೆಸೆಗಿರಲೋ ।
ಸರಿಸಿದುರ್ವು ತಿಂಗಳೊಡನೆ ಮೀಂಗಳ್ ನಭದೊಳ್ ॥ ॥೯೬॥

ಮತ್ತ ಮಿನಿಸಾನುಂ ಬೇಗದಿಂ

ಅಲಸಿಕೆ ಜಕ್ಕವಕ್ಕಿಗೆ ಜಗುಳ್ತ್ತರೆ ಪಕ್ಕದೊಳಾಜೆವೊಕ್ಕು ಜ ।
ಕ್ಕುಲಿಸಿ ಸಡಿಲ್ದ ತಾವರೆಯೆಸಳ್ಗಳ ಉಪಿಂದೊಳವಿಟ್ಟು ನಿದ್ದೆಯಂ ॥
ತೊಲಗಿಸಿದಂಚೆವೆಣ್ಣೆಸೆವ ಗಾಂಡಪದಿಂದನಿದೊಂಗಲೊಳ್ ತಡಂ ।
ಗಲಿಸಿ ಮನಕ್ಕೆ ಗೋಸಗೆಯ ಬೀಸುವೆಲರ್ ಪಡೆದತ್ತಲರ್ಕೆಯಂ ॥ ॥೯೭॥

ಕೂಡೆ ಮನೆಮನೆಯೊಳೊಯ್ಯನೆ ।
ಬಾಡಿದುದೊಡನೊಡನೆ ಮಿಥುನತತಿಯಿರುಳೊಲವಿಂ ॥
ಸೂಡಿದ ಪೂಮಾಲೆಗಳುಂ
ಮಾಡಿದ ಸೊಡರ್ಗುಡಿಗಳುಂ ನಿಶಾನಿರಸನದೊಳ್ ॥ ॥೯೮॥

ನೆಱೆ ಕೂಟಂಗಳ ಗೂಡೊಳ ।
ಗೊಱಗಿದ ಪಾರಾವತಂಗಳಂ ತರದಿಂದೆ ॥
ಟ್ಟಿಱಿಸುತ್ತುಮೊಗೆದು ಗಗನದ ।
ತೆಱಪಂ ತೀವಿತ್ತು ಚೈತ್ಯಭವಶಂಖರವಂ ॥ ॥೯೯॥

ಪರೆದುದು ಸಂಧ್ಯಾರುಚಿ ಮೆ ।
ಯ್ಗರೆದುದು ತಾರಾಳಿ ಮುಕುಳಭಾವದೊಳಿನಿಸಂ ॥
ಪೊರೆದುದು ನೀಳಾಬ್ಜವನಂ ।
ನೆರೆದುದು ಚಕ್ರಾಹ್ವಯದ್ವಯಂ ದಿನಮುಖದೊಳ್ ॥ ॥೧೦೦॥

ಪರಿಪರಿತಂದು ಮೆಯ್ಗಳೆರಡಿಲ್ಲೆನೆ ಪಕ್ಕದಿನಪ್ಪಿ ಕಣ್ಗಳಂ ।
ಸುರಿಯೆ ಪುಬಸ್ರ ಮುಂದಲೆಯತುಸ್ಪಬಿನೊಯ್ಯನೆ ಕಚಿರ್ ಚಂಚಲಂ ॥
ಸರಸಿಜಪತ್ರಕೋಟಿಯ ಕುಸುಂಕುಳಿನತ್ತಿಳಿದುಯ್ದು ಕಾಂತನೊಳ್ ।
ನೆರೆದು ರಥಾಂಗಕಾಂತೆಯೆದೆಯೊಳಿದುದಾದಪೆ ತತ್ಪ್ರಭಾತದೊಳ್ ॥

ಬಂದಿನಿಸಪ್ಪೊಡಂ ಪಗಲಗಲ್ಕೆಗೆ ಸೈರಿಸಲಾರವೆಂತಿರುಳ್ ।
ನಿಂದುವೊ ಜಕ್ಕವಕ್ಕಿಗಳೆಲೇ ಬಗೆವೋಯ್ತು ವಿಯೋಗದಿಂದೆ ಸ ॥
ತ್ತೊಂದಬಿ ಜೀವನೊಂದಬೊಡಲಂ ಪುಗೆ ಮತ್ತೆ ಸಚೇತನಂಗಳಾ ।
ಗೊಂದಿದುವಲ್ಲದಂದು ಬಬಿಕೆತ್ತಣದಿಪ್ಪುದುಮೆಯ್ದೆ ವಪ್ಪುದುಂ ॥೧೦೨॥

ಅದಲ್ಲದೆಯುಂ

ನಡು ನಸು ಪೊಂಗಿ ಸುತ್ತಿಬಿದು ಪತ್ತಿದೆಸಳ್ಗೊನೆ ಬಿರ್ಚಿ ತಣ್ಣೆರ ।
ಲ್ಗೆಡೆದೆಬಿಪಾಗೆ ಪೊಕ್ಕು ಸುಬಿಯುತ್ತಿರೆ ತಳ್ಪ ಸಡಿಲ್ದಗಲ್ದರ ।
ಲ್ವಿಡಿದುಡುಗಿರ್ದ ಕೇಸರದ ನುಣ್ಗೊನೆ ಸೂಸೆ ಮರಲ್ದು ಚೆಲ್ವಿನೊಳ್
ಗಡಣಿಸಿದತ್ತು ಮುಂಬಗಲೊಳಂಬರುಹಂ ಸರಸೀಸನೂಹದೊಳ್ ॥೧೦೩॥

ಸುರದಿಕ್ಕಾಮಿನಿ ಪೊಯ್ಯೆ ಮೇಗೊಗೆದ ಶೋಣಂ ಕಂದುಕಂ ತಾನಿದೆಂ ।
ಬರ ಮಾತಿರ್ಕೆಮ ಮೀಂಗಳೆಂಬಲರ್ಗಳಂ ಕೊಯ್ಯಲ್ಕೆ ತತ್ಕಾಂತೆ ಬಿ ॥
ತ್ತರದಿಂದೆತ್ತಿದ ಕೆಂದಳಂ ದಲೆನೆ ಕಣ್ಗಾಡಂ ಬೆಡಂಗಾಡನಂ ।
ಬರಲಕ್ಷ್ಮೀವೃತ ಚಂದ್ರಿಕಾಧವಳವಾಸಸ್ತಸ್ಕರಂ ಭಾಸ್ಕರಂ ॥೧೦೪॥

ನಿದ್ರಾಂಧಕಾರಹರನು ।
ನ್ಮುದ್ರೀಕೃತನಯನಸರಸಿಜಂ ನೃಪಹೃತ್ಪ್ರ ॥
ವಾರ್ದ್ರಿಯೊಳೊಗೆತಂದತ್ತು ।
ನ್ಮುದ್ರಿತತೇಜಂ ಪ್ರಬೋಧದಿನಕೃದ್ಬಿಂಬಂ ॥ ॥೧೦೫॥

ಅಂತನಂತರಂ ದಂತಧಾವನಾಸವನಾದಿವೈಭಾತಿಕಂಗಳಂ ತೀರ್ಚಿ ಸಕಲಾರ್ಚನಾದ್ರವ್ಯಸಂಸೇವ್ಯಮಪ್ಪದೇವಪೂಜಾನಿವಾಸಮಂ ವಾಸವನಕೃತ್ರಿಮಚೈತ್ಯಾಲಯಮಂ ಪುಗುವಂತೆ ಪೊಕ್ಕೀರ್ಯಾಪಥಶುದ್ಧಿಯಂ ಮಾಡಿ ಕ್ರಿಯಾಪೂರ್ವಕಮಭಿವಂದಿಸಿ,

ಪೆಬೆದರ್ಹದ್ಬಿಂಬಮಂ ಪೂಜಿಸಿದನಮಲತೀರ್ಥಾಂಬುವಿಂ ಚಂದನಕ್ಷೋ
ದದಿನುನ್ಮುಕ್ತಾಕ್ಷತಾರ್ಘ್ಯಾಕ್ಷತದಿನಳಿಮಿಳೆತ್ಪುಷ್ಪದಿಂ ಮೈಯಸನ್ನಾ ॥
ಯದಿನಿಂದ್ಯದ್ದೀಪ್ತಿಮದ್ದೀಪದಿನಗುರುಲಸದ್ಧೂಪದಿಂ ಸತ್ಫಲಮಾ ।
ತದಿನಾಶುದ್ಧಾಂತರಂಗಂ ಸುಲಲಿತಕವಿತಾನರ್ತಕೀನೃತ್ಯರಂಗಂ ॥ ೧೦೬ ॥

॥ ಗದ್ಯಂ ॥

ಇದು ಸತಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿಚ್ಛರಿನ್ನಾಥ
ಶ್ರುತಕೀರ್ತಿತ್ರೈವಿದ್ಯಾಚಕ್ರವರ್ತಿಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವೆ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಅಜಿತಸೇನಚಕ್ರಧರಚಂದ್ರಿಕಾವಿಹರಣವಿನೋದಂ

ಅಷ್ಟಮಾಶ್ವಾಸಂ.